ಸೋಮವಾರ, ಏಪ್ರಿಲ್ 8, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 99 | ಪುಟ 16
www.prajavani.net
prajavani.net prajavani prajavani prajavani
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪೆಟ್ ಶೋ
ಬೆಂಗಳೂರಿನ ಜಯಮಹಲ್ ಅರಮನೆಯಲ್ಲಿ ಭಾನುವಾರ ನಡೆದ ಪೆಟ್ ಫೀಸ್ಟಾ ಕಾರ್ಯಕ್ರಮದಲ್ಲಿ ನಾಯಿಮರಿಯೊಂದಿಗೆ ಯುವತಿಯೊಬ್ಬರು ಕಾಣಿಸಿಕೊಂಡಿದ್ದು ಹೀಗೆ



ಆಳ-ಅಗಲ
ಲಡಾಖ್ ಉಳಿಸಿ ಹೋರಾಟದ ಸುತ್ತ
ಟಾಟಾ ಸ್ಟೀಲ್ ಮಾರಾಟ ಶೇ 6ರಷ್ಟು ಏರಿಕೆ 12
'ಈಗಲೂ ಕಾಲ ಮಿಂಚಿಲ್ಲ ವಾಪಸ್ ಬನ್ನಿ' 10
'ಪ್ರಜಾವಾಣಿ', 'ಡೆಕ್ಕನ್ ಹೆರಾಲ್ಡ್'ನಿಂದ ಎರಡು ದಿನ ನಡೆದ ಮೇಳ
ಶೈಕ್ಷಣಿಕ ಮೇಳ 'ಎಡ್ಯುವರ್ಸ್' ಯಶಸ್ವಿ 4

'ಹಕ್ಕಿಜ್ವರ: ಆತಂಕಕ್ಕೀಡಾಗುವ ಅಗತ್ಯವಿಲ್ಲ'

ಮುಂಬೈ: ಹಲವೆಡೆ ಹಕ್ಕಿಜ್ವರ (ಎಚ್5ಎನ್1) ಹರಡುತ್ತಿದೆ. ಇದು ಕೋವಿಡ್– 19 ಸಾಂಕ್ರಾಮಿಕಕ್ಕಿಂತ ಗಂಭೀರ ಆರೋಗ್ಯ ಪರಿಣಾಮಗಳನ್ನು ಉಂಟುಮಾಡುತ್ತದೆ ಎಂದು ಹೇಳಲಾಗಿದೆ. ಈ ನಡುವೆಯೇ, ಮುಂಬೈ ಮೂಲದ ಪೀಪಲ್ಸ್ ಹೆಲ್ತ್ ಆರ್ಗನೈಸೇಷನ್– ಇಂಡಿಯಾ (ಪಿಎಚ್ಒ) ಸಂಸ್ಥೆಯು ಹಕ್ಕಿಜ್ವರದ ಬಗ್ಗೆ ಆತಂಕಕ್ಕೀಡಾಗುವ ಅಗತ್ಯವಿಲ್ಲ ಎಂದು ಪ್ರತಿಪಾದಿಸಿದೆ. 6

ಚಿನಕುರುಳಿ
ಪ್ರಕಾಶ್ ಶೆಟ್ಟಿ



'ಮತ' ಮಾತಿನ ಭರಾಟೆ

'ಜಮ್ಮು ಮತ್ತು ಕಾಶ್ಮೀರದಲ್ಲಿ 370ನೇ ವಿಧಿಯನ್ನು ರದ್ದು ಮಾಡಿರುವುದರಿಂದ ರಾಜಸ್ಥಾನ ಜನರಿಗೆ ಆಗುವ ಉಪಯೋಗವೇನು' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ರಾಜಸ್ಥಾನದ ಚುನಾವಣಾ ಪ್ರಚಾರವೊಂದಲ್ಲಿ ಆಡಿದ ಮಾತು, ಆಡಳಿತ ಹಾಗೂ ವಿರೋಧ ಪಕ್ಷಗಳ ಮಧ್ಯೆ ವಾಗ್ಯುದ್ಧಕ್ಕೆ ಕಾರಣವಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಈ ಬಗ್ಗೆ ಪ್ರತಿಕ್ರಿಯಿಸಿದ್ದಾರೆ. ಕಾಂಗ್ರೆಸ್ ಕೂಡ ಪ್ರಧಾನಿ ಮೋದಿ ಅವರ ಬಗ್ಗೆ ವ್ಯಂಗ್ಯವಾಡಿದೆ. ಪ್ರಧಾನಿ ಮೋದಿ ಹಾಗೂ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಮಧ್ಯೆಯೂ ಜಟಾಪಟಿ ನಡೆದಿದೆ...

ಕಾಂಗ್ರೆಸ್‌ನ ಅಧ್ಯಕ್ಷನಾಗುವುದು ಎಂದರೆ ಸಣ್ಣ ಮಾತಲ್ಲ. 370ನೇ ವಿಧಿಗೂ ರಾಜಸ್ಥಾನಕ್ಕೂ ಸಂಬಂಧ ಇಲ್ಲ ಎಂದು ಈ ನಾಯಕ ಭಾವಿಸುತ್ತಿದ್ದಾರೆ. ಹಾಗಾದರೆ, ಜಮ್ಮು ಮತ್ತು ಕಾಶ್ಮೀರವು ಈ ದೇಶದ ಭಾಗವಲ್ಲವೇ? ಅವರ ಆಲೋಚನೆಯು ತುಕ್ಡೆ ತುಕ್ಡೆ ಗುಂಪಿನ ರೀತಿಯಲ್ಲಿಯೇ ಇದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದನೆ ವಿರುದ್ಧ ಹೋರಾಡುತ್ತಾ ರಾಜಸ್ಥಾನ ಹಾಗೂ ಬಿಹಾರ ಸೇರಿ ದೇಶದ ಎಲ್ಲ ಭಾಗಗಳ ಸೈನಿಕರೂ ಹುತಾತ್ಮರಾಗಿದ್ದಾರೆ. ಇವರ ದೇಹಗಳು ತ್ರಿವರ್ಣ ಧ್ವಜದಲ್ಲಿ ಸುತ್ತಿಕೊಂಡೇ ಅವರವರ ಊರುಗಳಿಗೆ ತೆರಳಿದ್ದಾವೆ.

ನರೇಂದ್ರ ಮೋದಿ, ಪ್ರಧಾನಿ (ಪಶ್ಚಿಮ ಬಂಗಾಲದ ಜಲ್ಪಾಯಿಗುಡಿ ಹಾಗೂ ಬಿಹಾರದ ನವಾದದಲ್ಲಿ ಆಡಿದ ಮಾತುಗಳು)

ರಾಷ್ಟ್ರೀಯ ಪಕ್ಷ ಎನ್ನಿಸಿಕೊಳ್ಳುವ ಸ್ಥಾನಮಾನವನ್ನು ಕಾಂಗ್ರೆಸ್ ಹೆಚ್ಚುಕಡಿಮೆ ಕಳೆದುಕೊಂಡಿದೆ. 370ನೇ ವಿಧಿ ಕುರಿತು ಮಾತಾಡಿದ ಮೇಲಂತೂ, ನೈತಿಕ ನೆಲೆಯಲ್ಲಿ ಕಾಂಗ್ರೆಸ್ ಒಂದು ರಾಷ್ಟ್ರೀಯ ಪಕ್ಷವಾಗುವ ಹಕ್ಕನ್ನೂ ಕಳೆದುಕೊಂಡಿದೆ

ಸುಧಾಂಶು ತ್ರಿವೇದಿ, ಬಿಜೆಪಿ ವಕ್ತಾರ



ಭ್ರಷ್ಟಾಚಾರಕ್ಕಾಗಿ, ಪಶ್ಚಿಮ ಬಂಗಾಳವನ್ನು ಲೂಟಿ ಮಾಡುವುದಕ್ಕಾಗಿ, ರಾಜ್ಯದಲ್ಲಿ ಗಲಭೆ ಎಬ್ಬಿಸುವುದಕ್ಕಾಗಿ ಪರವಾನಗಿ ನೀಡಬೇಕು ಎನ್ನುವುದು ಟಿಎಂಸಿಯ ಆಸೆ. ಈ ಕಾರಣದಿಂದಲೇ ಕೇಂದ್ರೀಯ ತನಿಖಾ ಸಂಸ್ಥೆಗಳು ರಾಜ್ಯದಲ್ಲಿ ತನಿಖೆ ನಡೆಸುತ್ತಿವೆ. ರಾಜ್ಯದಲ್ಲಿ 'ಟಿಎಂಸಿ ಸಿಂಡಿಕೇಟ್ ರಾಜ್' ಇದೆ. ಇದು ತಮ್ಮ ಲೂಟಿಕೋರ ಹಾಗೂ ಭ್ರಷ್ಟ ನಾಯಕರನ್ನು ರಕ್ಷಿಸಿಕೊಳ್ಳಲು ಕೇಂದ್ರೀಯ ತನಿಖಾ ಸಂಸ್ಥೆಗಳ ಮೇಲೆ ದಾಳಿ ಮಾಡಿಸುತ್ತದೆ

ನರೇಂದ್ರ ಮೋದಿ, ಪ್ರಧಾನಿ (ಪಶ್ಚಿಮ ಬಂಗಾಳದ ಜಲಪಾಯೀಗುಡಿಯಲ್ಲಿ ಆಡಿದ ಮಾತು)

ರಾಮ ನವಮಿಯು ಸಮೀಪಿಸುತ್ತಿದೆ. ಇವರುಗಳ (ವಿರೋಧ ಪಕ್ಷದ ನಾಯಕರ) ಪಾಪಗಳನ್ನು ಮರೆಯದಿರಿ
(ಬಿಹಾರದ ನವಾದದಲ್ಲಿ ಆಡಿದ ಮಾತು)



ಜಾರಿ ನಿರ್ದೇಶನಾಲಯ, ಸಿಬಿಐ, ಎನ್ಐಎ ಹಾಗೂ ಐ.ಟಿ ಇಲಾಖೆ ಬಿಜೆಪಿಯ 'ಅಂಗ ಸಂಸ್ಥೆ'ಗಳಂತೆ ಕೆಲಸ ಮಾಡುತ್ತಿವೆ. ಈ ಸಂಸ್ಥೆಗಳನ್ನು ಟಿಎಂಸಿ ನಾಯಕರಿಗೆ ಕಿರುಕುಳ ನೀಡಲು ಬಳಸಿಕೊಳ್ಳಲಾಗುತ್ತಿದೆ. ಬಿಜೆಪಿಗೆ ಸೇರಿಕೊಳ್ಳಿ ಇಲ್ಲವೇ ತನಿಖೆ ಎದುರಿಸಿ ಎಂದು ಈ ಸಂಸ್ಥೆಗಳು ನಮ್ಮ ನಾಯಕರಿಗೆ, ಹೋರಾಟಗಾರರಿಗೆ ಹೇಳುತ್ತಿವೆ

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ (ಪಶ್ಚಿಮ ಬಂಗಾಳದ ಪುರೂಲಿಯಾದಲ್ಲಿ ಆಡಿದ ಮಾತು)

ರಾಮ ನವಮಿಯಂದು ಬಿಜೆಪಿಯು ಕೋಮುಭಾವನೆಗಳನ್ನು ಕೆರಳಿಸಲು ಪ್ರಯತ್ನಿಸುತ್ತಿದೆ. ಏ.19ರಂದು ಮತದಾನ ಇದೆ. ಏ.17ಕ್ಕೆ ಗಲಭೆ ನಡೆಸಲಿದೆ

ಪ್ರಧಾನಿ ಮೋದಿ ಅವರ ಸುಳ್ಳುಗಳಿಂದ ಭಾರತದ ಜನರು ರೋಸಿಹೋಗಿದ್ದಾರೆ. ಜೂನ್ 4ರ ನಂತರ, ಮೋದಿ ಅವರು ದೀರ್ಘ ರಜೆಗೆ ತೆರಳಲಿದ್ದಾರೆ. ಇದು ಭಾರತದ ಜನರ ಗ್ಯಾರಂಟಿ

ಜೈರಾಮ್ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಕಾಂಗ್ರೆಸ್ ಪ್ರಣಾಳಿಕೆಗೆ ಮುಸ್ಲಿಂ ಲೀಗ್‌ನ ಮೊಹರು ಬಿದ್ದಿದೆ ಎಂಬ ಪ್ರಧಾನಿ ಮೋದಿ ಅವರ ಹೇಳಿಕೆಗೆ ಪ್ರತಿಕ್ರಿಯೆಯಾಗಿ 'ಎಕ್ಸ್' ಖಾತೆಯಲ್ಲಿನ ಪೋಸ್ಟ್)

ಆಧಾರ: ಪಿಟಿಐ

'ಮೋದಿ ನಮಗೆ ಸವಾಲೇ ಅಲ್ಲ'

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಲೋಕಸಭೆ ಚುನಾವಣೆಯ ಸಂದರ್ಭದಲ್ಲಿ 'ಪ್ರಜಾವಾಣಿ'ಗೆ ನೀಡಿದ ವಿಶೇಷ ಸಂದರ್ಶನದ ಆಯ್ದ ಭಾಗ ಇಲ್ಲಿದೆ

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ಸಂದರ್ಶನ
ಸಿದ್ದರಾಮಯ್ಯ ಮುಖ್ಯಮಂತ್ರಿ

• ಸದ್ಯದ ರಾಜ್ಯ ರಾಜಕೀಯ ವಾತಾವರಣ ಹೇಗಿದೆ?

ಈಗ ಕಾಂಗ್ರೆಸ್ ಪರವಾಗಿದೆ. ಈ ಬಾರಿ ಮೋದಿಯವರ ಅಲೆ ಇಲ್ಲ. ನಾವು ಜನರಿಗೆ ಕೊಟ್ಟಿದ್ದ ಭರವಸೆಯಂತೆ ಐದು 'ಗ್ಯಾರಂಟಿ'ಗಳನ್ನು ಜಾರಿ ಮಾಡಿದ್ದೇವೆ. ಈ 'ಗ್ಯಾರಂಟಿ'ಗಳ ಫಲ, ಫಲಾನುಭವಿಗಳಿಗೆ ದೊರೆತಿದೆ. ಅವರೆಲ್ಲರೂ ಸಂತುಷ್ಟರಾಗಿದ್ದಾರೆ. ಜನರಿಗೆ ನಮ್ಮ ಮೇಲೆ ನಂಬಿಕೆ ಬಂದಿದೆ, ವಿಶ್ವಾಸವಿದೆ. ಹೀಗಾಗಿ ಅತಿ ಹೆಚ್ಚು ಸ್ಥಾನಗಳನ್ನು ಗೆಲ್ಲುತ್ತೇವೆ.

• ಮೋದಿ ನಿಮಗೆ ನೇರ ಸವಾಲೇ? ನಿಮ್ಮ ಪ್ರಕಾರ ಮತದಾರನ್ನು ಹೆಚ್ಚು ಪ್ರಭಾವಿಸಬಹುದಾದ ವಿಷಯ ಯಾವುದು?

ವ್ಯಕ್ತಿಯಾಗಿ ಮೋದಿ ನಮಗೆ ಸವಾಲೇ ಅಲ್ಲ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ವೈಫಲ್ಯಗಳು, ರಾಜ್ಯದ ಹಿಂದಿನ ಸರ್ಕಾರದ ವೈಫಲ್ಯಗಳು, ನಮ್ಮ ಸರ್ಕಾರದ ಸಾಧನೆಗಳು ಈ ಬಾರಿ ಚುನಾವಣಾ ವಿಷಯವಾಗಿ ಜನರ ಮೇಲೆ ಪರಿಣಾಮ ಬೀರಲಿವೆ.



'ಮೋದಿ ಅಲೆ ಎಲ್ಲಿಯೂ ಇಲ್ಲ' 10

'ಜೀವಜಲ' ನೀಡುವ ವೈದ್ಯ ದಂಪತಿ

• ಹರಿಶಂಕರ್ ಆರ್.

ಒಳ್ಳೆ ಸುದ್ದಿ

ಬಳ್ಳಾರಿ: ಗುಟುಕು ನೀರಿಗೂ ಪರದಾಟ ಎದುರಾಗಿರುವ ಈ ಹೊತ್ತಿನಲ್ಲಿ ಬಳ್ಳಾರಿಯ ವೈದ್ಯ ದಂಪತಿ ಜನರ ಕಷ್ಟಕ್ಕೆ ಸ್ಪಂದಿಸುವ 'ಪ್ರಯತ್ನ' ಮಾಡಿದ್ದಾರೆ. ರೋಗಿಗಳ ತಪಾಸಣೆ ಮಾಡಿ ಔಷಧಿ ಕೊಡುವುದಷ್ಟೇ ಅಲ್ಲ, ನಗರ ವ್ಯಾಪ್ತಿಯಲ್ಲಿ ತೀರ ಸಮಸ್ಯೆ ಇರುವ ಪ್ರದೇಶಗಳಿಗೆ ತಮ್ಮ ಸ್ವಂತ ಖರ್ಚಿನಲ್ಲಿ ನೀರು ಪೂರೈಸುತ್ತಿದ್ದಾರೆ. ಅದು ಕೂಡ ಪ್ರಯೋಗಾಲಯದಲ್ಲಿ ಪರೀಕ್ಷೆ ಮಾಡಿಸಿ ಕುಡಿಯಲು ಯೋಗ್ಯವಾದ ನೀರನ್ನೇ ಸರಬರಾಜು ಮಾಡುತ್ತಿದ್ದು ದಂಪತಿಯ ಈ ಕಾರ್ಯ ಪ್ರಶಂಸೆಗೆ ಪಾತ್ರವಾಗಿದೆ.



'ಪ್ರಯತ್ನ ಫೌಂಡೇಷನ್' ಮೂಲಕ ನೀರು ಪೂರೈಕೆ

ಮೂರು ದಶಕಗಳಿಂದ ಬಳ್ಳಾರಿಯಲ್ಲಿ ವೈದ್ಯ ವೃತ್ತಿಯಲ್ಲಿ ತೊಡಗಿರುವ ಧರ್ಮರೆಡ್ಡಿ, ಶೋಭಾ ದಂಪತಿ ತಮ್ಮ 'ಪ್ರಯತ್ನ ಫೌಂಡೇಷನ್' ಮೂಲಕ ಜನರಿಗೆ ನಿತ್ಯ 7–8 ಟ್ಯಾಂಕರ್ ನೀರನ್ನು ಉಚಿತವಾಗಿ ಸರಬರಾಜು ಮಾಡುತ್ತಿದೆ. ಧರ್ಮರೆಡ್ಡಿ ಅವರು ಗ್ಯಾಸ್ಟ್ರೋಎಂಟರಾಲಜಿಸ್ಟ್ ಆಗಿದ್ದರೆ, ಶೋಭಾ ಅವರು ನೇತ್ರ ತಜ್ಞೆ.

6ನೇ ಪುಟ ನೋಡಿ

ಒಳಪುಟಗಳಲ್ಲಿ

ಎನ್ಐಎ– ಬಿಜೆಪಿ ನಡುವೆ ಮೈತ್ರಿ: ಟಿಎಂಸಿ ಆರೋಪ 6
ಲಿಂಗಭೇದದ ಹೀಯಾಳಿಕೆ, ಸ್ತ್ರೀದ್ವೇಷದ ಸುತ್ತ... 11

ಭಾಗಮಂಡಲ, ಖಾನಾಪುರದಲ್ಲಿ ಮಳೆ

ಪ್ರಜಾವಾಣಿ ವಾರ್ತೆ

ನಾಪೋಕ್ಲು (ಕೊಡಗು ಜಿಲ್ಲೆ): ಸಮೀಪದ ಭಾಗಮಂಡಲ ವ್ಯಾಪ್ತಿಯಲ್ಲಿ ಭಾನುವಾರ ಪ್ರಸಕ್ತ ಬೇಸಿಗೆಯ ಮೊದಲ ಮಳೆ ಸುರಿದು ತಂಪೆರೆಯಿತು.

ತಲಕಾವೇರಿ, ಚೇರಂಗಾಲ, ಭಾಗಮಂಡಲ, ಸಣ್ಣಪುಲಿಕೋಟು, ಅಯ್ಯಂಗೇರಿ ಭಾಗಗಳಲ್ಲಿ ಉತ್ತಮ ಮಳೆ ಸುರಿದಿದ್ದು, ಬೆಳೆಗಾರರಲ್ಲಿ ಮಂದಹಾಸ ಮೂಡಿಸಿದೆ.

ಖಾನಾಪುರ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಬೀಡಿ, ಹಿಂಡಲಗಿ ಹಾಗೂ ಅಕ್ಕಪಕ್ಕದ ಪ್ರದೇಶಗಳಲ್ಲಿ ಭಾನುವಾರ ಸಂಜೆ ಕೆಲಕಾಲ ಸಾಧಾರಣ ಮಳೆ ಸುರಿದಿದೆ.

ಸುಮಾರು ಹದಿನೈದು ನಿಮಿಷ ಮಳೆಯಾಗಿದ್ದು, ಬಿಸಿಲಿನ ಝಳದಿಂದ ಬಸವಳಿದಿದ್ದ ಜನರಿಗೆ ಈ ಮಳೆ ಕೊಂಚ ನೆಮ್ಮದಿ ನೀಡಿದೆ.

ಕೊಳವೆಬಾವಿ ಅವಘಡ ಪ್ರಕರಣ: ದೂರು ದಾಖಲು

ಪ್ರಜಾವಾಣಿ ವಾರ್ತೆ

ವಿಜಯಪುರ: ಇಂಡಿ ತಾಲ್ಲೂಕಿನ ಲಚ್ಯಾಣ ಗ್ರಾಮದಲ್ಲಿ ಏಪ್ರಿಲ್ 3ರಂದು ನಡೆದ ಕೊಳವೆಬಾವಿ ಅವಘಡಕ್ಕೆ ಸಂಬಂಧಿಸಿದಂತೆ ಪೊಲೀಸರು ದೂರು ದಾಖಲಿಸಿಕೊಂಡಿದ್ದಾರೆ.

ಯಾವುದೇ ಇಲಾಖೆಯಿಂದ ಅನುಮತಿ ಪಡೆಯದೇ ಕೊಳವೆಬಾವಿ ಕೊರೆದ ಹಾಗೂ ನೀರು ಬಾರದೇ ಇರುವ ಕಾರಣಕ್ಕೆ ಅದನ್ನು ಮುಚ್ಚದೇ ಹಾಗೆಯೇ ಬಿಟ್ಟು ನಿರ್ಲಕ್ಷ್ಯ ತೋರಿದ ಆರೋಪದಲ್ಲಿ ಪ್ರಕರಣ ದಾಖಲಿಸಲಾಗಿದೆ. ಕೊಳವೆಬಾವಿ ಕೊರೆದ ವಾಹನ ಕೆ.ಎ 01 ಎಂ.ಟಿ 6369 (ರಿಗ್ ವಾಹನ) ಮತ್ತು ಕೆ.ಎ 01 ಎಂ.ಟಿ 7369 (ಬೆಂಬಲ ವಾಹನ) ವಾಹನಗಳ ವ್ಯವಸ್ಥಾಪಕ ಹಾಗೂ ಇನ್ನಿತರರ ಮೇಲೆ (ಹೆಸರು, ವಿಳಾಸ ತಿಳಿದು ಬಂದಿಲ್ಲ) ಇಂಡಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಕೊಳವೆಬಾವಿ ಕೊರೆಯಿಸಿದ ಜಮೀನಿನ ಮಾಲೀಕ ಮತ್ತು ಕೊಳವೆ ಬಾವಿ ಕೊರೆದ ಏಜೆನ್ಸಿ ವಿರುದ್ಧ ಪ್ರಕರಣ ದಾಖಲಿಸುವಂತೆ ಜಿಲ್ಲಾಧಿಕಾರಿ ಅವರು ಪೊಲೀಸರಿಗೆ ಸೂಚನೆ ನೀಡಿದ್ದರು.

ತಮ್ಮ ವಿರುದ್ಧವೂ ದೂರು ದಾಖಲಿಸುತ್ತಾರೆ ಎಂಬ ಸುದ್ದಿ ತಿಳಿದು ಆಘಾತಗೊಂಡಿದ್ದ ಜಮೀನಿನ ಮಾಲೀಕ, ಮಗುವಿನ ಅಜ್ಜ ಶಂಕರಪ್ಪ ಮುಜಗೊಂಡ, ಘಟನೆಯಲ್ಲಿ ನೊಂದಿರುವ ಕುಟುಂಬದ ವಿರುದ್ಧ ದೂರು ದಾಖಲಿಸದಂತೆ ಜಿಲ್ಲಾಡಳಿತಕ್ಕೆ ಮನವಿ ಮಾಡಿದ್ದರು. ಹೀಗಾಗಿ, ಸಾತ್ವಿಕ್ ತಂದೆ ಸತೀಶ, ಶಂಕರಪ್ಪ ಅವರ ಹೆಸರನ್ನು ಪ್ರಕರಣದಿಂದ ಕೈಬಿಡಲಾಗಿದೆ.

ಅಪಘಾತ: ಎಂಜಿನಿಯರ್ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮೈಲನಹಳ್ಳಿ–ಬಾಗಲೂರು ರಸ್ತೆಯಲ್ಲಿ ಟಾಟಾ ಏಸ್ ಹಾಗೂ ದ್ವಿಚಕ್ರ ವಾಹನದ ನಡುವೆ ಶನಿವಾರ ಅಪಘಾತ ಸಂಭವಿಸಿದ್ದು, ಸವಾರ ಎಲ್. ರಘು (30) ಮೃತಪಟ್ಟಿದ್ದಾರೆ.

‘ಹೂವಿನ ನಾಯಕನಹಳ್ಳಿಯ ಎಲ್. ರಘು, ಮಾನ್ಯತಾ ಟೆಕ್ ಪಾರ್ಕ್‌ನ ಕಂಪನಿಯಲ್ಲಿ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದರು. ಒಂದು ತಿಂಗಳಿನಿಂದ ಕೆಲಸಕ್ಕೆ ಹೋಗಿರಲಿಲ್ಲ. ಮನೆಯಲ್ಲಿದ್ದರು. ಬ್ಯಾಂಕ್‌ಗೆ ಹೋಗಿ ವಾಪಸು ಮನೆಯತ್ತ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ’ ಎಂದು ದೇವನಹಳ್ಳಿ ಸಂಚಾರ ಠಾಣೆ ಪೊಲೀಸರು ಹೇಳಿದರು.

‘ರಘು ಅವರು ದ್ವಿಚಕ್ರ ವಾಹನದಲ್ಲಿ ಮೈಲನಹಳ್ಳಿಯಿಂದ ತಮ್ಮೂರಿನತ್ತ ಹೊರಟಿದ್ದರು. ಇದೇ ಮಾರ್ಗದಲ್ಲಿ ಹೋಗುತ್ತಿದ್ದ ಟಾಟಾ ಏಸ್ ವಾಹನ, ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿತ್ತು. ವಾಹನ ಸಮೇತ ಬಿದ್ದಿದ್ದ ರಘು ಅವರ ತಲೆಗೆ ತೀವ್ರ ಪೆಟ್ಟು ಬಿದ್ದಿತ್ತು. ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿಯೇ ಅವರು ಮೃತಪಟ್ಟಿದ್ದಾರೆ’ ಎಂದು ತಿಳಿಸಿದರು.

‘ಟಾಟಾ ಏಸ್ ವಾಹನ ಚಾಲಕನ ಅತಿ ವೇಗ ಹಾಗೂ ನಿರ್ಲಕ್ಷ್ಯದ ಚಾಲನೆಯಿಂದ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಪ್ರಕರಣ ದಾಖಲಿಸಿಕೊಂಡು, ಚಾಲಕನನ್ನು ಬಂಧಿಸಲಾಗಿದೆ’ ಎಂದು ಹೇಳಿದರು.



ಹೊಳಲ್ಕೆರೆಯ ಹನುಮಂತ ದೇವರ ಕಣಿವೆ ಬಳಿ ರಾಷ್ಟ್ರೀಯ ಹೆದ್ದಾರಿ13ರಲ್ಲಿ ಭಾನುವಾರ ಬೆಳಗಿನಜಾವ ನಜ್ಜುಗುಜ್ಜಾಗಿರುವ ಬಸ್

ಬಸ್ ಪಲ್ಟಿ: ಮೂವರ ಸಾವು

ಪ್ರಜಾವಾಣಿ ವಾರ್ತೆ

ಹೊಳಲ್ಕೆರೆ (ಚಿತ್ರದುರ್ಗ): ಪಟ್ಟಣದ ಹೊರವಲಯದ ಹನುಮಂತ ದೇವರ ಕಣಿವೆಯ ಬಳಿ ರಾಷ್ಟ್ರೀಯ ಹೆದ್ದಾರಿ-13ರಲ್ಲಿ ಭಾನುವಾರ ಬೆಳಗಿನಜಾವ 4 ಗಂಟೆ ವೇಳೆಗೆ ಖಾಸಗಿ ಬಸ್ಸೊಂದು ಉರುಳಿ ಬಿದ್ದು, ಮೂವರು ಪ್ರಯಾಣಿಕರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಹೊನ್ನಾವರದ ಜಗದೀಶ (48), ಗೋಕರ್ಣದ ಗಣಪತಿ (34), ಸಕಲೇಶಪುರದ ರೋನಕ್ ಸಿಂಗ್ ಮೃತರು. ಬಸ್‌ನಲ್ಲಿ 36 ಪ್ರಯಾಣಿಕರಿದ್ದರು. 33 ಜನರು ಗಾಯಗೊಂಡಿದ್ದು, ಚಿತ್ರದುರ್ಗ, ಶಿವಮೊಗ್ಗ ಮತ್ತು ದಾವಣಗೆರೆಯ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ.

‘ಬಸ್ ಬೆಂಗಳೂರಿನಿಂದ ಗೋಕರ್ಣಕ್ಕೆ ತೆರಳುತ್ತಿತ್ತು. ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ ಬಸ್ ಉರುಳಿ ಬಿದ್ದಿದೆ’ ಎಂದು ಪ್ರಕರಣ ದಾಖಲಿಸಿಕೊಂಡಿರುವ ಹೊಳಲ್ಕೆರೆ ಪೊಲೀಸರು ತಿಳಿಸಿದ್ದಾರೆ.

ರಂಗೋಲಿ ಬಿಡಿಸಿ ಮತದಾನದ ಜಾಗೃತಿ

ಯಲಹಂಕ: ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಬೆಂಗಳೂರು ನಗರ ಜಿಲ್ಲಾಡಳಿತ, ತಾಲ್ಲೂಕು ಆಡಳಿತ, ಜಿಲ್ಲಾ ಮತ್ತು ಯಲಹಂಕ ಸ್ವೀಪ್ ಸಮಿತಿಗಳ ಆಶ್ರಯದಲ್ಲಿ ಮಿನಿವಿಧಾನಸೌಧದ ಎದುರು ರಂಗೋಲಿಗಳನ್ನು ಬಿಡಿಸುವ ಮೂಲಕ ಮತದಾರರಲ್ಲಿ ಮತದಾನದ ಮಹತ್ವ ಕುರಿತು ಜಾಗೃತಿ ಮೂಡಿಸಲಾಯಿತು.

ಕಾಮಾಕ್ಷಿಪಾಳ್ಯದ ರಂಗನಾಥಪುರದಲ್ಲಿ ಘಟನೆ • ಆರೋಪಿ ಪತಿ ಬಂಧನ

ಸೀರೆಯಿಂದ ಕತ್ತು ಬಿಗಿದು ಪತ್ನಿ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ನೇತ್ರಾವತಿ (32) ಎಂಬುವವರನ್ನು ಸೀರೆಯಿಂದ ಕತ್ತು ಬಿಗಿದು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಆರೋಪದಡಿ ಪತಿ ವೆಂಕಟೇಶ್ (38) ಅವರನ್ನು ಪೊಲೀಸರು ಬಂಧಿಸಿದ್ದಾರೆ.

‘ಮಾಗಡಿ ತಾಲ್ಲೂಕಿನ ನೇತ್ರಾವತಿ ಹಾಗೂ ವೆಂಕಟೇಶ್, ಕೆಲಸಕ್ಕಾಗಿ ನಗರಕ್ಕೆ ಬಂದಿದ್ದರು. ರಂಗನಾಥಪುರದಲ್ಲಿ ವಾಸವಿದ್ದರು. ದಂಪತಿಗೆ 8 ವರ್ಷಗಳ ಮಗನಿದ್ದಾನೆ. ಗಾರ್ಮೆಂಟ್ಸ್ ಕಾರ್ಖಾನೆಯೊಂದರಲ್ಲಿ ನೇತ್ರಾವತಿ ಕೆಲಸ ಮಾಡುತ್ತಿದ್ದರು. ವೆಂಕಟೇಶ್, ನಗರದ ಕಂಪನಿಯೊಂದರ ಕ್ರೇನ್ ಆಪರೇಟರ್’ ಎಂದು ಪೊಲೀಸರು ಹೇಳಿದರು.

ಅಳುತ್ತಾ ಹೊರಗೆ ಬಂದಿದ್ದ ಮಗ

‘ಭಾನುವಾರ ಬೆಳಿಗ್ಗೆ ಎಚ್ಚರಗೊಂಡಿದ್ದ ಮಗ, ತಾಯಿ ನೇತ್ರಾವತಿ ಅವರನ್ನು ಎಬ್ಬಿಸಲು ಪ್ರಯತ್ನಿಸಿದ್ದ. ಆದರೆ, ಅವರು ಎದ್ದಿರಲಿಲ್ಲ. ಬಳಿಕ, ಮಲಗಿದ್ದ ತಂದೆಯನ್ನು ಎಬ್ಬಿಸಲು ಹೋಗಿದ್ದ. ವಿಪರೀತ ಮದ್ಯ ಕುಡಿದು ಮಲಗಿದ್ದರಿಂದ ತಂದೆಯೂ ಎದ್ದಿರಲಿಲ್ಲ. ಅವಾಗಲೇ ಮಗ, ಅಳುತ್ತ ಮನೆಯಿಂದ ಹೊರಗೆ ಬಂದಿದ್ದ. ಆತನನ್ನು ಗಮನಿಸಿದ್ದ ಸ್ಥಳೀಯರು ಮನೆಯೊಳಗೆ ಹೋಗಿ ನೋಡಿದಾಗ ಮೃತದೇಹ ಕಂಡಿತ್ತು. ಕೊಲೆ ಬಗ್ಗೆ ಠಾಣೆಗೆ ಮಾಹಿತಿ ನೀಡಿದ್ದರು’ ಎಂದು ಪೊಲೀಸರು ತಿಳಿಸಿದರು.

‘9 ವರ್ಷಗಳ ಹಿಂದೆ ನೇತ್ರಾವತಿ ಹಾಗೂ ವೆಂಕಟೇಶ್ ಮದುವೆಯಾಗಿದ್ದರು. ಮದ್ಯವ್ಯಸನಿಯಾಗಿದ್ದ ವೆಂಕಟೇಶ್, ನಿತ್ಯವೂ ಮದ್ಯ ಕುಡಿದು ಮನೆಯಲ್ಲಿ ಗಲಾಟೆ ಮಾಡುತ್ತಿದ್ದ. ದುಡಿದ ಹಣವನ್ನೆಲ್ಲ ಮದ್ಯ ಖರೀದಿಗೆ ಖರ್ಚು ಮಾಡುತ್ತಿದ್ದ. ಮದ್ಯ ಖರೀದಿಗೆ ಹಣ ಸಾಲದಿದ್ದಾಗ, ಪತ್ನಿಯನ್ನು ಕೇಳಿ ಪಡೆದುಕೊಳ್ಳುತ್ತಿದ್ದ’ ಎಂದು ತಿಳಿಸಿದರು.

‘ನೇತ್ರಾವತಿ ಅವರು ಗಾರ್ಮೆಂಟ್ಸ್ ಕಾರ್ಖಾನೆ ಉದ್ಯೋಗದಿಂದ ಬಂದ ಹಣದಲ್ಲಿ ಮನೆ ನಡೆಸುತ್ತಿದ್ದರು. ಅದೇ ಹಣವನ್ನು ಕೊಡುವಂತೆ ಪತಿ ಒತ್ತಾಯಿಸುತ್ತಿದ್ದ. ಇದೇ ವಿಚಾರಕ್ಕೆ ಮನೆಯಲ್ಲಿ ಪದೇ ಪದೇ ಗಲಾಟೆ ಆಗುತ್ತಿತ್ತು. ಪತ್ನಿ ಮೇಲೆ ಹಲವು ಬಾರಿ ವೆಂಕಟೇಶ್ ಹಲ್ಲೆ ಮಾಡಿದ್ದನೆಂದು ಸ್ಥಳೀಯರು ಹೇಳಿದ್ದಾರೆ’ ಎಂದು ಪೊಲೀಸರು ವಿವರಿಸಿದರು.

ಅಪರಾಧ ಸುದ್ದಿ

ಉಸಿರುಗಟ್ಟಿ ಸಾವು: ‘ನೇತ್ರಾವತಿ ಹಾಗೂ ವೆಂಕಟೇಶ್ ನಡುವೆ ಶನಿವಾರವೂ ಗಲಾಟೆ ಆಗಿತ್ತು. ಆರೋಪಿ ವೆಂಕಟೇಶ್, ಮನೆಯಿಂದ ಹೊರಗೆ ಹೋಗಿದ್ದ. ಪಾನಮತ್ತನಾಗಿ ರಾತ್ರಿ 11.30 ಗಂಟೆ ಸುಮಾರಿಗೆ ಮನೆಗೆ ವಾಪಸು ಬಂದಿದ್ದ. ನೇತ್ರಾವತಿ ಎಚ್ಚರವಿದ್ದರು. ಮಗ ಮಲಗಿದ್ದ’ ಎಂದು ಪೊಲೀಸರು ಹೇಳಿದರು.

‘ಪತ್ನಿ ಜೊತೆ ಜಗಳ ತೆಗೆದಿದ್ದ ಆರೋಪಿ, ಹಲ್ಲೆ ಮಾಡಿದ್ದ. ಮನೆಯಿಂದ ಹೊರಗೆ ಬಂದಿದ್ದ ನೇತ್ರಾವತಿ ಕೂಗಾಡಿದ್ದರು. ಅಕ್ಕ–ಪಕ್ಕದ ಮನೆಯವರು ದಂಪತಿಗೆ ಬುದ್ಧಿವಾದ ಹೇಳಿ ಒಳಗೆ ಕಳುಹಿಸಿದ್ದರು. ಪುನಃ ಜಗಳ ತೆಗೆದಿದ್ದ ಆರೋಪಿ, ನೇತ್ರಾವತಿ ಅವರ ಕುತ್ತಿಗೆಗೆ ಸೀರೆ ಸುತ್ತಿ ಬಿಗಿದಿದ್ದ. ಇದರಿಂದಾಗಿ ಉಸಿರುಗಟ್ಟಿ ನೇತ್ರಾವತಿ ಮೃತಪಟ್ಟಿದ್ದರು. ಮೃತದೇಹದ ಬಳಿಯೇ ಆರೋಪಿ ಮಲಗಿದ್ದ’ ಎಂದು ತಿಳಿಸಿದರು.

‘ಕುಟುಂಬಸ್ಥರು ಹಾಗೂ ಸ್ಥಳೀಯರು ನೀಡಿದ್ದ ಹೇಳಿಕೆ ಆಧರಿಸಿ ಪತಿ ವೆಂಕಟೇಶ್‌ನನ್ನು ಬಂಧಿಸಲಾಗಿದೆ. ಕೌಟುಂಬಿಕ ಜಗಳವೇ ಕೊಲೆಗೆ ಕಾರಣವೆಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ’ ಎಂದರು.

ಕಾರ್ಮಿಕನ ಮೃತದೇಹ ಪತ್ತೆ

ಬೆಂಗಳೂರು: ಕಟ್ಟಡ ನಿರ್ಮಾಣ ಕಾರ್ಮಿಕ ವೀರೇಶ್ (25) ಎಂಬುವವರು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ಈ ಬಗ್ಗೆ ಕೋಣನಕುಂಟೆ ಠಾಣೆಯಲ್ಲಿ ಯುಡಿಆರ್ (ಅಸಹಜ ಸಾವು) ಪ್ರಕರಣ ದಾಖಲಾಗಿದೆ.

‘ರಾಯಚೂರಿನ ವೀರೇಶ್ ಕೊತ್ತನೂರಿನ ಕಾಲೇಜೊಂದರ ನಿರ್ಮಾಣ ಹಂತದ ಕಟ್ಟಡದಲ್ಲಿಯೇ ರಾತ್ರಿ ಮಲಗುತ್ತಿದ್ದರು. ಶನಿವಾರವೂ ಅದೇ ಕಟ್ಟಡದಲ್ಲಿ ಮಲಗಿದ್ದರು. ಬೆಳಿಗ್ಗೆ ಅವರು ಎಚ್ಚರಗೊಂಡಿರಲಿಲ್ಲ. ಅವರನ್ನು ಗಮನಿಸಿದ್ದ ಸ್ಥಳೀಯರು ಠಾಣೆಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋಗಿ ಗಮನಿಸಿದಾಗ, ವೀರೇಶ್ ಮೃತಪಟ್ಟಿದ್ದು ಗೊತ್ತಾಯಿತು’ ಎಂದರು.

ಸ್ಥಳೀಯರು ನೀಡಿರುವ ಹೇಳಿಕೆ ಆಧರಿಸಿ ಯುಡಿಆರ್ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಸಾವಿಗೆ ನಿಖರ ಕಾರಣ ಸದ್ಯಕ್ಕೆ ಗೊತ್ತಾಗಿಲ್ಲ. ಪುರಾವೆಗಳನ್ನು ಆಧರಿಸಿ, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ತಿಳಿಸಿದರು.

ಮದ್ಯ ಖರೀದಿಸಲು ಹಣಕ್ಕಾಗಿ ಪೀಡಿಸಿದ್ದ ಆರೋಪಿ

ಹಣ ನೀಡದ್ದಕ್ಕೆ ಚಾಕು ಇರಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯ ಖರೀದಿಸಲು ಹಣ ನೀಡಲಿಲ್ಲವೆಂಬ ಕಾರಣಕ್ಕೆ ಪತ್ನಿಗೆ ಚಾಕುವಿನಿಂದ ಇರಿದಿದ್ದ ಆರೋಪದಡಿ ಮೊಹಮ್ಮದ್ (34) ಎಂಬುವವರನ್ನು ಪರಪ್ಪನ ಅಗ್ರಹಾರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ರಾಯಚೂರಿನ ಮೊಹಮ್ಮದ್, ಕೂಲಿ ಕಾರ್ಮಿಕ. ಪತ್ನಿ ಮೈಮುದಾ (28) ಜೊತೆ ದೊಡ್ಡ ನಾಗಮಂಗಲದಲ್ಲಿ ವಾಸವಿದ್ದ. ದಂಪತಿಗೆ ಮೂವರು ಮಕ್ಕಳಿದ್ದಾರೆ. ಪತ್ನಿಯೊಂದಿಗೆ ಶನಿವಾರ ರಾತ್ರಿ ಜಗಳ ಮಾಡಿದ್ದ ಆರೋಪಿ, ಚಾಕುವಿನಿಂದ ಇರಿದಿದ್ದ’ ಎಂದು ಪೊಲೀಸರು ಹೇಳಿದರು.

‘ಆರೋಪಿ ನಿತ್ಯವೂ ಕುಡಿದು ಮನೆಯಲ್ಲಿ ಗಲಾಟೆ ಮಾಡುತ್ತಿದ್ದ. ಮದ್ಯ ಖರೀದಿಸಲು ಹಣ ನೀಡುವಂತೆ ಪತ್ನಿಯನ್ನು ಪೀಡಿಸುತ್ತಿದ್ದ. ಇದೇ ವಿಚಾರವಾಗಿ ಹಲವು ಬಾರಿ ಗಲಾಟೆ ನಡೆದಿತ್ತು.’ ‘ಶನಿವಾರ ಮದ್ಯಕ್ಕಾಗಿ ಹಣ ಕೊಡುವಂತೆ ಆರೋಪಿ ಕೇಳಿದ್ದ. ಪತ್ನಿ ಕೊಟ್ಟಿರಲಿಲ್ಲ. ಗಲಾಟೆ ಮಾಡಿದ್ದ ಆರೋಪಿ, ಪತ್ನಿಯ ಭುಜ ಹಾಗೂ ಎದೆಗೆ ಚಾಕುವಿನಿಂದ ಇರಿದಿದ್ದ. ಕೂಗಾಟ ಕೇಳಿ ರಕ್ಷಣೆಗೆ ಹೋಗಿದ್ದ ಸ್ಥಳೀಯರು, ಮೈಮುದಾ ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಿದ್ದರು’ ಎಂದರು.

‘ಮಕ್ಕಳು ನೀಡಿರುವ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ತಿಳಿಸಿದರು.

ಚಾಲಕನ ಮೇಲೆ ಹಲ್ಲೆ: ಆರೋಪಿ ಬಂಧನ

ಬೆಂಗಳೂರು: ಕುಮಾರಸ್ವಾಮಿ ಲೇಔಟ್ ನಿಲ್ದಾಣದಲ್ಲಿ ರಾತ್ರಿ ತಂಗಿದ್ದ ಬಸ್‌ನ ಚಾಲಕನ ಮೇಲೆ ಮಚ್ಚಿನಿಂದ ಹಲ್ಲೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಆರೋಪಿ ನಂದ ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ.

‘ಏಪ್ರಿಲ್ 4ರಂದು ತಡರಾತ್ರಿ ನಡೆದಿದ್ದ ಹಲ್ಲೆ ಬಗ್ಗೆ ಚಾಲಕ ನಾಗೇಂದ್ರ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು, ಆರೋಪಿ ನಂದನನ್ನು ಬಂಧಿಸಲಾಗಿದೆ. ಇನ್ನೊಬ್ಬ ಆರೋಪಿ ಜಾನ್ ತಲೆಮರೆಸಿಕೊಂಡಿದ್ದಾನೆ’ ಎಂದು ಪೊಲೀಸರು ಹೇಳಿದರು.

‘ಮಾರ್ಗ ಸಂಖ್ಯೆ 15ಇ/2ರ ಎಲೆಕ್ಟ್ರಿಕ್ ಬಸ್‌ನಲ್ಲಿ ಏಪ್ರಿಲ್ 4ರಂದು ಚಾಲಕ ನಾಗೇಂದ್ರ ಕರ್ತವ್ಯದಲ್ಲಿದ್ದರು. ತಡರಾತ್ರಿ ಕರ್ತವ್ಯದ ಅವಧಿ ಮುಗಿದಿದ್ದರಿಂದ, ಕುಮಾರಸ್ವಾಮಿ ಲೇಔಟ್ ನಿಲ್ದಾಣದಲ್ಲಿ ಬಸ್ ಸಮೇತ ತಂಗಿದ್ದರು. ಬಸ್‌ನಲ್ಲಿಯೇ ಚಾಲಕ ಹಾಗೂ ನಿರ್ವಾಹಕ ಮಲಗಿದ್ದರು’ ಎಂದು ತಿಳಿಸಿದರು.

‘ಪಾನಮತ್ತರಾಗಿದ್ದ ನಂದ ಹಾಗೂ ಸ್ನೇಹಿತರು ನಿಲ್ದಾಣಕ್ಕೆ ತಡರಾತ್ರಿ ಬಂದಿದ್ದರು. ಪರಸ್ಪರ ಅವಾಚ್ಯ ಶಬ್ದಗಳಿಂದ ನಿಂದಿಸಿಕೊಳ್ಳುತ್ತಿದ್ದರು. ಅದನ್ನು ಕೇಳಿಸಿಕೊಂಡಿದ್ದ ಚಾಲಕ ನಾಗೇಂದ್ರ, ಎಚ್ಚರಗೊಂಡು ಬಸ್‌ನಿಂದ ಇಳಿದು ಆರೋಪಿಗಳ ಬಳಿ ಹೋಗಿದ್ದರು. ‘ನಿಲ್ದಾಣದಲ್ಲಿ ಗಲಾಟೆ ಮಾಡಬೇಡಿ. ಹೊರಟು ಹೋಗಿ’ ಎಂದು ಕೋರಿದ್ದರು.’

‘ನಾಗೇಂದ್ರ ವಿರುದ್ಧವೇ ತಿರುಗಿಬಿದ್ದಿದ್ದ ಆರೋಪಿಗಳು, ‘ಇದು ನಮ್ಮ ಪ್ರದೇಶದ ನಿಲ್ದಾಣ. ಅದನ್ನು ಕೇಳಲು ನೀನು ಯಾರು?’ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ಮಾತಿಗೆ ಮಾತು ಬೆಳೆದು, ಜಗಳ ಶುರುವಾಗಿತ್ತು. ಆರೋಪಿ ನಂದ, ಚಾಲಕ ನಾಗೇಂದ್ರ ಅವರ ಮುಖಕ್ಕೆ ಗುದ್ದಿ ಹಲ್ಲೆ ಮಾಡಿದ್ದ. ನಂತರ, ಸಮೀಪದಲ್ಲಿದ್ದ ಎಳನೀರು ಅಂಗಡಿಯಿಂದ ಮಚ್ಚು ತಂದು ನಾಗೇಂದ್ರ ಮೇಲೆ ಬೀಸಲು ಮುಂದಾಗಿದ್ದ. ನಾಗೇಂದ್ರ ತಮ್ಮ ಕೈ ಅಡ್ಡ ಹಿಡಿದಿದ್ದರು. ಇದರಿಂದಾಗಿ ಕೈ ಹೆಬ್ಬೆರಳಿಗೆ ಮಚ್ಚಿನೇಟು ಬಿದ್ದಿತ್ತು’ ಎಂದು ಪೊಲೀಸರು ಹೇಳಿದರು.

‘ಚಾಲಕನ ರಕ್ಷಣೆಗೆ ಹೋಗಿದ್ದ ನಿರ್ವಾಹಕನಿಗೂ ಮಚ್ಚು ತೋರಿಸಿ ಆರೋಪಿಗಳು ಬೆದರಿಸಿದ್ದರು. ಚಾಲಕ ಹಾಗೂ ನಿರ್ವಾಹಕ ಸ್ಥಳದಿಂದ ತಪ್ಪಿಸಿಕೊಂಡಿದ್ದರು. ನಾಗೇಂದ್ರ ಅವರನ್ನು ನಿರ್ವಾಹಕನೇ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ್ದರು. ನಾಗೇಂದ್ರ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ’ ಎಂದು ತಿಳಿಸಿದರು.

ಅಪರಾಧ ಹಿನ್ನೆಲೆಯುಳ್ಳವ: ‘ನಂದ ವಿರುದ್ಧ ಯಾವುದೇ ಪ್ರಕರಣಗಳಿಲ್ಲ. ಆದರೆ, ತಲೆಮರೆಸಿಕೊಂಡಿರುವ ಜಾನ್ ಅಪರಾಧ ಹಿನ್ನೆಲೆಯುಳ್ಳವ. ಈತನ ಮೇಲೆ ಈ ಹಿಂದೆಯೂ ಪ್ರಕರಣ ದಾಖಲಾಗಿತ್ತು’ ಎಂದು ಹೇಳಿದರು.



ನಗರದಲ್ಲಿ ಸುಡು ಬಿಸಿಲು ಕಾಡುತ್ತಿದೆ. ಫ್ಯಾನು, ಎ.ಸಿಯ ಸೌಲಭ್ಯ ಇರುವವರು ಮನೆಯೊಳಗೆ ನಿಸೂರಾಗಬಹುದು. ನಿತ್ಯದ ಕೂಲಿ ನೆಚ್ಚಿಕೊಂಡ ಬಹುತೇಕರಿಗೆ ಮರದ ನೆರಳೇ ಆಸರೆ. ಬೆಂಗಳೂರಿನ ಜೆ.ಸಿ.ನಗರದಲ್ಲಿ ಪೆಟ್ಟಿಗೆ ಅಂಗಡಿ ಇಟ್ಟುಕೊಂಡಿರುವ ಮಹಿಳೆಯೊಬ್ಬರು ಮಗುವನ್ನು ಮರಕ್ಕೆ ಕಟ್ಟಿದ ಜೋಳಿಗೆಯಲ್ಲಿ ಮಲಗಿಸಿ ಹಸಿರಿನ ಉಸಿರು ಊಡಿಸಿದ ಕ್ಷಣ

– ಪ್ರಜಾವಾಣಿ ಚಿತ್ರ/ ಎಂ.ಎಸ್.ಮಂಜುನಾಥ್

ಎಂಜಿನಿಯರ್‌ಗೆ ₹36.80 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ತುಮಕೂರು: ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿ ಹೆಚ್ಚಿನ ಲಾಭ ಗಳಿಸಬಹುದು ಎಂದು ನಂಬಿಸಿ ತಿಪಟೂರಿನ ಕುಮಾರಸ್ವಾಮಿ ಬಡಾವಣೆಯ ನಿವಾಸಿ ಹಾಗೂ ಎಂಜಿನಿಯರ್ ಲಿಖಿತ್ ವೈ.ಪಾಟೀಲ ಎಂಬುವರಿಗೆ ₹36.80 ಲಕ್ಷ ವಂಚಿಸಲಾಗಿದೆ.

ಇನ್‌ಸ್ಟಾಗ್ರಾಮ್‌ನಲ್ಲಿ ಕಂಡ ಲಿಂಕ್ ಕ್ಲಿಕ್ ಮಾಡಿ ಮೊಬೈಲ್ ನಂಬರ್ ಹಾಕಿದ್ದಾರೆ. ಅವರ ನಂಬರ್ ಅನ್ನು ‘ಎಫ್–10 ಸ್ಟಾಕ್ ಮಾರ್ಕೆಟಿಂಗ್ ‘ಎಕ್ಸ್‌ಚೇಂಜ್ ಕ್ಲಬ್’ ಎಂಬ ವಾಟ್ಸ್ ಆ್ಯಪ್ ಗ್ರೂಪ್‌ಗೆ ಸೇರಿಸಿದ್ದಾರೆ. ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ಗಳಿಸಬಹುದು ಎಂದು ಮೆಸೇಜ್ ಮಾಡಿದ್ದಾರೆ. ಇದನ್ನು ನಂಬಿದ ಲಿಖಿತ್ ಗ್ರೂಪ್‌ನಲ್ಲಿದ್ದ ಒಂದು ಮೊಬೈಲ್ ನಂಬರ್ ಪಡೆದು ಪ್ರತ್ಯೇಕವಾಗಿ ಅವರೊಂದಿಗೆ ಚಾಟಿಂಗ್ ಮಾಡಿದ್ದಾರೆ.

ನಂತರ ‘ಎಸ್‌ಎಂಸಿಎಲ್‌ಇ’ ಷೇರು ಮಾರುಕಟ್ಟೆಯಲ್ಲಿ ಅಕೌಂಟ್ ತೆರೆದಿದ್ದಾರೆ. ಇದಾದ ಮೇಲೆ ಹಣ ಹೂಡಿಕೆ ಮಾಡುವಂತೆ ತಿಳಿಸಿದ್ದಾರೆ. ಮೊದಲ ಬಾರಿಗೆ ಮಾರ್ಚ್ 25ರಂದು ₹6 ಲಕ್ಷವನ್ನು ಸೈಬರ್ ಕಳ್ಳರು ಹೇಳಿದ ಬ್ಯಾಂಕ್ ಖಾತೆಗೆ ವರ್ಗಾಯಿಸಿದ್ದಾರೆ. ಏ.2ರ ವರೆಗೆ ಹಂತ ಹಂತವಾಗಿ ಒಟ್ಟು ₹36.80 ಲಕ್ಷ ಹಣ ವರ್ಗಾವಣೆ ಮಾಡಿದ್ದಾರೆ.

ಲಿಖಿತ್ ಅವರಿಗೆ ‘ಎಫ್–10 ಸ್ಟಾಕ್ ಮಾರ್ಕೆಟಿಂಗ್ ಎಕ್ಸ್‌ಚೇಂಜ್ ಕ್ಲಬ್’ ಯಾವುದೇ ಹಣ ವಾಪಸ್ ಹಾಕಿಲ್ಲ. ಇದರಿಂದ ಅನುಮಾನಗೊಂಡು ಹೂಡಿಕೆ ಮಾಡಿದ ಹಣ ವಾಪಸ್ ಕೊಡುವಂತೆ ಕೇಳಿದ್ದಾರೆ. ಇದಕ್ಕೆ ಪ್ರತಿಕ್ರಿಯೆ ನೀಡಿದ ಸೈಬರ್ ವಂಚಕರು ಮತ್ತೆ ₹10 ಲಕ್ಷ ಹಣ ಹಾಕುವಂತೆ ವಿವಿಧ ಬ್ಯಾಂಕ್ ಖಾತೆಗಳ ವಿವರ ನೀಡಿದ್ದಾರೆ. ಹಣ ಬರುವುದಿಲ್ಲ ಎಂಬುವುದು ಖಾತ್ರಿಯಾದ ನಂತರ ಲಿಖಿತ್ ಠಾಣೆಯ ಮೆಟ್ಟಿಲು ಹತ್ತಿದ್ದಾರೆ. ಸೈಬರ್ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ.

ನಗರದಲ್ಲಿ ಇಂದು

ಜ್ಞಾನಾಕ್ಷೀ ರಾಜರಾಜೇಶ್ವರಿ ದೇವಸ್ಥಾನದ ವಸಂತ ನವರಾತ್ರಿ ಬ್ರಹ್ಮೋತ್ಸವ: ಗಣಪತಿ ಉತ್ಸವ ಬೆಳಿಗ್ಗೆ 8ಕ್ಕೆ, ಧ್ವಜಾರೋಹಣ ಬೆಳಿಗ್ಗೆ 11.05, ಆಯೋಜನೆ ಮತ್ತು ಸ್ಥಳ: ಜ್ಞಾನಾಕ್ಷೀ ರಾಜರಾಜೇಶ್ವರಿ ದೇವಸ್ಥಾನ, ರಾಜರಾಜೇಶ್ವರಿನಗರ

ಅಲೂಮ್ನಿ ಮೀಟ್–2024: ಆಯೋಜನೆ ಮತ್ತು ಸ್ಥಳ: ಗುಡ್‌ವಿಲ್ ಗರ್ಲ್ಸ್ ಹೈಸ್ಕೂಲ್ ಆ್ಯಂಡ್ ಪಿಯು ಕಾಲೇಜು, ಬೆಳಿಗ್ಗೆ 10

‘ಧನ್ವಂತರಿ ಚಿಕಿತ್ಸೆ’ ನಾಟಕ ಪ್ರದರ್ಶನ: ರಚನೆ: ಕುವೆಂಪು, ನಿರ್ದೇಶನ: ಎಂ. ಭೈರಪ್ಪ, ಆಯೋಜನೆ ಮತ್ತು ಸ್ಥಳ: ಕ್ರಿಸ್ತು ಜಯಂತಿ ಕಾಲೇಜು, ಮಧ್ಯಾಹ್ನ 2

ರಂಜಾನ್ ಇಫ್ತಾರ್ ಕೂಟ: ಆಯೋಜನೆ ಮತ್ತು ಸ್ಥಳ: ಬಾರ್ಬಿಕ್ಯೂ ನೇಷನ್, 3ನೇ ಮಹಡಿ, ಮೋರ್ ಮೇಘಾ ಮಾಲ್, ಹೊರವರ್ತುಲ ರಸ್ತೆ, ಮಾರತ್‌ಹಳ್ಳಿ, ಸಂಜೆ 5.30

ಎನ್.ಎಚ್ (ನಾನಾ) ಪಾಲ್ಕರ್ ಅವರ ‘ಮ್ಯಾನ್ ಆಫ್ ದಿ ಮಿಲ್ಲೇನಿಯಾ ಡಾ. ಹೆಡಗೇವಾರ್’ ಪುಸ್ತಕ ಬಿಡುಗಡೆ: ಅತಿಥಿಗಳು: ಆರ್. ಜಗನಾಥನ್, ಮುಕುಂದ ಸಿ.ಆರ್., ಆಯೋಜನೆ: ಮಂಥನ್, ಸ್ಥಳ: ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು, ಬಸವನಗುಡಿ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

‘ಬಸವ ಪುರಸ್ಕಾರ್–2024’ ಪ್ರಶಸ್ತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಬಸವ ಪರಿಷತ್ ಬೆಂಗಳೂರು ಸಂಸ್ಥೆ ವತಿಯಿಂದ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ಸಾಧಕರಿಗೆ ನೀಡುವ ‘ಬಸವ ಪುರಸ್ಕಾರ್–2024’ ರಾಷ್ಟ್ರೀಯ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

2024ರ ಮೇ ತಿಂಗಳ ಮೂರನೇ ವಾರದಲ್ಲಿ ನಾಡಿನ ಪ್ರಮುಖ ಮಠಾಧೀಶರ ಗಣ್ಯರ ಸಮ್ಮುಖದಲ್ಲಿ ಬೆಂಗಳೂರಿನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಆಸಕ್ತರು 15 ದಿನಗಳೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗೆ: 80951 75780, 93805 49318 ಸಂಪರ್ಕಿಸಿ.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ಆ್ಯಪ್ ಮಾಡಿ: 9606038256

ರಸ್ತೆಯಲ್ಲಿನ ಕಸ ತೆರವುಗೊಳಿಸಿ



ಕಾವೇರಿಪುರ ವಾರ್ಡ್ ಸಂಖ್ಯೆ 3ರ ರಸ್ತೆಯಲ್ಲಿ ಬಿದ್ದಿರುವ ಕಸ

ಕಾವೇರಿಪುರದ ಕಾಮಾಕ್ಷಿಪಾಳ್ಯ ವಾರ್ಡ್ ಸಂಖ್ಯೆ 103ರ ರಸ್ತೆಯಲ್ಲಿ ಕಸದ ರಾಶಿ ಹಾಕಲಾಗಿದೆ. ಸ್ಥಳೀಯ ನಿವಾಸಿಗಳು ಮನೆಯ ತ್ಯಾಜ್ಯವನ್ನು ಪ್ಲಾಸ್ಟಿಕ್‌ನಲ್ಲಿ ತುಂಬಿಕೊಂಡು ದ್ವಿಚಕ್ರ ವಾಹನಗಳಲ್ಲಿ ಬಂದು ಇಲ್ಲಿ ಎಸೆದು ಹೋಗುತ್ತಿದ್ದಾರೆ. ಇದು ಕಸ ಹಾಕುವ ಸ್ಥಳವಾಗಿ ಮಾರ್ಪಟ್ಟಿದ್ದು, ಸೊಳ್ಳೆಗಳ ಉತ್ಪತ್ತಿ ತಾಣವಾಗಿದೆ. ಇದರಿಂದ ಇಡೀ ಪ್ರದೇಶವೇ ಗಬ್ಬೆದ್ದು ನಾರುತ್ತಿದೆ. ಬಿಬಿಎಂಪಿ ಕೂಡಲೇ ಇಲ್ಲಿ ಹಾಕಿರುವ ಕಸವನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕು.

ಸುರೇಶ್, ಕಾವೇರಿಪುರ

ಪಾದಚಾರಿ ಮಾರ್ಗ ದುರಸ್ತಿಗೊಳಿಸಿ



ಪಾದಚಾರಿ ಮಾರ್ಗದ ದುಃಸ್ಥಿತಿ

ಯಲಹಂಕ ರೈತರ ಸಂತೆಯ ಬಳಿಯ ಹೆದ್ದಾರಿ ಮೇಲ್ಸೇತುವೆ ಕೆಳಗೆ ಪ್ರತಿನಿತ್ಯ ಸಾವಿರಾರು ಜನ ಓಡಾಡುತ್ತಾರೆ. ಆದರೆ, ಪಾದಚಾರಿ ಮಾರ್ಗಕ್ಕೆ ಅಳವಡಿಸಿದ್ದ ಸ್ಲ್ಯಾಬ್‌ಗಳು ಕಿತ್ತುಹೋಗಿವೆ. ಹೀಗಾಗಿ ಸಾರ್ವಜನಿಕರು ಇಲ್ಲಿನ ಮುಖ್ಯರಸ್ತೆಯಲ್ಲಿ ಓಡಾಡುವಂತಾಗಿದೆ. ಇದರಿಂದ ಸಂಚಾರ ದಟ್ಟಣೆ ಹೆಚ್ಚಾಗಿದ್ದು, ಅಪಘಾತಗಳು ಸಂಭವಿಸುವ ಸಾಧ್ಯತೆ ಇದೆ. ಆದ್ದರಿಂದ ಕೂಡಲೇ ಇಲ್ಲಿನ ಪಾದಚಾರಿ ಮಾರ್ಗ ದುರಸ್ತಿಗೊಳಿಸಬೇಕು.

ಬಿ.ಎನ್. ಅಂಬರೀಷ್, ಯಲಹಂಕ

ಸಿಗ್ನಲ್ ಬಳಿಯೇ ಕಸದ ರಾಶಿ

ಬನಶಂಕರಿ ಮುಖ್ಯರಸ್ತೆಯ ಟ್ರಾಫಿಕ್ ಸಿಗ್ನಲ್ ಬಳಿ ರಾಶಿಗಟ್ಟಲೆ ಕಸ ಹಾಕಲಾಗಿದೆ. ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ತ್ಯಾಜ್ಯವನ್ನು ಪ್ಲಾಸ್ಟಿಕ್ ಚೀಲದಲ್ಲಿ ತುಂಬಿಕೊಂಡು ಬಂದು ಇಲ್ಲಿ ಎಸೆದು ಹೋಗುತ್ತಿದ್ದಾರೆ. ಇದರಿಂದ, ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದೆ. ಸೊಳ್ಳೆಗಳ ಉತ್ಪತ್ತಿ ತಾಣವಾಗಿ ಮಾರ್ಪಟ್ಟಿದೆ. ಜೊತೆಗೆ ನಗರದ ಸೌಂದರ್ಯಕ್ಕೂ ಧಕ್ಕೆ ಬರುತ್ತಿದೆ. ಬಿಬಿಎಂಪಿ ಕೂಡಲೇ ಇಲ್ಲಿನ ಕಸ ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕು.

ತೇಜಸ್ ಎಂ., ಬನಶಂಕರಿ



ಬನಶಂಕರಿಯ ಟ್ರಾಫಿಕ್ ಸಿಗ್ನಲ್ ಬಳಿ ಹಾಕಿರುವ ಕಸ



ರಾಜಾಜಿನಗರದ ಇಎಸ್‌ಐಸಿ ವೈದ್ಯಕೀಯ ಕಾಲೇಜಿನಲ್ಲಿ ನಡೆದ 7ನೇ ಘಟಿಕೋತ್ಸವದಲ್ಲಿ 94 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ, ಇಎಸ್‌ಐಸಿ ವೈದ್ಯಕೀಯ ಕಾಲೇಜಿನ ಡೀನ್ ಡಾ. ಸಂಧ್ಯಾ ಆರ್, ರಿಜಿಸ್ಟ್ರಾರ್ ಡಾ. ಸುಚಿತ್ರ, ಡಾ. ಚಂದ್ರಶೇಖರ್ ಎಚ್, ಡಾ. ಶ್ರೀನಿವಾಸ್ ಪ್ರಭು ಭಾಗವಹಿಸಿದ್ದರು.

ಚಯಾಪಚಯ ಸಮಸ್ಯೆಯಿಂದಾಗಿ ಕೊನೆಯುಸಿರೆಳೆದ 15 ವರ್ಷದ ಗಂಡಾನೆ

ನಿತ್ರಾಣಗೊಂಡಿದ್ದ ಕಾಡಾನೆ ಸಾವು

ಪ್ರಜಾವಾಣಿ ವಾರ್ತೆ

ಕನಕಪುರ: ತಾಲ್ಲೂಕಿನ ಅರಣ್ಯ ಪ್ರದೇಶದಲ್ಲಿ ಮೂರು ದಿನಗಳ ಹಿಂದೆ ನೀರಿಲ್ಲದೆ ನಿತ್ರಾಣಗೊಂಡಿದ್ದ 15 ವರ್ಷದ ಗಂಡಾನೆಯು ಕೋಡಿಹಳ್ಳಿ ಪ್ರಾದೇಶಿಕ ವಲಯದ ಗರಳಾಪುರ ಗಸ್ತಿನ ಬೆಟ್ಟಹಳ್ಳಿ ವಾಡೆ ಸಿ.ಬ್ಲಾಕ್ ಅರಣ್ಯ ಪ್ರದೇಶದಲ್ಲಿ ಭಾನುವಾರ ಶವವಾಗಿ ಪತ್ತೆಯಾಗಿದೆ.

ಬೆಟ್ಟಹಳ್ಳಿ ವಾಡೆ ಚನ್ನೇಗೌಡ ಅವರ ಜಮೀನಿನಲ್ಲಿ ನೀರಿಲ್ಲದೆ ನಿತ್ರಾಣಗೊಂಡಿದ್ದ ಗಂಡಾನೆಯು, ಏಪ್ರಿಲ್ 5ರಂದು ಸಣ್ಣ ಕಂದಕದಲ್ಲಿ ಪತ್ತೆಯಾಗಿತ್ತು. ಮಾಹಿತಿ ಪಡೆದ ಅರಣ್ಯ ಇಲಾಖೆ ಸಿಬ್ಬಂದಿ ಆನೆಗೆ ನೀರು ಮತ್ತು ಮೇವು ಒದಗಿಸಿ, ಪಶು ವೈದ್ಯಾಧಿಕಾರಿಗಳನ್ನು ಕರೆಯಿಸಿ ಶುಶ್ರೂಷೆ ಮಾಡಿಸಿ ಬನ್ನೇರುಘಟ್ಟ ಅರಣ್ಯಪ್ರದೇಶಕ್ಕೆ ಓಡಿಸಿದ್ದರು. ಅದಾದ ಮೂರು ದಿಗಳಲ್ಲೇ ಆನೆಯು ಮೃತಪಟ್ಟಿದೆ.

‘ಅರಣ್ಯಕ್ಕೆ ಮರಳಿದ್ದ ಆನೆ ಚಲನವಲನ ಕುರಿತು ನಿಗಾ ವಹಿಸುವಂತೆ ಅರಣ್ಯಾಧಿಕಾರಿಗಳು ಸಿಬ್ಬಂದಿಗೆ ಸೂಚಿಸಿದ್ದರು. ಅದರಂತೆ ಸಿಬ್ಬಂದಿ ಭಾನುವಾರ ಅರಣ್ಯದಲ್ಲಿ ಗಸ್ತು ತಿರುಗುತ್ತಿದ್ದಾಗ ನಿತ್ರಾಣಗೊಂಡಿದ್ದ ಆನೆಯು ಮೃತಪಟ್ಟಿರುವುದು ಗೊತ್ತಾಯಿತು’ ಎಂದು ಡಿಸಿಎಫ್ ರಾಮಕೃಷ್ಣಯ್ಯ ತಿಳಿಸಿದರು.



ಕನಕಪುರ ತಾಲ್ಲೂಕಿನ ಕೋಡಿಹಳ್ಳಿ ಪ್ರಾದೇಶಿಕ ವಲಯದ ಅರಣ್ಯ ಪ್ರದೇಶದಲ್ಲಿ ಮೃತಪಟ್ಟ ಕಾಡಾನೆಯ ಮರಣೋತ್ತರ ಪರೀಕ್ಷೆ ನಡೆಸಿ ಅಂತ್ಯಕ್ರಿಯೆ ನೆರವೇರಿಸಲಾಯಿತು

ಅನಾರೋಗ್ಯ: ಕಾಡಾನೆ ‘ಮಖ್ನಾ’ ಸಾವು



ಅನಾರೋಗ್ಯದಿಂದ ಮೃತಪಟ್ಟಿರುವ ಕಾಡಾನೆ ಮಖ್ನಾ

ಕನಕಪುರ: ಅನಾರೋಗ್ಯದಿಂದಾಗಿ ತಾಲ್ಲೂಕಿನ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯ ಕೋಡಿಹಳ್ಳಿ ಉಪ ವಲಯದ ಯಲವನಾಥ ಗ್ರಾಮದ ಅರಣ್ಯ ಪ್ರದೇಶದಲ್ಲಿ 28 ವರ್ಷದ ಕಾಡಾನೆ ‘ಮಖ್ನಾ’ ಭಾನುವಾರ ಮೃತಪಟ್ಟಿದೆ.

ಬಹು ಸೋಂಕಿನಿಂದಾಗಿ ಮಖ್ನಾ ಕಾಡಾನೆ ಮೃತಪಟ್ಟಿದೆ. ಬಾಯಲ್ಲಿ ಹುಣ್ಣಾಗಿದ್ದರಿಂದ ಕೆಲ ದಿನಗಳಿಂದ ಆಹಾರ ಸೇವಿಸಲು ಸಾಧ್ಯವಾಗದೆ ತೀವ್ರ ಅನಾರೋಗ್ಯಕ್ಕೀಡಾಗಿದೆ. ನೀರು ಸಹ ಸೇವಿಸದ ಆನೆಯು ಮರದ ಬಳಿ ಕುಸಿದು ಮೃತಪಟ್ಟಿದೆ. ಮರಣೋತ್ತರ ಪರೀಕ್ಷೆ ನಡೆಸಿ ಅಂತ್ಯಕ್ರಿಯೆ ನಡೆಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕೆಲ ಮಾದರಿ ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳಿಸಲಾಗಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಷೇರು ಮಾರುಕಟ್ಟೆಯಲ್ಲಿ ಹೂಡಿಕೆ

ಎಂಜಿನಿಯರ್‌ಗೆ ₹36.80 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ತುಮಕೂರು: ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿ ಹೆಚ್ಚಿನ ಲಾಭ ಗಳಿಸಬಹುದು ಎಂದು ನಂಬಿಸಿ ತಿಪಟೂರಿನ ಕುಮಾರಸ್ವಾಮಿ ಬಡಾವಣೆಯ ನಿವಾಸಿ ಹಾಗೂ ಎಂಜಿನಿಯರ್ ಲಿಖಿತ್ ವೈ.ಪಾಟೀಲ ಎಂಬುವರಿಗೆ ₹36.80 ಲಕ್ಷ ವಂಚಿಸಲಾಗಿದೆ.

ಇನ್‌ಸ್ಟಾಗ್ರಾಮ್‌ನಲ್ಲಿ ಕಂಡ ಲಿಂಕ್ ಕ್ಲಿಕ್ ಮಾಡಿ ಮೊಬೈಲ್ ನಂಬರ್ ಹಾಕಿದ್ದಾರೆ. ಅವರ ನಂಬರ್ ಅನ್ನು ‘ಎಫ್‌-10 ಸ್ಟಾಕ್ ಮಾರ್ಕೆಟಿಂಗ್ ‘ಎಕ್ಸ್‌ಚೇಂಜ್ ಕ್ಲಬ್’ ಎಂಬ ವಾಟ್ಸ್ ಆ್ಯಪ್ ಗ್ರೂಪ್‌ಗೆ ಸೇರಿಸಿದ್ದಾರೆ. ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ಗಳಿಸಬಹುದು ಎಂದು ಮೆಸೇಜ್ ಮಾಡಿದ್ದಾರೆ. ಇದನ್ನು ನಂಬಿದ ಲಿಖಿತ್ ಗ್ರೂಪ್‌ನಲ್ಲಿದ್ದ ಒಂದು ಮೊಬೈಲ್ ನಂಬರ್ ಪಡೆದು ಪ್ರತ್ಯೇಕವಾಗಿ ಅವರೊಂದಿಗೆ ಚಾಟಿಂಗ್ ಮಾಡಿದ್ದಾರೆ.

ನಂತರ ‘ಎಸ್‌ಎಂಸಿಎಲ್‌ಇ’ ಷೇರು ಮಾರುಕಟ್ಟೆಯಲ್ಲಿ ಅಕೌಂಟ್ ತೆರೆದಿದ್ದಾರೆ. ಇದಾದ ಮೇಲೆ ಹಣ ಹೂಡಿಕೆ ಮಾಡುವಂತೆ ತಿಳಿಸಿದ್ದಾರೆ. ಮೊದಲ ಬಾರಿಗೆ ಮಾರ್ಚ್ 25ರಂದು ₹6 ಲಕ್ಷವನ್ನು ಸೈಬರ್ ಕಳ್ಳರು ಹೇಳಿದ ಬ್ಯಾಂಕ್ ಖಾತೆಗೆ ವರ್ಗಾಯಿಸಿದ್ದಾರೆ. ಏ.2ರ ವರೆಗೆ ಹಂತ ಹಂತವಾಗಿ ಒಟ್ಟು ₹36.80 ಲಕ್ಷ ಹಣ ವರ್ಗಾವಣೆ ಮಾಡಿದ್ದಾರೆ.

ಲಿಖಿತ್ ಅವರಿಗೆ ‘ಎಫ್‌-10 ಸ್ಟಾಕ್ ಮಾರ್ಕೆಟಿಂಗ್ ಎಕ್ಸ್‌ಚೇಂಜ್ ಕ್ಲಬ್’ ಯಾವುದೇ ಹಣ ವಾಪಸ್ ಹಾಕಿಲ್ಲ. ಇದರಿಂದ ಅನುಮಾನಗೊಂಡು ಹೂಡಿಕೆ ಮಾಡಿದ ಹಣ ವಾಪಸ್ ಕೊಡುವಂತೆ ಕೇಳಿದ್ದಾರೆ. ಇದಕ್ಕೆ ಪ್ರತಿಕ್ರಿಯೆ ನೀಡಿದ ಸೈಬರ್ ವಂಚಕರು ಮತ್ತೆ ₹10 ಲಕ್ಷ ಹಣ ಹಾಕುವಂತೆ ವಿವಿಧ ಬ್ಯಾಂಕ್ ಖಾತೆಗಳ ವಿವರ ನೀಡಿದ್ದಾರೆ. ಹಣ ಬರುವುದಿಲ್ಲ ಎಂಬುದು ಖಾತ್ರಿಯಾದ ನಂತರ ಲಿಖಿತ್ ಠಾಣೆಯ ಮೆಟ್ಟಿಲು ಹತ್ತಿದ್ದಾರೆ. ಸೈಬರ್ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ.

ತಾಮ್ರಶಿಲಾಯುಗದ ಕುರುಹು ಪತ್ತೆ

ಪ್ರಜಾವಾಣಿ ವಾರ್ತೆ

ಕಾರವಾರ: ‘ಭಟ್ಕಳ ತಾಲ್ಲೂಕಿನ ಕರೂರಿನ ಬಳಿ ಸುಮಾರು 3,500 ವರ್ಷಗಳಷ್ಟು ಹಳೆಯದಾದ ಪ್ರಾಚೀನ ಕಾಲದ ರೇಖಾಚಿತ್ರಗಳು ದೊರೆತಿವೆ. ಇವು ನೂತನ ತಾಮ್ರಶಿಲಾಯುಗದ ಅವಧಿಯಲ್ಲಿ ಕೆತ್ತನೆ ಮಾಡಿರುವಂಥದ್ದಾಗಿವೆ’ ಎಂದು ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ನಿವೃತ್ತ ಇತಿಹಾಸ ಪ್ರಾಧ್ಯಾಪಕ ಆರ್.ಎಂ.ಷಡಕ್ಷರಯ್ಯ ಹೇಳಿದರು.



ಭಟ್ಕಳ ತಾಲ್ಲೂಕಿನ ಕರೂರಿನಲ್ಲಿ ಪತ್ತೆಯಾದ ತಾಮ್ರಶಿಲಾಯುಗದ ಅವಧಿಯ ರೇಖಾಚಿತ್ರ

ಇಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸುಮಾರು 20 ರೇಖಾಚಿತ್ರಗಳು ಪತ್ತೆಯಾಗಿವೆ. ಚಿರೇಕಲ್ಲಿನ ಹಾಸುಗಳ ಮೇಲೆ ಉಳಿ ಬಳಸಿ ಕೆತ್ತನೆ ಮಾಡಿರುವ ಚಿತ್ರಗಳು ಇವುಗಳಾಗಿವೆ. ವಿವಿಧ ರೀತಿಯ ರೇಖಾಚಿತ್ರಗಳನ್ನು ನಾಲ್ಕು ಗುಂಪುಗಳಲ್ಲಿ ರಚಿಸಿರುವುದು ಪತ್ತೆಯಾಗಿದೆ’ ಎಂದರು.

‘ಮನುಷ್ಯರ ಚಿತ್ರದ ಜತೆಗೆ ವಿವಿಧ ಗಾತ್ರದ ಕುಳಿಗಳು, ಹಸು, ಜಿಂಕೆ ಸೇರಿದಂತೆ ಇತರ ನಾಲ್ಕೈದು ಪ್ರಾಣಿಗಳ ಚಿತ್ರಗಳು ಇವೆ. ಕ್ರಿ.ಪೂ 1,800ರಿಂದ 800 ಅವಧಿಯ ಚಿತ್ರಗಳಿರಬಹುದು ಎಂದು ಅಂದಾಜಿಸಲಾಗಿದೆ. ಈ ಚಿತ್ರಗಳು ತಾಮ್ರಶಿಲಾಯುಗದಲ್ಲಿ ವಾಸವಿದ್ದ ಮನುಷ್ಯನ ಜೀವನ ಪದ್ಧತಿ, ಸಂಸ್ಕೃತಿಯ ಮೇಲೆ ಅಧ್ಯಯನ ನಡೆಸಲು ಪೂರಕ ದಾಖಲೆಗಳಾಗಿವೆ. ರಾಜ್ಯದ ದಕ್ಷಿಣ ಕನ್ನಡ, ಕೊಪ್ಪಳ, ರಾಯಚೂರು ಭಾಗಗಳಲ್ಲಿ ಇದೇ ಮಾದರಿಯ ಚಿತ್ರಗಳು ಈ ಹಿಂದೆ ಪತ್ತೆಯಾಗಿದ್ದವು’ ಎಂದರು.

‘ರೇಖಾಚಿತ್ರಗಳು ದೊರೆತ ಜಾಗವು ಅರಣ್ಯ ಪ್ರದೇಶವಾಗಿದ್ದು ಅದರ ಸಮೀಪದಲ್ಲಿನ ಸ್ಥಳಗಳಲ್ಲಿ ಉತ್ಖನನ ನಡೆಸಿದರೆ ಇನ್ನಷ್ಟು ಕುರುಹುಗಳು ಪತ್ತೆಯಾಗುವ ಸಾಧ್ಯತೆ ಇದೆ. ಹೆಚ್ಚಿನ ಅಧ್ಯಯನ ನಡೆಸಲಿದ್ದೇವೆ’ ಎಂದರು.

ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ಪ್ರಾಧ್ಯಾಪಕ ಜಗದೀಶ ಅಸೋಡೆ, ವಾಸುದೇವ, ಮಾಧುರಿ ಚೌಗಲೆ, ಆದಿತ್ಯ ಹೆಗಡೆ, ಇದ್ದರು.

ಉಮ್ರಾ ಯಾತ್ರೆಗೆ ತೆರಳಿದ್ದವರ ಕಾರು ಅಪಘಾತ: ಮೂವರ ಸಾವು

ಪ್ರಜಾವಾಣಿ ವಾರ್ತೆ

ಮುಂಡಗೋಡ (ಉತ್ತರಕನ್ನಡ ಜಿಲ್ಲೆ): ಪವಿತ್ರ ‘ಉಮ್ರಾ’ ಯಾತ್ರೆಗೆ ತೆರಳಿದ್ದ ಪಟ್ಟಣದ ಯಲ್ಲಾಪುರ ರಸ್ತೆಯ ರೋಣ ಕುಟುಂಬದ ಸದಸ್ಯರಲ್ಲಿ ಸೌದಿ ಅರೇಬಿಯಾದ ಮದಿನಾ ಸಮೀಪ ಸಂಭವಿಸಿದ ಕಾರು ಅಪಘಾತದಲ್ಲಿ ಮೂವರು ಮೃತಪಟ್ಟಿದ್ದಾರೆ.

ಇಲ್ಲಿನ ರೋಣ ಮೆಡಿಕಲ್ಸ್ ಮಾಲೀಕ ಫಯಾಜ್ ಅಹ್ಮದ್ ರೋಣ(46), ಪತ್ನಿ ಆಫ್ರೀನಾಬಾನು(42) ಹಾಗೂ ಸಹೋದರನ ಮಗ ಐವಾನ್ ರೋಣ(16) ಮೃತರು.

ಮಾರ್ಚ್ 26ರಂದು ಫಯಾಜ್ ಅಹ್ಮದ್ ರೋಣ ಅವರು ಪತ್ನಿ ಹಾಗೂ ಇಬ್ಬರು ಮಕ್ಕಳೊಂದಿಗೆ, ಹೈದರಾಬಾದ್ ಮೂಲಕ ಉಮ್ರಾ ಯಾತ್ರೆಗೆ ತೆರಳಿದ್ದರು. ಉದ್ಯೋಗ ನಿಮಿತ್ತ ಸೌದಿ ಅರೇಬಿಯಾದಲ್ಲಿ ನೆಲೆಸಿರುವ ತಮ್ಮ ಸಹೋದರ ಇಮ್ತಿಯಾಜ್ ಕುಟುಂಬದೊಂದಿಗೆ ಜೊತೆಗೂಡಿ, ಏ.6ರಂದು ಮದಿನಾ ದರ್ಶನಕ್ಕೆ ಹೋಗುತ್ತಿರುವಾಗ, ಅವರು ಪ್ರಯಾಣಿಸುತ್ತಿದ್ದ ಕಾರಿನ ಟೈರ್ ಸಿಡಿದು ಅಪಘಾತವಾಗಿದೆ.

223 ಬರಪೀಡಿತ ತಾಲ್ಲೂಕುಗಳಲ್ಲಿ ಏಪ್ರಿಲ್ 11ರಿಂದ ಮೇ 28ರವರೆಗೆ 41 ದಿನ ಯೋಜನೆ ಅನುಷ್ಠಾನ

ಬರ: ಬೇಸಿಗೆ ರಜೆಯಲ್ಲೂ ಬಿಸಿಯೂಟ

• ಅನಿತಾ ಎಚ್.

ದಾವಣಗೆರೆ: ತೀವ್ರ ಬರ ಆವರಿಸಿರುವುದರಿಂದ ಪ್ರಸಕ್ತ ಬೇಸಿಗೆ ರಜೆ ವೇಳೆ 41 ದಿನ ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟ ಪೂರೈಸಲು ಶಾಲಾ ಶಿಕ್ಷಣ ಇಲಾಖೆ ನಿರ್ಧರಿಸಿದೆ.

ರಾಜ್ಯದ 223 ತಾಲ್ಲೂಕುಗಳಲ್ಲಿರುವ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ಏಪ್ರಿಲ್ 11ರಿಂದ ಮೇ 28ರವರೆಗೆ ಭಾನುವಾರ ಹೊರತುಪಡಿಸಿ ಮಿಕ್ಕೆಲ್ಲ ದಿನ ವಿದ್ಯಾರ್ಥಿಗಳಿಗೆ ನಿತ್ಯ ಮಧ್ಯಾಹ್ನ 12.30ರಿಂದ 2ರವರೆಗೆ ಬಿಸಿಯೂಟ ದೊರೆಯಲಿದೆ. ಉಷ್ಣಾಂಶ ಹೆಚ್ಚಿರುವ ಬೀದರ್, ರಾಯಚೂರು ಮುಂತಾದ ಜಿಲ್ಲೆಗಳಲ್ಲಿ ಬೆಳಿಗ್ಗೆ 10ರಿಂದ 11.30ರವರೆಗೆ ಬಿಸಿಯೂಟ ವಿತರಿಸುವಂತೆ ಸೂಚಿಸಲಾಗಿದೆ.

ಗ್ರಾಮವೊಂದರಲ್ಲಿ ಒಂದಕ್ಕಿಂತ ಹೆಚ್ಚು ಶಾಲೆಗಳಿದ್ದಲ್ಲಿ ಹೆಚ್ಚು ವಿದ್ಯಾರ್ಥಿಗಳಿರುವ ಶಾಲೆಯನ್ನು ಬಿಸಿಯೂಟ ಪೂರೈಕೆ ಕೇಂದ್ರವಾಗಿ ಗುರುತಿಸಿದ್ದು, ಸುತ್ತಲಿನ 1-2 ಕಿ.ಮೀ ವ್ಯಾಪ್ತಿಯೊಳಗಿನ ಕಿರಿಯ ಪ್ರಾಥಮಿಕ, ಹಿರಿಯ ಹಾಗೂ ಪ್ರೌಢಶಾಲೆಗಳ ವಿದ್ಯಾರ್ಥಿಗಳು ಈ ಕೇಂದ್ರಕ್ಕೆ ಊಟಕ್ಕೆ ಬರಬೇಕಿದೆ.

ಬಿಸಿಯೂಟ ಸೇವಿಸಲು ಇಚ್ಛಿಸುವ ವಿದ್ಯಾರ್ಥಿಗಳು ಒಪ್ಪಿಗೆ ಪತ್ರಕ್ಕೆ ಪಾಲಕರಿಂದ ಸಹಿ ಹಾಕಿಸಿ ನೀಡುವುದು ಕಡ್ಡಾಯ. ಕೂಲಿ ಅರಸಿ ಹೊರ ಜಿಲ್ಲೆಗಳಿಗೆ ಹೋಗುವವರ ಮಕ್ಕಳು ಹಾಗೂ ರಜೆ ಕಳೆಯಲು ಅಜ್ಜ-ಅಜ್ಜಿ ಮನೆಗೆ ತೆರಳುವ ಮಕ್ಕಳು ಆಯಾ ಗ್ರಾಮಗಳಲ್ಲಿನ ಶಾಲೆಗಳಲ್ಲೇ ಬಿಸಿಯೂಟ ಸೇವಿಸಲು ಅವಕಾಶವಿದೆ. ಈ ಅವಧಿಯಲ್ಲಿ ಕೆಲಸ ಮಾಡುವ ಶಿಕ್ಷಕರು ಗಳಿಕೆ ರಜೆ ಪಡೆಯಲು ಅವಕಾಶ ಕಲ್ಪಿಸಲಾಗಿದೆ ಎಂದು ಶಿಕ್ಷಣ ಇಲಾಖೆ ಮೂಲಗಳು ತಿಳಿಸಿವೆ.

'ವಿದ್ಯಾರ್ಥಿಗಳಿಗೆ ಬಿಸಿಯೂಟ ನೀಡಲು ಕ್ರಮ ವಹಿಸಿರುವುದು ಸ್ವಾಗತಾರ್ಹ ಕ್ರಮ. ಆದರೆ, ಬಿಸಿಯೂಟ ವಿತರಣೆಗೆ ಕೇಂದ್ರ ಶಾಲೆಗಳನ್ನು ಗುರುತಿಸಿರುವುದು ಸರಿಯಲ್ಲ. ಸಣ್ಣ ಮಕ್ಕಳು ಸುಡು ಬಿಸಿಲಿನಲ್ಲಿ 1-2 ಕಿ.ಮೀ ದೂರದಿಂದ ಕೇಂದ್ರ ಶಾಲೆಗೆ ಬರಬೇಕೆಂದರೆ ಕಷ್ಟವಾಗುತ್ತದೆ' ಎಂದು ಎಸ್‌ಡಿಎಂಸಿ ಒಕ್ಕೂಟದ ಜಿಲ್ಲಾ ಘಟಕದ ಅಧ್ಯಕ್ಷ ಶಿವಕ್ಕ ಆಂಜನೇಯ ಹೇಳಿದರು.

'ರಜಾ ದಿನಗಳಲ್ಲಿ ಸರ್ಕಾರಿ ಶಾಲೆ ವಿದ್ಯಾರ್ಥಿಗಳಿಗೆ ಬಿಸಿಯೂಟ ನೀಡುವ ಜತೆಗೆ ಚಿತ್ರಕಲೆ, ಹಾಡು, ನೃತ್ಯ ಮತ್ತಿತರ ಪಠ್ಯೇತರ ಚಟುವಟಿಕೆ ಆಯೋಜಿಸಬೇಕು' ಎಂದು ಅವರು ಮನವಿ ಮಾಡಿದರು.

ಅಂಕಿ ಅಂಶಗಳು

33,20,967
ಸರ್ಕಾರಿ, ಅನುದಾನಿತ ಶಾಲೆಗಳ 1ರಿಂದ 10ನೇ ತರಗತಿವರೆಗಿನ ವಿದ್ಯಾರ್ಥಿಗಳು

53,284
ಬಿಸಿಯೂಟ ಪೂರೈಕೆಗೆ ಗುರುತಿಸಿರುವ ಕೇಂದ್ರ ಶಾಲೆಗಳು


ಶಾಲೆಯೊಂದರಲ್ಲಿ ವಿದ್ಯಾರ್ಥಿಗಳು ಬಿಸಿಯೂಟ ಸೇವಿಸುತ್ತಿರುವ ಸಾಂದರ್ಭಿಕ ಚಿತ್ರ

ದಾನಿಗಳಿಂದಲೂ ಸಹಾಯಹಸ್ತ

ಸರ್ಕಾರದ ಈ ಮಹತ್ವದ ಯೋಜನೆಗೆ ನೆರವು ನೀಡಲು ಜಿಲ್ಲೆಯ ಕೆಲ ದಾನಿಗಳು ಮುಂದಾಗಿದ್ದಾರೆ.

ದಾವಣಗೆರೆಯ ನಿಟುವಳ್ಳಿಯಲ್ಲಿರುವ ಉನ್ನತೀಕರಿಸಿದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಸಹ ಶಿಕ್ಷಕ ಕೆ.ಟಿ.ಜಯಪ್ಪ ಅವರು ತೋರಿದ ವಿಶೇಷ ಮುತುವರ್ಜಿಯಿಂದಾಗಿ ಉದ್ಯಮಿ ಕೆ.ಚಂದ್ರಪ್ಪ ಅವರು ಷರಬತ್ತು, ಮಜ್ಜಿಗೆ ಪೂರೈಸಲಿದ್ದಾರೆ. ಪಾಲಿಕೆ ಮಾಜಿ ನಾಮನಿರ್ದೇಶಿತ ಸದಸ್ಯೆ ಸವಿತಾ ಹುಲ್ಲುಮನಿ, ಮಾಜಿ ಮೇಯರ್ ಉಮಾ ಪ್ರಕಾಶ್ ಅವರು ವಾರದಲ್ಲಿ ಒಂದು ದಿನ ಸಿಹಿ ವಿತರಿಸಲಿದ್ದಾರೆ.

'ವಿದ್ಯಾರ್ಥಿಗಳಿಗೆ ಬೆಳಿಗ್ಗೆ 10.30ಕ್ಕೆ ಬರಲು ಸೂಚಿಸಲಾಗಿದೆ. ಊಟ ಸಿದ್ಧವಾಗುವವರೆಗೆ ಪಠ್ಯೇತರ ಚಟುವಟಿಕೆಯಲ್ಲಿ ತೊಡಗಿಸಲು ಸಿದ್ಧತೆ ಮಾಡಿಕೊಂಡಿದ್ದೇವೆ' ಎಂದು ಸಹ ಶಿಕ್ಷಕ ಕೆ.ಟಿ.ಜಯಪ್ಪ ತಿಳಿಸಿದರು.

ಅಡುಗೆಕೋಣೆ, ತಟ್ಟೆ, ಲೋಟ ಸ್ವಚ್ಛವಾಗಿ ಇಟ್ಟುಕೊಳ್ಳುವಂತೆ ಸೂಚಿಸಲಾಗಿದೆ. ಕುಡಿಯುವ ನೀರಿನ ಸಮಸ್ಯೆ ಇದ್ದಲ್ಲಿ ಸ್ಥಳೀಯ ಆಡಳಿತದ ನೆರವು ಪಡೆಯಲು ಸೂಚಿಸಲಾಗಿದೆ
ಜಿ.ಕೊಟ್ರೇಶ್, ಡಿಡಿಪಿಐ, ಶಾಲಾ ಶಿಕ್ಷಣ ಇಲಾಖೆ, ದಾವಣಗೆರೆ

ಯೋಜನೆಗೆ ವಿದ್ಯಾರ್ಥಿಗಳು ಮತ್ತು ಪಾಲಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಎಲ್ಲ ಮಕ್ಕಳು ಒಪ್ಪಿಗೆ ಪತ್ರ ನೀಡಿದ್ದಾರೆ
ದುರುಗಪ್ಪ ಡಿ, ಶಿಕ್ಷಣ ಅಧಿಕಾರಿ, ಪಿಎಂ ಪೋಷಣ್ (ಮಧ್ಯಾಹ್ನ ಉಪಾಹಾರ ಯೋಜನೆ), ದಾವಣಗೆರೆ

ಸುದ್ದಿ 2 ನಿಮಿಷ

ಹಾವೇರಿ 'ರಾಕ್ ಸ್ಟಾರ್' ಕೊಬ್ಬರಿ ಹೋರಿಗೆ ಕಣ್ಣೀರ ವಿದಾಯ

ಹಾವೇರಿ: ಹಲವಾರು ಸ್ಪರ್ಧೆಗಳಲ್ಲಿ ಬಹುಮಾನ ಗಳಿಸಿ 'ಹಾವೇರಿ ರಾಕ್ ಸ್ಟಾರ್-105' ಎಂದೇ ಪ್ರಸಿದ್ಧಿ ಪಡೆದಿದ್ದ ಹಾವೇರಿ ನಗರದ ನಾಗೇಂದ್ರನಮಟ್ಟಿಯ ಕೊಬ್ಬರಿ ಹೋರಿಯು (22) ವಯೋಸಹಜ ಅನಾರೋಗ್ಯದಿಂದ ಮೃತಪಟ್ಟಿದ್ದು, ಭಾನುವಾರ ನಡೆದ ಅಂತಿಮ ಮೆರವಣಿಗೆಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಅಭಿಮಾನಿಗಳು ಪಾಲ್ಗೊಂಡು ಕಣ್ಣೀರಿನ ವಿದಾಯ ಹೇಳಿದರು.



ಜಿಲ್ಲೆಯ ವಿವಿಧ ತಾಲ್ಲೂಕು ಮತ್ತು ತಮಿಳುನಾಡಿನಿಂದ ಬಂದಿದ್ದ ಯುವಕರು ಹೋರಿಯ ಮೃತದೇಹಕ್ಕೆ ಬೃಹತ್ ಹಾರ ಹಾಕಿ ಅಲಂಕೃತ ಟ್ರ್ಯಾಕ್ಟರ್‌ನಲ್ಲಿ ಹಾವೇರಿ ನಗರದಾದ್ಯಂತ ಮೆರವಣಿಗೆ ನಡೆಸಿದರು. ಫ್ಲೆಕ್ಸ್, ಕಟೌಟ್‌ಗಳಿಗೆ ಹೂವಿನ ಹಾರ ಹಾಕಿದ ಅಭಿಮಾನಿಗಳು ಕಂಬನಿ ಮಿಡಿದರು. ನಂತರ ವೀರಶೈವ ಲಿಂಗಾಯತ ಧಾರ್ಮಿಕ ವಿಧಿ ವಿಧಾನದಲ್ಲಿ ಹೋರಿ ಮಾಲೀಕರು ಅಂತಿಮ ಸಂಸ್ಕಾರ ನೆರವೇರಿಸಿದರು.

ರಾಕ್ ಸ್ಟಾರ್-105 ಮಾಲೀಕರಾದ ಚಿಕ್ಕಪ್ಪ, ಅಜ್ಜಪ್ಪ ಮತ್ತು ಮಾರುತಿ ಮತ್ತು ಅದರ ಆಪ್ತರು,'ಮನೆ ಮಗನನ್ನು ಕಳೆದುಕೊಂಡಿದ್ದೇವೆ. ಮತ್ತೆ ಹುಟ್ಟಿ ಬಾ' ಎಂದು ಮಮ್ಮಲ ಮರುಗಿದರು.

'ದೇಶ ಉಳಿಸಿ ಸಂಕಲ್ಪ' ಯಾತ್ರೆ ಬೆಳಗಾವಿಗೆ ಇಂದು

ಬೆಳಗಾವಿ: 'ಕೇಂದ್ರ ಸರ್ಕಾರದ ಧೋರಣೆ ಖಂಡಿಸಿ, ಕರ್ನಾಟಕ ಸಮಸ್ತ ಜನಪರ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ಮೂರು ಪ್ರತ್ಯೇಕ ಮಾರ್ಗಗಳಲ್ಲಿ ಹೊರಟಿರುವ 'ದೇಶ ಉಳಿಸಿ ಸಂಕಲ್ಪ' ಯಾತ್ರೆ ಸೋಮವಾರ ಬೆಳಗಾವಿಗೆ ಆಗಮಿಸಲಿದೆ.

ಇಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖಂಡ ಜೆ.ಎಂ.ವೀರಸಂಗಯ್ಯ 'ಮಧ್ಯಾಹ್ನ 2ಕ್ಕೆ ಇಲ್ಲಿನ ಅಂಬೇಡ್ಕರ್ ಉದ್ಯಾನದ ಬಳಿ ಯಾತ್ರೆ ಬರಮಾಡಿಕೊಳ್ಳಲಾಗುವುದು. ರಾಣಿ ಚನ್ನಮ್ಮನ ವೃತ್ತ ಮಾರ್ಗವಾಗಿ ಗಾಂಧಿ ಭವನಕ್ಕೆ ತೆರಳಲಾಗುವುದು. ಅಲ್ಲಿ 3 ಗಂಟೆಗೆ ಸಂಕಲ್ಪ ಸಮಾವೇಶ ನಡೆಯಲಿದೆ' ಎಂದು ತಿಳಿಸಿದರು.

'ಮುಖ್ಯ ಅತಿಥಿಯಾಗಿ ಚಲನಚಿತ್ರ ನಟ ಪ್ರಕಾಶ್ ರಾಜ್ ಪಾಲ್ಗೊಳ್ಳುವರು. ಧಾರವಾಡದ ಸಮಾಜ ಪರಿವರ್ತನಾ ಸಮುದಾಯದ ಸಂಸ್ಥಾಪಕ ಎಸ್.ಆರ್.ಹಿರೇಮಠ ಅಧ್ಯಕ್ಷತೆ ವಹಿಸಿ, ದಿಕ್ಸೂಚಿ ಭಾಷಣ ಮಾಡುವರು. ನಾಡಿನ ವಿವಿಧ ಸಂಘಟನೆಗಳು, ಸಮುದಾಯಗಳ ಮುಖಂಡರು ನೇತೃತ್ವ ವಹಿಸುವರು' ಎಂದರು.



ಮತ ಜಾಗೃತಿ ಭಾನುವಾರ ಬೆಂಗಳೂರಿನ ಇಂದಿರಾನಗರದಲ್ಲಿ ಮಿಮಾಸ್‌ನಿಂದ ಸಾರ್ವತ್ರಿಕ ಚುನಾವಣೆಯಲ್ಲಿ ಮತದಾನದ ಕುರಿತು ಜಾಗೃತಿ ಮೂಡಿಸಲು ವೋಟ್-ಆ-ಥಾನ್ ನಡೆಯಿತು ಪ್ರಜಾವಾಣಿ ಚಿತ್ರ.

ಬಿರು ಬಿಸಿಲಿಗೆ ವೃದ್ಧ ಸಾವು

ಪ್ರಜಾವಾಣಿ ವಾರ್ತೆ

ರಾಯಚೂರು: ಜಿಲ್ಲೆಯಲ್ಲಿ ಬೆಂಕಿಯಂತಹ ಬಿಸಿಲು ಮುಂದುವರೆದಿದ್ದು, ನಗರದ ಗೋಶಾಲಾ ರಸ್ತೆಯಲ್ಲಿ ಭಾನುವಾರ ವೃದ್ಧರೊಬ್ಬರು ಬಿಸಿಲಿನಿಂದ ಬಳಲಿ ಮೃತಪಟ್ಟಿದ್ದಾರೆ.

ಮೃತ ವೃದ್ಧನನ್ನು ನಗರದ ಯಕ್ಲಾಸಪುರ ಬಡಾವಣೆಯ ರಾಮಣ್ಣ ಕಬ್ಬೇರ್ (70) ಎಂದು ಗುರುತಿಸಲಾಗಿದೆ. ರಸ್ತೆಯಲ್ಲಿ ಹೊರಟಿದ್ದಾಗ ಒಮ್ಮೆಲೇ ತಲೆ ಸುತ್ತು ಬಂದು ನಿಶ್ಶಕ್ತಿಗೆ ಒಳಗಾಗಿ ರಸ್ತೆ ಬದಿಯಲ್ಲೇ ನೆಲದಲ್ಲಿ ಮಲಗಿದರು. ನಂತರ ಮೇಲೇಳಲಿಲ್ಲ.

ಕೆಲವು ದಿನಗಳಿಂದ ಮಾನಸಿಕವಾಗಿ ಅಸ್ವಸ್ಥನಾಗಿದ್ದ ಇವರು ಸಾರ್ವಜನಿಕರು ಕೊಡುವ ಆಹಾರ ಸೇವಿಸುತ್ತಿದ್ದರು. ಬಿಸಿಲಿನ ಝಳದಿಂದ ಬಳಲಿ ಕುಸಿದು ಬಿದ್ದ ಬಳಿಕ ಮೇಲೇಳಲಿಲ್ಲ ಎಂದು ಸ್ಥಳೀಯರು ತಿಳಿಸಿದ್ದಾರೆ.

ಪೊಲೀಸರು ಸ್ಥಳಕ್ಕೆ ಬಂದು ಪಂಚನಾಮೆ ಮಾಡಿದರು. ನಂತರ ಕುಟುಂಬದ ಸದಸ್ಯರು ಶವವನ್ನು ಕೊಂಡೊಯ್ದರು.

ಮಾರ್ಚ್ 3ರಂದು ಜಿಲ್ಲೆಯ ಲಿಂಗಸುಗೂರಿನ ಬಸ್ ನಿಲ್ದಾಣದಲ್ಲಿ ಮಸ್ಕಿ ತಾಲ್ಲೂಕಿನ ಆನಂದಗಲ್ಲ ಗ್ರಾಮದ ಕೃಷ್ಣಪ್ಪ ಬಳ್ಳಾರೆಪ್ಪ (62) ಎಂಬುವವರು ಮೃತಪಟ್ಟಿದ್ದರು. ಬಿಸಿಲಿನ ತಾಪದ ಬಳಲಿಕೆಯಿಂದ ಮೃತಪಟ್ಟಿರಬಹುದು ಎಂದು ಶಂಕಿಸಲಾಗಿತ್ತು.

ತೆಂಗಿನ ಮರದಲ್ಲೇ ಪ್ರಜ್ಞೆತಪ್ಪಿದ ವ್ಯಕ್ತಿ!

ಸಕಲೇಶಪುರ (ಹಾಸನ ಜಿಲ್ಲೆ): ತಾಲ್ಲೂಕಿನ ಕೊಲ್ಲಹಳ್ಳಿ ಗ್ರಾಮದಲ್ಲಿ ಗರಿಗಳನ್ನು ಕತ್ತರಿಸಲು ತೆಂಗಿನ ಮರ ಏರಿದ್ದ ವ್ಯಕ್ತಿ ಪ್ರಖರ ಬಿಸಿಲಿನ ಕಾರಣದಿಂದಾಗಿ ಪ್ರಜ್ಞೆ ತಪ್ಪಿ ಅಲ್ಲೇ 45 ನಿಮಿಷಗಳವರೆಗೆ ಸಿಲುಕಿದ್ದ ಘಟನೆ ಭಾನುವಾರ ನಡೆದಿದೆ.

ಸುಮಾರು 50 ಅಡಿ ಎತ್ತರದ ಮರದ ಮೇಲೆ ನೇತಾಡುತ್ತಿದ್ದ ಆ ವ್ಯಕ್ತಿಯನ್ನು ಅಗ್ನಿಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಸುರಕ್ಷಿತವಾಗಿ ಕೆಳಗಿಳಿಸಿ ಪ್ರಾಣಾಪಾಯದಿಂದ ಪಾರು ಮಾಡಿದರು.

ಕೊಲ್ಲಹಳ್ಳಿ ಗ್ರಾಮದ ನಿವಾಸಿ ನವೀನ್ (23) ಸಾವಿನ ದವಡೆಯಿಂದ ಪಾರಾಗಿ ಬಂದವರು. ಮಂಜು ಎನ್ನುವವರಿಗೆ ಸೇರಿದ ಮರ ಏರಿ ಗರಿಗಳನ್ನು ಕತ್ತರಿಸಿ ಕೆಳಕ್ಕಿಳಿಯುವ ವೇಳೆ ಅವರಿಗೆ ಬಿಸಿಲಿನ ತಾಪದಿಂದ ಸುಸ್ತಾಗಿದೆ. ಪ್ರಜ್ಞಾಹೀನರಾಗಿದ್ದ ಅವರು, ಮರದಲ್ಲಿ ಕತ್ತರಿಸಿದ್ದ ಗರಿಗಳ ನಡುವೆ ಸಿಕ್ಕಿಹಾಕಿಕೊಂಡಿದ್ದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದರು.

ಅಗ್ನಿಶಾಮಕ ಠಾಣಾಧಿಕಾರಿ ಪ್ರತೀಕ್ ತಹಶೀಲ್ದಾರ್, ಸಹಾಯಕ ಠಾಣಾಧಿಕಾರಿ ರಾಜು ಹಾಗೂ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು.

ಲಡಾಖ್‌ನಲ್ಲಿ ಹಿಮಪಾತ: 80 ಜನರ ರಕ್ಷಣೆ

ಲೇಹ್ (ಪಿಟಿಐ): ಲಡಾಖ್‌ನ ಛಾಂಗ್ ಲಾ ಪಾಸ್‌ನಲ್ಲಿ ಸಂಭವಿಸಿದ ಹಿಮಪಾತದಿಂದ ಸಂಕಷ್ಟಕ್ಕೆ ಸಿಲುಕಿದ್ದ ಮಹಿಳೆಯರು ಮತ್ತು ಮಕ್ಕಳು ಸೇರಿ ಒಟ್ಟು 80 ಜನರನ್ನು ರಕ್ಷಿಸಲಾಗಿದೆ ಎಂದು ಸೇನೆಯು ಭಾನುವಾರ ತಿಳಿಸಿದೆ.

ಅನ್ಯಾಯ ಒಪ್ಪಿಕೊಂಡ ನಿರ್ಮಲಾ: ಡಿಕೆಶಿ

ಪ್ರಜಾವಾಣಿ ವಾರ್ತೆ


ಡಿ.ಕೆ. ಶಿವಕುಮಾರ್

ಬೆಂಗಳೂರು: 'ಬರ ಪರಿಹಾರ ಬಿಡುಗಡೆ ಕುರಿತು ಇಷ್ಟು ದಿನ ರಾಜ್ಯ ಸರ್ಕಾರದ ಮೇಲೆ ಆರೋಪ ಮಾಡುತ್ತಿದ್ದ ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಈಗ ಬರ ಪರಿಹಾರ ವಿಳಂಬಕ್ಕೆ ಚುನಾವಣಾ ಆಯೋಗ ಕಾರಣ ಎನ್ನುವ ಮೂಲಕ ರಾಜ್ಯಕ್ಕೆ ಅನ್ಯಾಯ ಆಗಿದ್ದನ್ನು ಒಪ್ಪಿಕೊಂಡಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಪ್ರಜಾ ಮತ ಜನತಂತ್ರದ ಹಬ್ಬ
ಲೋಕಸಭಾ ಚುನಾವಣೆ - 2024

'ಬರ ಪರಿಹಾರ ನೀಡುವಂತೆ ಬಹಳ ಹಿಂದೆಯೇ ಮನವಿ ಮಾಡಿದ್ದೆವು. ಮನವಿ ಕೊಟ್ಟ ಬಳಿಕ ನಾಲ್ಕು ತಿಂಗಳವರೆಗೂ ಯಾವುದೇ ಚುನಾವಣೆ ನೀತಿ ಸಂಹಿತೆ, ಚುನಾವಣಾ ಆಯೋಗದ ನಿರ್ಬಂಧ ಇರಲಿಲ್ಲ. ಈಗ ಚುನಾವಣಾ ಆಯೋಗದ ನೆಪ ಹೇಳುತ್ತಿದ್ದಾರೆ' ಎಂದು ನಗರದಲ್ಲಿ ಭಾನುವಾರ ಸುದ್ದಿಗಾರರಿಗೆ ತಿಳಿಸಿದರು.

'ಕೇಂದ್ರ ಸರ್ಕಾರದ ಅಕ್ಷಮ್ಯ ಅಪರಾಧದ ಬಗ್ಗೆ ಜನರಿಗೂ ಅರಿವಾಗಿದೆ' ಎಂದರು.

ಮೇಕೆದಾಟು ಯೋಜನೆ ಕುರಿತು ಎಚ್.ಡಿ.ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿ, 'ಕುಮಾರಸ್ವಾಮಿ ಅವರು ಈಗ ಮೇಕೆದಾಟು, ಮಹದಾಯಿ ಯೋಜನೆ ಬಗ್ಗೆ ಹೇಳುತ್ತಿದ್ದಾರೆ. ಅಧಿಕಾರವಿದ್ದಾಗ ಏನು ಮಾಡಿದರು' ಎಂದು ಪ್ರಶ್ನಿಸಿದರು.

'ನಮ್ಮ ಪಾದಯಾತ್ರೆ ಮಾಡುತ್ತಿದ್ದಾಗ ವೇಳೆ ಕಬಾಬ್ ತಿನ್ನಲು ಮಾಡುತ್ತಿದ್ದಾರೆ ಎಂದು ಎಚ್‌ಡಿಕೆ ವ್ಯಂಗ್ಯವಾಡಿದ್ದರು. ಈಗ ಅವರೇ ಪಾದಯಾತ್ರೆ ಬಗ್ಗೆ ಮಾತಾಡುತ್ತಿದ್ದಾರೆ. ಮಂಡ್ಯದಲ್ಲಿ ಅವರಿಗೆ ಬಿಸಿ ತಟ್ಟಿರುವಂತೆ ಕಾಣುತ್ತಿದೆ' ಎಂದರು.

'ನಾವು ನಿಮಿತ್ತ ಮೋದಿಯೇ ಅಭ್ಯರ್ಥಿ'


ವಿಶ್ವೇಶ್ವರ ಹೆಗಡೆ ಕಾಗೇರಿ

ಬೆಂಗಳೂರು: 'ಲೋಕಸಭಾ ಚುನಾವಣೆಯು ಸೈದ್ಧಾಂತಿಕ ಹೋರಾಟವಾಗಿದೆ. ಕ್ಷೇತ್ರಗಳಲ್ಲಿ ನಾವು ನಿಮಿತ್ತ ಮಾತ್ರ. ಮೋದಿಯವರೇ ಅಭ್ಯರ್ಥಿ' ಎಂದು ಉತ್ತರ ಕನ್ನಡ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ಬಿಜೆಪಿ ಕಚೇರಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಪ್ರತಿ ಕ್ಷೇತ್ರಕ್ಕೂ ಒಬ್ಬ ಅಭ್ಯರ್ಥಿ ಇರಬೇಕು. ವಿವಿಧ ಮಾನದಂಡ ಅನುಸರಿಸಿ ನಮ್ಮನ್ನು ಆಯ್ಕೆ ಮಾಡಿದ್ದಾರೆ. ಆದರೆ, ಮೋದಿಯವರೇ ನಿಜವಾದ ಅಭ್ಯರ್ಥಿ. ನಾವು ಅವರನ್ನು ಪ್ರತಿನಿಧಿಸುತ್ತೇವೆ' ಎಂದು ಹೇಳಿದರು. 'ಹತ್ತು ವರ್ಷಗಳಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಪ್ರಣಾಳಿಕೆಯಲ್ಲಿ ಕೊಟ್ಟಿದ್ದ ಎಲ್ಲ ಭರವಸೆಗಳನ್ನೂ ಈಡೇರಿಸಿದೆ. ಅಸಾಧ್ಯ ಎನಿಸುವ ಕೆಲಸಗಳನ್ನೂ ಮಾಡಿದೆ. ಒಂದೆಡೆ ಮೋದಿಯವರು ನುಡಿದಂತೆ ನಡೆದರೆ, ರಾಜ್ಯದಲ್ಲಿ ಮುಖ್ಯಮಂತ್ರಿ ಸುಳ್ಳಿನ ಭರವಸೆಗಳನ್ನು ನೀಡುವ ಮೂಲಕ ಜನರನ್ನು ಮುಳ್ಳಿನ ಹಾದಿಯಲ್ಲಿ ನಡೆಸುತ್ತಿದ್ದಾರೆ' ಎಂದು ಕಾಗೇರಿ ಹೇಳಿದರು.

'ಮೋದಿ ಫೋಟೊ: ಈಶ್ವರಪ್ಪ ಆದರೂ ಬಳಸಲಿ, ಕಾಂಗ್ರೆಸ್ ಆದರೂ ಬಳಸಲಿ'

ಪ್ರಜಾವಾಣಿ ವಾರ್ತೆ

ಚಾಮರಾಜನಗರ: 'ನರೇಂದ್ರ ಮೋದಿ ಅವರು ಇಡೀ ದೇಶಕ್ಕೇ ಪ್ರಧಾನಿ. ದೇವರು ಎಲ್ಲರಿಗೂ ಒಂದೇ. ಒಂದೇ ಪಕ್ಷಕ್ಕೆ ಸೀಮಿತ ಅಲ್ಲ. ಮೋದಿ ಫೋಟೊ ಈಶ್ವರಪ್ಪನವರು ಬೇಕಾದರೂ ಬಳಸಲಿ, ಕಾಂಗ್ರೆಸ್‌ನವರಾದರೂ ಬಳಸಲಿ' ಎಂದು ರಾಜ್ಯ ಬಿಜೆಪಿ ಚುನಾವಣಾ ಉಸ್ತುವಾರಿ ರಾಧಾಮೋಹನ್‌ದಾಸ್ ಅಗರವಾಲ್ ಹೇಳಿದರು.

ಇಲ್ಲಿ ಪಕ್ಷದ ಕೋರ್ ಕಮಿಟಿಯಲ್ಲಿ ಪಾಲ್ಗೊಂಡ ಬಳಿಕ, ಕೆ.ಎಸ್. ಈಶ್ವರಪ್ಪ ಅವರು ಮೋದಿ ಫೋಟೊ ಬಳಸುವುದಾಗಿ ನೀಡಿರುವ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಮೋದಿ ಹಾಗೂ ಬಿಜೆಪಿ ಬಗ್ಗೆ ಪ್ರಚಾರ ಮಾಡಲು ಈಶ್ವರಪ್ಪ ಅವರನ್ನು ಬಿಟ್ಟಿದ್ದೇವೆ. ಇದರಿಂದ ಶಿವಮೊಗ್ಗದಲ್ಲಿ ರಾಘವೇಂದ್ರ ಹೆಚ್ಚಿನ ಅಂತರದಲ್ಲಿ ಗೆಲ್ಲುತ್ತಾರೆ' ಎಂದರು.

'ಕಾಂಗ್ರೆಸ್ ಕೂಡ ತನ್ನ ಪ್ರಚಾರದಲ್ಲಿ ಮೋದಿ ಫೋಟೊ ಬಳಸಿಕೊಳ್ಳಲಿ. ರಾಹುಲ್ ಗಾಂಧಿ ಅವರ ಫೋಟೊ ಬಳಸಿದರೆ ಜಾಮೀನು ಕೂಡ ಸಿಗುವುದಿಲ್ಲ. ಸಿಕ್ಕರೂ ರದ್ದಾಗುತ್ತದೆ' ಎಂದು ವ್ಯಂಗ್ಯವಾಡಿದರು.

'ತುಮಕೂರಿನಲ್ಲಿ ಮಾಧುಸ್ವಾಮಿ ಭಿನ್ನಮತೀಯರು ಎನ್ನುವುದು ಗೊತ್ತಿಲ್ಲ. ಅವರ ತಂಡದವರೆಲ್ಲ ನಮ್ಮೊಂದಿಗಿದ್ದಾರೆ. ಈಶ್ವರಪ್ಪ ಅವರನ್ನೂ ನಾನು ಭಿನ್ನಮತೀಯ ಅಂದುಕೊಳ್ಳುವುದಿಲ್ಲ. ಅವರು ನಾಮಪತ್ರ ಸಲ್ಲಿಸುವ ದಿನ ಬರಲಿ ಆಗ ನೋಡೋಣ. ಒಂದು ವೇಳೆ ಅವರು ನಾಮಪತ್ರ ಸಲ್ಲಿಸಿದರೆ, ಭಿನ್ನಮತೀಯ ಎಂದು ಪರಿಗಣಿಸುತ್ತೇವೆ' ಎಂದು ಪ್ರತಿಕ್ರಿಯಿಸಿದರು.

'ಮಂಡ್ಯದಲ್ಲಿ ಕುಮಾರಸ್ವಾಮಿ ಅವರೊಂದಿಗೆ ಸುಮಲತಾ ಪ್ರಚಾರ ನಡೆಸಲಿದ್ದಾರೆ. ಇತರ ಕಡೆಗಳಲ್ಲೂ ಪ್ರಚಾರ ನಡೆಸುವರು' ಎಂದರು.

'ಚಾಮರಾಜನಗರ ಕ್ಷೇತ್ರದಲ್ಲಿ 'ಕುಖ್ಯಾತ' ಮತ್ತು 'ಪ್ರಖ್ಯಾತ' ಅಭ್ಯರ್ಥಿಗಳ ನಡುವೆ ಸ್ಪರ್ಧೆ ಇದೆ. 'ಕುಖ್ಯಾತ' ಅಭ್ಯರ್ಥಿ ಯಾರು ಎಂಬುದು ಎಲ್ಲರಿಗೂ ಗೊತ್ತು. ಇದು ಬಿಜೆಪಿಯ ಭದ್ರಕೋಟೆ. ನಮ್ಮ ಅಭ್ಯರ್ಥಿ ಗೆಲುವು ನಿಶ್ಚಿತ' ಎಂದರು.

ಸಂಕ್ಷಿಪ್ತ ಸುದ್ದಿ

ನಿರಂಜನ ದೇಸಾಯಿ ಎಂಇಎಸ್ ಅಭ್ಯರ್ಥಿ

ಖಾನಾಪುರ(ಬೆಳಗಾವಿ ಜಿಲ್ಲೆ): ಕಳೆದ ವರ್ಷ ನಡೆದ ವಿಧಾನಸಭಾ ಚುನಾವಣೆಯಲ್ಲಿ ಠೇವಣಿ ಕಳೆದುಕೊಂಡು ಮುಖಭಂಗ ಅನುಭವಿಸಿದ್ದ ಮರಾಠಾ ಏಕೀಕರಣ ಸಮಿತಿ (ಎಂಇಎಸ್) ಈ ಬಾರಿ ಉತ್ತರ ಕನ್ನಡ ಲೋಕಸಭಾ ಕ್ಷೇತ್ರದಿಂದ ಅಭ್ಯರ್ಥಿಯನ್ನು ಕಣಕ್ಕಿಳಿಸಿ ಮತ್ತೊಮ್ಮೆ ತನ್ನ ಅದೃಷ್ಟ ಪರೀಕ್ಷೆಗೆ ಸಿದ್ಧತೆ ನಡೆಸಿದೆ.

ಭಾನುವಾರ ಪಟ್ಟಣದಲ್ಲಿ ಎಂಇಎಸ್ ಪದಾಧಿಕಾರಿಗಳ ಸಭೆಯಲ್ಲಿ ಈ ನಿರ್ಧಾರ ಪ್ರಕಟಿಸಿದ ಎಂಇಎಸ್ ಮುಖಂಡ ಅಪ್ಪಾಸಾಹೇಬ ದಳವಿ, 'ಉತ್ತರ ಕನ್ನಡ ಕ್ಷೇತ್ರದ ಲೋಕಸಭಾ ಚುನಾವಣೆಯಲ್ಲಿ ಎಂಇಎಸ್ ಅಭ್ಯರ್ಥಿಯಾಗಿ ಮಾಜಿ ಶಾಸಕ ನೀಲಕಂಠರಾವ್ ದೇಸಾಯಿ ಅವರ ಪುತ್ರ ನಿರಂಜನ ದೇಸಾಯಿ ಅವರನ್ನು ಕಣಕ್ಕಿಳಿಸಲಾಗುವುದು' ಎಂದು ತಿಳಿಸಿದರು.

33 ವರ್ಷ ವಯಸ್ಸಿನ ನಿರಂಜನ ಎಂಬಿಎ ಪದವೀಧರ. ಉದ್ಯಮಿಯಾಗಿರುವ ಅವರು, ಹಲವು ವರ್ಷಗಳಿಂದ ಎಂಇಎಸ್ ಕಾರ್ಯಕರ್ತರಾಗಿ ಗುರುತಿಸಿಕೊಂಡಿದ್ದಾರೆ. ಇದೇ ಮೊದಲ ಬಾರಿ ಚುನಾವಣೆ ಕಣಕ್ಕಿಳಿಯುತ್ತಿದ್ದಾರೆ. ಅವರ ತಂದೆ ನೀಲಕಂಠರಾವ್ 1978ರ ವಿಧಾನಸಭೆ ಚುನಾವಣೆಯಲ್ಲಿ ಖಾನಾಪುರದಿಂದ ಗೆದ್ದಿದ್ದರು.

ಕೆ.ಪಿ. ನಂಜುಂಡಿ ಭೇಟಿಯಾದ ಡಿಕೆಶಿ

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ವಿಧಾನಪರಿಷತ್ ಬಿಜೆಪಿ ಸದಸ್ಯ ಕೆ.ಪಿ.ನಂಜುಂಡಿ ಜೊತೆ ಉಪಾಹಾರ ಕೂಟದಲ್ಲಿ ಭಾನುವಾರ ಜೊತೆಯಾಗುವ ಮೂಲಕ ಕುತೂಹಲ ಕೆರಳಿಸಿದ್ದಾರೆ.

ವಿಶ್ವಕರ್ಮ ಸಮುದಾಯದ ಪ್ರಭಾವಿ ನಾಯಕರೂ ಆಗಿರುವ ನಂಜುಂಡಿ, ಹಿಂದೆ ಕಾಂಗ್ರೆಸ್ ಪಕ್ಷದಲ್ಲಿದ್ದರು. ಸೂಕ್ತ ಸ್ಥಾನಮಾನ ಸಿಗಲಿಲ್ಲವೆಂದು ಬಿಜೆಪಿಗೆ ವಲಸೆ ಹೋಗಿದ್ದರು. ಯಡಿಯೂರಪ್ಪ ಅವರು ನಂಜುಂಡಿಯನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡಿದ್ದರು. ಅವರ ಸದಸ್ಯತ್ವದ ಅವಧಿ ಇದೇ ಜೂನ್ ವೇಳೆಗೆ ಪೂರ್ಣಗೊಳ್ಳಲಿದೆ.

ಲೋಕಸಭೆ ಚುನಾವಣೆಯಲ್ಲಿ ಮತದಾರರನ್ನು ಸೆಳೆಯಲು ತಂತ್ರಗಾರಿಕೆ ರೂಪಿಸುತ್ತಿರುವ ಡಿ.ಕೆ. ಶಿವಕುಮಾರ್ ಅವರು ನಂಜುಂಡಿ ಜೊತೆಗೆ ಚರ್ಚಿಸಿದ್ದಾರೆ. ಅವರನ್ನು ಮತ್ತೆ ಕಾಂಗ್ರೆಸ್ ಕಡೆ ಸೆಳೆಯಲು ಮುಂದಾಗಿದ್ದಾರೆ ಎಂದು ಗೊತ್ತಾಗಿದೆ.

500 ಮಂದಿಗೆ ಸಿದ್ಧಪಡಿಸಿದ್ದ ಬಾಡೂಟ ವಶ

ಹೊಳೆನರಸೀಪುರ (ಹಾಸನ ಜಿಲ್ಲೆ): ಹಳೇಕೋಟೆ ಹೋಬಳಿಯ ಅಗ್ರಹಾರ ಗೇಟ್ ಸಮೀಪದ ರೈಸ್‌ಮಿಲ್ ಒಂದರಲ್ಲಿ ಶನಿವಾರ ರಾತ್ರಿ ಮತದಾರರ ಓಲೈಕೆಗೆ ಸಿದ್ಧಪಡಿಸಿಟ್ಟಿದ್ದರು ಎನ್ನಲಾದ ಫ್ರೀ ರೈಸ್ ಹಾಗೂ ಚಿಕನ್ ಛಾಪ್ಸ್ ಅನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸುಮಾರು 500 ಮಂದಿಗೆ ಬಡಿಸಲೆಂದು ಎರಡು ದೊಡ್ಡ ಪಾತ್ರೆಗಳಲ್ಲಿ ಬಾಡೂಟ ಸಿದ್ಧಪಡಿಸಿದ್ದರು. ಖಚಿತ ಮಾಹಿತಿ ಮೇರೆಗೆ ಚುನಾವಣಾ ಸಿಬ್ಬಂದಿ ಹಾಗೂ ಪೊಲೀಸರು ಜಪ್ತಿ ಮಾಡಿದ್ದಾರೆ. ಜೊತೆಗೆ ಸಾಗಿಸಲು ಬಳಸಿದ್ದ ಟ್ರ್ಯಾಕ್ಟರ್ ಹಾಗೂ ಪಾತ್ರೆಗಳನ್ನೂ ವಶಪಡಿಕೊಂಡು ಪ್ರಕರಣ ದಾಖಲಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

14ಕ್ಕೆ 2 ಕಡೆ ಮೋದಿ ರೋಡ್ ಶೋ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಚಿಕ್ಕಬಳ್ಳಾಪುರ, ಬೆಂಗಳೂರು ಉತ್ತರ ಮತ್ತು ಗ್ರಾಮಾಂತರ ಲೋಕಸಭಾ ಕ್ಷೇತ್ರಗಳಲ್ಲಿ ಇದೇ 14 ರಂದು ಚುನಾವಣಾ ಪ್ರಚಾರ ಸಭೆ ಮತ್ತು ರೋಡ್ ಶೋ ನಡೆಸಲಿದ್ದಾರೆ.

ಅಂದು ಅವರು ಚಿಕ್ಕಬಳ್ಳಾಪುರದಲ್ಲಿ ಸಮಾವೇಶ ಉದ್ದೇಶಿಸಿ ಮಾತನಾಡಲಿದ್ದಾರೆ. ಆ ಬಳಿಕ ಅವರು ರಾಮನಗರ-ಚನ್ನಪಟ್ಟಣದಲ್ಲಿ ಈ ಎರಡರಲ್ಲಿ ಒಂದು ಕಡೆ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಸಂಜೆ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಬ್ಯಾಟರಾಯನಪುರ ಮತ್ತು ಹೆಬ್ಬಾಳದಲ್ಲಿ ರೋಡ್ ಶೋ ನಡೆಸಲಿದ್ದಾರೆ. ಸುಮಾರು 10 ಕಿ.ಮೀ.ಗಳಷ್ಟು ದೂರ ರೋಡ್ ಶೋ ನಡೆಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

'ನಾಗತಿಹಳ್ಳಿ ಸಂಸ್ಕೃತಿ ಹಬ್ಬ' ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಶಿಬಿರ, ಕಾರ್ಯಾಗಾರ, ಅಭಿವೃದ್ಧಿ ಕೆಲಸಗಳು, ಕಾರ್ಯಕ್ರಮಗಳ ಮೂಲಕ ಹುಟ್ಟೂರಿನ ಜನರ ಜೀವನಮಟ್ಟ ಹೆಚ್ಚಿಸಲು ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಅವರು ಶ್ರಮಿಸುತ್ತಿದ್ದಾರೆ. ಇದರ ಭಾಗವಾಗಿ, ಪ್ರತಿ ವರ್ಷ ತನ್ನೂರು ನಾಗತಿಹಳ್ಳಿಯಲ್ಲಿ 'ಸಂಸ್ಕೃತಿ ಹಬ್ಬ' ಆಯೋಜಿಸುತ್ತಾ ಬಂದಿದ್ದಾರೆ.


ನಾಗತಿಹಳ್ಳಿ ಚಂದ್ರಶೇಖರ್

ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ನಾಗತಿಹಳ್ಳಿಯಲ್ಲಿ ನಡೆಯುವ ಎರಡು ದಿನಗಳ 'ನಾಗತಿಹಳ್ಳಿ ಸಾಂಸ್ಕೃತಿಕ ಹಬ್ಬ' ಹಬ್ಬದಲ್ಲಿ ವೈದ್ಯಕೀಯ ಶಿಬಿರಗಳು, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಾರೆ.

ಈ ವರ್ಷವೂ ಏ.8 ಮತ್ತು 9ರಂದು 'ನಾಗತಿಹಳ್ಳಿ ಸಂಸ್ಕೃತಿ ಹಬ್ಬ' ನಡೆಯುತ್ತಿದೆ. ಇದು 'ಹಬ್ಬ'ದ 20ನೇ ವಾರ್ಷಿಕೋತ್ಸವ. ನಾಡಿನ ಖ್ಯಾತ ವಿದ್ವಾಂಸರು, ಸಾಧಕರನ್ನು ಆಹ್ವಾನಿಸಿ, ತನ್ನ ಊರಿನ ಜನತೆಯ ವೈಚಾರಿಕ ತಿಳಿವನ್ನು ಮತ್ತಷ್ಟು ವಿಸ್ತಾರಗೊಳಿಸಲು ಪ್ರಯತ್ನಿಸುತ್ತಾರೆ. ಸರ್ಕಾರದ ಬೆಂಬಲವಿಲ್ಲದೆ ಎರಡು ದಶಕಗಳಿಂದ ಸ್ವಂತ ಖರ್ಚಿನಲ್ಲಿ ಅವರು ನಡೆಸುವ ಈ 'ಹಬ್ಬ' ಅನೇಕ ಕಾರಣಗಳಿಗಾಗಿ ವಿಶಿಷ್ಟವಾದುದು.

ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯ ಸಿಹಿ ಕನಸು ರಂಗಮಂದಿರದಲ್ಲಿ ಸೋಮವಾರ (ಏ.8) ಬೆಳಿಗ್ಗೆ ಉಚಿತ ವೈದ್ಯಕೀಯ ಶಿಬಿರ ನಡೆಯಲಿದೆ. ಮೈಸೂರಿನ ವಾಕ್ ಮತ್ತು ಶ್ರವಣ ಸಂಸ್ಥೆಯ ನಿರ್ದೇಶಕಿ ಎಂ.ಪುಷ್ಪಾವತಿ, ಸಹ ಪ್ರಾಧ್ಯಾಪಕ ಸಾರಾಂಶ್ ಜೈನ್, ಮಹದೇವಪ್ಪ, ತಂತ್ರಜ್ಞರಾದ ಶಿಮೂಲಾ, ತೇಜಸ್ವಿನಿ, ಇಳಕ್ಕಿಯಾ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ.

ಬೆಂಗಳೂರು ಮಿಂಟೊ ಕಣ್ಣಿನ ಆಸ್ಪತ್ರೆಯ ನಿರ್ದೇಶಕಿ ಸುಜಾತಾ ರಾಥೋಡ್, ಹಿರಿಯ ವೈದ್ಯೆ ಸವಿತಾ, ಶ್ರಿಯಾ ಶ್ರೀಧರ್ ಸೇರಿದಂತೆ ಹಲವು ವೈದ್ಯರು ಭಾಗವಹಿಸಲಿದ್ದಾರೆ. ಜತೆಗೆ, ಬೆಂಗಳೂರಿನ ಎಂಡೋಕ್ರಿನಾಲಜಿ ಮತ್ತು ಮಧುಮೇಹ ರೋಗ ಚಿಕಿತ್ಸಾ ಸಂಶೋಧನಾ ಕೇಂದ್ರದ ಎ.ಸಿ.ಸಂಜಯ ರೆಡ್ಡಿ, ಬಿ.ಆರ್.ಅರುಣಾ ಕೃಷ್ಣನ್, ನಾಗತಿಹಳ್ಳಿ ಶ್ರೀನಿವಾಸ್ ಶಿಬಿರದಲ್ಲಿ ಭಾಗವಹಿಸಲಿದ್ದಾರೆ. ಶಿಬಿರದಲ್ಲಿ ಮೈಕ್ರೊ ಲ್ಯಾಬ್ ಸಂಸ್ಥೆ ಉಚಿತ ಔಷಧ ಒದಗಿಸಲಿದೆ.

ಅಂದೇ ಸಂಜೆ 5ಕ್ಕೆ ಅಂತರರಾಷ್ಟ್ರೀಯ ವಿದ್ಯಾರ್ಥಿಗಳ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮ ಆಯೋಜಿಸಲಾಗಿದೆ. ನಟನ ರಂಗಶಾಲೆಯಿಂದ ಮಂಡ್ಯ ರಮೇಶ್ ನಿರ್ದೇಶನದಲ್ಲಿ 'ಸ್ಥಾವರವೂ ಜಂಗಮ' ನಾಟಕ ಪ್ರದರ್ಶನಗೊಳ್ಳಲಿದೆ.

ಏ.9ರಂದು ಸಂಜೆ 6ಕ್ಕೆ ಸಮಾರೋಪ ಸಮಾರಂಭ ನಡೆಯಲಿದೆ. 'ಗ್ರಾಮಮುಖಿ ಸಂಪುಟ- 2' ಕೃತಿಯನ್ನು 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಅವರು ಬಿಡುಗಡೆ ಮಾಡಲಿದ್ದಾರೆ.

ಮೂಡಬಿದಿರೆ ಆಳ್ವಾಸ್ ಪ್ರತಿಷ್ಠಾನದ ಮೋಹನ್ ಆಳ್ವ ಅಧ್ಯಕ್ಷತೆ ವಹಿಸಲಿದ್ದು, ಕೃಷ್ಣೇಗೌಡ ಅವರು ಸಮಾರೋಪ ಭಾಷಣ ಮಾಡಲಿದ್ದಾರೆ. ವೀರಕಪುತ್ರ ಶ್ರೀನಿವಾಸ್ ಸೇರಿದಂತೆ ಹಲವರು ಪಾಲ್ಗೊಳ್ಳಲಿದ್ದಾರೆ. 'ನಮ್ಮ-ನಿಮ್ಮ ಹತ್ತೊಂಬತ್ತು ಹೆಜ್ಜೆಗಳು' ಎಂಬ ಚಿತ್ರಮಾಲಿಕೆ ಪ್ರದರ್ಶನ, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ 'ನರಶಾರ್ದೂಲ' ಎಂಬ ಯಕ್ಷಗಾನ ಪ್ರಸಂಗ ಪ್ರದರ್ಶನ ಆಯೋಜಿಸಲಾಗಿದೆ. ಮಂಗಳವಾರ ರಾತ್ರಿ 11ರ ತನಕ ಕಾರ್ಯಕ್ರಮಗಳು ನಡೆಯಲಿವೆ ಎಂದು ಸಂಸ್ಕೃತಿ ಹಬ್ಬದ ಆಯೋಜಕರು ತಿಳಿಸಿದ್ದಾರೆ.

'ಪ್ರಜಾವಾಣಿ', 'ಡೆಕ್ಕನ್ ಹೆರಾಲ್ಡ್'ನಿಂದ ಎರಡು ದಿನ ನಡೆದ ಮೇಳ

ಶೈಕ್ಷಣಿಕ ಮೇಳ 'ಎಡ್ಯುವರ್ಸ್' ಯಶಸ್ವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ವತಿಯಿಂದ ಇಲ್ಲಿನ ಅರಮನೆ ಮೈದಾನದ ತ್ರಿಪುರವಾಸಿನಿಯಲ್ಲಿ ಆಯೋಜಿಸಾಗಿದ್ದ 14ನೇ ಶೈಕ್ಷಣಿಕ ಮೇಳ 'ಎಡ್ಯುವರ್ಸ್' ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಯಶಸ್ವಿಯಾಯಿತು.

ಶನಿವಾರ ಹಾಗೂ ಭಾನುವಾರ ನಡೆದ ಈ ಮೇಳದಲ್ಲಿ 60ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳು ಪಾಲ್ಗೊಂಡಿದ್ದವು.

ಭಾನುವಾರ ಸಾವಿರಾರು ಸಂಖ್ಯೆಯಲ್ಲಿ ಬಂದಿದ್ದ ವಿದ್ಯಾರ್ಥಿಗಳು, ಶೈಕ್ಷಣಿಕ ಮಾಹಿತಿ ಪಡೆದುಕೊಳ್ಳುವ ಜೊತೆಗೆ ಕೋರ್ಸ್‌ನ ಆಯ್ಕೆ, ಕೌನ್ಸೆಲಿಂಗ್, ಉದ್ಯೋಗದ ಅವಕಾಶ, ಪ್ರವೇಶ ಶುಲ್ಕ ಸೇರಿದಂತೆ ಇದ್ದ ಹಲವು ಬಗೆಯ ಅನುಮಾನಗಳನ್ನು ಸ್ಥಳದಲ್ಲೇ ಪರಿಹರಿಸಿಕೊಂಡು ಸಂತಸದಿಂದ ಮನೆಯತ್ತ ಹೆಜ್ಜೆ ಹಾಕಿದರು.

ಮಳಿಗೆಯತ್ತ ಧಾವಿಸುತ್ತಿದ್ದ ವಿದ್ಯಾರ್ಥಿಗಳು ಹಾಗೂ ಪೋಷಕರನ್ನು ಸ್ವಾಗತಿಸುತ್ತಿದ್ದ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿ ಸಮಗ್ರ ವಿವರಗಳನ್ನೂ ನೀಡುತ್ತಿದ್ದರು. ಕಾಲೇಜಿಗೆ ಸಂಬಂಧಿಸಿದ ಸಮಗ್ರ ವಿವರಗಳಿದ್ದ ಸಂಸ್ಥೆಯ ಕೈಪಿಡಿ ನೀಡುತ್ತಿದ್ದರು.

ವಿದ್ಯಾರ್ಥಿಗಳು, ಪೋಷಕರಿಗೆ ಎಂಜಿನಿಯರಿಂಗ್, ವೈದ್ಯಕೀಯ ಸೇರಿದಂತೆ ವಿವಿಧ ಕೋರ್ಸ್‌ಗಳು ಹಾಗೂ ಕಾಲೇಜುಗಳ ವಿಶೇಷತೆಗಳ ಬಗ್ಗೆ ಮಾಹಿತಿಯನ್ನು ಶೈಕ್ಷಣಿಕ ಸಂಸ್ಥೆಗಳು ನೀಡಿದವು.

ಮೇಳದ ಅಂಗವಾಗಿ ನಡೆದ ಉಪನ್ಯಾಸದಲ್ಲಿ ಶಿಕ್ಷಣ ತಜ್ಞ ಗುರುರಾಜ ಕರಜಗಿ ಮಾತನಾಡಿ, 'ಜ್ಞಾನ ಹಾಗೂ ಆತ್ಮವಿಶ್ವಾಸ ಇದ್ದರೆ ಯಾರೊಬ್ಬರು ತಮ್ಮನ್ನು ಅಲುಗಾಡಿಸಲು ಸಾಧ್ಯವಿಲ್ಲ' ಎಂದು ಕಿವಿಮಾತು ಹೇಳಿದರು.

'ಈಗ ಹತ್ತಾರು ಕೋರ್ಸ್‌ಗಳಿವೆ. ಎಲ್ಲರೂ ಹೋದ ಹಾದಿಯಲ್ಲಿ ತಾವೂ ಸಾಗಿದರೆ ಅವಕಾಶಗಳು ಸೀಮಿತವಾಗಲಿವೆ' ಎಂದರು.

'ಮನೆ ಕೆಲಸ, ಮರಗೆಲಸ ಮಾಡುವ ಕಾರ್ಮಿಕರಿಗೆ ಕೆಲಸ ಹೋಗುವ ಭೀತಿ ಇಲ್ಲ. ಅದೇ ಸ್ನಾತಕೋತ್ತರ ಪದವೀಧರರು ಈಗ ಕೆಲಸ ಕಳೆದುಕೊಳ್ಳುವ ಭೀತಿ ಎದುರಿಸುತ್ತಿದ್ದಾರೆ. ಹಾಗಿದ್ದರೆ ಈಗಿನ ಶಿಕ್ಷಣ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ತುಂಬುತ್ತಿಲ್ಲವೇ' ಎಂದು ಪ್ರಶ್ನಿಸಿದರು.

'ಆಯ್ಕೆ ಮಾಡಿದ ಕೋರ್ಸ್‌ಕ್ಕಿಂತ ಲಭಿಸಿದ ಕೋರ್ಸ್‌ನಲ್ಲೇ ಉತ್ತಮ ಸಾಧನೆ ಮಾಡುವುದು ಮುಖ್ಯವಾಗಲಿದೆ. ಜ್ಞಾನದ ಜೊತೆಗೆ ಕೌಶಲ ಇರಬೇಕು' ಎಂದು ಪ್ರತಿಪಾದಿಸಿದರು.

ಎರಡನೇ ದಿನವೂ ಮೇಳದಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿಗಳಿಗಾಗಿ ಸಿ.ಇ.ಟಿ, ಕಾಮೆಡ್-ಕೆ ಅಣಕು ಪರೀಕ್ಷೆ ನಡೆಯಿತು. ಹೆಚ್ಚು ಅಂಕ ಪಡೆದವರಿಗೆ ಬಹುಮಾನ ವಿತರಣೆ ಮಾಡಲಾಯಿತು.


ನಗರದ ಅರಮನೆ ಮೈದಾನದಲ್ಲಿ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಆಯೋಜಿಸಿರುವ 14ನೇ ಎಡ್ಯುವರ್ಸ್ ಕಾರ್ಯಕ್ರಮದಲ್ಲಿ ವಿದ್ಯಾರ್ಥಿ ಮತ್ತು ಪೋಷಕರು ಕಾಲೇಜಿನ ವಿವರಗಳನ್ನು ಪಡೆಯುತ್ತಿರುವ ದೃಶ್ಯ –ಪ್ರಜಾವಾಣಿ ಚಿತ್ರ

ಎಡ್ಯುವರ್ಸ್ ಪ್ರೀಮಿಯರ್ ಎಜುಕೇಷನ್ ಎಕ್ಸ್‌ಪೋ

ಮಾಧ್ಯಮ ಕ್ಷೇತ್ರದಲ್ಲೂ ಅವಕಾಶ

'ಈಗಿನ ಯುವಜನರು ಎಂಜಿನಿಯರ್ ಹಾಗೂ ಮೆಡಿಕಲ್ ಕ್ಷೇತ್ರವನ್ನೇ ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಬಿ.ಇ ವ್ಯಾಸಂಗ ಮಾಡಿದರೂ ಉತ್ತಮ ಸಂವಹನ ಕೌಶಲವಿದ್ದರೆ ಮಾಧ್ಯಮ ಕ್ಷೇತ್ರದಲ್ಲೂ ಕೆಲಸ ಮಾಡಬಹುದು. ಟಿ.ವಿಗಳಲ್ಲಿ ನಿರೂಪಕರಾಗಿ, ಎಫ್‌ಎಂಗಳಲ್ಲಿ ಆರ್.ಜೆಗಳಾಗಿಯೂ ಕೆಲಸ ಮಾಡಬಹುದು. ಇದರಿಂದ ಸಂಪಾದನೆ ಜೊತೆಗೆ ಪ್ರಸಿದ್ಧಿ ಪಡೆಯಬಹುದಾಗಿದೆ' ಎಂದು ರೇಡಿಯೊ ಸಿಟಿಯ ಆರ್‌ಜೆ ರಾಜಸ್ ಅವರು ಹೇಳಿದರು.

ವಿದ್ಯಾರ್ಥಿಗಳು ಹೇಳಿದ್ದೇನು?

'ಕಾಲೇಜಿನ ಮಾಹಿತಿ'



ಸಿ.ಇ.ಟಿ ಎದುರಿಸುವುದು ಹೇಗೆ, ಕಾಲೇಜು ಆಯ್ಕೆ ಹೇಗಿರಬೇಕು ಎಂಬ ಮಾಹಿತಿ ಲಭಿಸಿತು. ಉತ್ತಮ ಪ್ರಯೋಗಾಲಯ ಹೊಂದಿರುವ ಕಾಲೇಜುಗಳು ಯಾವುವಿವೆ ಎಂಬ ಮಾಹಿತಿ ದೊರೆಯಿತು.
ಆರ್.ಸೇವಿತಾ, ಕೇಂದ್ರೀಯ ವಿದ್ಯಾಲಯ (ಐಐಎಸ್‌ಸಿ ಕ್ಯಾಂಪಸ್), ಯಶವಂತಪುರ

'ಹೆಚ್ಚು ಅನುಕೂಲ'



ಪಿಯು ವ್ಯಾಸಂಗ ಮಾಡಲು ಯಾವ ಕಾಲೇಜು ಸೂಕ್ತ ಎಂಬುದು ಗೊತ್ತಾಯಿತು. ಶುಲ್ಕದ ವಿವರನ್ನೂ ಪಡೆದುಕೊಂಡಿದ್ದೇನೆ. ಒಂದೇ ಸ್ಥಳದಲ್ಲಿ ಎಲ್ಲ ಮಾಹಿತಿ ಸಿಕ್ಕಿದ್ದರಿಂದ ಹೆಚ್ಚಿನ ಅನುಕೂಲ ಆಯಿತು.
ರಿಲೇಕಾ, ಚಂದ್ರಾಲೇಔಟ್

'ಗೊಂದಲಕ್ಕೆ ಪರಿಹಾರ'



ಸಿಇಟಿ ಹಾಗೂ ನೀಟ್ ಪರೀಕ್ಷೆ ತೆಗೆದು ಕೊಂಡಿದ್ದೇನೆ. ಎರಡು ಪರೀಕ್ಷೆಗೂ ಸಿದ್ಧತೆ ನಡೆಸಿದ್ದು ಕೆಲವು ಗೊಂದಲಗಳಿದ್ದವು. ಮೇಳಕ್ಕೆ ಭೇಟಿ ನೀಡಿದ ಮೇಲೆ ಅನುಮಾನಕ್ಕೆ ಪರಿಹಾರ ಸಿಕ್ಕಿತು.
ಮೌಲ್ವಿಕಾ, ಬೇಸ್ ಪಿಯು ಕಾಲೇಜು, ಪಶ್ಚಿಮ ಕಾರ್ಡ್ ರಸ್ತೆ, ರಾಜಾಜಿನಗರ

ಕೌನ್ಸೆಲಿಂಗ್ ಎದುರಿಸಲು ಸಹಾಯ



ಕಳೆದ ಸಾಲಿನಲ್ಲಿ ಯಾವ್ಯಾವ ರ್‍ಯಾಂಕ್‌ಗೆ ಯಾವ ಕಾಲೇಜಿನಲ್ಲಿ ಸೀಟು ಲಭಿಸಿತು ಎಂಬುದನ್ನು ತಿಳಿದುಕೊಂಡಿದ್ದೇನೆ. ಇದರಿಂದ ಕೌನ್ಸೆಲಿಂಗ್ ಎದುರಿಸಲು ಅನುಕೂಲ ಆಗಲಿದೆ.
ಪುನೀತ್, ಶೇಷಾದ್ರಿಪುರ ಪಿಯು ಕಾಲೇಜು

ಹೊಸ ಕೋರ್ಸ್



ಹೊಸದಾಗಿ ಯಾವ ಕೋರ್ಸ್‌ಗಳನ್ನು ಪರಿಚಯಿಸಲಾಗಿದೆ. ಯಾವುದಕ್ಕೆ ಹೆಚ್ಚಿನ ಸ್ಕೋಪ್ ಇದೆ ಎಂಬುದು ತಿಳಿಯಿತು. ಮೇಳ ಆಯೋಜಿಸಿದ್ದಕ್ಕೆ 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್'ಗೆ ಧನ್ಯವಾದಗಳು.
ಕಣವಿ, ವಕೀಲ, ಯಲಹಂಕ

ಪ್ರಜಾ ಮತ 2024
ಜನತಂತ್ರದ ಹಬ್ಬ
4A
ಪ್ರಜಾವಾಣಿ
ಸೋಮವಾರ ● ಏಪ್ರಿಲ್ 8, 2024

ಮೂಲಸೌಕರ್ಯ ಕೊರತೆ, ಗಬ್ಬೆದ್ದು ನಾರುತ್ತಿರುವ ಮಾರುಕಟ್ಟೆಗಳು

ಮಾರುಕಟ್ಟೆ ತಾಣ, ಅಭಿವೃದ್ಧಿ ಗೌಣ

● ಖಲೀಲಅಹ್ಮದ ಶೇಖ

ಬೆಂಗಳೂರು: 'ರಾಜಧಾನಿ ಬೆಂಗಳೂರಿನ ಎಲ್ಲ ಮಾರುಕಟ್ಟೆಗಳ ಪ್ರಾಂಗಣಗಳಿಗೆ ಜಾಗತಿಕ ಮಟ್ಟದ ಸ್ಪರ್ಶ ನೀಡುತ್ತೇವೆ'- ಇದು ಜನಪ್ರತಿನಿಧಿಗಳು ಆಗಾಗ್ಗೆ ಮೊಳಗಿಸುವ ಘೋಷಣೆ. ಚುನಾವಣೆ ಬಂದಾಗ ಇಂಥ ಘೋಷಣೆಗಳು ಭರವಸೆಗಳಾಗುತ್ತವೆ.

ಚುನಾವಣೆ ಪ್ರಚಾರದ ವೇಳೆ ಮಾರುಕಟ್ಟೆಯಲ್ಲಿರುವ ವರ್ತಕರು, ವ್ಯಾಪಾರಿಗಳ ಕೈಗೆ ಕರಪತ್ರ ನೀಡಿ ಮತ ಕೇಳುವಾಗ, ಅದೇ ಪ್ರಾಂಗಣದಲ್ಲಿ ನಿಂತು ಭಾಷಣ ಮಾಡುವಾಗ, ರಾಜಕೀಯ ಪಕ್ಷಗಳ ನೇತಾರರು ಇಂಥ ಭರವಸೆಗಳ ಹೊಳೆಯನ್ನೇ ಹರಿಸುತ್ತಾರೆ. ಚುನಾವಣೆ ಮುಗಿಯುತ್ತಿದ್ದಂತೆ ಗೆದ್ದವರು, ಸೋತವರಿಬ್ಬರಿಗೂ ಇವೆಲ್ಲ ಮರತೇ ಹೋಗುತ್ತವೆ. ಮಾರುಕಟ್ಟೆಗಳು ಅಭಿವೃದ್ಧಿಯಾಗುತ್ತವೆ ಎಂಬ ವ್ಯಾಪಾರಸ್ಥರ ನಿರೀಕ್ಷೆ ಪ್ರತಿ ಬಾರಿಯೂ ಹುಸಿಯಾಗುತ್ತದೆ.

ಹೀಗಾಗಿಯೇ, ಇಂದಿಗೂ ನಗರದ ಬಹುತೇಕ ಎಲ್ಲ ಮಾರುಕಟ್ಟೆಗಳಲ್ಲಿ ಮೂಲಸೌಕರ್ಯದ ಕೊರತೆಯಿದೆ. ಕೆಲವು ಕಡೆ ಪಾರ್ಕಿಂಗ್ ವ್ಯವಸ್ಥೆ ಇಲ್ಲ, ಶುದ್ಧ ಕುಡಿಯುವ ನೀರಿಲ್ಲ, ಶೌಚಾಲಯಗಳ ವ್ಯವಸ್ಥೆ ಸಮರ್ಪಕವಾಗಿಲ್ಲ, ಸ್ವಚ್ಛತೆ ಎಂಬುದೇ ಮರೀಚಿಕೆ ಆಗಿದೆ. ಮಳೆ ಬಂದರಂತೂ ಇನ್ನೂ ಅಧ್ವಾನ. ಕೆಲವು ಕಡೆ ಲೋಡಿಂಗ್-ಅನ್‌ಲೋಡಿಂಗ್ ಸಮಸ್ಯೆಯಿಂದ ಸಂಚಾರದಟ್ಟಣೆ ಉಂಟಾಗುತ್ತಿದೆ. ಇಂಥ ಸಮಸ್ಯೆಗಳ ನಡುವೆ ಹಲವು ವರ್ಷಗಳಿಂದ ಮಾರುಕಟ್ಟೆಗಳು ನಡೆಯುತ್ತಿವೆ.

ಕೆ.ಆರ್.ಮಾರುಕಟ್ಟೆ: ನಗರದ ಪ್ರಮುಖ ಮಾರುಕಟ್ಟೆ ಇದು. ಸ್ಮಾರ್ಟ್‌ಸಿಟಿ ಯೋಜನೆ ಅಡಿಯಲ್ಲಿ ಈ ಮಾರುಕಟ್ಟೆಯನ್ನು ಅಭಿವೃದ್ಧಿ ಮಾಡಲು ನಿರ್ಧರಿಸಿತ್ತು. ಅದಕ್ಕಾಗಿ ₹34.67 ಕೋಟಿ ಅನುದಾನ ಮೀಸಲಿಡಲಾಗಿತ್ತು. ಜತೆಗೆ ಮೊಬಿಲಿಟಿ ಹಬ್‌ಗಾಗಿ ₹18.68 ಕೋಟಿ ನಿಗದಿಯಾಗಿತ್ತು. 2016–17ನೇ ಸಾಲಿನಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿತ್ತು. ಇದುವರೆಗೂ ಪೂರ್ಣಗೊಂಡಿಲ್ಲ. ಇದರಿಂದ, ವರ್ತಕರು ಹಾಗೂ ಗ್ರಾಹಕರು ಸಮಸ್ಯೆ ಎದುರಿಸುತ್ತಿದ್ದಾರೆ. ಇಲ್ಲಿ ಕುಡಿಯಲು ನೀರಿಲ್ಲ. ಶೌಚಾಲಯ ಇದೆಯಾದರೂ ಸ್ವಚ್ಛತೆ ಇಲ್ಲದ ಕಾರಣ ಮೂಗು ಮುಚ್ಚಿಕೊಂಡು ಹೋಗಬೇಕು ಎಂಬುದು ಇಲ್ಲಿನ ವರ್ತಕರು ದೂರು.

ಜೆ.ಸಿ. ಮಾರುಕಟ್ಟೆ: ಕೊಳೆತ ತರಕಾರಿಗಳ ರಾಶಿ, ಕೊಳೆಗೇರಿಯಂತಾದ ಸ್ಥಳದಲ್ಲೇ ಪ್ರತಿನಿತ್ಯ ನಡೆಯುವ ವ್ಯಾಪಾರ-ವಹಿವಾಟು. ಇದು ಕಲಾಸಿಪಾಳ್ಯದಲ್ಲಿರುವ ಜಯಚಾಮರಾಜೇಂದ್ರ ಹಣ್ಣು- ತರಕಾರಿ ಮಾರುಕಟ್ಟೆ ದುಃಸ್ಥಿತಿ.

ಮಾರುಕಟ್ಟೆ ವ್ಯಾಪ್ತಿಯು ಮೂರು ಎಕರೆಯಷ್ಟಿದೆ. 493ಕ್ಕೂ ಹೆಚ್ಚು ಅಂಗಡಿಗಳಿದ್ದು, ಅಂಗಡಿಗಳನ್ನು ತೆರೆಯಲು 970 ಜನ ಪರವಾನಗಿ ಪಡೆದುಕೊಂಡಿದ್ದು, ವ್ಯಾಪಾರ ವಹಿವಾಟು ನಡೆಸುತ್ತಿದ್ದಾರೆ. ನಗರಕ್ಕೆ ತರಕಾರಿ ಮತ್ತು ಹಣ್ಣು ಪೂರೈಕೆ ಮಾಡುವ ಸಗಟು ಮಾರುಕಟ್ಟೆ ಇದಾಗಿದ್ದು, ಮೂಲಸೌಲಭ್ಯಗಳಿಂದ ವಂಚಿತವಾಗಿದೆ. ಮಾರುಕಟ್ಟೆಯನ್ನು ಸ್ಥಳಾಂತರಿಸಬೇಕು ಎಂಬ ವ್ಯಾಪಾರಿಗಳ ಬಹುವರ್ಷಗಳ ಬೇಡಿಕೆ ಇದುವರೆಗೂ ಈಡೇರಿಲ್ಲ.

'ನಿತ್ಯ ಕಸದ ರಾಶಿಯಲ್ಲಿ ಹೆಜ್ಜೆ ಹಾಕುವ ರೈತರ ಅಸಹಾಯಕತೆಯನ್ನು ನೋಡಿ ಸಗಟು ವ್ಯಾಪಾರವನ್ನಾದರೂ ಶೀಘ್ರವಾಗಿ ಎಲೆಕ್ಟ್ರಾನಿಕ್ ಸಿಟಿಯ ಕಾಳೇನ ಅಗ್ರಹಾರಕ್ಕೆ ಸ್ಥಳಾಂತರ ಮಾಡಿ ಎಂಬ ವ್ಯಾಪಾರಿಗಳ ಬೇಡಿಕೆಗೆ ಸರ್ಕಾರ ಸ್ಪಂದಿಸುತ್ತಿಲ್ಲ. ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾಗಿದ್ದ ಕಾಲದಿಂದಲೂ ಈ ಬೇಡಿಕೆ ಇದೆ. ಜನಪ್ರತಿನಿಧಿಗಳು ಪ್ರತಿ ಬಾರಿ ಚುನಾವಣೆ ವೇಳೆಯಲ್ಲೂ ಮಾರುಕಟ್ಟೆ ಸ್ಥಳಾಂತರಿಸುವ ಭರವಸೆ ನೀಡುತ್ತಾರೆ. ಕೊನೆಗೆ ಅದು ಭರವಸೆ ಆಗಿಯೇ ಉಳಿಯುತ್ತದೆ' ಎಂದು ವರ್ತಕರು ದೂರಿದರು.

ಮಲ್ಲೇಶ್ವರ ಮಾರುಕಟ್ಟೆ: ಮಲ್ಲೇಶ್ವರದ ಸಂಪಿಗೆ ರಸ್ತೆಯ ಬದಿಯಲ್ಲಿ 100ಕ್ಕೂ ಹೆಚ್ಚು ವ್ಯಾಪಾರಸ್ಥರು ರಸ್ತೆಬದಿಯ ಹಳೇ ಕಟ್ಟಡದಲ್ಲಿ 60 ವರ್ಷಗಳಿಂದ ಹೂವಿನ ವ್ಯಾಪಾರ ನಡೆಸುತ್ತಿದ್ದರು. ಅವರಿಗೆ ಬಹುಮಹಡಿ ಕಟ್ಟಡ ನಿರ್ಮಿಸಿಕೊಡುವ ಭರವಸೆ ನೀಡಿ, ಅಲ್ಲಿಂದ ತೆರವುಗೊಳಿಸಲಾಗಿತ್ತು. ಅದರ ಪಕ್ಕವೇ 87 ತಾತ್ಕಾಲಿಕ ಶೆಡ್‌ಗಳನ್ನು ₹ 1.35 ಕೋಟಿ ವೆಚ್ಚದಲ್ಲಿ ನಿರ್ಮಿಸಿ ಅಲ್ಲಿಗೆ ಸ್ಥಳಾಂತರಿಸಲಾಗಿತ್ತು. ಎರಡು ವರ್ಷದ ಒಳಗೆ ಬಹುಮಹಡಿಯ ಸುಸಜ್ಜಿತ ಕಟ್ಟಡ ನಿರ್ಮಿಸುವುದಾಗಿ, 2015ರಲ್ಲಿ ಕಾಮಗಾರಿ ಆರಂಭಿಸಿದ್ದ ಬಿಡಿಎ, ಇದುವರೆಗೂ ಪೂರ್ಣಗೊಳಿಸಿಲ್ಲ ಎಂದು ವ್ಯಾಪಾರಸ್ಥರು ಅಳಲು ತೋಡಿಕೊಳ್ಳುತ್ತಾರೆ.

ರಸೆಲ್ ಮಾರುಕಟ್ಟೆ: ಒಂದೇ ಸೂರಿನಡಿ ತರಕಾರಿ–ಹಣ್ಣು, ಮೀನು–ಮಾಂಸ, ಸಿಗುವ ರಸೆಲ್ ಮಾರುಕಟ್ಟೆ ನಗರದ ಪ್ರಮುಖ ಮತ್ತು ಪುರಾತನ ವಾಣಿಜ್ಯ ಕೇಂದ್ರ. ಆದರೆ, ಇಲ್ಲಿ ವಾಹನ ನಿಲುಗಡೆಗೆ ಸರಿಯಾದ ಜಾಗವಿಲ್ಲ. ಶುದ್ಧ ಕುಡಿಯುವ ನೀರು ಮತ್ತು ಶೌಚಾಲಯ ವ್ಯವಸ್ಥೆಯೇ ಇಲ್ಲ.

'ಬಳಕೆಗೆ ಬಾರದ ದಾಸನಪುರ ಮಾರುಕಟ್ಟೆ'

'ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರದಲ್ಲಿ ಸುಸಜ್ಜಿತ ಎಪಿಎಂಸಿ(ಕೃಷಿ ಉತ್ಪನ್ನ ಮಾರಾಟ ಸಮಿತಿ) ಇದೆ. ಯಶವಂತಪುರ ಎಪಿಎಂಸಿಯಲ್ಲಿರುವ ಈರುಳ್ಳಿ, ಶುಂಠಿ, ಬೆಳ್ಳುಳ್ಳಿ ಹಾಗೂ ಆಲೂಗಡ್ಡೆ ವರ್ತಕರು ಇಲ್ಲಿಗೆ(ದಾಸನಪುರಕ್ಕೆ) ಸ್ಥಳಾಂತರಗೊಳ್ಳುವಂತೆ 2017ರಲ್ಲಿ ಎಪಿಎಂಸಿ ಆದೇಶ ಹೊರಡಿಸಿತ್ತು. ಯಶವಂತಪುರದಲ್ಲಿ ಮಳಿಗೆಯಿಲ್ಲದ ಹಾಗೂ ಬಾಡಿಗೆದಾರ ವರ್ತಕರು ಅದೇ ವರ್ಷ ಅಲ್ಲಿಗೆ ತೆರಳಿದ್ದರು. ಆದರೆ, ಇನ್ನೂ ಹಲವಾರು ಮಳಿಗೆಗಳು ಖಾಲಿ ಇವೆ. ಅಂದಾಜು ₹400 ಕೋಟಿ ಖರ್ಚು ಮಾಡಿ ನಿರ್ಮಿಸಿದ್ದ ಈ ಮಾರುಕಟ್ಟೆ ಅಧಿಕಾರಿಗಳ ದ್ವಂದ್ವ ನಿಲುವಿನಿಂದ ಬಳಕೆಗೆ ಬಾರದಂತಾಗಿದೆ' ಎಂದು ವರ್ತಕರು ದೂರುತ್ತಾರೆ.



ಕಲಾಸಿಪಾಳ್ಯದಲ್ಲಿರುವ ಜೆ.ಸಿ. ಮಾರುಕಟ್ಟೆಯಲ್ಲಿ ಕಾರ್ಮಿಕರು ಎಲೆಕೋಸು ಕೆಳಗೆ ಇಳಿಸಿಕೊಳ್ಳುತ್ತಿರುವುದು. ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

> ಎಪಿಎಂಸಿ ಮಾರುಕಟ್ಟೆಗಳಲ್ಲಿ ಸ್ವಚ್ಛತೆ ಮರೀಚಿಕೆ ಆಗಿದೆ. ನಿರ್ವಹಣೆಯ ಕೊರತೆಯಿಂದ ಮಾರುಕಟ್ಟೆ ಪ್ರಾಂಗಣ ಗಬ್ಬೆದ್ದು ನಾರುತ್ತದೆ. ಪ್ರತಿ ಚುನಾವಣೆಯಲ್ಲಿ ಮಾರುಕಟ್ಟೆ ಅಭಿವೃದ್ಧಿ ಬಗ್ಗೆ ರಾಜಕಾರಣಿಗಳು ಭರವಸೆ ನೀಡುತ್ತಾರೆ, ಅಷ್ಟೆ. ಅದು ಈಡೇರುವುದಿಲ್ಲ.
>
> **ಸುರೇಶ,** ಜೆ.ಸಿ ಮಾರುಕಟ್ಟೆಯ ವರ್ತಕ

> ಕೆ.ಆರ್. ಮಾರುಕಟ್ಟೆಯಲ್ಲಿ ನಡೆಯುತ್ತಿರುವ ಸ್ಮಾರ್ಟ್‌ಸಿಟಿ ಕಾಮಗಾರಿಯನ್ನು ಆದಷ್ಟು ಬೇಗ ಮುಗಿಸಬೇಕು. ಕೆ.ಆರ್. ಮಾರುಕಟ್ಟೆ ಮೆಟ್ರೊ ನಿಲ್ದಾಣದಿಂದ ಮಾರುಕಟ್ಟೆ ಪ್ರಾಂಗಣಕ್ಕೆ ಸಂಪರ್ಕಿಸುವ ರಸ್ತೆಯನ್ನು ಅಭಿವೃದ್ಧಿಗೊಳಿಸಬೇಕು. ಹಬ್ಬದ ಸಂದರ್ಭದಲ್ಲಿ ಸಂಚಾರದಟ್ಟಣೆ ಉಂಟಾಗುತ್ತಿದ್ದು, ಅದರ ನಿವಾರಣೆಗೆ ಕ್ರಮ ಕೈಗೊಳ್ಳಬೇಕು.
>
> **ದಿವಾಕರ್,** ಕೆ.ಆರ್. ಮಾರುಕಟ್ಟೆ ವರ್ತಕರ ಸಂಘದ ಅಧ್ಯಕ್ಷ

> ಶಿವಾಜಿನಗರದಲ್ಲಿರುವ ರಸೆಲ್ ಮಾರುಕಟ್ಟೆಯಲ್ಲಿ ಸ್ವಚ್ಛತೆ ಇಲ್ಲ. ಮಾರುಕಟ್ಟೆ ಸಂಪೂರ್ಣ ಅಭಿವೃದ್ಧಿ ಆಗಬೇಕಿದೆ. ಚುನಾವಣೆ ಸಂದರ್ಭದಲ್ಲಿ ಮಾತ್ರ ಮಾರುಕಟ್ಟೆಯ ಅಭಿವೃದ್ಧಿ ಬಗ್ಗೆ ಮಾತನಾಡುವ ಜನಪ್ರತಿನಿಧಿಗಳು ಗೆದ್ದ ನಂತರ ಇತ್ತ ಸುಳಿಯುವುದೇ ಇಲ್ಲ.
>
> **ಮನೋಹರ್, ಸಲ್ಮಾನ್,** ಮೀನು ಮಾರಾಟಗಾರರು ರಸೆಲ್ ಮಾರುಕಟ್ಟೆ



ಕಲಾಸಿಪಾಳ್ಯದಲ್ಲಿರುವ ಜೆ.ಸಿ. ಮಾರುಕಟ್ಟೆ. ಪ್ರಜಾವಾಣಿ ಚಿತ್ರ

ಶಾಸಕ ಯತ್ನಾಳ ವಿರುದ್ಧ ಟಬು ರಾವ್ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆರೋಗ್ಯ ಸಚಿವರಾಗಿರುವ ನನ್ನ ಪತಿ ದಿನೇಶ್ ಗುಂಡೂರಾವ್ ಹಾಗೂ ಕುಟುಂಬದ ಬಗ್ಗೆ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ' ಎಂದು ಒತ್ತಾಯಿಸಿ ದಿನೇಶ್ ಗುಂಡೂರಾವ್ ಪತ್ನಿ ಟಬು ರಾವ್ ಅವರು ಸಂಜಯನಗರ ಠಾಣೆಗೆ ದೂರು ನೀಡಿದ್ದಾರೆ.

'ದಿ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟದ ಬಗ್ಗೆ ಏಪ್ರಿಲ್ 6ರಂದು ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ್ದ ಶಾಸಕ ಯತ್ನಾಳ, 'ಸಚಿವ ದಿನೇಶ್ ಗುಂಡೂರಾವ್ ಅವರ ಮನೆಯಲ್ಲಿ ಅರ್ಧ ಪಾಕಿಸ್ತಾನವಿದೆ. ದೇಶ ವಿರೋಧಿ ಹೇಳಿಕೆ ನೀಡುವುದು ಅವರ ಚಟವಾಗಿದೆ' ಎಂಬುದಾಗಿ ಹೇಳಿದ್ದರು. ಈ ಹೇಳಿಕೆಯಿಂದ ನನ್ನ ಮನಸ್ಸಿಗೆ ನೋವುಂಟಾಗಿದೆ' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ. 'ರಾಜಕೀಯ ಕಾರಣಕ್ಕಾಗಿ ನಮ್ಮ ಕುಟುಂಬವನ್ನು ಅವಹೇಳನ ಮಾಡಿ ನಿಂದಿಸಿರುವ ಶಾಸಕ ಯತ್ನಾಳ, ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದಿದ್ದಾರೆ' ಎಂದು ಅವರು ಆರೋಪಿಸಿದ್ದಾರೆ.



ಟಬು ರಾವ್

ದೂರು ಸ್ವೀಕರಿಸಿರುವ ಪೊಲೀಸರು, 'ಕೃತ್ಯ ನಡೆದಿರುವ ಸ್ಥಳದ ಆಧಾರದಲ್ಲಿ ವಿಜಯಪುರ ಜಿಲ್ಲಾ ಪೊಲೀಸರಿಗೆ ದೂರು ಹಸ್ತಾಂತರಿಸಲಾಗುವುದು' ಎಂದಿದ್ದಾರೆ.

ಪ್ರಚಾರಕ್ಕೆ ನನಗೆ ಆಹ್ವಾನ ಇರಲಿಲ್ಲ – ಸಚಿವ ಮುನಿಯಪ್ಪ

ಬೆಂಗಳೂರು: 'ಕೋಲಾರ ಲೋಕಸಭಾ ಕ್ಷೇತ್ರದ ಪ್ರಚಾರ ಕಾರ್ಯಕ್ರಮಕ್ಕೆ ನನಗೆ ಆಹ್ವಾನ ಇರಲಿಲ್ಲ' ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಹೇಳಿದರು.

ಮುಳಬಾಗಿಲಿನ ಕುರುಡುಮಲೆ ದೇವಸ್ಥಾನದಿಂದ ಕಾಂಗ್ರೆಸ್ ಚುನಾವಣಾ ಯಾತ್ರೆ 'ಪ್ರಜಾಧ್ವನಿ-2' ಶನಿವಾರ ಆರಂಭಗೊಂಡಿದ್ದು, ಮುನಿಯಪ್ಪ ಗೈರಾಗಿದ್ದರು.

ಈ ಬಗ್ಗೆ ಭಾನುವಾರ ಪ್ರತಿಕ್ರಿಯಿಸಿದ ಮುನಿಯಪ್ಪ, 'ಯಾತ್ರೆಗೆ ಚಾಲನೆ ನೀಡುವ ಕಾರ್ಯಕ್ರಮಕ್ಕೆ ನನ್ನನ್ನು ಯಾರೂ ಆಹ್ವಾನಿಸಿಲ್ಲ. ಹೀಗಾಗಿ, ನಾನು ಹೋಗಲಿಲ್ಲ' ಎಂದರು.

'ನನಗೆ ಚಿಕ್ಕಬಳ್ಳಾಪುರ ಕ್ಷೇತ್ರದ ಜವಾಬ್ದಾರಿ ವಹಿಸಿದ್ದಾರೆ. ಅಲ್ಲಿ ಕಾಂಗ್ರೆಸ್ ಅಭ್ಯರ್ಥಿ ರಕ್ಷಾ ರಾಮಯ್ಯ ಅವರನ್ನು ಗೆಲ್ಲಿಸಿಕೊಂಡು ಬರುತ್ತೇನೆ' ಎಂದರು.

ಕೋಲಾರ ಟಿಕೆಟ್ ವಿಚಾರದಲ್ಲಿ ಮುನಿಯಪ್ಪ, ಕೆ.ಆರ್. ರಮೇಶ್ ಕುಮಾರ್ ಬಣದ ನಡುವೆ ಭಿನ್ನಾಭಿಪ್ರಾಯ ಉಂಟಾಗಿದ್ದರಿಂದ ಮೂರನೇ ಅಭ್ಯರ್ಥಿಯನ್ನು ಕಾಂಗ್ರೆಸ್ ಕಣಕ್ಕಿಳಿಸಿದೆ. ಇದರಿಂದ ಮುನಿಯಪ್ಪ ಮುನಿಸಿಕೊಂಡಿದ್ದು, ಕೋಲಾರ ಕ್ಷೇತ್ರದಲ್ಲಿ ಅಭ್ಯರ್ಥಿ ಪರ ಪ್ರಚಾರದಿಂದ ದೂರ ಉಳಿದಿದ್ದಾರೆ.

'ಪ್ರಜಾಧ್ವನಿ- 2'ಗೆ ಚಾಲನೆ ನೀಡುವ ಸಂದರ್ಭದಲ್ಲಿ ರಮೇಶ್ ಕುಮಾರ್ ಬಣದ ಎಲ್ಲ ನಾಯಕರೂ ಹಾಜರಿದ್ದರು. ಆದರೆ, ಮುನಿಯಪ್ಪ, ಅವರ ಪುತ್ರಿ, ಶಾಸಕಿ ರೂಪಕಲಾ ಕಾರ್ಯಕ್ರಮಕ್ಕೆ ಗೈರಾಗಿದ್ದರು.

ಹಲ್ಲೆ: ಬಿಜೆಪಿ, ಜೆಡಿಎಸ್ ಕಾರ್ಯಕರ್ತರ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಕುಣಿಗಲ್: ತಾಲ್ಲೂಕಿನ ನಡೆಮಾವಿನಪುರ ಗ್ರಾಮದಲ್ಲಿ ಶನಿವಾರ ರಾತ್ರಿ ಬಿಜೆಪಿ ಮತ್ತು ಜೆಡಿಎಸ್ ಕಾರ್ಯಕರ್ತರ ನಡುವೆ ಮಾರಾಮಾರಿ ನಡೆದಿದೆ.

ಬಿಜೆಪಿ ಮತ್ತು ಜೆಡಿಎಸ್ ಕಾರ್ಯಕರ್ತರು ತಮ್ಮ ಮೇಲೆ ಚಾಕುವಿನಿಂದ ಹಲ್ಲೆ ನಡೆಸಿದ್ದಾರೆ ಎಂದು ಕಾಂಗ್ರೆಸ್ ಪಕ್ಷದ ಕಾರ್ಯಕರ್ತ, ವೆಂಕಟೇಗೌಡನಪಾಳ್ಯದ ಕೀರ್ತಿ ಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಪಂಚಾಯಿತಿ ಪಕ್ಕದಲ್ಲಿರುವ ಟೀ ಅಂಗಡಿ ಬಳಿ ನಿಂತಿದ್ದ ತಮ್ಮ ಮೇಲೆ ಮೈತ್ರಿ ಕಾರ್ಯಕರ್ತರಾದ ನಡೆಮಾವಿನಪುರ ಅಣೆ ಚಂದ್ರ, ಸುನಿಲ್ ಮತ್ತು ಕಲ್ಲೆಗೌಡನಪಾಳ್ಯದ ಜಗದೀಶ್ ಎಂಬುವರು ಚಾಕುವಿನಿಂದ ಹಲ್ಲೆ ನಡೆಸಿದರು ಎಂದು ದೂರಿನಲ್ಲಿ ತಿಳಿಸಿದ್ದಾರೆ. ಕೀರ್ತಿ ಅವರನ್ನು ಸ್ಥಳೀಯರು ಪಟ್ಟಣದ ಆಸ್ಪತ್ರೆಗೆ ದಾಖಲಿಸಿದ್ದಾರೆ. ತನಿಖೆ ನಡೆದಿದೆ..

ಲೋಕಸಭಾ ಚುನಾವಣೆ | ಮತದಾರರು ಏನಂತಾರೆ ?

ವಲಸೆ ಕಾರ್ಮಿಕರ ಸಮಸ್ಯೆಗಳಿಗೆ ಸ್ಪಂದಿಸಿ



ರಾಜಧಾನಿ ವ್ಯಾಪ್ತಿಗೆ ಸೇರುವ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ವಲಸೆ ಕಾರ್ಮಿಕರ ಸಂಖ್ಯೆ ಹೆಚ್ಚಾಗಿದೆ. ಇಂತಹ ಕೂಲಿ–ಕಾರ್ಮಿಕರಿಗೆ ಕೌಶಲ ಹೆಚ್ಚಿಸಿ ಆಸರೆಯಾಗುವ ಮಾಹಿತಿ ಕೇಂದ್ರಗಳನ್ನು ತೆರೆಯಬೇಕು. ಕೂಲಿ ಕಾರ್ಮಿಕರು ಮತ್ತು ಅವರ ಮಕ್ಕಳಿಗೆ ಅನುಕೂಲವಾಗುವಂತೆ ಪ್ರಾಥಮಿಕ ಆರೋಗ್ಯ ಕೇಂದ್ರ (ಪಿಎಚ್‌ಸಿ), ಸರ್ಕಾರಿ ಶಾಲೆ ಮತ್ತು ಇಂದಿರಾ ಕ್ಯಾಂಟೀನ್‌ಗಳನ್ನು ತೆರೆಯಬೇಕು. ಗ್ರಾಮ ಪಂಚಾಯಿತಿ ಮತ್ತು ಬಿಬಿಎಂಪಿ ಕ್ಷೇತ್ರಗಳು ಸಂಧಿಸುವ ಭಾಗದಲ್ಲಿ 'ಬಿ ಖಾತಾ, ಎ ಖಾತಾ' ಸಮಸ್ಯೆಗಳಿವೆ. ಇವುಗಳಿಂದಾಗಿ ಇತ್ತ ನಗರವೂ ಅಲ್ಲ, ಅತ್ತ ಹಳ್ಳಿಗಳೂ ಅಲ್ಲ ಎನ್ನುವ ಈ ಪ್ರದೇಶಗಳಲ್ಲಿ ರಸ್ತೆ, ನೀರು, ಚರಂಡಿ ಸೇರಿದಂತೆ ಮೂಲಸೌಕರ್ಯದ ಕೊರತೆ ಕಾಡುತ್ತಿದೆ. ಇವೆಲ್ಲವನ್ನೂ ಸರಿಪಡಿಸಬೇಕು. ಮುಖ್ಯವಾಗಿ ಮತದಾರರ ಇಂತಹ ಸಮಸ್ಯೆಗಳಿಗೆ ಸ್ಪಂದಿಸುವ ಅಭ್ಯರ್ಥಿ ಆಯ್ಕೆಯಾಗಬೇಕು.

ತಾ.ಸಿ.ತಿಮ್ಮಯ್ಯ, ಮಲ್ಲತ್ತಹಳ್ಳಿ

ಜನರ ಮುಂದೆ ಪ್ರಮಾಣ ಸ್ವೀಕರಿಸಲಿ



ಚುನಾವಣೆಗಳು ಮುಗಿದು ಫಲಿತಾಂಶ ಪ್ರಕಟವಾಗಿ ಪ್ರಮಾಣ ವಚನ ಸ್ವೀಕರಿಸಿದ ನಂತರ ನಗರದ 3 ಲೋಕಸಭಾ ಸದಸ್ಯರು ನಗರದ ಒಂದೆಡೆ ಸೇರಬೇಕು. 'ನುಡಿದಂತೆ ನಡೆಯುವೆನು' ಎಂದು ನಗರದ ನಾಗರಿಕರ ಮುಂದೆ ಮತ್ತೊಮ್ಮೆ ಪ್ರಮಾಣ ವಚನ ತೆಗೆದುಕೊಳ್ಳಬೇಕು. ನಗರ ಎದುರಿಸುತ್ತಿರುವ ಎಲ್ಲ ಸಮಸ್ಯೆಗಳ ಬಗ್ಗೆ ಚರ್ಚೆ ಆಗಿ, ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಬೇಕು. ಆಯ್ಕೆಯಾಗುವ ಮೂವರು ಸಂಸದರು ನಗರದ ಹಿರಿಯರ ಹಾಗೂ ಸಂಘ– ಸಂಸ್ಥೆಗಳ ಸಹಕಾರ ಪಡೆದರೆ ನಗರದ ಬಹುತೇಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು ಸುಲಭ.

ಶಾಮರಾವ್ ಎ.ವಿ., ಅಧ್ಯಕ್ಷ ರಾಮಮೂರ್ತಿ ನಗರ ಕ್ಷೇಮಾಭಿವೃದ್ಧಿ ಸಂಘ ಬೆಂಗಳೂರು

ಬಡವರ, ಕಾರ್ಮಿಕರ ಧ್ವನಿಯಾಗಿ



ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವು ಸಾಕಷ್ಟು ದೊಡ್ಡದಾಗಿದ್ದು, ಇಲ್ಲಿ ಹಳ್ಳಿಗಳು, ಪಟ್ಟಣಗಳು ಹಾಗೂ ನಗರ ಪ್ರದೇಶಗಳೂ ಸೇರಿವೆ. ಈ ಕ್ಷೇತ್ರದಲ್ಲಿ ಕೃಷಿಕರು, ಉದ್ಯೋಗಿಗಳು, ಕೂಲಿ–ಕಾರ್ಮಿಕರು ತಮ್ಮ ದೈನಂದಿನ ಕೆಲಸಗಳಿಗೆ ಒಂದು ಊರಿಂದ ಊರಿಗೆ ಊರಿಗೆ ದಿನನಿತ್ಯ ಸಂಚರಿಸುವ ಅಗತ್ಯವಿದೆ. ಇಲ್ಲಿ ಸಂಸದರಾಗಿ ಆಯ್ಕೆ ಆಗುವ ಅಭ್ಯರ್ಥಿಗಳು ಮೂಲಸೌಕರ್ಯ ಕೊರತೆ ನಿವಾರಿಸಲು ಆದ್ಯತೆ ನೀಡಬೇಕು. ಮತದಾರರ ಕುಂದು ಕೊರತೆಗಳನ್ನು ಸ್ಪಂದಿಸಬೇಕು. ಕ್ಷೇತ್ರ ಸಮಸ್ಯೆಗಳನ್ನು ಸಂಸತ್ತಿನಲ್ಲಿ ಪ್ರಸ್ತಾಪಿಸಿ, ಇಲ್ಲಿನ ಸರ್ವತೋಮುಖ ಅಭಿವೃದ್ಧಿ ಮಾಡಬೇಕು.

ಹಂದನಕೆರೆ ಶೇಷಗಿರಿ ಉತ್ತರಹಳ್ಳಿ

ನನ್ನ ಕ್ಷೇತ್ರ ನನ್ನ ಕಾರ್ಯಸೂಚಿ

ಲೋಕಸಭೆ ಚುನಾವಣೆಯ ಅಭ್ಯರ್ಥಿಯು ನಿಮ್ಮ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಮಾಡಬೇಕಾಗಿರುವುದೇನು? ನಿಮ್ಮ ಕಾರ್ಯಸೂಚಿಯನ್ನು 100 ಪದಗಳ ಮಿತಿಯಲ್ಲಿ ಬರೆಯಿರಿ. ಹೆಸರು, ವಿಳಾಸ, ಭಾವಚಿತ್ರ ಜತೆಗಿರಲಿ

96060 38256

ಬೆಂಗಳೂರು ದಕ್ಷಿಣ: ಸೌಮ್ಯಾರೆಡ್ಡಿ ಪರ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಚಾರ

‘ಕಷ್ಟಕ್ಕೆ ಸ್ಪಂದಿಸಿದ್ದೇವೆ, ಮತ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾವನಾತ್ಮಕವಾಗಿ ಕೆರಳಿಸಿ ಮತ ಹಾಕಿಸಿಕೊಂಡು ವಂಚಿಸುವವರು ನಾವಲ್ಲ. ನಿಮ್ಮ ಭಾವನೆಗಳನ್ನು ಗೌರವಿಸುತ್ತಲೇ ಬದುಕಿನ ಸಂಕಷ್ಟಗಳಿಗೆ ಸ್ಪಂದಿಸುತ್ತಾ ಬಂದಿದ್ದೇವೆ. ಭಾವನೆಗಳನ್ನು ಕೆರಳಿಸುವವರನ್ನು ದೂರವಿಡಿ. ಹೃದಯದ ಮಾತು ಕೇಳಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸೌಮ್ಯಾರೆಡ್ಡಿ ಪರವಾಗಿ ಬಿರುಸಿನ ಪ್ರಚಾರ ಕೈಗೊಂಡು ಮಾತನಾಡಿದರು.

ಸೌಮ್ಯಾ ರೆಡ್ಡಿ ಗೆದ್ದರೆ ನಾನು ಗೆದ್ದಂತೆ. ಭಾವನಾತ್ಮಕವಾಗಿ ಕೆರಳಿ ಮತ ಹಾಕಿದ್ದಕ್ಕೆ ಹತ್ತು ವರ್ಷದಲ್ಲಿ ದೇಶಕ್ಕೆ ಮತ್ತು ನಿಮಗೆ ಸಿಕ್ಕಿದ್ದೇನು ಎಂದು ಪ್ರಶ್ನಿಸಿದರು.


ಬೆಂಗಳೂರು ದಕ್ಷಿಣ ಕ್ಷೇತ್ರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಚಾರ ನಡೆಸಿದರು.

ಸಂಸದ ತೇಜಸ್ವಿ ಸೂರ್ಯ ಸಂಸದರಾಗಿ ರಾಜ್ಯಕ್ಕೆ ಆದ ಅನ್ಯಾಯದ ಬಗ್ಗೆ ಒಮ್ಮೆಯೂ ಧ್ವನಿ ಎತ್ತಿಲ್ಲ. ಮೋದಿ ಮುಖ ತೋರಿಸಿ ಓಟು ಕೇಳುವ ದುರ್ಗತಿ ಬಿಜೆಪಿಗೆ ಬಂದಿದೆ. ಅಭಿವೃದ್ಧಿ ಕಾರ್ಯಗಳನ್ನು ಮುಂದಿಟ್ಟು ಮತ ಕೇಳುವ ಮುಖ ಇಲ್ಲ ಎಂದು ಟೀಕಿಸಿದರು.


ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ಬಾಗಲಗುಂಟೆಯಲ್ಲಿ ಬಿಜೆಪಿ ಹಾಗೂ ಜೆಡಿಎಸ್‌ನ ಚುನಾವಣಾ ಕಚೇರಿ ಉದ್ಘಾಟನಾ ಸಭೆಯಲ್ಲಿ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಶೋಭಾ ಕರಂದ್ಲಾಜೆ ಮಾತನಾಡಿದರು


ಬೆಂಗಳೂರು ದಕ್ಷಿಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ತೇಜಸ್ವಿ ಸೂರ್ಯ ಅವರು ಜಯನಗರ ವಿಧಾನಸಭಾ ಕ್ಷೇತ್ರದಲ್ಲಿ ಭಾನುವಾರ ಪ್ರಚಾರ ನಡೆಸಿದರು.

‘ಮೋದಿ ನೇತೃತ್ವದಲ್ಲಿ ದೇಶ ಸುಭದ್ರ’

ಬೆಂಗಳೂರು ಉತ್ತರ ಕ್ಷೇತ್ರದ ಅಭ್ಯರ್ಥಿ ಸಚಿವೆ ಶೋಭಾ ಕರಂದ್ಲಾಜೆ ವಿಶ್ವಾಸ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ‘ನರೇಂದ್ರ ಮೋದಿಯವರ ನೇತೃತ್ವದಲ್ಲಿ ದೇಶ ಸುಭದ್ರವಾಗಿದೆ. ಕಳೆದ ಹತ್ತು ವರ್ಷಗಳಲ್ಲಿ ದೇಶದ ಭದ್ರತೆ ಹಾಗೂ ಗಡಿಗಳ ರಕ್ಷಣೆಗಾಗಿ ಮೋದಿ ದುಡಿದಿದ್ದಾರೆ’ ಎಂದು ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಶೋಭಾ ಕರಂದ್ಲಾಜೆ ತಿಳಿಸಿದರು.

ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ಬಾಗಲಗುಂಟೆಯಲ್ಲಿ ಬಿಜೆಪಿ ಹಾಗೂ ಜೆಡಿಎಸ್‌ನ ಚುನಾವಣಾ ಕಚೇರಿ ಉದ್ಘಾಟಿಸಿ, ಸಭೆಯಲ್ಲಿ ಮಾತನಾಡಿದರು.

‘ದೇಶದ ಅಭಿವೃದ್ಧಿಯಲ್ಲಿ ಮೋದಿ ಪ್ರಮುಖ ಪಾತ್ರ ವಹಿಸಿದ್ದಾರೆ. ರಾಷ್ಟ್ರೀಯ ಹೆದ್ದಾರಿಗಳು, ರೈಲ್ವೆ ಇಲಾಖೆಯಲ್ಲಿ ಸುಧಾರಣೆ, ಪ್ರತಿ ಹಳ್ಳಿಗೂ ರಸ್ತೆ ನಿರ್ಮಾಣ ಮಾಡಿಸಿದ್ದಾರೆ. ಜನಸಾಮಾನ್ಯರ ಜೀವನಕ್ಕೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಮನೆ, ಶೌಚಾಲಯ ನಿರ್ಮಾಣ, ವಿದ್ಯುತ್ ಸೌಲಭ್ಯ, ಆಯುಷ್ಮಾನ್ ಕಾರ್ಡ್, ಜನೌಷಧ ಕೇಂದ್ರ, ಉಜ್ವಲ ಗ್ಯಾಸ್ ರೀತಿಯ ಯೋಜನೆಗಳನ್ನು ನೀಡಿದವರು ನರೇಂದ್ರ ಮೋದಿ’ ಎಂದು ತಿಳಿಸಿದರು.

ಶಾಸಕ ಎಸ್. ಮುನಿರಾಜು ಮಾತನಾಡಿ, ‘ದೇವೇಗೌಡರ ನೆರಳಿನಲ್ಲಿ ಬೆಳೆದ ಸಿದ್ದರಾಮಯ್ಯ ಇಂದು ಅವರನ್ನೇ ಏಕವಚನದಲ್ಲಿ ಕರೆಯುತ್ತಾರೆ. ಅಂಥವರಿಗೆ ಪಾಠ ಕಲಿಸಬೇಕು’ ಎಂದು ಮನವಿ ಮಾಡಿದರು.

‘ಬಿಟ್ಟಿ ಭಾಗ್ಯಗಳಿಗಾಗಿ ₹ 1.3 ಲಕ್ಷ ಕೋಟಿ ಸಾಲ ಮಾಡಿದ್ದಾರೆ. ರಾಜ್ಯವನ್ನು ಸಾಲಗಾರರನ್ನಾಗಿ ಮಾಡಿ ಅಧೋಗತಿಗೆ ತಂದಿದ್ದಾರೆ. ಈಗ ವಿಧಾನಸಭೆಗೆ ಚುನಾವಣೆ ನಡೆದರೆ ಕಾಂಗ್ರೆಸ್‌ಗೆ 40 ಸ್ಥಾನ ಸಿಗದಂಥ ಪರಿಸ್ಥಿತಿ ಇದೆ’ ಎಂದು ಕಿಡಿಕಾರಿದರು.

ಜೆಡಿಎಸ್ ರಾಜ್ಯ ಹಿರಿಯ ಉಪಾಧ್ಯಕ್ಷ ಅಂದಾನಪ್ಪ, ದಾಸರಹಳ್ಳಿ ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಎಂ. ಮುನಿಸ್ವಾಮಿ, ನೆ.ಲ. ನರೇಂದ್ರ ಬಾಬು, ನಗರ ಜಿಲ್ಲಾ ಬಿಜೆಪಿ ಅಧ್ಯಕ್ಷ ಹರೀಶ್, ಬಿಜೆಪಿ ಮಂಡಲ ಅಧ್ಯಕ್ಷ ಸೋಮಶೇಖರ್, ಶೆಟ್ಟಿಹಳ್ಳಿ ವಾರ್ಡ್ ಅಧ್ಯಕ್ಷ ಬಿ. ಸುರೇಶ್, ಬಿಜೆಪಿ ಮುಖಂಡರಾದ ಪಿ.ಎಚ್. ರಾಜು, ಬಿ.ಎಂ. ನಾರಾಯಣ್, ಕೃಷ್ಣಮೂರ್ತಿ, ಭರತ್ ಸೌಂದರ್ಯ , ನಾಗಣ್ಣ, ಬಿ.ಟಿ. ಶ್ರೀನಿವಾಸ್, ನಿಸರ್ಗ ಕೆಂಪರಾಜು, ಪಾಂಡುರಂಗ ರಾವ್, ಟಿ. ಶಿವಕುಮಾರ್ ಭಾಗವಹಿಸಿದ್ದರು.

‘ಬಿಡಿಎ ಮೂಲಕ ಹಣ ಸಂಗ್ರಹ–ದೂರು’

ಬೆಂಗಳೂರು: ಬಿಡಿಎ ಮೂಲಕ ಚುನಾವಣೆಗೆ ಹಣ ಸಂಗ್ರಹಿಸಲು ಕಾಂಗ್ರೆಸ್ ಅಡ್ಡ ದಾರಿ ಹಿಡಿದಿದ್ದು, ಈ ಬಗ್ಗೆ ಚುನಾವಣಾ ಆಯೋಗಕ್ಕೆ ದೂರು ನೀಡಲಾಗಿದೆ ಎಂದು ಬಿಜೆಪಿ ಶಾಸಕ ಎಸ್.ಸುರೇಶ್ ಕುಮಾರ್ ತಿಳಿಸಿದರು.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಅವರು, ಚುನಾವಣಾ ಮಾದರಿ ನೀತಿ ಸಂಹಿತೆ ಜಾರಿ ಆದ ಬಳಿಕ ಬಿಡಿಎ, ಶಿವರಾಮ ಕಾರಂತ ಬಡಾವಣೆಯ ಗುತ್ತಿಗೆದಾರರ ಪಾವತಿಗೆ ₹1,000 ಕೋಟಿಯಿಂದ ₹2,000 ಕೋಟಿ ಸಂಗ್ರಹಿಸಲು ನಾಡಪ್ರಭು ಕೆಂಪೇಗೌಡ ಬಡಾವಣೆಯ ಮೂಲ ನಿವೇಶನಗಳನ್ನು ಅಡಮಾನ ಇಟ್ಟು ಹಣ ಪಡೆಯಲು ಹೊರಟಿದ್ದಾರೆ ಎಂದು ದೂರಿದ್ದಾರೆ.

‘ಕಾವೇರಿ 5ನೇ ಹಂತ ಶೀಘ್ರ ಮುಕ್ತಾಯ’

ಬೆಂಗಳೂರು: ‘ಕಾವೇರಿ 5ನೇ ಹಂತದ ಯೋಜನೆಯ ಕಾಮಗಾರಿ ಮೇ ಅಂತ್ಯದ ವೇಳೆಗೆ ಮುಕ್ತಾಯವಾಗುವ ನಿರೀಕ್ಷೆಯಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.


ರಾಜರಾಜೇಶ್ವರಿನಗರ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ಯಶವಂತಪುರದ ಆರ್.ಎನ್.ಎಸ್. ಶಾಂತಿನಿವಾಸ್ ಅಪಾರ್ಟ್‌ಮೆಂಟ್ ನಿವಾಸಿಗಳ ಸಭೆಯಲ್ಲಿ ಮಾತನಾಡಿದ ಅವರು, ‘ಕುಡಿಯುವ ನೀರು, ಸಂಚಾರ ದಟ್ಟಣೆ ಸಮಸ್ಯೆ ಬಗ್ಗೆ ನಿವಾಸಿಗಳು ಗಮನ ಸೆಳೆದಿದ್ದಾರೆ. ಈ ಭಾಗದಲ್ಲಿ ಸುರಂಗ ರಸ್ತೆ ನಿರ್ಮಾಣ ಮಾಡಲು ಸಾಧ್ಯವೇ ಎಂಬುದನ್ನು ಪರಿಶೀಲಿಸಲಾಗುವುದು’ ಎಂದು ಅವರು ತಿಳಿಸಿದರು.

‘ಬಿಜೆಪಿ ಸೋಲಿಸುವುದು ಅನಿವಾರ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭ್ರಷ್ಟಾಚಾರ, ಬೆಲೆ ಏರಿಕೆ, ನಿರುದ್ಯೋಗ ನಿವಾರಿಸುವಲ್ಲಿ ವಿಫಲರಾಗಿರುವ ಸರ್ವಾಧಿಕಾರಿ ಮತ್ತು ಫ್ಯಾಸಿಸ್ಟ್ ನರೇಂದ್ರ ಮೋದಿ ಸರ್ಕಾರವನ್ನು ಅಧಿಕಾರದಿಂದ ಇಳಿಸುವುದು ಅನಿವಾರ್ಯವಾಗಿದೆ ಎಂದು ಸಿಪಿಐ ಸಮಾವೇಶದಲ್ಲಿ ಕರೆ ನೀಡಲಾಗಿದೆ.

‘ಇಂಡಿಯಾ’ ಮೈತ್ರಿಕೂಟದ ಪಕ್ಷಗಳ ನಾಯಕರನ್ನು ಒಳಗೊಂಡ ಸಿಪಿಐ ರಾಜಕೀಯ ಸಮಾವೇಶ ಭಾನುವಾರ ನಡೆಯಿತು.


ನಗರದಲ್ಲಿ ಭಾನುವಾರ ನಡೆದ ‘ಇಂಡಿಯಾ’ ಮೈತ್ರಿಕೂಟದ ಪಕ್ಷಗಳ ನಾಯಕರನ್ನು ಒಳಗೊಂಡ ಸಿಪಿಐ ರಾಜಕೀಯ ಸಮಾವೇಶದಲ್ಲಿ ಸಿಪಿಐ ನಾಯಕ ಸಿದ್ದನಗೌಡ ಪಾಟೀಲ ಮಾತನಾಡಿದರು

10 ವರ್ಷಗಳಿಂದ ದ್ವೇಷದ ರಾಜಕಾರಣ ನಡೆಸುತ್ತಿರುವ ಬಿಜೆಪಿ, ಜನರ ಸಮಸ್ಯೆಗಳನ್ನು ಕಡೆಗಣಿಸಿದೆ. ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ಆಡಳಿತ ನಡೆಸಿದೆ. ಈ ಆಡಳಿತ ಕೊನೆಗೊಂಡರಷ್ಟೇ ದೇಶದಲ್ಲಿ ಏಕತೆ, ಅಭಿವೃದ್ಧಿ ಸಾಧಿಸಲು ಸಾಧ್ಯ ಎಂದು ಮುಖಂಡರು ಅಭಿಪ್ರಾಯ ವ್ಯಕ್ತಪಡಿಸಿದರು.

ಸಿಪಿಐ ನಾಯಕ ಎಂ. ದೀಪಕ್ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಕಾರ್ಯದರ್ಶಿ ಸಾತಿ ಸುಂದರೇಶ್, ಸಿದ್ದನಗೌಡ ಪಾಟೀಲ, ಎಚ್.ವಿ. ಅನಂತ ಸುಬ್ಬರಾವ್, ಕಾಂಗ್ರೆಸ್ ಮುಖಂಡರಾದ ವಿ.ಆರ್. ಸುದರ್ಶನ್, ಯು.ಬಿ. ವೆಂಕಟೇಶ್, ಆಮ್ ಆದ್ಮಿ ಪಕ್ಷದ ರಾಜ್ಯಾಧ್ಯಕ್ಷ ಮುಖ್ಯಮಂತ್ರಿ ಚಂದ್ರು, ಸಿಪಿಐ ಪಕ್ಷದ ಕೆ.ಎನ್. ಉಮೇಶ್, ಸಿಪಿಐಎಂಎಲ್ ಮುಖಂಡ ಅಪ್ಪಣ್ಣ ಭಾಗವಹಿಸಿದ್ದರು. ಬಿಜೆಪಿಯನ್ನು ಸೋಲಿಸಬೇಕು ಎಂಬ ಕಿರುಹೊತ್ತಿಗೆಯನ್ನು ಇದೇ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು.

ಜಿಲ್ಲಾ ಚುನಾವಣಾಧಿಕಾರಿ ಅವರಿಂದ ಪರಿಶೀಲನೆ

ಮತಗಟ್ಟೆ ಅಧಿಕಾರಿಗಳಿಗೆ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಉತ್ತರ, ದಕ್ಷಿಣ ಮತ್ತು ಕೇಂದ್ರ ಲೋಕಸಭಾ ಕ್ಷೇತ್ರಗಳ ಮತಗಟ್ಟೆ ಅಧಿಕಾರಿಗಳಿಗೆ ನಡೆಯುತ್ತಿರುವ ತರಬೇತಿ ಕೇಂದ್ರಗಳಿಗೆ ಜಿಲ್ಲಾ ಚುನಾವಣಾಧಿಕಾರಿ ಆಗಿರುವ ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್ ಭಾನುವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಹೆಬ್ಬಾಳ, ಕಾಡುಗೊಂಡನಹಳ್ಳಿ, ಡಾ.ಬಿ.ಆರ್. ಅಂಬೇಡ್ಕರ್ ವೈದ್ಯಕೀಯ ಕಾಲೇಜು, ಶಿವಾಜಿನಗರದ ಸರ್ಕಾರಿ ಕಲಾ ಕಾಲೇಜು, ಯಲಹಂಕದ ಶೇಷಾದ್ರಿಪುರಂ ಕಾಲೇಜುಗಳಲ್ಲಿ ತರಬೇತಿ ನಡೆಯುತ್ತಿದೆ.

‘ಮತದಾನದ ದಿನ ಮತಗಟ್ಟೆಗಳ ಬಳಿ ನಡೆಯುವ ಎಲ್ಲಾ ಚಟುವಟಿಕೆಗಳ ಕುರಿತು ಮಾಸ್ಟರ್ ಟ್ರೈನರ್‌ಗಳು ತರಬೇತಿಯಲ್ಲಿ ವಿವರವಾಗಿ ಮಾಹಿತಿ ನೀಡಲಿದ್ದಾರೆ. ಇದರಿಂದ ಮತದಾನದ ದಿನ ಯಾವುದೇ ಸಮಸ್ಯೆಯಾಗದಂತೆ ಚುನಾವಣೆಯನ್ನು ಸುಸೂತ್ರವಾಗಿ ನಡೆಸಲು ಸಹಕಾರಿಯಾಗಲಿದೆ’ ಎಂದು ತುಷಾರ್ ಗಿರಿನಾಥ್ ತಿಳಿಸಿದರು.


ಲೋಕಸಭಾ ಕ್ಷೇತ್ರಗಳ ಮತಗಟ್ಟೆ ಅಧಿಕಾರಿಗಳಿಗೆ ತರಬೇತಿ ನಡೆಯಿತು.

ತರಬೇತಿಯ ವೇಳೆ ಪ್ರಿಸೈಡಿಂಗ್ ಅಧಿಕಾರಿ ಹಾಗೂ ಅಸಿಸ್ಟೆಂಟ್ ಪ್ರಿಸೈಡಿಂಗ್ ಅಧಿಕಾರಿಗಳಿಗೆ ಕೈಪಿಡಿ ನೀಡಲಾಗುವುದು. ಅದರಲ್ಲಿ ವಿವರಗಳು ಇರಲಿವೆ. ಸಂದೇಹಗಳಿದ್ದಲ್ಲಿ ಕೈಪಿಡಿ ನೋಡಬಹುದು. ಕೈಪಿಡಿಯು ಭಾರತ ಚುನಾವಣಾ ಅಯೋಗ ಹಾಗೂ ಕರ್ನಾಟಕ ಚುನಾವಣಾ ಆಯೋಗಗಳ ವೆಬ್‌ಸೈಟ್‌ನಲ್ಲೂ ಲಭ್ಯವಿದ್ದು, ಡೌನ್‌ಲೋಡ್ ಮಾಡಿಕೊಂಡು ವಿವರಗಳನ್ನು ಪಡೆದುಕೊಳ್ಳಬಹುದು ಎಂದು ವಿವರಿಸಿದರು.

ಮಾಸ್ಟರ್ ಟ್ರೈನರ್‌ಗಳು ಮತದಾನದ ದಿನ ನಡೆಯುವ ಪ್ರಕ್ರಿಯೆಗಳ ಕುರಿತು ಮಾಹಿತಿ ನೀಡಲಿದ್ದಾರೆ. ತರಬೇತಿಯ ಬಳಿಕ ಎಲ್ಲ ಮತದಾನ ಅಧಿಕಾರಿಗಳಿಗೆ ವಿವಿ ಪ್ಯಾಟ್, ಕಂಟ್ರೋಲ್ ಯೂನಿಟ್ ಹಾಗೂ ಬ್ಯಾಲೆಟ್ ಯೂನಿಟ್ ಹೇಗೆ ಕಾರ್ಯನಿರ್ವಹಿಸಲಿದೆ ಎಂಬುದರ ಬಗ್ಗೆ ಅಣಕು ಮತದಾನ ಪ್ರದರ್ಶನ ಮೂಲಕ ತಿಳಿಸಿಕೊಡಲಾಗುತ್ತದೆ ಎಂದು ಹೇಳಿದರು.

ಎಎಪಿ ಕಾರ್ಯಕರ್ತರ ಸಾಮೂಹಿಕ ಉಪವಾಸ ಸತ್ಯಾಗ್ರಹ

‘ಸಂಚಿನಿಂದ ಕೇಜ್ರಿವಾಲ್ ಬಂಧನ’

ಪ್ರಜಾವಾಣಿ ವಾರ್ತೆ



ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಬಂಧನ ವಿರೋಧಿಸಿ ಎಎಪಿ ಕಾರ್ಯಕರ್ತರು ಭಾನುವಾರ ಉಪವಾಸ ಸತ್ಯಾಗ್ರಹ ನಡೆಸಿದರು

ಬೆಂಗಳೂರು: ‘ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ನೇರವಾಗಿ ಎದುರಿಸಲಾಗದೆ ಪಿತೂರಿ ನಡೆಸಿ ಬಂಧನಕ್ಕೆ ಒಳಗಾಗುವಂತೆ ಮಾಡಿದ್ದಾರೆ’ ಎಂದು ಆಮ್ ಆದ್ಮಿ ಪಕ್ಷದ(ಆಪ್) ರಾಜ್ಯ ಅಧ್ಯಕ್ಷ ‘ಮುಖ್ಯಮಂತ್ರಿ’ ಚಂದ್ರು, ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಅರವಿಂದ ಕೇಜ್ರಿವಾಲ್ ಬಂಧನವನ್ನು ವಿರೋಧಿಸಿ ಎಎಪಿ ಭಾನುವಾರ ನಗರದ ಫ್ರೀಡಂ ಪಾರ್ಕ್‌ನಲ್ಲಿ ನಡೆಸಿದ ಸಾಮೂಹಿಕ ಉಪವಾಸ ಸತ್ಯಾಗ್ರಹದ ವೇಳೆ ಮಾತನಾಡಿದ ಅವರು, ‘ಚುನಾವಣಾ ಬಾಂಡ್ ಮೂಲಕ ಅತಿದೊಡ್ಡ ಹಗರಣ ನಡೆಸಿರುವ ಪ್ರಧಾನಿ ನರೇಂದ್ರ ಮೋದಿ ಅವರನ್ನು ಜಾರಿ ನಿರ್ದೇಶನಾಲಯ ಬಂಧಿಸಲಿ’ ಎಂದು ಆಗ್ರಹಿಸಿದರು.

ಪ್ರಕರಣದ ಪ್ರಮುಖ ಆರೋಪಿ ಶರತ್‌ಚಂದ್ರ ರೆಡ್ಡಿ ಹೇಳಿಕೆ ಆಧರಿಸಿ, ಪ್ರಕರಣಕ್ಕೆ ಸಂಬಂಧವಿರದ ಕೇಜ್ರಿವಾಲ್ ಅವರನ್ನು ಬಂಧಿಸಲಾಗಿದೆ. ಕೇಜ್ರಿವಾಲ್ ವಿರುದ್ಧ ಹೇಳಿಕೆ ನೀಡಿದರೆ, ಚುನಾವಣಾ ಬಾಂಡ್ ಮೂಲಕ ಬಿಜೆಪಿಗೆ ದೇಣಿಗೆ ನೀಡಿದರೆ ಬಂಧಮುಕ್ತಗೊಳಿಸುವುದಾಗಿ ಪುಸಲಾಯಿಸಿ ಶರತ್ ಚಂದ್ರ ರೆಡ್ಡಿ ಅವರನ್ನು ಸಾಕ್ಷೀದಾರರನ್ನಾಗಿಸಲಾಗಿದೆ. ಶರತ್ ಚಂದ್ರ ರೆಡ್ಡಿ ಒಡೆತನದ ಕಂಪನಿ ಬಿಜೆಪಿಗೆ ಚುನಾವಣಾ ಬಾಂಡ್ ಮೂಲಕ ಕೋಟ್ಯಂತರ ರೂಪಾಯಿ ದೇಣಿಗೆ ನೀಡಿದೆ. ನಂತರ ಬೆನ್ನು ನೋವು ಎಂಬ ಯಃಕಶ್ಚಿತ್ ಕಾರಣಕ್ಕೆ ಪ್ರಮುಖ ಆರೋಪಿಯನ್ನೇ ಬಿಡುಗಡೆ ಮಾಡಲಾಗಿದೆ. ಈ ಅವ್ಯವಹಾರದಲ್ಲಿ ನೇರವಾಗಿ ಭಾಗಿಯಾಗಿರುವ ಬಿಜೆಪಿ ನಾಯಕರನ್ನು ಏಕೆ ಬಂಧಿಸಿಲ್ಲ? ಇದರ ರೂವಾರಿ ನರೇಂದ್ರ ಮೋದಿ ಅವರನ್ನು ಬಂಧಿಸಬೇಕಲ್ಲವೇ ಎಂದು ಚಂದ್ರು ಆಗ್ರಹಿಸಿದರು.

ಇದೇ ವೇಳೆ ಮಾತನಾಡಿದ ಪಕ್ಷದ ರಾಷ್ಟ್ರೀಯ ಜಂಟಿ ಕಾರ್ಯದರ್ಶಿ ಪೃಥ್ವಿರೆಡ್ಡಿ , ರಾಜ್ಯ ಉಪಾಧ್ಯಕ್ಷ ಮೋಹನ್ ದಾಸರಿ, ರಾಜ್ಯ ಸಂಘಟನಾ ಕಾರ್ಯದರ್ಶಿ ಬಿ.ಟಿ. ನಾಗಣ್ಣ, ಬೆಂಗಳೂರು ನಗರ ಘಟಕದ ಅಧ್ಯಕ್ಷ ಸತೀಶ್ ಕುಮಾರ್ ಹಾಗೂ ಇತರ ಮುಖಂಡರು ಪಾಲ್ಗೊಂಡಿದ್ದರು.


ಬನಶಂಕರಿ 3ನೇ ಹಂತದ ವಿದ್ಯಾನಗರ ಬಸ್ ತಂಗುದಾಣ ಸಮೀಪದ ನಾಗರಿಕರು ಮತ್ತು ಆಟೊ ಚಾಲಕರ ಸಂಘದ ಸಹಯೋಗದಲ್ಲಿ ಶಿವಕುಮಾರ ಸ್ವಾಮೀಜಿ ಅವರ ಜಯಂತಿಯನ್ನು ಆಚರಿಸಲಾಯಿತು. ನಂಜಯ್ಯ, ಜಡೇಸ್ವಾಮಿ, ದಿನೇಶ್ ಭಾವಿಕಮನೆ, ಬಸವರಾಜು, ಪರಮೇಶ್ವರಪ್ಪ ಭಾಗವಹಿಸಿದ್ದರು

46 ವಿದ್ಯಾರ್ಥಿನಿಯರು ಗುಣಮುಖ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ (ಬಿಎಂಸಿಆರ್‌ಐ) ಬಾಲಕಿಯರ ಹಾಸ್ಟೆಲ್‌ನಲ್ಲಿ ಅಸ್ವಸ್ಥಗೊಂಡು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಾಗಿದ್ದ 47 ವಿದ್ಯಾರ್ಥಿನಿಯರಲ್ಲಿ 46 ವಿದ್ಯಾರ್ಥಿನಿಯರು ಗುಣಮುಖರಾಗಿ ಬಿಡುಗಡೆಗೊಂಡಿದ್ದಾರೆ.

ಒಬ್ಬ ವಿದ್ಯಾರ್ಥಿನಿಗೆ ಟ್ರಾಮಾ ಕೇರ್ ಸೆಂಟರ್‌ನಲ್ಲಿ ಚಿಕಿತ್ಸೆ ನೀಡಲಾಗುತ್ತಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ. ಸೋಮವಾರ ಆಸ್ಪತ್ರೆಯಿಂದ ಬಿಡುಗಡೆಗೊಳ್ಳುವ ಸಾಧ್ಯತೆ ಇದೆ ಎಂದು ಬಿಎಂಸಿಆರ್‌ಐ ಡೀನ್ ಮತ್ತು ನಿರ್ದೇಶಕ ರಮೇಶ್ ಕೃಷ್ಣ ಕೆ. ತಿಳಿಸಿದ್ದಾರೆ.

ವಿದ್ಯಾರ್ಥಿನಿಯರು ವಾಂತಿ ಮತ್ತು ಭೇದಿ ಸಮಸ್ಯೆಯಿಂದ ಅಸ್ವಸ್ಥಗೊಂಡಿದ್ದರು. ಪರೀಕ್ಷೆ ಮಾಡಿದಾಗ ‘ಗ್ಯಾಸ್ಟ್ರೋ ಎಂಟಿರೈಟಿಸ್’ (ಜಠರ ಕರುಳಿನ ಉರಿ) ಸಮಸ್ಯೆ ಕಂಡುಬಂದಿತ್ತು ಎಂದು ಮಾಹಿತಿ ನೀಡಿದ್ದಾರೆ.

ಹಿಂದುಳಿದ ವರ್ಗದ ವಸತಿ ನಿಲಯವಲ್ಲ: ಅಸ್ವಸ್ಥಗೊಂಡಿರುವ ವಿದ್ಯಾರ್ಥಿನಿಯರು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಯರ ವಸತಿನಿಲಯದವರು ಎಂದು ಹರಡಿರುವ ಸುದ್ದಿ ಸತ್ಯಕ್ಕೆ ದೂರವಾದುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ತಿಳಿಸಿದೆ.

270 ಬಾರಿ ಸಂಚಾರ ನಿಯಮ ಉಲ್ಲಂಘನೆ: ₹ 1.36 ಲಕ್ಷ ದಂಡ

ಪ್ರಜಾವಾಣಿ ವಾರ್ತೆ


ಹೆಲ್ಮೆಟ್ ಧರಿಸದೇ ದ್ವಿಚಕ್ರ ವಾಹನ ಚಲಾಯಿಸಿದ್ದ ಮಹಿಳೆ

ಬೆಂಗಳೂರು: ಸಂಚಾರ ನಿಯಮಗಳನ್ನು 270 ಬಾರಿ ಉಲ್ಲಂಘಿಸಿದ್ದ ಪ್ರಕರಣದಲ್ಲಿ ದ್ವಿಚಕ್ರ ವಾಹನವೊಂದರ ಮಾಲೀಕರ ಮೇಲೆ ₹1.36 ಲಕ್ಷ ದಂಡ ವಿಧಿಸಲಾಗಿದ್ದು, ಅದರ ವಸೂಲಿಗೆ ಪೊಲೀಸರು ನೋಟಿಸ್ ನೀಡಿದ್ದಾರೆ.

‘ಕೆಎ 03 ಜೆಇ 5705’ ನೋಂದಣಿ ಸಂಖ್ಯೆಯ ದ್ವಿಚಕ್ರ ವಾಹನದಲ್ಲಿ ಸುತ್ತಾಡಿದ್ದ ಮಹಿಳೆ ಹಾಗೂ ಇತರರು, 270 ಬಾರಿ ಸಂಚಾರ ನಿಯಮಗಳನ್ನು ಉಲ್ಲಂಘಿಸಿದ್ದಾರೆ. ಫೋಟೊ ಸಮೇತ ಉಲ್ಲಂಘನೆಗಳನ್ನು ಸೆರೆಹಿಡಿದಿರುವ ಪೊಲೀಸರು, ದಂಡ ಪರಿಶೀಲನೆ ಜಾಲತಾಣದಲ್ಲಿ ಅಪ್‌ಲೋಡ್ ಮಾಡಿದ್ದಾರೆ.

‘ಬಾಣಸವಾಡಿಯ ಸುಬ್ಬಯ್ಯನ ಪಾಳ್ಯ, ಕಾಕ್ಸ್‌ಟೌನ್ ಹಾಗೂ ಸುತ್ತ-ಮುತ್ತಲಿನ ರಸ್ತೆಗಳಲ್ಲಿ ದ್ವಿಚಕ್ರ ವಾಹನ ಓಡಾಡಿತ್ತು. ಮಹಿಳೆ ಹಾಗೂ ಇತರರು ಹಲವು ಬಾರಿ ಹೆಲ್ಮೆಟ್ ಧರಿಸಿರಲಿಲ್ಲ. ಹಿಂಬದಿ ಸವಾರರೂ ಹೆಲ್ಮೆಟ್ ಹಾಕಿರಲಿಲ್ಲ. ನಿರ್ಬಂಧಿತ ರಸ್ತೆಯಲ್ಲಿಯೂ ವಾಹನ ಸಂಚರಿಸಿತ್ತು’ ಎಂದು ಸಂಚಾರ ಪೊಲೀಸರು ಹೇಳಿದರು.

‘₹50 ಸಾವಿರಕ್ಕಿಂತ ಹೆಚ್ಚು ದಂಡ ಬಾಕಿ ಉಳಿಸಿಕೊಂಡಿರುವ ವ್ಯಕ್ತಿಗಳ ಪಟ್ಟಿ ಮಾಡಲಾಗಿದೆ. ಈ ಪಟ್ಟಿಯಲ್ಲಿ ‘ಕೆಎ 03 ಜೆಇ 5705’ ನೋಂದಣಿ ಸಂಖ್ಯೆ ವಾಹನದ ಮಾಲೀಕರು ಇದ್ದಾರೆ. ಅವರ ಮನೆಗೆ ಹೋಗಿ ದಂಡ ವಸೂಲಿ ಮಾಡಲು ಕ್ರಮ ಕೈಗೊಳ್ಳಲಾಗಿದೆ’ ಎಂದು ತಿಳಿಸಿದರು.

‘ನಿರ್ದಿಷ್ಟ ದಿನದೊಳಗೆ ದಂಡ ಪಾವತಿ ಮಾಡಬೇಕು. ಇಲ್ಲದಿದ್ದರೆ, ವಾಹನ ಜಪ್ತಿ ಮಾಡಲಾಗುವುದು. ಇದಾದ ನಂತರವೂ ದಂಡ ಪಾವ-ತಿಸದಿದ್ದರೆ, ಪ್ರಕರಣ ದಾಖಲಿಸಲು ಕಾನೂನಿನಲ್ಲಿ ಅವಕಾಶವಿದೆ’ ಎಂದು ಹೇಳಿದರು.

ಪೂರ್ವ ಮೇದಿನಿಪುರದಲ್ಲಿ ಎನ್‌ಐಎ ದಾಳಿ ಹಿನ್ನೆಲೆಯಲ್ಲಿ ಟಿಎಂಸಿ ಆರೋಪ

‘ಎನ್‌ಐಎ– ಬಿಜೆಪಿ ನಡುವೆ ಮೈತ್ರಿ’

ಕೋಲ್ಕತ್ತ (ಪಿಟಿಐ): ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಮತ್ತು ಬಿಜೆಪಿ ನಡುವೆ ಅಪವಿತ್ರ ಮೈತ್ರಿ ಇದ್ದು, ಈ ವಿಷಯದಲ್ಲಿ ಚುನಾವಣಾ ಆಯೋಗ ಮೌನವಹಿಸಿರುವುದು ಸ್ಪಷ್ಟವಾಗಿದೆ ಎಂದು ಟಿಎಂಸಿ ಭಾನುವಾರ ಆರೋಪಿಸಿದೆ.

ಈ ಕುರಿತು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಟಿಎಂಸಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ, ಎನ್‌ಐಎ ಮತ್ತು ಬಿಜೆಪಿ ಮೈತ್ರಿಯು ಮಾದರಿ ನೀತಿ ಸಂಹಿತೆಯ ನಡುವೆಯೂ ಟಿಎಂಸಿ ನಾಯಕರ ವಿರುದ್ಧ ಪಿತೂರಿ ಮಾಡುತ್ತಿದೆ ಎಂದು ದೂರಿದ್ದಾರೆ.

ಇಷ್ಟೆಲ್ಲ ನಡೆಯುತ್ತಿದ್ದರೂ ಚುನಾವಣಾ ಆಯೋಗ ಮೌನವಹಿಸಿದೆ. ಈ ಮೂಲಕ ಅದು ನ್ಯಾಯ ಸಮ್ಮತ ಚುನಾವಣೆಯನ್ನು ಖಚಿತಪಡಿಸಿಕೊಳ್ಳುವ ತನ್ನ ಕರ್ತವ್ಯವನ್ನು ನಿರ್ಲಕ್ಷಿಸಿದೆ ಎಂದು ಅವರು ಆರೋಪಿಸಿದ್ದಾರೆ.

ಇದಕ್ಕೂ ಮುನ್ನ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಟಿಎಂಸಿಯ ಹಿರಿಯ ನಾಯಕ ಕುನಾಲ್ ಘೋಷ್ ಅವರು, ‘ಈ ಹಿಂದೆ ಟಿಎಂಸಿಯಲ್ಲಿದ್ದ ಪಶ್ಚಿಮ ಬರ್ಧಮಾನ್ ಜಿಲ್ಲೆಯ ಬಿಜೆಪಿಯ ಹಿರಿಯ ನಾಯಕರೊಬ್ಬರು ನಗರದ ನ್ಯೂ ಟೌನ್ ಪ್ರದೇಶದಲ್ಲಿನ ತಮ್ಮ ಅಪಾರ್ಟ್‌ಮೆಂಟ್‌ನಲ್ಲಿ ಮಾರ್ಚ್ 26ರಂದು ಎನ್‌ಐಎ ಎಸ್‌ಪಿಯನ್ನು ಭೇಟಿಯಾಗಿದ್ದರು. ಈ ವೇಳೆ ಅವರು ಲೋಕಸಭೆ ಚುನಾವಣೆಗೂ ಮುನ್ನ ಎನ್‌ಐಎ ಬಂಧಿಸಬಹುದಾದ ಟಿಎಂಸಿ ನಾಯಕರ ಪಟ್ಟಿಯನ್ನು ಹಸ್ತಾಂತರಿಸಿದ್ದಾರೆ’ ಎಂದು ಆರೋಪಿಸಿದರು.

‘ಈ ನಾಯಕನಿಗೆ ಧೈರ್ಯವಿದ್ದರೆ ಪೂರಕ ಪುರಾವೆಗಳೊಂದಿಗೆ ನನ್ನ ಆರೋಪಗಳನ್ನು ನಿರಾಕರಿಸಲಿ. ಇಲ್ಲದಿದ್ದರೆ 48 ಗಂಟೆಗಳಲ್ಲಿ ನಾವೇ ಅವರ ಕರೆ ದಾಖಲೆಗಳು ಮತ್ತು ಸಿಸಿಟಿವಿ ದೃಶ್ಯಗಳ ಪುರಾವೆಗಳೊಂದಿಗೆ ಬರುತ್ತೇವೆ’ ಎಂದು ಘೋಷ್ ಸವಾಲು ಹಾಕಿದರು.

ಬಿಜೆಪಿ ಪ್ರತಿಕ್ರಿಯೆ: ‘ನಾನಾಗಲಿ ಅಥವಾ ನಮ್ಮ ಪಕ್ಷದ ಯಾವುದೇ ನಾಯಕರಾಗಲಿ ಎನ್‌ಐಎ ತನಿಖೆಯ ಮೇಲೆ ಪ್ರಭಾವ ಬೀರಿದ್ದರೆ ಅಥವಾ ಯಾವುದೇ ಅಧಿಕಾರಿಗಳನ್ನು ಭೇಟಿಯಾಗಿದ್ದರೆ ಅದಕ್ಕೆ ಪೂರಕ ದಾಖಲೆಗಳನ್ನು ಟಿಎಂಸಿ ನಾಯಕ ಕುನಾಲ್ ಘೋಷ್ ನೀಡಲಿ. ಇಲ್ಲದಿದ್ದರೆ ಅವರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುತ್ತೇನೆ’ ಎಂದು ಅಸನ್ಸೋಲ್‌ನ ಮಾಜಿ ಮೇಯರ್, ಬಿಜೆಪಿಯ ಹಿರಿಯ ನಾಯಕ ಜಿತೇಂದ್ರ ತಿವಾರಿ ಪ್ರತಿಕ್ರಿಯಿಸಿದ್ದಾರೆ.

ದುರುದ್ದೇಶದ ದಾಳಿಯಲ್ಲ: ಎನ್‌ಐಎ

ನವದೆಹಲಿ (ಪಿಟಿಐ): ಪೂರ್ವ ಮೇದಿನಿಪುರ ಜಿಲ್ಲೆಯಲ್ಲಿ ಎನ್‌ಐಎ ನಡೆಸಿದ ದಾಳಿಯು ದುರುದ್ದೇಶಪೂರಿತವಾಗಿತ್ತು ಎಂಬ ಆರೋಪವನ್ನು ಬಲವಾಗಿ ನಿರಾಕರಿಸಿರುವ ಎನ್‌ಐಎ, ಇಡೀ ವಿವಾದವನ್ನು ದುರದೃಷ್ಟಕರ ಎಂದು ಕರೆದಿದೆ.

ಎನ್‌ಐಎ ಪ್ರಾಮಾಣಿಕ, ಕಾನೂನುಬದ್ಧವಾಗಿ ತನ್ನ ಕ್ರಮಗಳನ್ನು ತೆಗೆದುಕೊಂಡಿದೆ. ತಂಡವು ನರುಅಬಿಲ ಗ್ರಾಮದಲ್ಲಿ ಶೋಧ ನಡೆಸುತ್ತಿದ್ದಾಗ ಜನರ ಗುಂಪೊಂದು ತಂಡದ ಮೇಲೆ ಹಿಂಸಾತ್ಮಕ ದಾಳಿ ನಡೆಸಿತು ಎಂದು ಎನ್‌ಐಎ ಪುನರುಚ್ಚರಿಸಿದೆ.

‘ಎನ್‌ಐಎ ತಂಡದ ಮೇಲೆ ನಡೆದ ಈ ದಾಳಿಯು ಸಂಪೂರ್ಣ ಅಪ್ರಚೋದಿತವಾಗಿತ್ತು. ಎನ್‌ಐಎ ತನ್ನ ಕಾನೂನುಬದ್ಧ ಕರ್ತವ್ಯಗಳನ್ನು ನಿರ್ವಹಿಸದಂತೆ ತಡೆಯುವ ಪ್ರಯತ್ನವಾಗಿತ್ತು’ ಎಂದು ಅದು ಹೇಳಿದೆ.

‘ಸ್ವತಂತ್ರ ಸಾಕ್ಷಿಗಳ ಎದುರು, ಮಹಿಳಾ ಕಾನ್‌ಸ್ಟೆಬಲ್‌ಗಳು ಸೇರಿದಂತೆ ಸಿಆರ್‌ಪಿಎಫ್‌ನ ಭದ್ರತೆ ಅಡಿಯಲ್ಲಿ ಐದು ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ. ಎಲ್ಲ ಕಾನೂನು ಪ್ರಕ್ರಿಯೆಗಳನ್ನು ಪಾಲಿಸಿದ ಬಳಿಕವೇ ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ಎನ್‌ಐಎ ತಿಳಿಸಿದೆ.

ಎನ್‌ಐಎ ಅಧಿಕಾರಿಗಳ ವಿರುದ್ಧ ಟಿಎಂಸಿ ನಾಯಕನ ಪತ್ನಿ ದೂರು

ತನಿಖೆ ನಡೆಸುವ ನೆಪದಲ್ಲಿ ಎನ್‌ಐಎ ಅಧಿಕಾರಿಗಳು ಬಲವಂತವಾಗಿ ಮನೆಯೊಳಗೆ ನುಗ್ಗಿ ತನ್ನೊಂದಿಗೆ ಅಸಭ್ಯವಾಗಿ ವರ್ತಿಸಿದ್ದಾರೆ ಎಂದು ಬಂಧಿತ ಟಿಎಂಸಿ ನಾಯಕ ಮನೊಬ್ರತಾ ಜಾನಾ ಅವರ ಪತ್ನಿ ಮೋನಿ ಜಾನಾ ದೂರು ನೀಡಿದ್ದು, ಎಫ್‌ಐಆರ್ ದಾಖಲಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಭಾನುವಾರ ಹೇಳಿದ್ದಾರೆ.

ಭೂಪತಿನಗರದ ಮನೆಯೊಂದರಲ್ಲಿ 2022ರಲ್ಲಿ ನಡೆದಿದ್ದ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿ ಇಬ್ಬರು ಪ್ರಮುಖ ಸಂಚುಕೋರರಾದ ಬಾಲೈ ಚರಣ್ ಮೈತಿ ಮತ್ತು ಮನೊಬ್ರತಾ ಜಾನಾ ಅವರನ್ನು ಎನ್‌ಐಎ ತಂಡ ಶನಿವಾರವಷ್ಟೇ ಬಂಧಿಸಿತ್ತು.

ಈ ಸಂಬಂಧ ದೂರು ನೀಡಿರುವ ಮಹಿಳೆಯು, ಶನಿವಾರ ದಾಳಿ ನಡೆಸಿದ ಅಧಿಕಾರಿಗಳು ಮನೆಯಲ್ಲಿದ್ದ ವಸ್ತುಗಳನ್ನೆಲ್ಲ ಹಾಳು ಮಾಡಿದ್ದಾರೆ ಎಂದು ಉಲ್ಲೇಖಿಸಿದ್ದಾರೆ. ಈ ಸಂಬಂಧ ಐಪಿಸಿ ಕಲಂ 354 ದಾಖಲಿಸಲಾಗಿದ್ದು, ದೂರನ್ನು ಪರಿಶೀಲಿಸಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.

ಭೂಪತಿನಗರದಲ್ಲಿ ಜನರ ಗುಂಪು ತನ್ನ ಮೇಲೆ ದಾಳಿ ನಡೆಸಿದ್ದು, ಒಬ್ಬ ಅಧಿಕಾರಿಗೆ ಗಾಯವಾಗಿ, ವಾಹನವೊಂದಕ್ಕೆ ಹಾನಿಯಾಗಿದೆ ಎಂದು ಎನ್‌ಐಎ ಶನಿವಾರ ದೂರು ದಾಖಲಿಸಿತ್ತು. ಈ ಸಂಬಂಧ ಇಲ್ಲಿಯವರೆಗೂ ಯಾರನ್ನು ಬಂಧಿಸಿಲ್ಲ ಎಂದಿರುವ ಪೊಲೀಸರು, ತನಿಖೆ ನಡೆಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

‘ಕೆಲ ಪ್ರದೇಶಗಳು ಗೂಂಡಾಗಳ ನಿಯಂತ್ರಣದಲ್ಲಿವೆ’

ರಾಜ್ಯದ ಕೆಲವು ಭಾಗಗಳಲ್ಲಿ ಹಿಂಸಾಚಾರ ಕಾಣಿಸಿಕೊಂಡ ಮಾತ್ರಕ್ಕೆ, ಇಡೀ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದೆ ಎಂದು ಹೇಳಲಾಗದು ಎಂದು ಪಶ್ಚಿಮ ಬಂಗಾಳದ ರಾಜ್ಯಪಾಲ ಸಿ.ವಿ. ಆನಂದ ಬೋಸ್ ಹೇಳಿದ್ದಾರೆ.

ಅಲ್ಲದೆ ಈ ಹಿಂಸಾಚಾರಕ್ಕೆ ಟಿಎಂಸಿ ಸರ್ಕಾರವನ್ನು ಸಂಪೂರ್ಣವಾಗಿ ದೂಷಿಸಲೂ ಆಗುವುದಿಲ್ಲ. ಏಕೆಂದರೆ ಇದಕ್ಕೆ ಹಿಂದಿನಿಂದ ನಡೆದುಕೊಂಡು ಬಂದಿರುವ ಪರಂಪರೆ ಕಾರಣವಾಗಿರಬಹುದು ಎಂದು ಅವರು ಪ್ರತಿಕ್ರಿಯಿಸಿದ್ದಾರೆ.

‘ಇಡೀ ರಾಜ್ಯದಲ್ಲೇನು ಕಾನೂನು ಸುವ್ಯವಸ್ಥೆ ಹದಗೆಟ್ಟಿಲ್ಲ, ಆದರೆ ಗೂಂಡಾಗಳು ಕೆಲ ಪ್ರದೇಶಗಳನ್ನು ನಿಯಂತ್ರಿಸುತ್ತಿದ್ದಾರೆ’ ಎಂದು ಅವರು ತಿಳಿಸಿದ್ದಾರೆ.

‘ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಜತೆಗೆ ವಿವಿಧ ವಿಷಯಗಳಲ್ಲಿ ಭಿನ್ನಾಭಿಪ್ರಾಯ ಇದೆ, ನಮ್ಮ ಗ್ರಹಿಕೆಗಳೂ ಭಿನ್ನವಾಗಿರಬಹುದು, ಆದರೆ ನಾವು ಪರಸ್ಪರರನ್ನು ಗೌರವಿಸುತ್ತೇವೆ’ ಎಂದು ಅವರು ಹೇಳಿದ್ದಾರೆ.

ಗಾಜಾ: ಮೃತರ ಸಂಖ್ಯೆ 33,175ಕ್ಕೆ ಏರಿಕೆ

ಜೆರುಸಲೇಂ (ಎಎಫ್‌ಪಿ/ರಾಯಿಟರ್ಸ್): ಇಸ್ರೇಲ್, ಗಾಜಾ ನಡುವೆ ನಡೆಯುತ್ತಿರುವ ಯುದ್ಧ ಪ್ರಾರಂಭವಾಗಿ ಏಪ್ರಿಲ್ 7ಕ್ಕೆ ಆರು ತಿಂಗಳಾಗಿದೆ. ಯುದ್ಧದಿಂದಾಗಿ ಇದುವರೆಗೆ ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ ಕನಿಷ್ಠ 33,175 ಮಂದಿ ಸಾವಿಗೀಡಾಗಿದ್ದಾರೆ.

‘2023ರ ಅಕ್ಟೋಬರ್ 7ರಂದು ಗಾಜಾದ ಹಮಾಸ್ ಬಂಡುಕೋರರ ವಿರುದ್ಧ ಯುದ್ಧ ಆರಂಭವಾಯಿತು. ಇಲ್ಲಿಯವರೆಗೆ 75,886 ಮಂದಿ ಗಾಯಗೊಂಡಿದ್ದಾರೆ’ ಎಂದು ಹಮಾಸ್ ನಿಯಂತ್ರಣದಲ್ಲಿರುವ ಗಾಜಾದ ಆರೋಗ್ಯ ಸಚಿವಾಲಯ ಭಾನುವಾರ ಹೇಳಿದೆ.

ಆದರೆ, ‘ಇಲ್ಲಿಯವರೆಗೆ ಗಾಜಾದ 32 ಸಾವಿರ ಮಂದಿ ನಮ್ಮಿಂದ ಹತರಾಗಿದ್ದಾರೆ’ ಎಂದು ಇಸ್ರೇಲ್ ಹೇಳಿದೆ.

ಗುಜರಾತ್: 7 ವಿದೇಶಿ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ತೊರೆಯುವಂತೆ ಸೂಚನೆ

ಅಹಮದಾಬಾದ್ (ಪಿಟಿಐ): ಗುಜರಾತ್ ವಿಶ್ವವಿದ್ಯಾಲಯದ ಹಾಸ್ಟೆಲ್ ತೊರೆಯುವಂತೆ ಅಫ್ಗಾನಿಸ್ತಾನದ 6 ವಿದ್ಯಾರ್ಥಿಗಳು ಮತ್ತು ಪೂರ್ವ ಆಫ್ರಿಕಾದ ಒಬ್ಬ ವಿದ್ಯಾರ್ಥಿಗೆ ಸೂಚನೆ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿಶ್ವವಿದ್ಯಾಲಯದ ಹಾಸ್ಟೆಲ್ ಆವರಣದಲ್ಲಿ ನಮಾಜ್ ಮಾಡಿದ ವಿದೇಶಿ ವಿದ್ಯಾರ್ಥಿಗಳ ಮೇಲೆ ಮಾರ್ಚ್ 16ರಂದು ಹಲ್ಲೆ ನಡೆದಿತ್ತು. ಈ ಘಟನೆ ನಡೆದ ಹಲವು ದಿನಗಳ ಬಳಿಕ ವಿಶ್ವವಿದ್ಯಾಲಯ ಈ ನಿರ್ಧಾರ ಕೈಗೊಂಡಿದೆ.

‘ವಿದ್ಯಾರ್ಥಿಗಳು ನಿಗದಿಪಡಿಸಿದ್ದ ಅವಧಿ ಮೀರಿ ಹಾಸ್ಟೆಲ್‌ನಲ್ಲಿ ಉಳಿದುಕೊಂಡಿದ್ದರು. ಈ ಏಳು ವಿದೇಶಿ ವಿದ್ಯಾರ್ಥಿಗಳ ಶಿಕ್ಷಣವು ಪೂರ್ಣಗೊಂಡಿದ್ದು, ಕೆಲ ಆಡಳಿತಾತ್ಮಕ ಕಾರ್ಯಗಳಿಗೆ ಬಾಕಿ ಇರುವುದರಿಂದ ಅವರು ವಸತಿನಿಲಯದಲ್ಲೇ ಉಳಿದುಕೊಂಡಿದ್ದರು. ಅವರು ಇನ್ನೂ ಇಲ್ಲಿ ಉಳಿದುಕೊಳ್ಳುವ ಅಗತ್ಯವಿಲ್ಲದಿರುವುದರಿಂದ ಅವರ ತಾಯ್ನಾಡಿಗೆ ಮರಳಲು ಬೇಕಾದ ವ್ಯವಸ್ಥೆಯನ್ನು ಮಾಡಲಾಗಿದೆ’ ಎಂದು ವಿಶ್ವವಿದ್ಯಾಲಯದ ಕುಲಪತಿ ನೀರ್ಜ ಗುಪ್ತಾ ಅವರು ತಿಳಿಸಿದ್ದಾರೆ.

‘ವಿದ್ಯಾರ್ಥಿಗಳು ಸುರಕ್ಷಿತವಾಗಿ ತಮ್ಮ ದೇಶಕ್ಕೆ ಮರಳಲು ಬೇಕಾದ ದಾಖಲೆಗಳ ವ್ಯವಸ್ಥೆಯನ್ನು ಮಾಡಲಾಗಿದೆ. ಹಳೆಯ ವಿದ್ಯಾರ್ಥಿಗಳನ್ನು ವಸತಿನಿಲಯದಲ್ಲಿ ಉಳಿಸಿಕೊಳ್ಳಲು ನಾವು ಬಯಸುವುದಿಲ್ಲ. ಆಯಾ ದೇಶದ ಕನ್ಸುಲೇಟ್‌ಗಳಿಗೂ ಮಾಹಿತಿ ನೀಡಲಾಗಿದೆ’ ಎಂದು ಹೇಳಿದ್ದಾರೆ.

ಮಾರ್ಚ್ 16ರ ಘಟನೆಯ ಬಳಿಕ ಅಫ್ಗನ್ ಮತ್ತು ಗ್ಯಾಂಬಿಯಾ ಪ್ರತಿನಿಧಿಗಳು ಗುಜರಾತ್ ವಿಶ್ವವಿದ್ಯಾಲಯಕ್ಕೆ ಆಗಮಿಸಿ, ವಿದ್ಯಾರ್ಥಿಗಳ ಸುರಕ್ಷತೆ ಬಗ್ಗೆ ಕುಲಪತಿಗಳ ಜತೆ ಸಭೆ ನಡೆಸಿದ್ದರು.

‘ಜೀವಜಲ’ ನೀಡುವ ವೈದ್ಯ ದಂಪತಿ

ಒಂದನೇ ಪುಟದಿಂದ...

ತಮ್ಮ ಬಳಿ ಚಿಕಿತ್ಸೆಗೆ ಬರುತ್ತಿದ್ದ ಜನ ನೀರಿನ ಸಮಸ್ಯೆ ಬಗ್ಗೆ ನೋವು ತೋಡಿಕೊಳ್ಳುತ್ತಿದ್ದರು. ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಿದ ದಂಪತಿ, ತಾವೇ ಸ್ವತಃ ಟ್ಯಾಂಕರ್‌ಗಳ ಮೂಲಕ ನೀರು ಪೂರೈಸಲು ನಿರ್ಧರಿಸಿದರು. ಇದಕ್ಕಾಗಿ ಅವರು ಟ್ಯಾಂಕರ್ ಮಾಲೀಕರೊಂದಿಗೆ ಒಪ್ಪಂದವನ್ನೂ ಮಾಡಿಕೊಂಡಿದ್ದಾರೆ. ಬೇಸಿಗೆ ಮುಗಿದು, ನೀರಿನ ಅಭಾವ ನೀಗುವವರೆಗೆ ನೀರು ಪೂರೈಕೆ ಮುಂದುವರಿಸಲು ನಿರ್ಧರಿಸಿದ್ದಾರೆ.

ಬಳ್ಳಾರಿಯ ಕೊಳೆಗೇರಿಗಳು, ಅಲೆಮಾರಿಗಳ ಟೆಂಟ್‌ಗಳು, ಅಹಂಬಾವಿ ಕಾಲುವೆ ಪಕ್ಕದ ಮನೆಗಳು, ಸುಧಾ ಕ್ರಾಸ್, ಫಸ್ಟ್ ಗೇಟ್, ಕೌಲ್ ಬಜಾರ್, ಬಸವನಕುಂಟೆ, ಅಂಬೇಡ್ಕರ್ ಶಾಲೆ ಪ್ರದೇಶ, ಅನಂತಪುರ ರಸ್ತೆಯ ಮನೆಗಳು, ಕೋಟೆ ಪ್ರದೇಶದ ಓಣಿಗಳಲ್ಲಿ ನೀರಿಗೆ ತತ್ವಾರವಿದ್ದು, ಅಲ್ಲಿಗೆ ಫೌಂಡೇಷನ್ ಮೂಲಕ ನೀರು ಪೂರೈಸಲಾಗುತ್ತಿದೆ. ‘ನಿಗದಿತ ಸಮಯಕ್ಕೆ ನಾವೇ ನೀರು ಪೂರೈಕೆ ಮಾಡುತ್ತೇವೆ, ಒಮ್ಮೊಮ್ಮೆ ನಾಗರಿಕರೇ ಕರೆ ಮಾಡಿ ನೀರಿಗೆ ಮನವಿ ಮಾಡುತ್ತಾರೆ’ ಎನ್ನುತ್ತಾರೆ ಈ ಕಾರ್ಯದ ಉಸ್ತುವಾರಿ ವಹಿಸಿರುವ ಸದ್ದಾಂ.

ವೈದ್ಯ ದಂಪತಿಯ ಈ ಕಾರ್ಯವನ್ನು ಜನರು ಕೊಂಡಾಡುತ್ತಿದ್ದಾರೆ. ‘ನಾವು ಅಲೆಮಾರಿಗಳು. ರಸ್ತೆ ಬದಿಯಲ್ಲೇ ನಮ್ಮ ಜೀವನ. ನಮಗೆ ನೀರಿನ ಸಂಪರ್ಕಗಳಿಲ್ಲ. ಹೀಗಾಗಿ ಕಿಲೋಮೀಟರ್ ದೂರದಿಂದ ನೀರು ಹೊತ್ತುತರಬೇಕು. ಈಗ ಇವರಿಂದಾಗಿ (ವೈದ್ಯ ದಂಪತಿ) ನಮಗೆ ನೆಮ್ಮದಿ ಇಕ್ಕಿದೆ’ ಎನ್ನುತ್ತಾರೆ ಹೊಸಪೇಟೆ ರಸ್ತೆ ಬದಿಯಲ್ಲಿ ಗುಡಿಸಲು ಕಟ್ಟಿಕೊಂಡಿರುವ ರಾಜಾಸಾಬ್.

ಪರೀಕ್ಷೆ ಮಾಡಿಸಿ ನೀರು ಪೂರೈಕೆ

ಬಳ್ಳಾರಿ ನಗರ ವ್ಯಾಪ್ತಿಯಲ್ಲಿ ಸಿಗುವ ಅಂತರ್ಜಲ ಅತ್ಯಂತ ಗಡುಸಾಗಿದ್ದು, ಬಳಸಲು ಯೋಗ್ಯವಲ್ಲದ ಸ್ಥಿತಿಯಲ್ಲಿದೆ. ಆದರೆ, ಕುಡಿಯಲು ಯೋಗ್ಯವಾದ ನೀರನ್ನೇ ಪೂರೈಕೆ ಮಾಡಬೇಕೆಂದು ನಿರ್ಧರಿಸಿದ ವೈದ್ಯ ದಂಪತಿ, ನೀರಿನ ಮಾದರಿಗಳನ್ನು ಲ್ಯಾಬ್‌ಗೆ ಕಳುಹಿಸಿ ಪರೀಕ್ಷೆ ಮಾಡಿಸಿದ ಬಳಿಕ ಯೋಗ್ಯ ಎಂದು ವರದಿ ಬಂದ ನೀರನ್ನೇ ಜನರಿಗೆ ಪೂರೈಸುತ್ತಿದ್ದಾರೆ.

ಜಾನುವಾರುಗಳಿಗೂ ನೀರು:

ಪಶು ಪಕ್ಷಿಗಳ ನೀರಿನ ಮೂಲವಾದ ಹಳ್ಳಕೊಳ್ಳಗಳಲ್ಲೂ ಈ ಬಾರಿ ನೀರಿಲ್ಲ. ಹೀಗಾಗಿ ಕಲುಷಿತ ನೀರಿಗೆ ಅವು ಬಾಯಿ ಇಡುತ್ತಿವೆ. ಇದಕ್ಕೂ ಪರಿಹಾರ ಹುಡುಕಿರುವ ವೈದ್ಯ ದಂಪತಿ ನಗರದ 20 ಕಡೆ ನೀರಿನ ತೊಟ್ಟಿಗಳನ್ನು ಇಟ್ಟಿದ್ದಾರೆ. ಇನ್ನೂ 20 ತೊಟ್ಟಿಗಳನ್ನು ಇಡುವುದಾಗಿ ತಿಳಿಸಿದ್ದಾರೆ.



ನೀರಿನ ತೊಂದರೆ ಬಗ್ಗೆ ಜನ ಹೇಳುತ್ತಿದ್ದರು. ನೀರು ಪೂರೈಸುವ ನಿರ್ಧಾರವನ್ನು ನಾನು ಮತ್ತು ನನ್ನ ಪತ್ನಿ ಇಬ್ಬರೂ ಸೇರಿ ಕೈಗೊಂಡೆವು
ಧರ್ಮರೆಡ್ಡಿ, ವೈದ್ಯ



ಪರೀಕ್ಷೆ ಮಾಡಿ, ಕುಡಿಯಲು ಯೋಗ್ಯ ಎನಿಸಿದ ನೀರನ್ನೇ ನಾವು ಜನರಿಗೆ ನೀಡುತ್ತಿದ್ದೇವೆ. ಉಪಯೋಗವಾಗುವುದನ್ನು ನೀಡಿದರಷ್ಟೇ ಅದು ನೆರವು.
ಶೋಭಾ, ವೈದ್ಯೆ



ಅಗತ್ಯವಿರುವ ಸಮಯಕ್ಕೆ ಸರಿಯಾಗಿ ಟ್ಯಾಂಕರ್ ನೀರು ಬರುತ್ತದೆ. ನೀರಿನ ಸಮಸ್ಯೆ ಸದ್ಯ ದೂರವಾಗಿದೆ. ಡಾಕ್ಟ್ರು ಬಹಳ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ
ಈರಮ್ಮ, ಇಂದಿರಾ ನಗರ ನಿವಾಸಿ

‘ಗಡಿ ರಕ್ಷಿಸಿಕೊಳ್ಳುವ ಬಗೆ ನವಭಾರತಕ್ಕೆ ತಿಳಿದಿದೆ’



ಆದಿತ್ಯನಾಥ

ಜೈಪುರ (ಪಿಟಿಐ): ದೇಶದ ಜನರು ಮತ್ತು ಗಡಿಗಳನ್ನು ಹೇಗೆ ರಕ್ಷಿಸಿಕೊಳ್ಳಬೇಕೆಂಬುದು ನವಭಾರತಕ್ಕೆ ಗೊತ್ತಿದೆ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಹೇಳಿದ್ದಾರೆ.

ರಾಜಸ್ಥಾನದ ಭರತ್‌ಪುರ, ದೌಸಾ ಮತ್ತು ಸಿಕಾರ್‌ನಲ್ಲಿ ಚುನಾವಣಾ ರ‍್ಯಾಲಿಗಳನ್ನು ಉದ್ದೇಶಿಸಿ ಭಾನುವಾರ ಮಾತನಾಡಿದ ಅವರು, ಬ್ರಿಟನ್‌ನ ದೈನಿಕ ‘ದಿ ಗಾರ್ಡಿಯನ್’ 2019ರ ನಂತರ ರಾಷ್ಟ್ರೀಯ ಭದ್ರತೆಗಾಗಿ ಭಾರತೀಯ ಗುಪ್ತಚರ ಸಂಸ್ಥೆಗಳು ಪಾಕಿಸ್ತಾನದಲ್ಲಿ ಭಯೋತ್ಪಾದಕರ ಉದ್ದೇಶಿತ ಹತ್ಯೆಗಳಲ್ಲಿ ಭಾಗಿಯಾಗಿವೆ ಎಂದು ಪ್ರಕಟಿಸಿರುವ ವರದಿ ಉಲ್ಲೇಖಿಸಿ, ಭಯೋತ್ಪಾದಕರನ್ನು ಕೊಲ್ಲುವುದು ತಪ್ಪೇ ಎಂದು ಪ್ರಶ್ನಿಸಿದ್ದಾರೆ.

‘ತಮ್ಮ ಜನರನ್ನು ಹೇಗೆ ರಕ್ಷಿಸಿಕೊಳ್ಳಬೇಕೆಂಬುದು ನವ ಭಾರತಕ್ಕೆ ತಿಳಿದಿದೆ. ನಿನ್ನೆಯವರೆಗೆ ಆ ಭಯೋತ್ಪಾದಕರಿಗೆ ಆಶ್ರಯ ನೀಡಿದವರು ಈಗ ವೈಮಾನಿಕ ದಾಳಿಯ ಭಯದಿಂದ ಭಾರತದ ವಿರುದ್ಧ ಏನನ್ನೂ ಮಾತನಾಡಲು ಧೈರ್ಯ ತೋರುತ್ತಿಲ್ಲ’ ಎಂದು ಪರೋಕ್ಷವಾಗಿ ಪಾಕಿಸ್ತಾನವನ್ನು ಟೀಕಿಸಿದರು. ‘ಕಾಂಗ್ರೆಸ್ ಉಗ್ರರಿಗೆ ಬಿರಿಯಾನಿ ತಿನ್ನಿಸುತ್ತಿದೆ’ ಎಂದೂ ಆದಿತ್ಯನಾಥ ಕಿಡಿಕಾರಿದ್ದಾರೆ.

ಕೇಜ್ರಿವಾಲ್ ಬಂಧನಕ್ಕೆ ವಿರೋಧ; ಜಂತರ್ ಮಂತರ್‌ನಲ್ಲಿ ನಿರಶನ

ಎಎಪಿ ನಾಯಕರ ಉಪವಾಸ ಸತ್ಯಾಗ್ರಹ



ಕೇಜ್ರಿವಾಲ್ ಬಂಧನ ವಿರೋಧಿಸಿ ದೆಹಲಿಯ ಜಂತರ್ ಮಂತರ್‌ನಲ್ಲಿ ಎಎಪಿ ನಾಯಕರು ಮತ್ತು ಕಾರ್ಯಕರ್ತರು ಭಾನುವಾರ ದಿನವಿಡೀ ಸಾಮೂಹಿಕ ಉಪವಾಸ ಸತ್ಯಾಗ್ರಹ ನಡೆಸಿದರು –ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಬಂಧನ ವಿರೋಧಿಸಿ ಮತ್ತು ಬಿಜೆಪಿ ಸರ್ವಾಧಿಕಾರ ಧೋರಣೆ ಅನುಸರಿಸುತ್ತಿದೆ ಎಂದು ಆರೋಪಿಸಿ ಎಎಪಿ ಹಿರಿಯ ನಾಯಕರು, ಕಾರ್ಯಕರ್ತರು ಇಲ್ಲಿನ ಜಂತರ್ ಮಂತರ್‌ನಲ್ಲಿ ದಿನವಿಡೀ ಉಪವಾಸ ಸತ್ಯಾಗ್ರಹ ನಡೆಸಿದರು.

ಜಂತರ್ ಮಂತರ್‌ನಲ್ಲಿ ಸೇರಿದ್ದ ಪಕ್ಷದ ಸ್ವಯಂ ಸೇವಕರು ಮತ್ತು ಬೆಂಬಲಿಗರು ದೇಶಭಕ್ತಿ ಗೀತೆಗಳನ್ನು ಹಾಡಿದರು. ಕೇಜ್ರಿವಾಲ್ ಅವರ ಬಂಧನವನ್ನು ತೋರಿಸುವ ಪೋಸ್ಟರ್‌ಗಳನ್ನು ಹಲವರು ಪ್ರದರ್ಶಿಸಿದರು.

ಇದೇ ರೀತಿಯ ಪ್ರತಿಭಟನೆಗಳು ದೇಶದ ವಿವಿಧ ರಾಜ್ಯಗಳಲ್ಲಿ ಹಾಗೂ ವಿದೇಶಗಳಲ್ಲಿನ ಹಲವು ನಗರಗಳಲ್ಲಿ ನಡೆದವು. ಬೋಸ್ಟನ್‌ನ ಹಾರ್ವರ್ಡ್ ಸ್ಕ್ವೇರ್, ಲಾಸ್ ಏಂಜಲೀಸ್‌ನ ಹಾಲಿವುಡ್ ಗುರುತಿನ ಬಳಿ, ವಾಷಿಂಗ್ಟನ್‌ನಲ್ಲಿನ ಭಾರತೀಯ ರಾಯಭಾರ ಕಚೇರಿಯ ಹೊರಗೆ, ನ್ಯೂಯಾರ್ಕ್ ಟೈಮ್ಸ್ ಸ್ಕ್ವೇರ್, ಟೊರೊಂಟೊ, ಲಂಡನ್, ಮೆಲ್ಬರ್ನ್ ಸೇರಿದಂತೆ ವಿವಿಧ ವಿದೇಶಿ ನಗರಗಳಲ್ಲಿ ಎಎಪಿ ಮುಖಂಡರು ಪ್ರತಿಭಟನೆ ನಡೆಸಿದರು.

ದೆಹಲಿ ವಿಧಾನಸಭೆಯ ಸ್ಪೀಕರ್ ರಾಮ್ ನಿವಾಸ್ ಗೋಯೆಲ್, ಉಪ ಸ್ಪೀಕರ್ ರಾಖಿ ಬಿಲಾ, ಸಚಿವರಾದ ಗೋಪಾಲ್ ರಾಯ್, ಸೌರಭ್ ಭಾರದ್ವಾಜ್, ಅತಿಶಿ, ಕೈಲಾಶ್ ಗಹ್ಲೋಟ್, ಇಮ್ರಾನ್ ಹುಸೇನ್ ಸೇರಿದಂತೆ ಎಎಪಿಯ ಹಿರಿಯ ನಾಯಕರು ಜಂತರ್ ಮಂತರ್‌ನಲ್ಲಿ ಬೆಳಿಗ್ಗೆ 11 ಗಂಟೆಯಿಂದ ಸಾಮೂಹಿಕ ಉಪವಾಸದಲ್ಲಿ ಭಾಗವಹಿಸಿದ್ದರು.

ಈ ವೇಳೆ ಮಾತನಾಡಿದ, ಎಎಪಿಯ ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್, ‘ಕೇಜ್ರಿವಾಲ್ ಅವರು ಹಿಂದೆ, ಈಗ ಮತ್ತು ಮುಂದೆ ಪ್ರಾಮಾಣಿಕರಾಗಿ ಉಳಿಯುತ್ತಾರೆ’ ಎಂದರು.

ಲೋಕಸಭೆ ಚುನಾವಣೆಯಲ್ಲಿ ‘ಇಂಡಿಯಾ’ ಮೈತ್ರಿಕೂಟದ ಅಭ್ಯರ್ಥಿಗಳ ಗೆಲುವಿಗೆ ಎಎಪಿ ಶ್ರಮಿಸಬೇಕು. ಈ ಮೂಲಕ ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ ಅವರಿಗೆ ನಿರ್ಗಮನದ ದಾರಿ ತೋರಬೇಕು ಎಂದರು.

ಸಚಿವೆ ಆತಿಶಿ ಮಾತನಾಡಿ, ಬಿಜೆಪಿ ಸರ್ವಾಧಿಕಾರ ಧೋರಣೆ ಅನುಸರಿಸುತ್ತಿದೆ. ಎಎಪಿ ಪಕ್ಷದವರ ಉಪವಾಸವು, ಕೇಸರಿ ಪಕ್ಷಕ್ಕೆ ನಿದ್ರೆಯಿಲ್ಲದ ರಾತ್ರಿಗಳನ್ನು ನೀಡಲಿದೆ. ಕೇಜ್ರಿವಾಲ್ ಬಂಧನದ ಬಗ್ಗೆ ಜನರಲ್ಲಿ ಇರುವ ಕೋಪವು ಬಿಜೆಪಿಯ ಶವಪೆಟ್ಟಿಗೆಗೆ ಅಂತಿಮ ಮೊಳೆಯಾಗಿ ಪರಿಣಮಿಸುತ್ತದೆ ಎಂದು ಹೇಳಿದರು.

ಪಂಜಾಬ್‌ನ ಮುಖ್ಯಮಂತ್ರಿ ಭಗವಂತ ಮಾನ್ ಅವರು ತಮ್ಮ ಸಂಪುಟದ ಸಚಿವರೊಂದಿಗೆ ಸ್ವಾತಂತ್ರ್ಯ ಹೋರಾಟಗಾರ ಭಗತ್ ಸಿಂಗ್ ಅವರ ಗ್ರಾಮವಾದ ಖಟ್ಕರ್ ಕಲನ್‌ನಲ್ಲಿ ಸಾಮೂಹಿಕ ಉಪವಾಸದಲ್ಲಿ ಪಾಲ್ಗೊಂಡರು.

ಬಿಜೆಪಿ ಅಭ್ಯರ್ಥಿ ಸಂಬಂಧಿಕನಿಂದ ₹4 ಕೋಟಿ ಜಪ್ತಿ

ಪ್ರಜಾವಾಣಿ ವಾರ್ತೆ

ಚೆನ್ನೈ : ತಮಿಳುನಾಡಿನ ಬಿಜೆಪಿ ಅಭ್ಯರ್ಥಿಯೊಬ್ಬರ ಸಂಬಂಧಿಕರು ಮತ್ತು ಆಪ್ತರು ಎನ್ನಲಾಗಿರುವ ಮೂವರನ್ನು ಬಂಧಿಸಿ, ₹ 4 ಕೋಟಿ ಮೊತ್ತವನ್ನು ಜಪ್ತಿ ಮಾಡಲಾಗಿದೆ.



ಚೆನ್ನೈನ ಎಗ್ಮೋರ್‌ನಿಂದ ತಿರುನೆಲ್ವೇಲಿಗೆ ತೆರಳುತ್ತಿದ್ದ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಮೂವರು ತಂಬರಂ ರೈಲ್ವೆ ನಿಲ್ದಾಣದಲ್ಲಿ ಅನುಮಾನಾಸ್ಪದವಾಗಿ ವರ್ತಿಸುತ್ತಿದ್ದರಿಂದ ಅಧಿಕಾರಿಗಳು ತಪಾಸಣೆ ನಡೆಸಿ ಬಂಧಿಸಿದ್ದಾರೆ. ಅವರ ಬಳಿ ಇದ್ದ ಹಣಕ್ಕೆ ಯಾವುದೇ ದಾಖಲೆಗಳು ಇರಲಿಲ್ಲ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಬಂಧಿತರಲ್ಲಿ ಒಬ್ಬರಾದ ಸತೀಶ್ ಎಂಬುವವರು ತಿರುನೆಲ್ವೇಲಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನೈನಾರ್ ನಾಗೇಂದ್ರನ್ ಸಂಬಂಧಿಕ ಮತ್ತು ಬಿಜೆಪಿ ಕಾರ್ಯಕರ್ತ. ಇನ್ನಿಬ್ಬರು ಆರೋಪಿಗಳಾದ ನವೀನ್ ಮತ್ತು ಪೆರುಮಾಳ್ ಸಹ ನಾಗೇಂದ್ರನ್ ಬೆಂಬಲಿಗರಾಗಿದ್ದಾರೆ. ಈ ಮೂವರು ಚೆನ್ನೈನಲ್ಲಿರುವ ನಾಗೇಂದ್ರನ್ ಒಡೆತನದ ಹೋಟೆಲ್ ಬ್ಲೂ ಡೈಮಂಡ್‌ನಲ್ಲಿ ತಂಗಿದ್ದರು.

‘ಈ ಬಗ್ಗೆ ಆದಾಯ ತೆರಿಗೆ ಇಲಾಖೆಗೆ ಎಲ್ಲ ಮಾಹಿತಿ ನೀಡಲಾಗಿದ್ದು, ಸಮಗ್ರ ತನಿಖೆ ಕೈಗೊಳ್ಳಲಿದೆ’ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿ ತಿಳಿಸಿದೆ.

ನಾಗೇಂದ್ರನ್ ವಿರುದ್ಧ ರಾಜ್ಯ ಮುಖ್ಯ ಚುನಾವಣಾಧಿಕಾರಿಗೆ ದೂರು ನೀಡಿರುವ ಆಡಳಿತಾರೂಢ ಡಿಎಂಕೆ, ‘ಮತದಾರರಿಗೆ ಹಣ ಹಂಚುವ ಯೋಜನೆ ರೂಪಿಸಿದ್ದ ನಾಗೇಂದ್ರನ್ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದೆ.

‘ನಾಗೇಂದ್ರನ್ ಅವರು ಮತದಾರರಿಗೆ ಹಂಚಲು ಕೋಟ್ಯಂತರ ರೂಪಾಯಿ ಹಣವನ್ನು ಗುಪ್ತ ಸ್ಥಳಗಳಲ್ಲಿ ಸಂಗ್ರಹಿಸಿಟ್ಟಿದ್ದಾರೆ’ ಎಂದು ಡಿಎಂಕೆ ಸಂಘಟನಾ ಕಾರ್ಯದರ್ಶಿ ಆರ್.ಎಸ್ ಭಾರತಿ ದೂರಿನಲ್ಲಿ ಆರೋಪಿಸಿದ್ದಾರೆ.

ಆರೋಪದ ಬಗ್ಗೆ ತಮಿಳು ಸುದ್ದಿ ವಾಹಿನಿಯೊಂದಕ್ಕೆ ಪ್ರತಿಕ್ರಿಯೆ ನೀಡಿದ ನಾಗೇಂದ್ರನ್ ಅವರು, ‘ಜಪ್ತಿಯಾಗಿರುವ ಹಣಕ್ಕೂ ನನಗೂ ಯಾವುದೇ ಸಂಬಂಧವಿಲ್ಲ’ ಎಂದು ತಿಳಿಸಿದ್ದಾರೆ.

ಮಣಿಪುರ: ಶೇ 50 ಸೂಕ್ಷ್ಮ ಮತಗಟ್ಟೆ

ಇಂಫಾಲ್ (ಪಿಟಿಐ): ಹಿಂಸಾಚಾರ ಪೀಡಿತ ಮಣಿಪುರದಲ್ಲಿ ಎರಡು ವಾರಗಳಲ್ಲಿ ಲೋಕಸಭೆ ಚುನಾವಣೆ ಎದುರಾಗಲಿದೆ. ಈ ಅವಧಿಯಲ್ಲಿ ಚುನಾವಣೆ ನಡೆಸಬೇಕಾದ ಸವಾಲಿನ ಕಾರ್ಯಕ್ಕೆ ಚುನಾವಣಾ ಆಯೋಗವೂ ಸಜ್ಜಾಗಿದೆ.

11 ತಿಂಗಳಿಂದ ಸಂಘರ್ಷ ಪೀಡಿತ ಪ್ರದೇಶವಾಗಿರುವ ಇಲ್ಲಿ 50 ಸಾವಿರಕ್ಕೂ ಹೆಚ್ಚು ಜನರು ವಿವಿಧೆಡೆ ಸ್ಥಳಾಂತರಗೊಂಡಿದ್ದಾರೆ. ಇಲ್ಲಿನ ಕೆಲ ಜನರಲ್ಲಿ ಚುನಾವಣೆ ವಿರೋಧಿ ಭಾವನೆಯೂ ಇದೆ. ಇದೆಲ್ಲದರ ಪರಿಣಾಮ ಮಣಿಪುರದಲ್ಲಿ ಚುನಾವಣಾ ಕಾವು ಏರಿಲ್ಲ. ಅಬ್ಬರದ ಪ್ರಚಾರವೂ ಇಲ್ಲವಾಗಿದೆ.

‘ಸ್ಥಳಾಂತರಗೊಂಡಿರುವ ಜನರ ಪೈಕಿ 24,500 ಮಂದಿ ಮತದಾನ ಮಾಡಲು ಅರ್ಹರಾಗಿದ್ದು, ಅವರಿಗೆ ತಮ್ಮ ಹಕ್ಕು ಚಲಾಯಿಸಲು ಅನುಕೂಲ ಆಗುವಂತೆ ಪರಿಹಾರ ಶಿಬಿರಗಳಲ್ಲಿ ವಿಶೇಷ ಮತದಾನ ವ್ಯವಸ್ಥೆಗಳನ್ನು ಮಾಡಲಾಗುತ್ತದೆ’ ಎಂದು ಮುಖ್ಯ ಚುನಾವಣಾಧಿಕಾರಿ ಪ್ರದೀಪ್ ಕುಮಾರ್ ಝಾ ಹೇಳಿದ್ದಾರೆ.

‘ರಾಜ್ಯದಲ್ಲಿ ಲೋಕಸಭಾ ಚುನಾವಣೆಗಾಗಿ ಒಟ್ಟು 2,955 ಮತಗಟ್ಟೆಗಳನ್ನು ಸ್ಥಾಪಿಸಲಾಗುವುದು. ಅವುಗಳಲ್ಲಿ ಸುಮಾರು ಶೇ 50ರಷ್ಟು ಮತಗಟ್ಟೆಗಳನ್ನು ಸೂಕ್ಷ್ಮ, ದುರ್ಬಲ ಅಥವಾ ನಿರ್ಣಾಯಕ ಎಂದು ಗುರುತಿಸಲಾಗಿದೆ. ಸ್ಥಳಾಂತರಗೊಂಡ ವ್ಯಕ್ತಿಗಳಿಗೆ ಮತದಾನ ಮಾಡಲು ಅನುಕೂಲವಾಗಲಿ ಎಂದು 94 ವಿಶೇಷ ಮತಗಟ್ಟೆಗಳನ್ನೂ ಸ್ಥಾಪಿಸಲಾಗುತ್ತದೆ’ ಎಂದು ಅವರು ವಿವರಿಸಿದ್ದಾರೆ.

ಮುಂಬೈ ಮೂಲದ ಪೀಪಲ್ಸ್ ಹೆಲ್ತ್ ಆರ್ಗನೈಸೇಷನ್- ಇಂಡಿಯಾ ಸಂಸ್ಥೆಯ ಭರವಸೆ

‘ಹಕ್ಕಿಜ್ವರ: ಆತಂಕಕ್ಕೀಡಾಗುವ ಅಗತ್ಯವಿಲ್ಲ’

ಪ್ರಜಾವಾಣಿ ವಾರ್ತೆ

ಮುಂಬೈ: ಹಲವೆಡೆ ಹಕ್ಕಿಜ್ವರ (ಎಚ್5ಎನ್1) ಹರಡುತ್ತಿದೆ. ಇದು ಕೋವಿಡ್– 19 ಸಾಂಕ್ರಾಮಿಕಕ್ಕಿಂತ ಗಂಭೀರ ಆರೋಗ್ಯ ಪರಿಣಾಮಗಳನ್ನು ಉಂಟುಮಾಡುತ್ತದೆ ಎಂದು ಹೇಳಲಾಗಿದೆ. ಈ ನಡುವೆಯೇ, ಮುಂಬೈ ಮೂಲದ ಪೀಪಲ್ಸ್ ಹೆಲ್ತ್ ಆರ್ಗನೈಸೇಷನ್– ಇಂಡಿಯಾ (ಪಿಎಚ್‌ಒ) ಸಂಸ್ಥೆಯು ಹಕ್ಕಿಜ್ವರದ ಬಗ್ಗೆ ಆತಂಕಕ್ಕೀಡಾಗುವ ಅಗತ್ಯವಿಲ್ಲ ಎಂದು ಪ್ರತಿಪಾದಿಸಿದೆ.

ಇದೇವೇಳೆ, ಜಾಗತಿಕ, ರಾಷ್ಟ್ರ, ರಾಜ್ಯ ಮತ್ತು ಸ್ಥಳೀಯ ಮಟ್ಟದಲ್ಲಿ ಈ ಸಾಂಕ್ರಾಮಿಕವನ್ನು ಎದುರಿಸಲು ತಯಾರಿ ಮಾಡಿಕೊಳ್ಳುವ ಅಗತ್ಯವನ್ನೂ ಸಂಸ್ಥೆಯು ಒತ್ತಿಹೇಳಿದೆ. ‘ಹಕ್ಕಿ ಜ್ವರದ ಕುರಿತು ಹರಿಬಿಡಲಾಗುತ್ತಿರುವ ಮಾಹಿತಿಗಳ ಸತ್ಯಾಸತ್ಯತೆ ಕುರಿತು ಸರ್ಕಾರ ಮತ್ತು ವೈದ್ಯಕೀಯ ಸಂಸ್ಥೆಗಳು ಕೂಡಲೇ ಪ್ರಕಟಣೆ ಹೊರಡಿಸಬೇಕು’



ಎಂದು ಪಿಎಚ್‌ಒ ಪ್ರಧಾನ ಕಾರ್ಯದರ್ಶಿ ಡಾ. ಈಶ್ವರ ಗಿಲಾಡ ಅವರು ಹೇಳಿದ್ದಾರೆ.

ಇನ್‌ಫ್ಲುಯೆನ್ಜಾ ಎ, ಹಕ್ಕಿಜ್ವರ ಮತ್ತು ಎಚ್5ಎನ್1 ವೈರಾಣು ಕುರಿತು ಉತ್ತಮ ತಿಳಿವಳಿಕೆ ನೀಡುವ ಅಗತ್ಯವಿದೆ. ಕಾಲಕಾಲಕ್ಕೆ ಜನರಿಗೆ ಫ್ಲು (ಜ್ವರ, ನೆಗಡಿ) ಬರುತ್ತದೆ. ಅದಕ್ಕೆ ಕಾರಣ ಇನ್‌ಫ್ಲುಯೆನ್ಜಾ ಎ ಮತ್ತು ಇನ್‌ಫ್ಲುಯೆನ್ಜಾ ಬಿ ವೈರಾಣುಗಳಾಗಿರುತ್ತವೆ. ಇನ್‌ಫ್ಲುಯೆನ್ಜಾ ಬಿ ಸೋಂಕು ತೀವ್ರಸ್ವರೂಪದ್ದಲ್ಲ. ಆದರೆ, ಇನ್‌ಫ್ಲುಯೆನ್ಜಾ ‘ಎ’ಯು ಎಚ್1ಎನ್1 ಮತ್ತು ಎಚ್3ಎನ್2 ಉಪಮಾದರಿಗಳನ್ನು ಒಳಗೊಂಡಿರುತ್ತದೆ. ಇದು ಹೆಚ್ಚು ರೋಗಕಾರಕವಾಗಿರುತ್ತದೆ. ಹಕ್ಕಿಜ್ವರ, ಹಂದಿ ಜ್ವರ, ಕುದುರೆ, ಶ್ವಾನ, ಬಾವುಲಿ ಜ್ವರಗಳೂ ‘ಎ’ ಮಾದರಿಯ ಉಪ ಮಾದರಿಗಳಾಗಿವೆ ಎಂದು ಈಶ್ವರ ಅವರು ಹೇಳಿದ್ದಾರೆ.

ಹಕ್ಕಿಜ್ವರ ಎಂದರೇನು?: ಎಚ್5ಎನ್1 ವೈರಾಣು ‘ಎ’ ಮಾದರಿಯ ಉಪಮಾದರಿಯಾಗಿದ್ದು, ಅದು ಹಕ್ಕಿಗಳನ್ನು ಬಾಧಿಸುತ್ತದೆ ಮತ್ತು ಏವಿಯನ್ ಇನ್‌ಫ್ಲುಯೆನ್ಜಾಕ್ಕೆ (ಹಕ್ಕಿಜ್ವರ) ಕಾರಣವಾಗುತ್ತದೆ. ಇನ್‌ಫ್ಲುಯೆನ್ಜಾ ವೈರಾಣುಗಳ ವಂಶವಾಹಿ ಸಂರಚನೆಯು ವಿವಿಧ ಬಗೆಯ ಹೆಮಗ್ಲುಟಿನಿನ್ (ಎಚ್) ಮತ್ತು ನ್ಯೂರಾಮಿನೈಡೇಸ್ ಎಂಬ ಪ್ರೋಟಿನ್‌ಗಳಿಂದ ಆಗಿರುತ್ತದೆ. ಎಚ್5ಎನ್1 ವೈರಾಣುವು ‘ಎಚ್’ ಪ್ರೋಟೀನ್‌ನ 5ನೇ ಮಾದರಿ ಮತ್ತು ‘ಎನ್’ ಪ್ರೋಟೀನ್‌ನ 1ನೇ ಮಾದರಿಯಿಂದ ಆಗಿರುತ್ತದೆ ಎಂದು ಅವರು ಹೇಳಿದ್ದಾರೆ.

ಈ ಸೋಂಕು ಮಾನವರಿಗೂ ತಗುಲುತ್ತಾದರೂ, ಮಾನವರಿಂದ ಮಾನವರಿಗೆ ಹರಡಿರುವುದಕ್ಕೆ ಆಧಾರವಿಲ್ಲ. ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಪ್ರಕಾರ 2003ರಿಂದ 2024ರ ವರೆಗೆ 888 ಹಕ್ಕಿಜ್ವರದ ಪ್ರಕರಣಗಳು ವರದಿಯಾಗಿವೆ. 463 ಜನರು ಸೋಂಕಿನಿಂದ ಮೃತಪಟ್ಟಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ವೈರಾಣು ಮತ್ತು ಇತರ ಸೂಕ್ಷ್ಮಾಣು ಜೀವಿಗಳಿಂದ ಹರಡುವ ಸೋಂಕಿನ ಜಾಡುಪತ್ತೆ, ವೈರಾಣು ಸಂರಚನೆ ವಿಶ್ಲೇಷಣೆ, ಮಾಹಿತಿ ವಿನಿಮಯ, ಲಸಿಕೆ ಅಭಿವೃದ್ಧಿ, ಚಿಕಿತ್ಸೆ ಮತ್ತು ಸೋಂಕು ತಡೆಗಟ್ಟುವಿಕೆ ಮಾರ್ಗಸೂಚಿಯನ್ನು ಅಭಿವೃದ್ಧಿಪಡಿಸುವುದು ಈ ರೀತಿಯ ಸೋಂಕುಗಳು ಹರಡಿದಾಗ ಮಾಡಬೇಕಿರುವ ಕೆಲಸ. ಇದನ್ನು ವಿಜ್ಞಾನಿಗಳು ಮತ್ತು ಸರ್ಕಾರಗಳು ಮಾಡಬೇಕಿದೆ ಎಂದಿದ್ದಾರೆ.

‘ಜನ ಸಾಮಾನ್ಯರು ಮಾಡಬಹುದಾದ ಕೆಲಸ ಎಂದರೆ, ಪರಿಸರ, ಪರಿಸರ ವ್ಯವಸ್ಥೆ, ಪ್ರಾಣಿಗಳು ಮತ್ತು ಅಪರೂಪದ ಸಸ್ಯ ತಳಿಗಳ ಆವಾಸಸ್ಥಾನದ ಮೇಲೆ ಅತಿಕ್ರಮಣ ಮಾಡದಿರುವುದು. ಮನುಷ್ಯರಿಗೆ ಬದುಕುವ ಹಕ್ಕು ಇರುವಂತೆ ಪರಿಸರದಲ್ಲಿ ಪ್ರಾಣಿ ಪಕ್ಷಿಗಳಿಗೂ ಬದುಕುವ ಹಕ್ಕಿದೆ ಎಂಬುದನ್ನು ನಾವು ಅರಿತುಕೊಳ್ಳಬೇಕು. ಇಲ್ಲದಿದ್ದರೆ ಪ್ರಾಣಿ, ಪಕ್ಷಿಗಳಿಗೆ ತಗಲುವ ಸೋಂಕುಗಳು ನಮಗೂ ತಗುಲಬಹುದು. ವಿಷಪೂರಿತ ಮರಗಿಡಗಳಿಂದ ನಮ್ಮ ಆರೋಗ್ಯಕ್ಕೆ ಹಾನಿಯಾಗಬದುದು ಮತ್ತು ಜಾಗತಿಕ ತಾಪಮಾನದ ತಂದೊಡ್ಡುವ ವಿಪತ್ತುಗಳನ್ನು ಎದುರಿಸಬೇಕಾಗುತ್ತದೆ’ ಎಂದು ಈಶ್ವರ ಎಚ್ಚರಿಸಿದ್ದಾರೆ.

‘ಕೋವಿಡ್ ಸಾಂಕ್ರಾಮಿಕದ ಬಳಿಕ ಕೆಲ ವಿಜ್ಞಾನಿಗಳಿಗೆ ಮುಂದೆ ಬರಲಿರುವ ಸಾಂಕ್ರಾಮಿಕದ ಕುರಿತು ಚರ್ಚಿಸುವುದು ಮತ್ತು ಅದರ ಪರಿಣಾಮವು ಕೋವಿಡ್‌ಗಿಂತ ಹಲವು ಪಟ್ಟು ಹೆಚ್ಚು ಇರಲಿದೆ ಎಂದು ಹೇಳುವುದು ಖಯಾಲಿಯಾಗಿದೆ. ಡಬ್ಲ್ಯುಎಚ್‌ಒ ಕೂಡಾ ಇದಕ್ಕೆ ಧ್ವನಿಗೂಡಿಸುತ್ತಿರುವುದು ಖೇದಕರ ಸಂಗತಿ’ ಎಂದು ಆಕ್ಷೇಪಿಸಿದ್ದಾರೆ.

ಶಿಕ್ಷಣ

ನಿಮ್ಮನ್ನು ದುರ್ಬಲ ಎಂದು ಭಾವಿಸುವುದೇ ದೊಡ್ಡ ಪಾಪ
-ಸ್ವಾಮಿ ವಿವೇಕಾನಂದ

ಬರಹಗಾರರಿಗೆ ಸೋನಿ ಮತ್ತು ಗೀತಾ ಮೆಹ್ತಾ ಸ್ಕಾಲರ್‌ಶಿಪ್ 2024

ವಿವರ: ಭಾರತ, ಮಧ್ಯಪ್ರಾಚ್ಯ, ಉತ್ತರ ಆಫ್ರಿಕಾದ ಬರಹಗಾರರಿಗೆ ಸಾಹಿತ್ಯ, ನಾಟಕ ಸೇರಿ ವಿವಿಧ ಸೃಜನಾತ್ಮಕ ಪ್ರಕಾರಗಳ ಬರವಣಿಗೆಯ ಬಗ್ಗೆ ಅಧ್ಯಯನ ನಡೆಸಲು ಈಸ್ಟ್ ಆಂಗ್ಲಿಯಾ ವಿಶ್ವವಿದ್ಯಾಲಯ ನೀಡುವ ಅವಕಾಶವಾಗಿದೆ.
ಅರ್ಹತೆ: ಅತ್ಯುತ್ತಮ ಬರವಣಿಗೆ ಸಾಮರ್ಥ್ಯವನ್ನು ಪ್ರದರ್ಶಿಸಲು ಬರಹಗಾರರಿಗೆ ಮುಕ್ತವಾಗಿದೆ.
ಆರ್ಥಿಕ ಸಹಾಯ: £28,500 ಬೋಧನಾ ಶುಲ್ಕ ಮತ್ತು ನಿರ್ವಹಣೆ ಶುಲ್ಕ
ಅರ್ಜಿ ಸಲ್ಲಿಸಲು ಕೊನೆ ದಿನ: 01-05-2024
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
ಹೆಚ್ಚಿನ ಮಾಹಿತಿಗೆ: Short Url: www.b4s.in/praja/SOIS6

ನೀಟ್- ಪಿಯುಸಿ ಸಿಇಟಿ ಪರೀಕ್ಷೆ ದಿಕ್ಸೂಚಿ

NEET BIOLOGY

14) The characteristic of pronounced cephalisation is seen in
a) Arthropoda b) Mollusca
c) Annelida d) Echinoderms
Ans: (a)

15) Family Fabaceae differs from Solanaceae and Liliaceae. With respect to the stamens, pick out the characteristics specific to family Fabaceae but not found in Solanaceae or Liliaceae……………..
a) Epiphyllous and Dithecous anthers
b) Diadelphous and Dithecous anthers
c) Polyadelphous and epipetalous stamens
d) Monoadelphous and Monothecous anthers
Ans:- (b) In fabaceae family the filaments of nine stamen are united into one bundle and tenth posterior stamen stand apart (diadelphous condition). Anther in fabaceae is of two lobes or two theca thus called dithecous anther. These two characteristics are present in the members of fabaceae family but not found in members of solanacea or liliaceae family. Androecium: ten, diadelphous, anther dithecous

16) Axile placentation is observed in…….
a) China rose, Petunia and Lemon
b) Mustard, Cucumber and Primorose
c) China rose, Beans and Lupin
d) Tomato, Dianthus and Pea
Ans:- (a) In axile placentation ovules are attached to multilocular ovary as in china rose, petunia and lemon.

17) A few statements describing certain features of reproduction are given below:
i) Gametic fusion takes place
ii) Transfer of genetic material takes place
iii) Reduction division takes place
iv) Progeny have some resemblance with parents Select the options that are true for both asexual and sexual reproduction from the options given below:
a) i and ii b) ii and iii
c) ii and iv d) i and iii
Ans:- c

18) The term 'clone' cannot be applied to offspring formed by sexual reproduction because:
a) Offspring do not possess exact copies of [parental DNA
b) DNA of only one parent is copied and passed on to the offspring
c) Offspring are formed at different times
d) DNA of parent and offspring are completely different.
Ans:- a

19) Amoeba and yeast reproduce asexually by fission and budding respectively, because they are:
a) Microscopic organisms
b) Heterotrophic organisms
c) Unicellular organisms
d) Uninucleate organisms
Ans:- c

20) A few statements with regard to sexual reproduction are given below;
i. Sexual reproduction does not always require two individuals
ii. Sexual reproduction generally involves gametic fusion
iii. Meiosis never occurs during sexual reproduction
iv. External fertilization is a rule during sexual reproduction
Choose the correct statements from the options below:
a) i and iv b) i and ii
c) ii and iii d) i and iv
Ans:- b

21) A multicellular, filamentous alga exhibits a type of sexual life cycle in which the meiotic division occurs after the formation of zygote. The adult filament of this alga has
a) haploid vegetative cells and diploid gametangia
b) diploid vegetative cells and diploid gametangia
c) diploid vegetative cells and haploid gametangia
d) haploid vegetative cells and haploid gametangia
Ans:- d

22) The male gametes of rice plant have 12 chromosomes in their nucleus. The chromosome number in the female gamete, zygote and the cells of the seedling will be, respectively,
a) 12, 24, 12 b) 24, 12, 12
c) 12, 24, 24 d) 24, 12, 24
Ans:- c

23) Given below are a few statements related to external fertilization. Choose the correct statements.
i. The male and female gametes are formed and released simultaneously
ii. Only a few gametes are released into the medium
iii. Water is the medium in a majority of organisms exhibiting external fertilization
iv. Offspring formed as result of external fertilization have better chance of survival than those formed inside an organism
a) iii and iv b) i and iii
c) ii and iv d) i and iv
Ans:- b

24) The statements given below describe certain features that are observed in the pistil of flowers.
i. Pistil may have many carpels
ii. Each carpel may have more than one ovule
iii. Each carpel has only one ovule
iv. Pistil have only one carpel
Choose the statements that are true from the options below:
a) i and ii b) i and iii
c) ii and iv d) iii and iv
Ans:- a


ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಐಸಿಆರ್‌ಒ ಅಮೃತ್ ಇಂಟರ್ನ್‌ಶಿಪ್

ವಿವರ: 12ನೇ ತರಗತಿ ಪಾಸಾಗಿರುವವರು, ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳು, ಪದವೀಧರರು ಮತ್ತು ಡಿಪ್ಲೊಮಾ ಪದವೀಧರರಿಗಾಗಿ ನೀಡುವ ಇಂಟರ್ನ್‌ಶಿಪ್ ಇದಾಗಿದೆ. ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದಡಿ ಇಂಡಿಯನ್ ಪೊಟ್ಯಾಶ್ ಲಿಮಿಟೆಡ್ ಮತ್ತು ನ್ಯಾಷನಲ್ ಪ್ರೊಡಕ್ಟಿವಿಟಿ ಕೌನ್ಸಿಲ್‌ನ ಜಂಟಿ ಉಪಕ್ರಮವಾಗಿದೆ.
ಅರ್ಹತೆ: 18 ರಿಂದ 45 ವರ್ಷ ವಯಸ್ಸಿನೊಳಗಿನ ಭಾರತೀಯ ಪ್ರಜೆಗಳಿಗೆ ಮುಕ್ತವಾಗಿದೆ. ಅರ್ಜಿದಾರರು 12ನೇ ತರಗತಿ, ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳು, ಪದವೀಧರರು ಅಥವಾ ಡಿಪ್ಲೊಮಾ ಪದವೀಧರರಾಗಿರಬೇಕು.
ಆರ್ಥಿಕ ಸಹಾಯ: ₹6,000 ಮಾಸಿಕ ಸ್ಟೈಪೆಂಡ್ ಮತ್ತು ಇಂಟರ್ನ್‌ಶಿಪ್ ಪೂರ್ಣಗೊಳಿಸಿದ್ದರ ಪ್ರಮಾಣಪತ್ರ.
ಅರ್ಜಿ ಸಲ್ಲಿಸಲು ಕೊನೆ ದಿನ: 01-10-2024
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್ ಮೂಲಕ ಅರ್ಜಿ ಹಾಕಿ.
ಹೆಚ್ಚಿನ ಮಾಹಿತಿಗೆ: Short Url:www.b4s.in/praja/ICRA1

ರೆಪೊ ದರದಲ್ಲಿ ಯಥಾಸ್ಥಿತಿ ಸೂಕ್ತ ತೀರ್ಮಾನ ತಳೆದ ಆರ್‌ಬಿಐ

ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿಯು (ಎಂಪಿಸಿ) ರೆಪೊ ದರದಲ್ಲಿ ಯಾವುದೇ ಬದಲಾವಣೆ ಮಾಡದೇ ಇರುವ ತೀರ್ಮಾನವನ್ನು ಏಪ್ರಿಲ್ 5ರಂದು ಕೈಗೊಂಡಿದೆ. ಈ ತೀರ್ಮಾನ ಕೈಗೊಂಡಿದ್ದಕ್ಕೆ ಕಾರಣ ವಿವರಿಸಿರುವ ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು, ಭಾರತದ ಆರ್ಥಿಕ ಬೆಳವಣಿಗೆಯ ಸಾಮರ್ಥ್ಯವು ಹಣದುಬ್ಬರದ ನಿಯಂತ್ರಣದ ಮೇಲೆ ಹೆಚ್ಚಿನ ಗಮನ ನೀಡಲು ಹಾಗೂ ಮಧ್ಯಮಾವಧಿಯಲ್ಲಿ ಚಿಲ್ಲರೆ ಹಣದುಬ್ಬರದ ದರವನ್ನು ಶೇಕಡ 4ಕ್ಕೆ ಮಿತಿಗೊಳಿಸುವುದಕ್ಕೆ ಆದ್ಯತೆ ನೀಡಲು ಅವಕಾಶ ಮಾಡಿಕೊಟ್ಟಿದೆ ಎಂದು ಹೇಳಿದ್ದಾರೆ. ಆರ್ಥಿಕ ಬೆಳವಣಿಗೆಗೆ ಅತ್ಯಂತ ಹೆಚ್ಚಿನ ಆದ್ಯತೆ ನೀಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಆರ್‌ಬಿಐಗೆ ಕರೆ ನೀಡಿದ ಕೆಲವೇ ದಿನಗಳಲ್ಲಿ ದಾಸ್ ಅವರು ಈ ಮಾತು ಆಡಿದ್ದಾರೆ. ಆರ್ಥಿಕ ಬೆಳವಣಿಗೆಗೆ ಹೆಚ್ಚಿನ ಒತ್ತು ನೀಡಬೇಕಾಗಿರುವ ಸಂದರ್ಭಗಳಲ್ಲಿ ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿ ದರವನ್ನು ಕಡಿಮೆ ಮಾಡುತ್ತವೆ. ಅವು ಚಿಲ್ಲರೆ ಹಣದುಬ್ಬರ ದರವನ್ನು ನಿಯಂತ್ರಣಕ್ಕೆ ತರುವ ಗುರಿ ಇಟ್ಟುಕೊಂಡಾಗ ರೆಪೊ ದರವನ್ನು ಹೆಚ್ಚು ಮಾಡುವ ಕೆಲಸಕ್ಕೆ ಮುಂದಾಗುತ್ತವೆ. ಆದರೆ ಈಗ, ತಾನು ರೆಪೊ ದರವನ್ನು ಕಡಿಮೆ ಮಾಡದೆ ಇದ್ದರೂ ಆರ್ಥಿಕ ಬೆಳವಣಿಗೆ ದರವು ಚೆನ್ನಾಗಿಯೇ ಇರಲಿದೆ ಎಂಬ ಮಾತನ್ನು ಆರ್‌ಬಿಐ ಹೇಳುತ್ತಿದೆ. 2025ನೇ ಹಣಕಾಸು ವರ್ಷಕ್ಕೆ ದೇಶದ ಜಿಡಿಪಿ ಬೆಳವಣಿಗೆ ದರ ಶೇ 7ರಷ್ಟು ಇರಲಿದೆ ಎಂಬ ಅಂದಾಜನ್ನು ಆರ್‌ಬಿಐ ಹೊಂದಿರುವಂತಿದೆ.



ಬಡ್ಡಿ ದರ ಇಳಿಕೆಗೆ ಕಾಲ ಇನ್ನೂ ಕೂಡಿಬಂದಿಲ್ಲ ಎಂಬುದನ್ನು ಆರ್‌ಬಿಐ ಬಳಿ ಇರುವ ದತ್ತಾಂಶ ಹೇಳುತ್ತಿದೆ

ರೆಪೊ ದರವನ್ನು ಸತತ ಏಳನೆಯ ಬಾರಿಯೂ ಯಥಾಸ್ಥಿತಿಯಲ್ಲಿ ಉಳಿಸಿಕೊಳ್ಳುವ ತೀರ್ಮಾನವನ್ನು ಹಣಕಾಸು ನೀತಿ ಸಮಿತಿಯು ಸರ್ವಾನುಮತದ ತೀರ್ಮಾನವಾಗಿ ಕೈಗೊಂಡಿದೆ. ಈಗ ರೆಪೊ ದರವು ಶೇ 6.5ರಷ್ಟು ಇದೆ. ರೆಪೊ ದರವು ಈ ಮಟ್ಟವನ್ನು ತಲುಪಿದ್ದು 2023ರ ಫೆಬ್ರುವರಿಯಲ್ಲಿ. ಅಲ್ಲಿಂದ ಇಲ್ಲಿಯವರೆಗೆ ಆರ್‌ಬಿಐ ಬಿಗಿ ನಿಲುವನ್ನು ಮುಂದುವರಿಸಿಕೊಂಡು ಬಂದಿದೆ. ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ ಚಿಲ್ಲರೆ ಹಣದುಬ್ಬರ ದರವು ಈ ವರ್ಷದ ಫೆಬ್ರುವರಿಯಲ್ಲಿ ಶೇ 5.09ರಷ್ಟು ದಾಖಲಾಗಿದೆ. ಚಿಲ್ಲರೆ ಹಣದುಬ್ಬರ ದರವು ಸತತ 53 ತಿಂಗಳುಗಳಿಂದಲೂ ಆರ್‌ಬಿಐ ನಿಗದಿ ಮಾಡಿಕೊಂಡಿರುವ ಶೇ 4ರ ಮಿತಿಗಿಂತ ಹೆಚ್ಚಿನ ಮಟ್ಟದಲ್ಲಿ ಉಳಿದಿದೆ. ಆದರೆ ಈಚಿನ ತಿಂಗಳುಗಳಲ್ಲಿ ಚಿಲ್ಲರೆ ಹಣದುಬ್ಬರದ ಪ್ರಮಾಣವು ಗರಿಷ್ಠ ಮಿತಿಯಾದ ಶೇ 6ಕ್ಕಿಂತ ಹೆಚ್ಚಾಗಿಲ್ಲದ ಕಾರಣಕ್ಕೆ, ರೆಪೊ ದರವನ್ನು ಇನ್ನಷ್ಟು ಹೆಚ್ಚು ಮಾಡುವ ಅಗತ್ಯವೂ ಇಲ್ಲ ಎಂಬುದನ್ನು ಎಂಪಿಸಿ ಕಂಡುಕೊಂಡಿದೆ. ಮುಂದಿನ ದಿನಗಳಲ್ಲಿ, ಅಂದರೆ ಪ್ರಸಕ್ತ ಹಣಕಾಸು ವರ್ಷದಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 4.5ರಷ್ಟು ಇರಲಿದೆ ಎಂದು ಆರ್‌ಬಿಐ ಅಂದಾಜಿಸಿದೆ. ಏಪ್ರಿಲ್–ಜೂನ್ ತ್ರೈಮಾಸಿಕದ ಅವಧಿಯಲ್ಲಿ ಹಣದುಬ್ಬರ ಪ್ರಮಾಣವು ಶೇ 4.9ರಷ್ಟು, ಜುಲೈ–ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 3.8ರಷ್ಟು, ಅಕ್ಟೋಬರ್–ಡಿಸೆಂಬರ್ ಅವಧಿಯಲ್ಲಿ ಶೇ 4.6ರಷ್ಟು ಹಾಗೂ ಜನವರಿ–ಮಾರ್ಚ್ ತ್ರೈಮಾಸಿಕದ ಅವಧಿಯಲ್ಲಿ ಶೇ 4.5ರಷ್ಟು ದಾಖಲಾಗುತ್ತದೆ ಎಂದು ಅಂದಾಜು ಮಾಡಲಾಗಿದೆ. ಈ ಬಾರಿಯ ಮುಂಗಾರು ಮಳೆಯು ವಾಡಿಕೆಯಂತೆ ಇರುತ್ತದೆ ಎಂಬ ನಿರೀಕ್ಷೆಯಲ್ಲಿ ಈ ಅಂದಾಜುಗಳನ್ನು ಮಾಡಲಾಗಿದೆ. ಆಹಾರ ವಸ್ತುಗಳ ಬೆಲೆಯಲ್ಲಿನ ಅನಿಶ್ಚಿತತೆಯು ಹಣದುಬ್ಬರ ಪ್ರಮಾಣದ ಮೇಲೆ ಪರಿಣಾಮ ಉಂಟುಮಾಡುತ್ತದೆ ಎಂಬುದನ್ನು ಕೂಡ ದಾಸ್ ಸ್ಪಷ್ಟಪಡಿಸಿದ್ದಾರೆ. ಈ ಬಾರಿ ಮುಂಗಾರು ಮಳೆಯು ವಾಡಿಕೆಯಂತೆ ಆಗಲಿದೆ ಎಂಬ ನಿರೀಕ್ಷೆ ವ್ಯಾಪಕವಾಗಿರುವುದು ಹೌದಾದರೂ, ಮಳೆಯು ಎಲ್ಲ ಪ್ರದೇಶಗಳಲ್ಲಿಯೂ ಎಷ್ಟರಮಟ್ಟಿಗೆ ವಾಡಿಕೆಯಂತೆ ಆಗಲಿದೆ ಎಂಬುದನ್ನು ಕಾದು ನೋಡಬೇಕು. ಅದರಿಂದ ಮುಂಗಾರು ಹಂಗಾಮಿನ ಬಿತ್ತನೆಯ ಮೇಲೆ ಯಾವ ಬಗೆಯ ಪರಿಣಾಮ ಉಂಟಾಗುತ್ತದೆ ಎಂಬುದು ಕೂಡ ಇನ್ನಷ್ಟೇ ಗೊತ್ತಾಗಬೇಕು. ಆಹಾರೇತರ ವಸ್ತುಗಳ ಬೆಲೆ ಏರಿಕೆಯ ಪ್ರಮಾಣವು ನಿಯಂತ್ರಣದಲ್ಲಿ ಇದೆಯಾದರೂ, ಅಕ್ಟೋಬರ್–ಡಿಸೆಂಬರ್ ತ್ರೈಮಾಸಿಕದ ಅವಧಿಯಲ್ಲಿ ಆಹಾರ ವಸ್ತುಗಳ ಬೆಲೆಯಲ್ಲಿ ಹೆಚ್ಚಳ ಆಗಬಹುದು ಎಂದು ಕೆಲವು ಪರಿಣತರು ಅಂದಾಜಿಸಿದ್ದಾರೆ. ಅದಕ್ಕಿಂತ ಹೆಚ್ಚಾಗಿ ಆಹಾರ ವಸ್ತುಗಳ ಬೆಲೆಯಲ್ಲಿ ಸ್ಥಿರತೆ ಕಾಣುತ್ತಿಲ್ಲ. ಇದು ಹಣದುಬ್ಬರ ನಿಯಂತ್ರಣದಲ್ಲಿ ದೊಡ್ಡ ಸವಾಲಾಗಿ ನಿಂತಿದೆ.

ಈ ನಡುವೆ, ಜಾಗತಿಕ ಬಿಕ್ಕಟ್ಟುಗಳ ಕಾರಣದಿಂದಾಗಿ ಕಚ್ಚಾ ತೈಲದ ಬೆಲೆಯು 2023ರ ಅಕ್ಟೋಬರ್ ನಂತರದಲ್ಲಿ ಹೆಚ್ಚಿನ ಮಟ್ಟದಲ್ಲಿ ಇದೆ. ಬ್ರೆಂಟ್ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರಲ್‌ಗೆ 90 ಅಮೆರಿಕನ್ ಡಾಲರ್‌ಗಿಂತ ಹೆಚ್ಚಾಗಿದೆ. ಇದು ಇಂಧನ ಬೆಲೆಯ ಏರಿಕೆಯ ಮೇಲೆ ಯಾವ ರೀತಿಯಲ್ಲಿ ಪರಿಣಾಮ ಉಂಟುಮಾಡಲಿದೆ ಎಂಬುದನ್ನು ಆರ್‌ಬಿಐ ಸೂಕ್ಷ್ಮವಾಗಿ ಅವಲೋಕಿಸಲಿದೆ. ಅಮೆರಿಕದ ಕೇಂದ್ರೀಯ ಬ್ಯಾಂಕ್ ಜೂನ್‌ಗೂ ಮೊದಲು ಬಡ್ಡಿ ದರವನ್ನು ಕಡಿಮೆ ಮಾಡುವ ಸಾಧ್ಯತೆ ಇಲ್ಲ. ಹೀಗಾಗಿ, ಆರ್‌ಬಿಐ ಕೂಡ ಅದಕ್ಕೂ ಮೊದಲು ರೆಪೊ ದರ ತಗ್ಗಿಸುವ ಕಾರ್ಯಕ್ಕೆ ಕೈಹಾಕುವ ಸಾಧ್ಯತೆ ಬಹಳ ಕಡಿಮೆ. ಪ್ರಸಕ್ತ ಕ್ಯಾಲೆಂಡರ್ ವರ್ಷದ ಅಂತ್ಯದ ಹೊತ್ತಿಗೆ ಭಾರತದಲ್ಲಿ ರೆಪೊ ದರ ಇಳಿಕೆ ಆಗಬಹುದು. ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಆರ್ಥಿಕ ಬೆಳವಣಿಗೆಗೆ ಹೆಚ್ಚಿನ ಆದ್ಯತೆ ಕೊಡಬೇಕು ಎಂದು ಸರ್ಕಾರ ಬಯಸುತ್ತಿದ್ದರೂ, ರೆಪೊ ದರವನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಳ್ಳುವ ಮೂಲಕ ಆರ್‌ಬಿಐ ಒಳ್ಳೆಯ ಕೆಲಸವನ್ನೇ ಮಾಡಿದೆ. ತನ್ನ ಬಳಿ ಇರುವ ದತ್ತಾಂಶ ಆಧರಿಸಿ ಆರ್‌ಬಿಐ ಈ ತೀರ್ಮಾನ ಕೈಗೊಂಡಿದೆ. ಬಡ್ಡಿ ದರ ಇಳಿಕೆಗೆ ಕಾಲ ಇನ್ನೂ ಕೂಡಿಬಂದಿಲ್ಲ ಎಂಬುದನ್ನು ಆರ್‌ಬಿಐ ಬಳಿ ಇರುವ ದತ್ತಾಂಶ ಹೇಳುತ್ತಿದೆ.

ದಿನದ ಟ್ವೀಟ್

ಸ್ವಚ್ಛ ಗಾಳಿಗೆ ಒತ್ತಾಯಿಸೋಣ

ವಿಶ್ವದ ಅತ್ಯಂತ ಮಾಲಿನ್ಯಯುಕ್ತ ಪ್ರದೇಶಗಳಲ್ಲಿ ಒಂದಾಗಿರುವ ದೆಹಲಿ–ಎನ್‌ಸಿಆರ್‌ನ (ರಾಷ್ಟ್ರೀಯ ರಾಜಧಾನಿ ಪ್ರದೇಶ) ಶೇ 33ರಷ್ಟು ನಿವಾಸಿಗಳು ವೈದ್ಯರಿಗೆ ಮತ್ತು ಚಿಕಿತ್ಸೆಗಾಗಿ ವೆಚ್ಚ ಮಾಡುತ್ತಾರೆ ಎಂದು ಚಿಂತನ್ ಇಂಡಿಯಾ ಸಂಸ್ಥೆಯ ಹೊಸ ಅಧ್ಯಯನವೊಂದು ಬಹಿರಂಗಪಡಿಸಿದೆ; ಚುನಾವಣೆಯ ಸಂದರ್ಭದಲ್ಲಿ ಸ್ವಚ್ಛ ಹವೆಗೆ ಬೇಡಿಕೆ ಇಡಲು ಇಷ್ಟು ಕಾರಣ ಸಾಕು. #SwachhHawaChunav #CleanAirElections? #WorldHealthDay2024

ವಾರಿಯರ್ ಮಾಮ್ಸ್, ನಮ್ಮ ಮಕ್ಕಳಿಗಾಗಿ ಶುದ್ಧ ಗಾಳಿಗೆ ಆಗ್ರಹಿಸುತ್ತಿರುವ ತಾಯಂದಿರ ನೇತೃತ್ವದ ಆಂದೋಲನ

ಕಿಡಿನುಡಿ



ನಮ್ಮ ಹೆಣ್ಣುಮಕ್ಕಳನ್ನು ಸಬಲರನ್ನಾಗಿಸುವುದು ಮುಖ್ಯ. ಆದರೆ, ನಮ್ಮ ಗಂಡುಮಕ್ಕಳನ್ನು ಭಾವನಾತ್ಮಕ, ಕರುಣೆ ಮತ್ತು ಸಹಾನುಭೂತಿಯುಳ್ಳ ವ್ಯಕ್ತಿಗಳನ್ನಾಗಿಸುವುದು ಅತ್ಯಂತ ಮುಖ್ಯವಾದುದು. ಈ ಗುಣಗಳನ್ನು ನಮ್ಮ ಶೈಕ್ಷಣಿಕ ವ್ಯವಸ್ಥೆ ಮತ್ತು ನಮ್ಮದೇ ನಡವಳಿಕೆಗಳ ಮೂಲಕ ಪುನಶ್ಚೇತನಗೊಳಿಸಬೇಕಾಗಿದೆ. ಬಾಲ್ಯವು ನಮ್ಮ ಬದುಕಿನ ಅಡಿಪಾಯ. ಆದರೆ, ಅದು ಅತ್ಯಂತ ನಿರ್ಲಕ್ಷ್ಯಕ್ಕೆ ಒಳಗಾಗಿರುವುದು ದುರದೃಷ್ಟಕರ.

ರಾಜಶ್ರೀ ದೇಶಪಾಂಡೆ, ಚಿತ್ರನಟಿ

25 ವರ್ಷಗಳ ಹಿಂದೆ
ಗುರುವಾರ, 8-4-1999

ಹುಬ್ಬಳ್ಳಿ: ಬಸ್‌ಗೆ ಬೆಂಕಿ ಕಲ್ಲೆಸೆತ, ಹಿಂಸಾಚಾರ

ಹುಬ್ಬಳ್ಳಿ, ಏ. 7– ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ ಹಾಗೂ ಸರ್ಕಾರಿ ವಾಹನಗಳಿಗೆ ಬೆಂಕಿ ಹಚ್ಚುವ ಯತ್ನ, ಸರ್ಕಾರಿ ಕಚೇರಿಗಳ ಮೇಲೆ ಕಲ್ಲು ತೂರಾಟ, ವಾಹನಗಳ ಚಕ್ರದ ಗಾಳಿ ಬಿಡುವುದು, ಮಹಿಳೆಯರಿಂದ ರಸ್ತೆತಡೆ ಮೊದಲಾದ ಚಟುವಟಿಕೆಗಳಿಂದಾಗಿ, ಹೈಕೋರ್ಟ್ ಪೀಠಕ್ಕಾಗಿ ಆಗ್ರಹಿಸಿ ಕಳೆದ ಎಂಟು ದಿನಗಳಿಂದ ಇಲ್ಲಿ ನಡೆಯುತ್ತಿರುವ ಚಳವಳಿ ಇಂದು ಉಗ್ರ ಸ್ವರೂಪ ತಾಳಿತು.

ದೇಶಪಾಂಡೆ ನಗರದಲ್ಲಿ ಪ್ರಯಾಣಿಕರ ಬಸ್ ಒಂದಕ್ಕೆ ಪ್ರತಿಭಟನಕಾರರು ಬೆಂಕಿ ಹಚ್ಚಿದ್ದು, ಭಾಗಶಃ ಸುಟ್ಟುಹೋದ ವರದಿಯಾಗಿದೆ. ಅದೇರೀತಿ ನ್ಯಾಯಾಲಯದ ಸಂಕೀರ್ಣಕ್ಕೆ ಆಗಮಿಸಿದ್ದ ತಹಶೀಲ್ದಾರರ ಜೀಪಿಗೆ ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿಯೇ ಬೆಂಕಿ ಹಚ್ಚಲಾಯಿತು.

50 ವರ್ಷಗಳ ಹಿಂದೆ
ಸೋಮವಾರ, 8-4-1974

ಬೇಂದ್ರೆಗೆ ಜ್ಞಾನಪೀಠ ಪ್ರಶಸ್ತಿ

ನವದೆಹಲಿ, ಏ. 7– ಕನ್ನಡದ ಹಿರಿಯ ಕವಿ ಡಾ. ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಮತ್ತು ಒರಿಯಾ ಕಾದಂಬರಿಕಾರ ಶ್ರೀ ಗೋಪಿನಾಥ ಮಹಂತಿ ಅವರಿಗೆ 1973ರ ಸಾಲಿನ ಜ್ಞಾನಪೀಠ ಪ್ರಶಸ್ತಿಯನ್ನು ನೀಡಲಾಗಿದೆ.

78 ವರ್ಷ ವಯಸ್ಸಿನ ಡಾ. ಬೇಂದ್ರೆ ಅವರ ‘ನಾಕು ತಂತಿ’ (44 ಕವನಗಳ ಸಂಕಲನ) ಮತ್ತು 60 ವರ್ಷ ವಯಸ್ಸಿನ ಮಹಂತಿ ಅವರ ‘ಮಾಟಿ ಮಟಲ್’ ಕೃತಿಗಳಿಗೆ ನೀಡಲಾಗಿರುವ ಈ ಪ್ರಶಸ್ತಿಯನ್ನು ಇಬ್ಬರಿಗೂ ಹಂಚಲಾಗಿದೆ.

ಹೀಗೆ ಈ ಪ್ರಶಸ್ತಿ ಹಂಚಿಕೆ ಆಗುತ್ತಿರುವುದು ಇದು ಎರಡನೇ ಬಾರಿ.

ಪುಣೆಯಲ್ಲಿ ಹಲ್ಲೆ, ಇರಿತ, ಗೋಲಿಬಾರ್: ಇಬ್ಬರಿಗೆ ಗಾಯ

ಪುಣೆ, ಏ. 7– ಪುಣೆ ನಗರದ ಭವಾನಿಪೇಟೆ ಪ್ರದೇಶದಲ್ಲಿ ಇಂದು ರಾತ್ರಿ ಉದ್ರಿಕ್ತ ಜನರ ಗುಂಪು ಚದುರಿಸಲು ಪೊಲೀಸರು ಒಂದು ಸುತ್ತು ಗೋಲಿಬಾರು ನಡೆಸಿದರು.

ಹೋಟೆಲ್ ಒಂದರ ಮೇಲೆ ಹಲ್ಲೆ ಮಾಡಿದ ಉದ್ರಿಕ್ತ ಜನರು ಆಸ್ತಿಪಾಸ್ತಿ ನಷ್ಟವನ್ನುಂಟು ಮಾಡಿದರೆಂದು ಪೊಲೀಸರು ತಿಳಿಸಿದರು.

ಗೋಲಿಬಾರಿನಲ್ಲಿ ಗಾಯಗೊಂಡ ವ್ಯಕ್ತಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ವ್ಯಕ್ತಿಯ ಸ್ಥಿತಿ ಚಿಂತಾಜನಕವಾಗಿದೆ.

ಕರ್ನಾಟಕದ ಕ್ರಿಕೆಟ್‌ಪ್ರೇಮಿಗಳ ಅಭಿಮಾನಕ್ಕೆ ಸಾಟಿ ಉಂಟೇ?

ಆರ್‌ಸಿಬಿ ಮತ್ತು ಕನ್ನಡದ ಸ್ಥಾನಮಾನ



ವಿಶ್ಲೇಷಣೆ

ಗಿರೀಶ ದೊಡ್ಡಮನಿ

‘ಇದು, ಆರ್‌ಸಿಬಿಯ ಹೊಸ ಅಧ್ಯಾಯ’.

ಈ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿ ಆರಂಭಕ್ಕೂ ಮುನ್ನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ‘ಅನ್‌ಬಾಕ್ಸ್’ ಕಾರ್ಯಕ್ರಮದಲ್ಲಿ ವಿರಾಟ್ ಕೊಹ್ಲಿ ಕನ್ನಡದಲ್ಲಿ ಹೇಳಿದ ಮಾತುಗಳಿವು. ಅಲ್ಲಿದ್ದ 25 ಸಾವಿರಕ್ಕೂ ಹೆಚ್ಚು ಮಂದಿ ಸಂಭ್ರಮಿಸಿದರು. ಸತತ 16 ವರ್ಷಗಳಿಂದ ಒಂದೂ ಪ್ರಶಸ್ತಿ ಗೆಲ್ಲದಿದ್ದರೂ ಆರ್‌ಸಿಬಿ (ಪುರುಷರ) ತಂಡಕ್ಕೆ ಬೆಚ್ಚನೆಯ ಪ್ರೀತಿ ತೋರುವ ಅಭಿಮಾನಿಗಳಿಗೆ ಸ್ವರ್ಗ ಮೂರೇ ಗೇಣು.

ಸಾಮಾಜಿಕ ಜಾಲತಾಣಗಳಲ್ಲಿಯೂ ಲಕ್ಷೋಪಲಕ್ಷ ವೀಕ್ಷಣೆಗಳು, ಲೈಕ್‌ಗಳ ಪ್ರವಾಹ ಹರಿಯಿತು. ಇಷ್ಟು ವರ್ಷಗಳಿಂದ ತಂಡದ ಹೆಸರಿನಲ್ಲಿದ್ದ ಬ್ಯಾಂಗಲೋರ್ (ಇಂಗ್ಲಿಷ್ ಬಳಕೆ) ಪದವನ್ನು ಬೆಂಗಳೂರು ಎಂದೂ ಆರ್‌ಸಿಬಿಯು ಇದೇ ಸಂದರ್ಭದಲ್ಲಿ ಬದಲಿಸಿತು. ಅಭಿಮಾನಿಗಳ ಬಳಗವನ್ನು ಮತ್ತಷ್ಟು ಹೆಚ್ಚಿಸಿಕೊಳ್ಳುವ ಉದ್ದೇಶ ಅದರ ಹಿಂದೆ ಇದೆ. ಅಭಿಮಾನಿ ವಲಯ (ಫ್ಯಾನ್ ಬೇಸ್) ಹೆಚ್ಚಿದಷ್ಟೂ ಫ್ರ್ಯಾಂಚೈಸಿಯ ಬ್ರ್ಯಾಂಡ್ ಮೌಲ್ಯ ಬೆಳೆಯುತ್ತದೆ. ಅದರೊಂದಿಗೆ ಆದಾಯವೂ ಏರುಮುಖ ಆಗುತ್ತದೆ. ಐಪಿಎಲ್ ಟೂರ್ನಿಯೇ ‘ಮುಕ್ತ ಮಾರುಕಟ್ಟೆ’ ಆಗಿರುವಾಗ ಇಂತಹ ಕಾರ್ಯಕ್ರಮಗಳು ಸಹಜ.

ಆದರೆ ನಾಡಿನ ಭಾಷೆ ಮತ್ತು ಭಾವನಾತ್ಮಕ ಅಂಶಗಳನ್ನು ಬಂಡವಾಳ ಮಾಡಿಕೊಳ್ಳುವ ಫ್ರ್ಯಾಂಚೈಸಿಯು ರಾಜ್ಯದ ಅರ್ಹ ಆಟಗಾರರಿಗೆ ಸೂಕ್ತ ರೀತಿಯಲ್ಲಿ ಅವಕಾಶ ನೀಡುವುದಿಲ್ಲ ಏಕೆ ಎಂಬ ಪ್ರಶ್ನೆ ಸದಾ ಕಾಡುತ್ತದೆ. ಈ ಬಾರಿಯ ಆವೃತ್ತಿಯಲ್ಲಿ ಆರ್‌ಸಿಬಿಯು ಇದುವರೆಗೆ ಐದು ಪಂದ್ಯಗಳನ್ನು ಆಡಿದೆ. ಅದರಲ್ಲಿ ನಾಲ್ಕರಲ್ಲಿ ಸೋತಿದೆ. ಇದರಿಂದಾಗಿ ತಂಡದ ಕಟ್ಟಾ ಅಭಿಮಾನಿಗಳೂ ಕರ್ನಾಟಕದ ಮಾಜಿ ಕ್ರಿಕೆಟಿಗರೂ ಸಾಮಾಜಿಕ ಜಾಲತಾಣಗಳಲ್ಲಿ ಈ ಪ್ರಶ್ನೆ ಕೇಳುತ್ತಿದ್ದಾರೆ.

‘ಎಷ್ಟು ಸೋತರೂ ಅಭಿಮಾನಿಗಳ ಪ್ರೀತಿ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಅದರೊಂದಿಗೆ ಬ್ರ್ಯಾಂಡ್ ಮೌಲ್ಯವೂ ಏರುತ್ತಿದೆ’ ಎಂಬ ಮನೋಭಾವ ಆಡಳಿತ ಮಂಡಳಿಯವರದ್ದಾಗಿರಬಹುದೇನೋ? ಇನ್ನೊಂದೆಡೆ, ಒಂದು ತಂಡದಲ್ಲಿ ಇಷ್ಟೇ ಸಂಖ್ಯೆಯ ವಿದೇಶಿ ಆಟಗಾರರು ಇರಬೇಕೆಂಬ ನಿಯಮ ಇದೆ. ಆದರೆ ಫ್ರ್ಯಾಂಚೈಸಿ ಪ್ರತಿನಿಧಿಸುವ ನಗರ ಅಥವಾ ರಾಜ್ಯದ ಸ್ಥಳೀಯ ಆಟಗಾರರನ್ನು ತೆಗೆದುಕೊಳ್ಳಲೇಬೇಕೆಂಬ ನಿಯಮವಿಲ್ಲದಿರುವುದೂ ಕಾರಣವೇ? ಆದರೂ ರಾಜ್ಯದ ಆಟಗಾರರು ತಂಡದಲ್ಲಿರಬೇಕೆಂಬ ಕೂಗು ಹೆಚ್ಚುತ್ತಿರುವುದು ಏಕೆ?

ಇವತ್ತು ಐಪಿಎಲ್‌ನಲ್ಲಿರುವ ಹತ್ತು ತಂಡಗಳ ಪೈಕಿ ಬ್ರ್ಯಾಂಡ್ ಮೌಲ್ಯದ ಪಟ್ಟಿಯಲ್ಲಿ ಆರ್‌ಸಿಬಿಗೆ ನಾಲ್ಕನೇ ಸ್ಥಾನವಿದೆ. ಎರಡು ವರ್ಷಗಳ ಹಿಂದಷ್ಟೇ ಆರನೇ ಸ್ಥಾನದಲ್ಲಿತ್ತು. ₹ 582 ಕೋಟಿ ಮೌಲ್ಯದ ತಂಡ ಇದಾಗಿದೆ. ತಲಾ ಐದು ಬಾರಿ ಪ್ರಶಸ್ತಿ ಜಯಿಸಿರುವ ಮುಂಬೈ ಇಂಡಿಯನ್ಸ್, ಚೆನ್ನೈ ಸೂಪರ್ ಕಿಂಗ್ಸ್, ಎರಡು ಸಲದ ಚಾಂಪಿಯನ್ ಕೋಲ್ಕತ್ತ ನೈಟ್ ರೈಡರ್ಸ್ ತಂಡಗಳು ಮೊದಲ ಮೂರು ಸ್ಥಾನಗಳಲ್ಲಿವೆ.

ಸೋಲು, ಗೆಲುವುಗಳನ್ನು ಬದಿಗಿಟ್ಟು ನೋಡಿದರೆ, ತಂಡದ ಮೌಲ್ಯ ಹೆಚ್ಚಾಗಲು ಕರ್ನಾಟಕದ ಆಟಗಾರರು ಹಾಕಿದ ಅಡಿಪಾಯವೇ ಕಾರಣ. 2008ರಲ್ಲಿ ಐಪಿಎಲ್ ಆರಂಭವಾದಾಗ ಆರ್‌ಸಿಬಿಗೆ ರಾಹುಲ್ ದ್ರಾವಿಡ್ ನಾಯಕತ್ವ ವಹಿಸಿದ್ದರು. ಆ ತಂಡದಲ್ಲಿ ಅನಿಲ್ ಕುಂಬ್ಳೆ, ಸುನಿಲ್ ಜೋಶಿ, ವಿನಯಕುಮಾರ್, ಬಾಲಚಂದ್ರ ಅಖಿಲ್, ಜೆ. ಅರುಣ್ ಕುಮಾರ್, ದೇವರಾಜ್ ಪಾಟೀಲ ಹಾಗೂ ಭರತ್ ಚಿಪ್ಲಿ ಅವರಿದ್ದರು. 2009ರಲ್ಲಿ ಕೆಲವು ಪಂದ್ಯಗಳಿಗೆ ಕೆವಿನ್ ಪೀಟರ್ಸನ್ ನಾಯಕರಾಗಿದ್ದರು. ನಂತರ ಅದೇ ಆವೃತ್ತಿಯಲ್ಲಿ ಕುಂಬ್ಳೆ ನಾಯಕತ್ವ ವಹಿಸಿಕೊಂಡರು. ದ್ರಾವಿಡ್, ವಿನಯಕುಮಾರ್, ರಾಬಿನ್ ಉತ್ತಪ್ಪ ಹಾಗೂ ಮನೀಷ್ ಪಾಂಡೆ ತಂಡದಲ್ಲಿದ್ದ ಪ್ರಮುಖರು. ಆ ವರ್ಷ ಮನೀಷ್, ಐಪಿಎಲ್‌ನಲ್ಲಿ ಶತಕ ಹೊಡೆದ ಪ್ರಥಮ ಭಾರತೀಯ ಆಟಗಾರ ಎನಿಸಿಕೊಂಡರು. ತಂಡವು ಫೈನಲ್ ಕೂಡ ಪ್ರವೇಶಿಸಿತ್ತು. ಇದಾದ ನಂತರ ಆರ್‌ಸಿಬಿ 2011ರಲ್ಲಿ (ಡೇನಿಯಲ್ ವೆಟೋರಿ ನಾಯಕತ್ವ) ಫೈನಲ್ ತಲುಪಿತ್ತು. 2016ರಲ್ಲಿ ಮತ್ತೊಮ್ಮೆ ಫೈನಲ್ ಪ್ರವೇಶಿಸಿತ್ತು. ಆಗ ಕೊಹ್ಲಿ ನಾಯಕರಾಗಿದ್ದರು.

ಕನ್ನಡನಾಡಿನ ಹೊಸ ತಲೆಮಾರಿನ ಆಟಗಾರರಾದ ಕೆ.ಎಲ್. ರಾಹುಲ್, ಕರುಣ್ ನಾಯರ್, ಅಪ್ಪಣ್ಣ, ಎಸ್. ಅರವಿಂದ್, ಅಭಿಮನ್ಯು ಮಿಥುನ್, ಸ್ಟುವರ್ಟ್ ಬಿನ್ನಿ ಅವರೆಲ್ಲರೂ ಆರ್‌ಸಿಬಿಯಲ್ಲಿ ಕೆಲವು ವರ್ಷ ಆಡಿದ್ದರು. 2014ರ ತಂಡದಲ್ಲಿ ಕರ್ನಾಟಕದ ಒಬ್ಬರೂ ಇರಲಿಲ್ಲ. 2016, 2017ರಲ್ಲಿ ರಾಹುಲ್, ಬಿನ್ನಿ ಮತ್ತು ಅರವಿಂದ್ ಆಡಿದ್ದರು. ಆದರೆ 2018ರಿಂದ ಈಚೆಗೆ ಕರ್ನಾಟಕದ ಆಟಗಾರರು ಅಂತಿಮ ಹನ್ನೊಂದರಲ್ಲಿ ಆಡಿದ್ದು ಕಡಿಮೆ. ಪವನ್ ದೇಶಪಾಂಡೆ, ಅನಿರುದ್ಧ ಜೋಶಿ, ಅನೀಶ್ವರ್ ಗೌತಮ್ ಹಾಗೂ ಲವನೀತ್ ಸಿಸೋಡಿಯಾ ಬೆಂಚ್ ಕಾದು ಹೋದರು. 2019ರಲ್ಲಿ ಬಂದ ದೇವದತ್ತ ಪಡಿಕ್ಕಲ್ ಎರಡು ವರ್ಷ ಮಿಂಚಿದರು. ನಂತರ ಅವರು ಬೇರೆ ತಂಡಕ್ಕೆ ಹೋದರು. ಅವರನ್ನು ಉಳಿಸಿಕೊಳ್ಳಲಿಲ್ಲ. ಹೋದ ವರ್ಷ ವೇಗಿ ವೈಶಾಖ ವಿಜಯಕುಮಾರ್ ಸ್ಥಾನ ಪಡೆದರು. ಕೆಲವು ಪಂದ್ಯಗಳಲ್ಲಿ ಮಿಂಚಿದರು. ಈ ಬಾರಿಯ ಟೂರ್ನಿಯ ಒಂದು ಪಂದ್ಯದಲ್ಲಿ ಇಂಪ್ಯಾಕ್ಟ್ ಪ್ಲೇಯರ್ ಆಗಿ ಉತ್ತಮ ಬೌಲಿಂಗ್ ಮಾಡಿದ್ದ ವೈಶಾಖ ಅವರಿಗೆ ನಂತರದ ಎರಡೂ ಪಂದ್ಯಗಳಲ್ಲಿ ಆಡುವ ಅವಕಾಶ ಸಿಗಲಿಲ್ಲ. ಅವರೊಂದಿಗೆ ಸ್ಥಾನ ಪಡೆದ ಮನೋಜ್ ಬಾಂಢಗೆ ಇನ್ನೂ ಬೆಂಚ್‌ನಲ್ಲಿಯೇ ಇದ್ದಾರೆ.

ಆರ್‌ಸಿಬಿಯ ಈ ಬಗೆಯ ಧೋರಣೆಯು ಕರ್ನಾಟಕದ ಆಟಗಾರರಿಗಷ್ಟೇ ಸೀಮಿತ ಅಲ್ಲ. ಬೇರೆ ಆಟಗಾರರೊಂದಿಗೂ ಅದರ ಧೋರಣೆ ಹೀಗೇ ಇದೆ. ಐಪಿಎಲ್‌ನ ಅತ್ಯಂತ ಯಶಸ್ವಿ ಸ್ಪಿನ್ನರ್‌ಗಳಲ್ಲಿ ಒಬ್ಬರಾಗಿರುವ ಯಜುವೇಂದ್ರ ಚಾಹಲ್ ಅವರನ್ನು ತಂಡದಿಂದ ಕೈಬಿಟ್ಟಿದ್ದು ಇದಕ್ಕೊಂದು ಪ್ರಮುಖ ನಿದರ್ಶನ. ಇತ್ತೀಚಿನ ಎರಡು-ಮೂರು ವರ್ಷಗಳಲ್ಲಿ ಹರಾಜು ಪ್ರಕ್ರಿಯೆಯಲ್ಲಿ ಉತ್ತಮ ಆಟಗಾರರನ್ನು ಸೆಳೆಯುವಲ್ಲಿಯೂ ಎಡವುತ್ತಿರುವುದು ಎದ್ದು ಕಾಣುತ್ತಿದೆ. ಆರಂಭದಿಂದಲೂ ತಂಡವು ಸ್ವದೇಶ ಮತ್ತು ವಿದೇಶದ ಖ್ಯಾತನಾಮ ಆಟಗಾರರನ್ನು ತಂಡದಲ್ಲಿ ಆಡಿಸಿದೆ. ಕ್ರಿಸ್ ಗೇಲ್, ಎಬಿ ಡಿವಿಲಿಯರ್ಸ್, ಡೇಲ್ ಸ್ಟೇನ್ ಅವರಂತಹ ಆಟಗಾರರು ತಂಡದ ಮೌಲ್ಯ ಹೆಚ್ಚಿಸಿದ್ದಾರೆ. ಕರ್ನಾಟಕದ ಅಭಿಮಾನಿಗಳು ಅವರನ್ನೂ ಮನದುಂಬಿ ಪ್ರೀತಿಸಿದ್ದಾರೆ. ಆದರೆ ಇದೀಗ ಅವರಷ್ಟೇ ಉತ್ತಮ ಆಟಗಾರರು ಲಭ್ಯರಿದ್ದರೂ ಬಲಿಷ್ಠ ತಂಡವನ್ನು ಕಟ್ಟುತ್ತಿಲ್ಲ ಏಕೆ ಎಂದೂ ಜನರು ಪ್ರಶ್ನಿಸುವಂತಾಗಿದೆ. ಈ ವರ್ಷದ ತಂಡವನ್ನೇ ನೋಡಿ. ದುಬಾರಿ ಮೌಲ್ಯ ಪಡೆದು ಬಂದ ವೇಗಿ ಅಲ್ಜರಿ ಜೋಸೆಫ್, ರೀಸ್ ಟಾಪ್ಲಿ, ಯಶ್ ದಯಾಳ್, ಕ್ಯಾಮರಾನ್ ಗ್ರೀನ್ ಹಾಗೂ ಸ್ಪಿನ್ನರ್ ಮಯಂಕ್ ದಾಗರ್ ಅವರಿಗೆ 180 ರನ್‌ಗಳಿಗಿಂತ ಹೆಚ್ಚಿನ ಮೊತ್ತವನ್ನು ರಕ್ಷಿಸಿಕೊಳ್ಳಲೂ ಸಾಧ್ಯವಾಗುತ್ತಿಲ್ಲ.

ಬ್ಯಾಟಿಂಗ್‌ನಲ್ಲಿಯೂ ಕೊಹ್ಲಿ ಏಕಾಂಗಿಯಾಗಿದ್ದಾರೆ. ವಿಶ್ವಕಪ್ ಟೂರ್ನಿಯಲ್ಲಿ ಬೌಲರ್‌ಗಳ ಚಳಿ ಬಿಡಿಸಿದ್ದ ಗ್ಲೆನ್ ಮ್ಯಾಕ್ಸ್‌ವೆಲ್, ಈ ಹಿಂದೆ ಚೆನ್ನೈ ಸೂಪರ್ ಕಿಂಗ್ಸ್ ತಂಡದಲ್ಲಿ ಮಿಂಚುತ್ತಿದ್ದ ಫಫ್ ಡುಪ್ಲೆಸಿ, ಯುವ ಆಟಗಾರರಾದ ರಜತ್ ಪಾಟೀದಾರ್, ಅನುಜ್ ರಾವತ್ ಅವರು ನಿರೀಕ್ಷೆಗೆ ತಕ್ಕಂತೆ ಆಡುತ್ತಿಲ್ಲ. ಒಂದು ಪಂದ್ಯದಲ್ಲಿ ರನ್ ಗಳಿಸಿದರೆ ಇನ್ನೊಂದರಲ್ಲಿ ವಿಫಲರಾಗುತ್ತಾರೆ. ಕೊಹ್ಲಿಗೆ ಈಗ ಎಬಿಡಿ, ಗೇಲ್ ಅವರಂತಹ ಬ್ಯಾಟರ್‌ಗಳ ಬೆಂಬಲವೂ ಇಲ್ಲ, ಅನಿಲ್ ಕುಂಬ್ಳೆ ಅವರಂತಹ ‘ಮ್ಯಾಚ್ ವಿನ್ನಿಂಗ್’ ಬೌಲರ್ ಬಲವೂ ಇಲ್ಲ. ಆದರೆ ಕಳೆದ 17 ವರ್ಷಗಳಿಂದ ತಂಡದೊಂದಿಗೆ ಬೆಳೆದಿರುವ ವಿರಾಟ್ ಅವರ ನಂತರ ಆರ್‌ಸಿಬಿಯ ಸ್ಥಿತಿಗತಿ ಏನು ಎಂಬ ಪ್ರಶ್ನೆಯೂ ಈಗ ಮೂಡಿದೆ.

35 ವರ್ಷದ ವಿರಾಟ್ ಅವರು ಹೆಚ್ಚೆಂದರೆ ಇನ್ನೂ ನಾಲ್ಕೈದು ವರ್ಷ ಆಡಬಹುದು. ನಂತರ ಯಾರು ಎಂಬುದಕ್ಕೆ ಉತ್ತರ ಕಂಡುಕೊಳ್ಳಲು ಕೂಡ ಇದು ಸಕಾಲ. ಈ ಸವಾಲನ್ನು ಗ್ರಹಿಸಿರುವ ಫ್ರ್ಯಾಂಚೈಸಿಯು ಬೆಂಗಳೂರಿನಿಂದಾಚೆ ಗ್ರಾಮಾಂತರ ಪ್ರದೇಶಗಳ ಅಭಿಮಾನಿಗಳತ್ತ ಗಮನಹರಿಸುತ್ತಿದೆ. ಹಳ್ಳಿಹಳ್ಳಿಗೂ ತಲುಪಲು ಕನ್ನಡದತ್ತ ವಾಲಿದೆ. ಹಾಗೆಯೇ ತಂಡದಲ್ಲಿ ರಾಜ್ಯದ ಪ್ರತಿಭೆಗಳಿಗೆ ಅವಕಾಶ ನೀಡಿ, ಕಪ್ ಗೆಲ್ಲುವತ್ತ ಹೆಜ್ಜೆಯಿಟ್ಟರೆ ರಾಜ್ಯದ ಅಭಿಮಾನಿಗಳ ಪ್ರೀತಿಯ ಋಣ ತೀರಿಸಬಹುದೇನೋ?



ಸಂಗತ

ರಜೆಯ ಮಜಾ ಹಿತವಾಗಿರಲಿ

ರಜೆಯ ಕುರಿತು ಪೋಷಕರು ಮತ್ತು ಮಕ್ಕಳ ದೃಷ್ಟಿಕೋನ ಬದಲಾಗಬೇಕು

• ಡಾ. ಕೆ.ಎಸ್.ಚೈತ್ರಾ

ಶಾಲಾ ಮಕ್ಕಳಿಗೆ ಈಗ ಪರೀಕ್ಷೆ ಮುಗಿದು ರಜೆ. ರಜಾ ಎಂದರೆ ಮಜಾ ಎಂದು ಖುಷಿಪಡುತ್ತಿರುವಾಗಲೇ ಪಾರ್ಕಿನಲ್ಲಿ ಪೋಷಕರ ಮಾತು ಕಿವಿಗೆ ಬಿತ್ತು. ‘ನಮಗಿದ್ದ ಹಾಗೆ ಈಗಿನ ಬಹುತೇಕ ಮಕ್ಕಳಿಗೆ ಅಜ್ಜ-ಅಜ್ಜಿ ಮನೆ ಎಲ್ಲಾ ಇಲ್ಲ. ಸಮ್ಮರ್ ಕ್ಯಾಂಪ್‌ಗೆ ಸೇರಿಸೋಣ ಅಂದರೆ ತುಂಬಾ ಖರ್ಚು. ಹೊರಗೆ ಆಟವಾಡಲು ಸಿಕ್ಕಾಪಟ್ಟೆ ಬಿಸಿಲು ಮತ್ತೆ ಹೆದರಿಕೆ ಬೇರೆ. ಹೇಗಿದ್ರೂ ರಜ ಅಲ್ವಾ? ಟಿ.ವಿ., ಮೊಬೈಲು ಕೊಟ್ಟುಬಿಟ್ರೆ ಆಟ, ಊಟ ಯಾವುದೂ ಕೇಳದೆ ಸುಮ್ನೆ ಇರ್ತಾರೆ, ಸೇಫ್ ಕೂಡ. ನಮ್ಮಷ್ಟಕ್ಕೆ ನಾವು ಇರಬಹುದು’. ಬದಲಾದ ಆಧುನಿಕ ಬದುಕಿನಲ್ಲಿ ಸಮಯವೇ ಇಲ್ಲದ ಪೋಷಕರಿಗೆ ಇದು ಸುಲಭದ ಉಪಾಯ ಎನಿಸಿದರೂ ಶಾಲಾಮಕ್ಕಳು ಕನ್ನಡಕಧಾರಿಗಳಾಗುತ್ತಿರುವುದಕ್ಕೆ ಇದು ಪ್ರಮುಖ ಕಾರಣ!

ಆರೋಗ್ಯ ಇಲಾಖೆಯ 2022- 23ನೇ ಸಾಲಿನ ಅಧ್ಯಯನದಲ್ಲಿ, ರಾಜ್ಯದಲ್ಲಿ ಒಂದರಿಂದ 10ನೇ ತರಗತಿಯವರೆಗಿನ 1.73 ಲಕ್ಷ ವಿದ್ಯಾರ್ಥಿಗಳಲ್ಲಿ ದೃಷ್ಟಿದೋಷ ಇರುವುದು ಪತ್ತೆಯಾಗಿದೆ. ಶೇಕಡ 50ರಷ್ಟು ಮಕ್ಕಳಲ್ಲಿ ಅತಿಯಾದ ಟಿ.ವಿ. ವೀಕ್ಷಣೆ ಮತ್ತು ಮೊಬೈಲ್ ಬಳಕೆಯು ಈ ದೃಷ್ಟಿದೋಷಕ್ಕೆ ಕಾರಣವಾಗಿದ್ದು, ಜನ್ಮಜಾತ ತೊಂದರೆ, ಅಪೌಷ್ಟಿಕತೆ, ನಿದ್ದೆ, ವ್ಯಾಯಾಮದ ಕೊರತೆ ಇನ್ನಿತರ ಕಾರಣಗಳಾಗಿವೆ ಎನ್ನಲಾಗಿದೆ.


ಜ್ಞಾನೇಂದ್ರಿಯವಾದ ಕಣ್ಣುಗಳು ಮಕ್ಕಳ ಕಲಿಕೆಯಲ್ಲಿ ಪ್ರಮುಖವಾದ ಪಾತ್ರ ವಹಿಸುವುದರಿಂದ ಕಾಲಕಾಲಕ್ಕೆ ತಕ್ಕಂತೆ ಅವುಗಳ ತಪಾಸಣೆ ನಡೆಸಬೇಕು. ದೃಷ್ಟಿದೋಷ ಇದ್ದಲ್ಲಿ ಮಕ್ಕಳು ಕನ್ನಡಕ ಧರಿಸಬೇಕು. ಸಣ್ಣ ವಯಸ್ಸಿನಲ್ಲಿಯೇ ಕನ್ನಡಕ ಬೇಡ ಅಥವಾ ನೋಡಲು ಚೆನ್ನಾಗಿ ಕಾಣುವುದಿಲ್ಲ ಎಂದು ಧರಿಸದೇ ಇದ್ದಲ್ಲಿ ಸಮಸ್ಯೆ ಮತ್ತಷ್ಟು ಹೆಚ್ಚಬಹುದು, ಜತೆಗೇ ದೃಷ್ಟಿದೋಷ ಬಾರದಂತೆ ಎಲ್ಲ ಎಚ್ಚರಿಕೆ ವಹಿಸಬೇಕು ಎಂದು ವೈದ್ಯರು ಅಭಿಪ್ರಾಯಪಟ್ಟಿದ್ದಾರೆ.

ಮೊಬೈಲ್ ಮತ್ತು ಟಿ.ವಿ. ಬಳಕೆ ಅತಿಯಾಗಲು ಕೋವಿಡ್ ಕೊಡುಗೆಯೂ ಬಹಳಷ್ಟಿದೆ. ಕೋವಿಡ್ ಉಲ್ಬಣಿಸಿದ ಸಮಯದಲ್ಲಿ ಆರೋಗ್ಯದ ದೃಷ್ಟಿಯಿಂದ ಶಾಲೆ ನಡೆಯದ ಕಾರಣ, ಕಲಿಕೆಯ ಹೊಸ ಮಾರ್ಗವಾಗಿ ಆನ್‌ಲೈನ್ ತರಗತಿಗಳು ಆರಂಭವಾದವು. ಮನರಂಜನೆ, ಮಾಹಿತಿ ಮತ್ತು ಸಂಪರ್ಕ ಎಲ್ಲವೂ ಸಾಧ್ಯವಾಗಿದ್ದು ಈ ಸಾಧನಗಳ ಮೂಲಕವೇ. ಹೀಗೆ ಅನಿವಾರ್ಯವಾಗಿ ಆರಂಭವಾದದ್ದು ಈಗ ಅವಲಂಬನೆಯಾಗಿ ಬದಲಾಗಿದೆ.

ಶಾಲಾ ಮಕ್ಕಳಿಗೆ ಕನಿಷ್ಠ ಏಳರಿಂದ ಎಂಟು ಗಂಟೆಗಳ ನಿದ್ದೆ ಬೇಕು. ಆದರೆ ಸ್ಕ್ರೀನ್ ಟೈಮ್ ಹೆಚ್ಚಿದ ಕಾರಣದಿಂದ ಇದು ಸಾಧ್ಯವಾಗುತ್ತಿಲ್ಲ. ರಾತ್ರಿ ಊಟ ಮುಗಿಸಿ ಟಿ.ವಿ., ಮೊಬೈಲ್ ವೀಕ್ಷಣೆ ಮಕ್ಕಳ ರೂಢಿ. ಈ ಸಾಧನಗಳಲ್ಲಿ ಬದಲಾಗುವ ಬೆಳಕು, ಚಿತ್ರ, ಪ್ರಖರ ಬಣ್ಣ, ಹೊರಡುವ ಶಬ್ದ ಮತ್ತು ಕಂಪನ ಮೆದುಳನ್ನು ಉತ್ತೇಜಿಸುತ್ತವೆ. ಹೀಗಾಗಿ, ನಿದ್ದೆಗೆ ಸಹಕಾರಿಯಾಗುವ ಮೆಲಟೋನಿನ್ ಪ್ರಮಾಣ ಕಡಿಮೆಯಾಗುತ್ತದೆ. ಮಲಗಿದರೂ ನಿದ್ದೆ ಬರಲು ಬಹಳಷ್ಟು ತಡವಾಗುತ್ತದೆ. ಈ ಸಾಧನಗಳಿಂದ ಹೊರಬರುವ ನೀಲಿ ಬಣ್ಣದ ಬೆಳಕು ಕಣ್ಣಿಗೆ ಒಳ್ಳೆಯದಲ್ಲ. ಹಾಗೆಯೇ ಕತ್ತಲಿರುವ ಕೋಣೆಯಲ್ಲಿ ಮಲಗಿ, ಬಗ್ಗಿ ನೋಡುವ ಅಭ್ಯಾಸಗಳು ಕೂಡ ದೃಷ್ಟಿಗೆ ಸಂಬಂಧಿಸಿದ ಕಣ್ಣು ಕೆಂಪಾಗುವಿಕೆ, ನೋವು, ಉರಿ, ತುರಿಕೆ, ಶುಷ್ಕ ಕಣ್ಣಿನಂತಹ ಸಮಸ್ಯೆಗಳ ಜತೆ ದೃಷ್ಟಿದೋಷಕ್ಕೂ ಕಾರಣವಾಗಬಹುದು.

ನಾವು ತಿನ್ನುವ ಆಹಾರವು ಸಾಮಾನ್ಯ ಆರೋಗ್ಯ ಮತ್ತು ಕಣ್ಣಿನ ಆರೋಗ್ಯದ ಮೇಲೆ ನೇರವಾದ ಸಂಬಂಧವನ್ನು ಹೊಂದಿದೆ. ವಿಟಮಿನ್ ಎ ಹೆಚ್ಚಿರುವ ತರಕಾರಿ, ಹಣ್ಣುಗಳನ್ನು ಮಕ್ಕಳು ಸೇವಿಸಬೇಕು. ಸುಲಭವಾಗಿ ಸಿಗುವ, ಬಾಯಿಗೂ ರುಚಿ ಎನಿಸುವ ಸಂಸ್ಕರಿಸಿದ ಆಹಾರವನ್ನು ಮಕ್ಕಳು ಹೆಚ್ಚಾಗಿ ಇಷ್ಟಪಡುತ್ತಾರೆ, ಪೋಷಕರೂ ನೀಡುತ್ತಾರೆ. ಹೀಗೆ ಮಕ್ಕಳ ಆಹಾರವೂ ಆರೋಗ್ಯಕ್ಕೆ ಪೂರಕವಾಗಿಲ್ಲ. ಈ ಎಲ್ಲಾ ಅಂಶಗಳಿಂದಾಗಿ ದೃಷ್ಟಿದೋಷದ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆ.

ಟಿ.ವಿ., ಮೊಬೈಲ್, ಕಂಪ್ಯೂಟರ್ ಅನ್ನು ಸಂಪೂರ್ಣ ದೂರ ಇಡುವುದು ಅಸಾಧ್ಯ. ಬದಲಿಗೆ ವೀಕ್ಷಣೆಯ ಸಮಯ, ಬಳಸುವಾಗ ಸರಿಯಾದ ಭಂಗಿ, ಇರಬೇಕಾದ ಅಂತರ ಇವೆಲ್ಲದರ ಬಗ್ಗೆ ಎಚ್ಚರ ವಹಿಸಬೇಕು. ಎರಡು ವರ್ಷದ ಒಳಗಿನ ಮಕ್ಕಳಿಗೆ ಟಿ.ವಿ., ಮೊಬೈಲ್ ಬೇಡವೇ ಬೇಡ. ಶಾಲೆಗೆ ಹೋಗುವ ಮಕ್ಕಳಿಗೆ ಎಲ್ಲಾ ಸಾಧನ ಸೇರಿ ಒಂದರಿಂದ ಎರಡು ತಾಸು ವೀಕ್ಷಣಾ ಸಮಯ ನೀಡಬಹುದು. ಮಕ್ಕಳು ಮಲಗುವ ಕೊಠಡಿ ಮತ್ತು ಊಟದ ಕೋಣೆಯಲ್ಲಿ ಇವುಗಳ ಬಳಕೆ ಕೂಡದು.



ರಜೆ ಎಂದರೆ ಪಠ್ಯದ ಓದು, ಬರಹ, ಪರೀಕ್ಷೆಯ ಒತ್ತಡ ಈ ರೀತಿ ಶಾಲೆಯಲ್ಲಿ ವರ್ಷವಿಡೀ ನಡೆದಂತಹ ಚಟುವಟಿಕೆಗಳಿಂದ ದೇಹ, ಮನಸ್ಸಿಗೆ ಒಂದಷ್ಟು ವಿಶ್ರಾಂತಿ ನೀಡುವ ಸಮಯ. ಆ ಮೂಲಕ ಮನಸ್ಸಿಗೆ ಖುಷಿ ಕೊಡುವ ಹವ್ಯಾಸಗಳು, ಆಟದ ಚಟುವಟಿಕೆಗಳ ಮೂಲಕ ಹೊಸ ಚೈತನ್ಯವನ್ನು ಪಡೆಯಬಹುದು. ಮನಸ್ಸನ್ನು ಒತ್ತಡದಿಂದ ದೂರ ಮಾಡಿ ಸೃಜನಶೀಲತೆಯನ್ನು ಹೆಚ್ಚಿಸುವುದರ ಜತೆಗೆ ಆರೋಗ್ಯಕರ ಜೀವನಶೈಲಿಯನ್ನು ರೂಢಿಸಿಕೊಳ್ಳಲು ಸಕಾಲ. ಬೆಳಿಗ್ಗೆ ಮತ್ತು ಸಂಜೆ, ಬಿಸಿಲು ಕಡಿಮೆ ಇರುವಾಗ ಹೊರಗೆ ಉದ್ಯಾನ, ಮೈದಾನದಲ್ಲಿ ಆಟ ಆಡಬಹುದು. ಈಜು, ನೀರಾಟವು ಬೇಸಿಗೆಗೆ ಖುಷಿ ಮತ್ತು ವ್ಯಾಯಾಮ ನೀಡುವ ಅತ್ಯುತ್ತಮ ಮಾರ್ಗ. ಇದಲ್ಲದೆ ನೆರಳಿನಲ್ಲಿ ಒಳಾಂಗಣ ಆಟಗಳು, ಆಸಕ್ತಿಗೆ ಪೂರಕವಾಗಿ ಕಥೆ ಹೇಳುವುದು–ಕೇಳುವುದು, ಹಾಡು, ನೃತ್ಯ, ನಾಟಕ, ಚಿತ್ರಕಲೆ ಇವೆಲ್ಲವೂ ಮಕ್ಕಳ ಸಮಯವನ್ನು ಸಾರ್ಥಕವಾಗಿ ಕಳೆಯಲು ಸಹಾಯಕ.

ಹೊಸ ಅನುಭವಗಳಿಗೆ ತೆರೆದುಕೊಳ್ಳುವ ಚಿಕ್ಕಪುಟ್ಟ ಪ್ರವಾಸಗಳು ಮನಸ್ಸಿಗೆ ಸಂತಸವನ್ನು ನೀಡುತ್ತವೆ. ಹಾಗೆಯೇ ಮಕ್ಕಳಿಗೆ ಸ್ವಚ್ಛತೆ, ಅಡುಗೆಯಂತಹ ಸ್ವಾವಲಂಬನೆಯ ಪಾಠಗಳನ್ನು ಕಲಿಸಲೂ ಸುಸಮಯ. ಒಟ್ಟಿನಲ್ಲಿ ರಜೆಯ ಕುರಿತು ಪೋಷಕರು ಮತ್ತು ಮಕ್ಕಳ ದೃಷ್ಟಿಕೋನ ಬದಲಾಗಬೇಕು!



ಸುಭಾಷಿತ

ಎಲ್ಲಿ ಎಷ್ಟು ಮಾತನಾಡಬೇಕೋ ಅಷ್ಟೇ ಮಾತನಾಡಬೇಕು. ಮಾತು ನಮ್ಮ ಕೈಯೊಳಗಿರಬೇಕೇ ವಿನಾ ಮಾತಿನ ಕೈಯೊಳಗೆ ನಾವಿರಬಾರದು. –ಸಿದ್ಧೇಶ್ವರ ಸ್ವಾಮೀಜಿ

ಚುರುಮುರಿ



ಕುರ್ಚಿ ಕನಸುಗಳು

• ಸುಮಂಗಲಾ

ಬೆಕ್ಕಣ್ಣ ಕೈಕೈ ಹೊಸಕಿಕೊಳ್ಳುತ್ತ, ‘ಎಂಥಾ ಛಂದ ಕನಸು ಕಂಡಿದ್ದೆ, ಎಲ್ಲ ಚೂರುಚೂರಾತು’ ಎಂದಿತು.

‘ನನಸಾಗೂ ಅಂತ ಕನಸು ಮಾತ್ರ ಕಾಣಬೇಕಲೇ’.

‘ನೀ ಗಾಯದ ಮ್ಯಾಗೆ ಉಪ್ಪು ಎರಚಬ್ಯಾಡ. ನಮ್ ಕುಮಾರಣ್ಣಂಗಾಗಿ ಉಪಪ್ರಧಾನಿ ಕುರ್ಚಿ ಹೊಸದಾಗಿ ಮಾಡಿಸ್ತಾರೆ, ಕುಮಾರಣ್ಣ ಮಂಡ್ಯದಿಂದ ಗೆದ್ದವನೇ ಸೀದಾ ಹೋಗಿ ಮೋದಿಮಾಮನ ಪಕ್ಕ ಕೂರತಾನೆ ಅಂತ ಕನಸು ಕಂಡಿದ್ದೆ. ಅಂವಾ ಗೆದ್ದು, ಕೇಂದ್ರದಾಗೆ ಕೃಷಿ ಮಂತ್ರಿಯಾಗತೀನಿ ಅಂತ ಕೃಷಿ ಕುರ್ಚಿಗೆ ಕರ್ಚೀಪು ಹಾಸ್ಯಾನೆ’ ಎಂದು ನಿಟ್ಟುಸಿರಿಟ್ಟಿತು.

‘ಉಪಪ್ರಧಾನಿ ಕುರ್ಚಿ ಹೊಸದಾಗಿ ಮಾಡೂದು ಸರಳ ಇಲ್ಲಲೇ. ಕೇಂದ್ರ ಕೃಷಿ ಮಂತ್ರಿ ಅಂದರೆ ರಗಡ್ ಕಿಮ್ಮತ್ ಇರತೈತಿ’ ಎಂದು ಸಮಾಧಾನಿಸಿದೆ.

‘ಅದೂ ಖರೇ. ದೇಗೌಅಜ್ಜಾರು ಮಣ್ಣಿನ ಮಗ, ಹಿಂಗಾಗಿ ಮಣ್ಣಿನ ಮೊಮ್ಮಗ ನಮ್ ಕುಮಾರಣ್ಣ ಕೃಷಿ ಮಂತ್ರಿಯಾದರೆ ಭಲೋ ಆಗತೈತಿ’.

‘ಅಂವಾ ಕೃಷಿ ಮಂತ್ರಿಯಾದರೆ ನಮ್ಮ ರೈತರಿಗೆ ಕೇಂದ್ರದಿಂದ ಬರಬೇಕಿರೋ ಸವಲತ್ತು, ನಮ್ಮ ತೆರಿಗೆ ಪಾಲು ಕೊಡಿಸಾಕೆ ಏನ್ ಪ್ಲಾನ್ ಮಾಡ್ಯಾನಂತೆ? ಗೊತ್ತೈತಿಲ್ಲೋ… ನಮ್ಮ ರಾಜ್ಯದಿಂದ ಕೇಂದ್ರಕ್ಕೆ ಹೋಗೋ 100 ರೂಪಾಯಿ ತೆರಿಗೆಯಲ್ಲಿ ಬರೇ 12 ರೂಪಾಯಿ ನಮಗೆ ವಾಪಸ್ ಕೊಡತಾರ’.

‘ಮೊದಲು ಕೃಷಿ ಮಂತ್ರಿಯಾಗೂದು, ಕಮಲಕ್ಕನ ಮನಿಯವ್ರ ಜೊತೆ ಸೇರಿ ಇಲ್ಲಿ ಕಾಂಗಿಗಳನ್ನ ಕೆಳಗಿಳಿಸೂದು… ಡಬ್ಬಲ್ ಎಂಜಿನ್ ಸರ್ಕಾರದ ಪ್ಲಾನ್! ತೆರಿಗೆ ಪಾಲು, ಸವಲತ್ತು ಇವೆಲ್ಲ ಜನರೇ ಸ್ವಂತ ನೋಡಿಕೋಬೇಕು!’

‘ಮತ್ತ ನಿಮ್ಮ ಕಂಗನಾಕ್ಕ ಗೆದ್ದ ಮ್ಯಾಗೆ ಯಾವ ಕುರ್ಚಿ ಮ್ಯಾಗೆ ಕೂಡತಾಳಂತೆ?’ ಕುತೂಹಲದಿಂದ ಕೇಳಿದೆ.

‘ಆಕಿ ಎಜುಕೇಶನ್ ಮಿನಿಸ್ಟರ್ ಆದರೆ ವಳ್ಳೇದು. ನಮ್ ದೇಶಕ್ಕೆ 2014ರಲ್ಲಿ ಸ್ವಾತಂತ್ರ್ಯ ಸಿಕ್ಕಿತು, ನಮ್ ದೇಶದ ಮೊದಲ ಪ್ರಧಾನಿ ಸುಭಾಷ್‌ಚಂದ್ರ ಬೋಸ್, ಹಿಂಗೆ ಆಕಿ ಕಂಡುಹಿಡಿದ ಎಲ್ಲಾ ಹೊಸ ಸತ್ಯಗಳನ್ನು ಪಠ್ಯಪುಸ್ತಕದಾಗೆ ಸೇರಿಸೂದು ಸುಲಭ ಆಗತೈತಿ’ ಎಂದು ಬೆಕ್ಕಣ್ಣ ಕಿಸಕ್ಕನೆ ನಕ್ಕಿತು.

ವಾಚಕರ ವಾಣಿ

ಪ್ರಚಾರಕ್ಕೆ ಮಕ್ಕಳ ಬಳಕೆ: ಶಿಕ್ಷೆಯಾಗಲಿ

ಎಲ್ಲೆಲ್ಲೂ ಚುನಾವಣೆ ಪ್ರಚಾರದ ಅಬ್ಬರ ಜೋರಾಗೇ ಇದೆ. ಆದರೆ ಕೆಲವೆಡೆ ಮಕ್ಕಳನ್ನು ಪ್ರಚಾರಕ್ಕೆ ಬಳಸಿಕೊಳ್ಳಲಾಗುತ್ತಿದೆ. ಶಾಲೆಗೆ ರಜೆ ಇರುವುದು ಅಭ್ಯರ್ಥಿಗಳಿಗೆ ವರದಾನವಾಗಿದೆ. ಅರಿಯದ ಮಕ್ಕಳು ಹಾಡು ಹೇಳುವುದು, ಡಾನ್ಸ್ ಮಾಡುವುದು ಹಾಗೂ ಭಾಷಣದ ಮೂಲಕ ಚುನಾವಣೆ ಪ್ರಚಾರದಲ್ಲಿ ತೊಡಗಿದ್ದಾರೆ. ಇದು ಕಾನೂನಿನ ಪ್ರಕಾರ ಅಪರಾಧ. ಹೀಗೆ ಬಳಸಿಕೊಂಡವರಿಗೂ ಮಕ್ಕಳನ್ನು ಕಳುಹಿಸಿದ ಪೋಷಕರಿಗೂ ಶಿಕ್ಷೆ ಆಗಬೇಕು. ಮಕ್ಕಳಲ್ಲಿ ಮತದಾನದ ಅರಿವು ಮೂಡಿಸಿ ಪ್ರಜ್ಞಾವಂತರನ್ನಾಗಿ ಮಾಡಬೇಕೇ ವಿನಾ ಚುನಾವಣಾ ಪ್ರಚಾರಕ್ಕಾಗಿ ಅವರನ್ನು ಬಳಸಿಕೊಳ್ಳಬಾರದು ಎಂಬ ಅರಿವನ್ನು ಪೋಷಕರು ಹೊಂದಬೇಕಿದೆ.

ಎಂ.ಎಸ್.ಉಷಾ ಪ್ರಕಾಶ್, ಮೈಸೂರು

ಮುತ್ಸದ್ದಿಗೆ ಸಲ್ಲಲಿ ಸೂಕ್ತ ಗೌರವ

ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ರಾಜ್ಯಸಭೆಯ ಸದಸ್ಯತ್ವದ ಅವಧಿ ಮುಗಿಯುವುದರೊಂದಿಗೆ ಅವರ ಸಾರ್ವಜನಿಕ ಜೀವನದ ಬಹುಮುಖ್ಯ ಘಟ್ಟ ಕೊನೆಗೊಳ್ಳುತ್ತಿರುವಂತೆ ಕಾಣುತ್ತಿದೆ. ಅದರ ಜೊತೆಗೆ ಸಾರ್ವಜನಿಕ ಜೀವನದಲ್ಲಿರುವ ಸರಳ, ಪ್ರಾಮಾಣಿಕ, ಉತ್ತಮ ಸಂಸದೀಯ ಪಟು, ಒಬ್ಬ ಉನ್ನತ ಅರ್ಥಶಾಸ್ತ್ರಜ್ಞ ಹೀಗೆ ಬಹುಮುಖ ಪ್ರತಿಭೆಯ ವ್ಯಕ್ತಿತ್ವವೊಂದು ನೇಪಥ್ಯಕ್ಕೆ ಸರಿದುಹೋಗುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ದೇಶದ ಅತ್ಯುನ್ನತ ಹುದ್ದೆಯನ್ನು ನಿರ್ವಹಿಸುತ್ತಿರುವಾಗಲೂ ಎಂದೂ ತೂಕ ತಪ್ಪಿ ಮಾತನಾಡಿದವರಲ್ಲ ಈ ಮಿತಭಾಷಿ.

ಅಧಿಕಾರಾವಧಿಯಲ್ಲಿ ತಮ್ಮ ಕಾರ್ಯವ್ಯಾಪ್ತಿಯಲ್ಲಿ ಕುಟುಂಬದವರ ಹಸ್ತಕ್ಷೇಪಕ್ಕೆ ಅವಕಾಶ ಕೊಟ್ಟವರಲ್ಲ. ತಮಗೆ ಸಂವಿಧಾನದತ್ತವಾಗಿ ಬರಬೇಕಾದ ಸವಲತ್ತುಗಳನ್ನು ಸ್ವತಃ ಸರದಿಯ ಸಾಲಿನಲ್ಲಿ ನಿಂತೇ ತೆಗೆದುಕೊಂಡವರು. ಅರ್ಥಶಾಸ್ತ್ರದಲ್ಲಿ ಅವರಿಗಿರುವ ಪರಿಣತಿ ಇಡೀ ವಿಶ್ವವೇ ಮೆಚ್ಚುವಂಥದ್ದು.

ಮನುಷ್ಯರಲ್ಲಿ ಇಂಥ ಗುಣಗಳು ಕ್ಷೀಣಿಸುತ್ತಿರುವ ಈ ಕಾಲಘಟ್ಟದಲ್ಲಿ, ಸಾರ್ವಜನಿಕ ಜೀವನದಿಂದ ನೇಪಥ್ಯಕ್ಕೆ ಸರಿದು ಹೋಗುತ್ತಿರುವ ಈ ಮುತ್ಸದ್ದಿಯನ್ನು ಎಲ್ಲ ಮಿತಿಗಳನ್ನೂ ಮೀರಿ ಗೌರವಿಸಬೇಕಾಗಿರುವುದು ಒಂದು ನಾಗರಿಕ ಸಮಾಜದ ಕರ್ತವ್ಯ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮುತ್ತೂರು, ಕೊಪ್ಪ

ಬಂಡಾಯ ಎಂದರೆ...

ಸ್ವಾತಂತ್ರ್ಯಕ್ಕೋಸ್ಕರ
ಪ್ರಜೆಗಳ ಬಂಡಾಯ
ಗೊತ್ತು,
ಶೋಷಣೆಯ ವಿರುದ್ಧ
ಸಾಹಿತ್ಯವಲಯದ
ಬಂಡಾಯ ಇತ್ತು,
ಈಗ, ಚುನಾವಣೆಯ
ಟಿಕೆಟ್ಟಿಗೋಸ್ಕರ
ರಾಜಕಾರಣಿಗಳ
ಬಂಡಾಯದ
ಗಮ್ಮತ್ತು,
ಕಳೆದುಬಿಟ್ಟರು
ಪುಢಾರಿಗಳು
‘ಬಂಡಾಯ’ ಪದದ
ಕಿಮ್ಮತ್ತು!

ಎಚ್.ಆನಂದರಾಮ ಶಾಸ್ತ್ರೀ
ಬೆಂಗಳೂರು

ದುಬಾರಿ ಟಿಕೆಟ್: ಪ್ರಾಣಿವಿರೋಧಿ ನಿಲುವು

ಕೆಎಸ್‌ಆರ್‌ಟಿಸಿ ಬಸ್ಸಿನಲ್ಲಿ ಬೆಂಗಳೂರಿನಿಂದ ಮೈಸೂರಿಗೆ ಪ್ರಯಾಣಿಸಿದ ಅಜ್ಜಿ, ಮೊಮ್ಮಗಳಿಗೆ ‘ಶಕ್ತಿ’ ಯೋಜನೆಯಡಿ ಉಚಿತ ಟಿಕೆಟ್ ನೀಡಿದ ನಿರ್ವಾಹಕ, ಅವರು ತಂದಿದ್ದ ನಾಲ್ಕು ಗಿಳಿಗಳಿಗೆ ಒಟ್ಟು ₹ 444 ಪ್ರಯಾಣ ದರ ಪಡೆದಿರುವುದಾಗಿ ವರದಿಯಾಗಿದೆ (ಪ್ರ.ವಾ., ಮಾರ್ಚ್ 28). ಇದೊಂದು ವಿಚಿತ್ರವೂ ವಿಲಕ್ಷಣವೂ ಆದ ಪ್ರಸಂಗವೇ ಸರಿ. ಸಾಮಾನ್ಯವಾಗಿ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಮನುಷ್ಯರನ್ನು ಬಿಟ್ಟರೆ ವಸ್ತುಗಳಿಗೆ ಟಿಕೆಟ್ ನೀಡುವುದು ಅವುಗಳ ತೂಕದ ಆಧಾರದ ಮೇಲೆ. ಹಾಗಾಗಿ ಪ್ರಾಣಿಗಳಿಗೂ ಅವುಗಳ ತೂಕದ ಆಧಾರದ ಮೇಲೆ ಟಿಕೆಟ್ ನೀಡಲಿ. ಅದುಬಿಟ್ಟು ಒಂದು ಗಿಳಿಗೆ ₹ 111 ಮೌಲ್ಯದ ಟಿಕೆಟ್ ನೀಡಿರುವುದು ಅಮಾನವೀಯ ಮತ್ತು ಪ್ರಾಣಿವಿರೋಧಿ ನೀತಿಯೇ ಸರಿ.

ಇದಲ್ಲದೆ ಮೈಸೂರಿನಿಂದ ಮಂಡ್ಯಕ್ಕೆ ಪ್ರಯಾಣಿಸುತ್ತಿದ್ದವರೊಬ್ಬರಿಗೆ ನಾಲ್ಕು ಕೋಳಿಗಳಿಗೆ ನಾಲ್ಕು ಪ್ರಯಾಣಿಕ ಟಿಕೆಟ್ ನೀಡಲಾಯಿತಂತೆ! ಇದು ಮಾನವೀಯತೆಗೆ ವಿರುದ್ಧ. ಆದ್ದರಿಂದ ಸಂಬಂಧಪಟ್ಟವರು ತಕ್ಷಣವೇ ಈ ಬಗ್ಗೆ ಗಮನಹರಿಸಿ, ರಾಜ್ಯ ರಸ್ತೆ ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಪ್ರಾಣಿಗಳ ಸಾಗಾಟಕ್ಕೆ ಸೂಕ್ತ ನಿಯಮಾವಳಿಗಳನ್ನು ರೂಪಿಸಲಿ.

ರಾಜಶೇಖರ ಮೂರ್ತಿ, ಬೆಳಗನಹಳ್ಳಿ, ಎಚ್.ಡಿ.ಕೋಟೆ

‘ಹೊಸ ತೊಡಕು’ ಪದ ಬಳಕೆಯೇ ತೊಡಕು!

ಯುಗಾದಿ ಹಬ್ಬದ ಮರುದಿನ ಮಾಡುವ ಮಾಂಸದ ಅಡುಗೆ ಊಟದ ಪ್ರಕ್ರಿಯೆಯನ್ನು ‘ಹೊಸ ತೊಡಕು’ ಎಂದು ಕರೆಯುವುದು ಸರಿಯೇ? ಯುಗಾದಿ ಹಬ್ಬಕ್ಕೆ ಹೊಸ ವರ್ಷದ ಆದಿ ಎಂದು ಕರೆಯುವ ವಾಡಿಕೆ ಇದೆ. ಹೊಸ ವರ್ಷದ ಆರಂಭದ ಮಾಂಸದೂಟ ತೊಡಕು ಆಗಿರುವುದೇ ಒಂದು ಸಮಸ್ಯೆ. ಮಾಂಸಕ್ಕೆ ‘ಅಡಗು’ ಎಂಬ ಶಬ್ದವೂ ಇದೆ. ಅದು ಪ್ರಾರಂಭದಲ್ಲಿ ‘ಹೊಸ ಅಡಗು’, ‘ಹೊಸ ತಡಗು’ ಆಗಿದ್ದು ಕ್ರಮೇಣ ‘ಗ’ಕಾರಕ್ಕೆ ‘ಕ’ಕಾರ ಬಂದು, ಹೊಸ ತಡಕು ಎಂಬುದು ಹೊಸ ತೊಡಕು ಆಗಿರುವ ಸಾಧ್ಯತೆ ಇದೆ. ಹಾಗಾಗಿ, ಅದರ ಶುದ್ಧ ರೂಪ ‘ಹೊಸ ತಡಗು’ ಇರಬೇಕು.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಪ್ರಾಮಾಣಿಕತೆಯ ದರ್ಶನ ಮಾಡಿಸಿದ ಎರಡು ರೂಪಾಯಿ!

ಇತ್ತೀಚೆಗೆ ನಾನು ಮೈಸೂರಿನಿಂದ ಸಂತೆಮರಳ್ಳಿಗೆ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್ ಹತ್ತಿ ₹ 50 ಕೊಟ್ಟು ಟಿಕೆಟ್ ಪಡೆದೆ. ಪ್ರಯಾಣ ದರ ₹ 48 ಆಗಿದ್ದರಿಂದ ನಿರ್ವಾಹಕಿ ನನಗೆ ಬಾಕಿ ₹ 2 ಹಿಂದಿರುಗಿಸಬೇಕಾಗಿತ್ತು. ಇಳಿಯುವಾಗ ಬಾಕಿ ಹಣ ಪಡೆಯುವುದು ಜ್ಞಾಪಕಕ್ಕೆ ಬಂದಿತಾದರೂ, ಅಯ್ಯೋ ಆ ಎರಡು ರೂಪಾಯಿ ಹೇಗೆ ಕೇಳುವುದು ಎಂದು ಮುಜುಗರವಾಗಿ, ಕೇಳುವುದು ಬೇಡ ಎಂದು ನಿರ್ಧರಿಸಿದೆ. ಆದರೆ ನಾನು ಇಳಿಯುವ ಹೊತ್ತಿಗೆ, ಆ ನಿರ್ವಾಹಕಿ ಎರಡು ರೂಪಾಯಿ ನಾಣ್ಯವನ್ನು ಸ್ವಯಂಪ್ರೇರಿತಳಾಗಿ ನನಗೆ ನೀಡಿದಾಗ ಏನೋ ಒಂದು ರೀತಿಯ ಮಧುರ ಭಾವನೆ ಉಂಟಾಯಿತು. ಇಂದಿನ ಭ್ರಷ್ಟ ವ್ಯವಸ್ಥೆಯಲ್ಲಿ ಕೂಡ ಪ್ರಾಮಾಣಿಕ ನೌಕರರು ಇದ್ದಾರಲ್ಲ ಎಂದುಕೊಂಡು, ಆ ಪ್ರಾಮಾಣಿಕ ನಿರ್ವಾಹಕಿಯ ಮುಖವನ್ನು ಕಣ್ತುಂಬಿಕೊಳ್ಳೋಣ ಎನ್ನುವ ಹೊತ್ತಿಗೆ ಬಸ್ ವೇಗವಾಗಿ ಮುಂದೆ ಚಲಿಸಿತ್ತು. ಎರಡು ರೂಪಾಯಿ ವಾಪಸ್ ಬಂದಿತಲ್ಲ ಎಂಬುದಕ್ಕಿಂತ ಒಬ್ಬ ಪ್ರಾಮಾಣಿಕ ನೌಕರಳ ದರ್ಶನವಾದದ್ದು ಹೆಚ್ಚು ಸಂತೋಷ ಉಂಟುಮಾಡಿತು.

ಕೆ.ವಿ.ವಾಸು, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

‘ಲಡಾಖ್ ಉಳಿಸಿ’ ಹೋರಾಟದ ಸುತ್ತ



ಲಡಾಖ್‌ನ ಪೂರ್ವ ಭಾಗದಲ್ಲಿ ರಸ್ತೆ ನಿರ್ಮಾಣ ಕಾಮಗಾರಿ–ಪಿಟಿಐ ಚಿತ್ರ

ಜಮ್ಮು–ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನವನ್ನು ಕೇಂದ್ರದ ಬಿಜೆಪಿ ಸರ್ಕಾರವು 2019ರ ಆಗಸ್ಟ್‌ನಲ್ಲಿ ತೆಗೆದುಹಾಕಿದಾಗ ಲಡಾಖ್‌ನ ಜನರು ಅದನ್ನು ಸ್ವಾಗತಿಸಿದ್ದರು. ಕೇಂದ್ರದ ಆ ನಿರ್ಧಾರದಿಂದ ಲಡಾಖ್‌ಗೆ ಪ್ರತ್ಯೇಕ ಕೇಂದ್ರಾಡಳಿತ ಪ್ರದೇಶದ ಸ್ಥಾನ ದೊರೆತಿದ್ದೇ ಅದಕ್ಕೆ ಕಾರಣ. ಆದರೆ ಈಗ ಅದೇ ಜನರು ಕೇಂದ್ರ ಸರ್ಕಾರದ ವಿರುದ್ಧ ಬೀದಿಗೆ ಇಳಿದಿದ್ದಾರೆ. ನಮ್ಮ ಹಕ್ಕು ಮತ್ತು ಅಧಿಕಾರಗಳನ್ನು ಸರ್ಕಾರ ಕಸಿದುಕೊಳ್ಳುತ್ತಿದೆ, ಲಡಾಖ್‌ನ ಗಡಿಯನ್ನು ಚೀನಾ ಅತಿಕ್ರಮಿಸುತ್ತಿದ್ದರೂ ಸರ್ಕಾರ ಸುಮ್ಮನಿದೆ ಎಂದು ಈ ಜನರು ಪ್ರತಿಭಟಿಸುತ್ತಿದ್ದಾರೆ. ಕೇಂದ್ರ ಸರ್ಕಾರ ಲಡಾಖ್‌ನಲ್ಲಿ ನಿಷೇಧಾಜ್ಞೆ ಹೇರಿ, ಪ್ರತಿಭಟನೆಯನ್ನು ತಡೆಹಿಡಿದಿದೆ

ಅಪಾರ ಪ್ರಮಾಣದ ಖನಿಜ ನಿಕ್ಷೇಪ

‘ಲಡಾಖ್ ಕೇಂದ್ರಾಡಳಿತ ಪ್ರದೇಶದಲ್ಲಿ ಕಲ್ಲು ಮತ್ತು ಖನಿಜ ಗಣಿಗಾರಿಕೆಗೆ ವಿಪುಲ ಅವಕಾಶಗಳಿವೆ’. ಕೇಂದ್ರ ಸರ್ಕಾರದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ದಿಮೆ (ಎಂಎಸ್‌ಎಂಇ) ಅಭಿವೃದ್ಧಿ ಸಂಸ್ಥೆಯು ಸಿದ್ಧಪಡಿಸಿರುವ ‘ಲೆಹ್ ಜಿಲ್ಲೆಯಲ್ಲಿನ ಕೈಗಾರಿಕಾ ಸ್ಥಿತಿಗತಿಯ ಕಿರುಚಿತ್ರಣ’ ವರದಿಯಲ್ಲಿನ ಉಲ್ಲೇಖವಿದು. ‘ಲಡಾಖ್ ಪ್ರದೇಶದಲ್ಲಿ ಗ್ರಾನೈಟ್, ಚಿನ್ನ, ಆರ್ಸೆನಿಕ್, ಕೊಬಾಲ್ಟ್, ಜಿಪ್ಸಂ, ಸುಣ್ಣದಕಲ್ಲು, ನಿಕ್ಕಲ್, ಯುರೇನಿಯಂ ಮತ್ತು ಇನ್ನೂ ಅನೇಕ ಸ್ವರೂಪದ ಖನಿಜ ಸಂಪತ್ತು ಹೇರಳವಾಗಿವೆ. ಆದರೆ, ಅವುಗಳನ್ನು ಇನ್ನಷ್ಟೇ ಹೊರತೆಗೆಯಬೇಕಿದೆ’ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಲಡಾಖ್‌ನ ನೆಲದಲ್ಲಿ ಲಿಥಿಯಂ ನಿಕ್ಷೇಪವೂ ಅಪಾರ ಪ್ರಮಾಣದಲ್ಲಿ ಇದೆ ಎಂಬುದು ಪತ್ತೆಯಾಗಿದೆ. ಅದರ ಗಣಿಗಾರಿಕೆಗೂ ಸಿದ್ಧತೆಗಳು ನಡೆಯುತ್ತಿವೆ. ಇಲ್ಲಿನ ಜನರು ಗಣಿಗಾರಿಕೆ ಪ್ರಕ್ರಿಯೆಯನ್ನೂ ವಿರೋಧಿಸುತ್ತಿದ್ದಾರೆ. ಅತ್ಯಂತ ಸೂಕ್ಷ್ಮ ಪ್ರದೇಶವಾದ ಇಲ್ಲಿ ಗಣಿಗಾರಿಕೆ ನಡೆಸಿದರೆ, ಪರಿಸರಕ್ಕೆ ತೀವ್ರ ಹಾನಿಯಾಗುತ್ತದೆ. ಅಂತಹ ಚಟುವಟಿಕೆಗಳನ್ನು ಸಂಪೂರ್ಣವಾಗಿ ನಿಲ್ಲಿಸಬೇಕು ಎಂಬುದು ಲಡಾಖ್ ಜನರ ಮತ್ತೊಂದು ಆಗ್ರಹ.



ಸೋನಮ್ ವಾಂಗ್ಚುಕ್ ಮುಂದಾಳತ್ವದಲ್ಲಿ ನಡೆದಿದ್ದ ಉಪವಾಹ ಸತ್ಯಾಗ್ರಹ –ಪಿಟಿಐ ಚಿತ್ರ

ಪ್ರಜಾವಾಣಿ ವಾರ್ತೆ

ಇದೇ ಭಾನುವಾರ ಲಡಾಖ್ ಸಾಮಾಜಿಕ ಸಂಘಟನೆಗಳು, ಸಾಮಾಜಿಕ ಕಾರ್ಯಕರ್ತರು ಮತ್ತು ವಿದ್ಯಾರ್ಥಿಗಳು ‘ಗಡಿಯತ್ತ ನಡಿಗೆ’ ಆಯೋಜಿಸಿದ್ದರು. ಚೀನಾ ಸೈನಿಕರು ಭಾರತದ ಗಡಿಯನ್ನು ಪ್ರವೇಶಿಸಿ ಎಲ್ಲೆಲ್ಲಿ ಒಳಗೆ ಬಂದಿದ್ದಾರೆ ಮತ್ತು ಲಡಾಖ್ ಜನರು ತಮ್ಮದೇ ನೆಲಕ್ಕೆ ಕಾಲಿಡುವುದನ್ನು ಹೇಗೆ ಚೀನಾ ಸೈನಿಕರು ತಡೆಯುತ್ತಿದ್ದಾರೆ ಎಂಬುದನ್ನು ಜಗತ್ತಿನೆದುರು ಸಾಕ್ಷ್ಯ ಸಮೇತ ಬಹಿರಂಗಪಡಿಸುವುದು ಆ ‘ಗಡಿಯತ್ತ ನಡಿಗೆ’ಯ ಉದ್ದೇಶವಾಗಿತ್ತು. ಅಂದಾಜು 10,000 ಲಡಾಖಿಗಳು ಆ ಮೆರವಣಿಗೆಯಲ್ಲಿ ಭಾಗವಹಿಸಲು ಸಿದ್ಧತೆ ನಡೆಸಿದ್ದರು. ಆದರೆ, ಮೆರವಣಿಗೆಗೆ ಒಂದು ದಿನ ಇದ್ದಾಗಲೇ ಅಲ್ಲಿನ ಆಡಳಿತವು ನಿಷೇಧಾಜ್ಞೆ ಹೇರಿತು. ಯಾರೂ ಪೂರ್ವಾನುಮತಿ ಇಲ್ಲದೆ ಪ್ರತಿಭಟನೆ, ರ್‍ಯಾಲಿ, ಮೆರವಣಿಗೆ, ಭಾಷಣ ನಡೆಸುವಂತಿಲ್ಲ ಎಂದು ನಿರ್ಬಂಧ ಹೇರಿತು. ಹೀಗಾಗಿ ಸಂಘಟಕರು ‘ಗಡಿಯತ್ತ ನಡಿಗೆ’ಯನ್ನು ವಾಪಸ್ ಪಡೆದರು.

‘ಗಡಿಯತ್ತ ನಡಿಗೆ’ಯ ಆಯೋಜಕರಲ್ಲಿ ಒಬ್ಬರಾದ ಶಿಕ್ಷಣ ತಜ್ಞ ಮತ್ತು ಪರಿಸರ ಕಾರ್ಯಕರ್ತ ಸೋನಮ್ ವಾಂಗ್ಚುಕ್ ಅವರು ಸರ್ಕಾರದ ‘ನಿಷೇಧಾಜ್ಞೆ’ ಕ್ರಮದ ವಿರುದ್ಧ ಮಾತನಾಡಿದ್ದರು. ‘ಸತ್ಯವನ್ನು ಮಾತನಾಡುವವರನ್ನು ಈ ಸರ್ಕಾರವು ದೇಶದ್ರೋಹಿಗಳು ಎಂದು ಕರೆಯುತ್ತದೆ. ಈಗ ‘ಗಡಿಯತ್ತ ನಡಿಗೆ’ಗೆ ನಿಷೇಧ ಹೇರಿದೆ. ಹೀಗಿದ್ದೂ ನಾವು ಮೆರವಣಿಗೆ ನಡೆಸಲು ಯತ್ನಿಸಿದರೆ ಅದು ಭದ್ರತಾ ಸಂಸ್ಥೆಗಳ ಜತೆಗೆ ಸಂಘರ್ಷಕ್ಕೆ ಕಾರಣವಾಗುತ್ತದೆ. ಆಗ ನಮ್ಮನ್ನು ಭಯೋತ್ಪಾದಕರು ಎಂದೂ ಕರೆಯಬಹುದು. ಹೀಗಾಗಿ ಮೆರವಣಿಗೆ ಕೈಬಿಟ್ಟಿದ್ದೇವೆ’ ಎಂದು ಘೋಷಿಸಿದ್ದರು. ಆದರೆ ಇದೇ ಸೋನಮ್ ವಾಂಗ್ಚುಕ್ ಅವರು 2019ರಲ್ಲಿ ಕೇಂದ್ರ ಸರ್ಕಾರದ ನಿರ್ಧಾರವನ್ನು ಸ್ವಾಗತಿಸಿದ್ದರು. ಆದರದು ಕೆಲವೇ ತಿಂಗಳಲ್ಲಿ ಬದಲಾಗಿತ್ತು.

ಲಡಾಖ್ ಜನರು ಕೇಂದ್ರ ಸರ್ಕಾರದ ನೀತಿಗಳ ವಿರುದ್ಧ ಹೋರಾಟ ನಡೆಸಿದ್ದು ಇದೇ ಮೊದಲಲ್ಲ. 2020ರಿಂದಲೂ ಅಂತಹ ಸಣ್ಣ–ಪುಟ್ಟ ಹೋರಾಟಗಳು ನಡೆಯುತ್ತಲೇ ಇವೆ. ಅದು ಆರಂಭವಾದದ್ದು 2020ರ ಅಂತ್ಯದ ವೇಳೆಗೆ.

2020ರಲ್ಲಿ ಲಡಾಖ್‌ನ ಗಾಲ್ವಾನ್ ಕಣಿವೆಯಲ್ಲಿ ಮತ್ತು ಪ್ಯಾಂಗಾಂಗ್ ಸರೋವರದ ಬಳಿ ಚೀನಾ ಸೈನಿಕರು ಭಾರತದ ಗಡಿಯೊಳಗೆ ಬಂದಿದ್ದರಿಂದ ಭಾರತದ ಸೈನಿಕರೊಟ್ಟಿಗೆ ಸಂಘರ್ಷ ಆಗಿತ್ತು. ಆ ಸಂಘರ್ಷಗಳ ನಂತರ ಭಾರತದ ನೆಲವನ್ನು ಚೀನಾ ಸೈನಿಕರಿಗೆ ಬಿಟ್ಟುಕೊಡಲಾಗಿದೆ ಎಂದು ಲಡಾಖಿ ಜನರು ಆರೋಪಿಸಿದ್ದರು. ಕೇಂದ್ರ ಸರ್ಕಾರ ಅದನ್ನು ನಿರಾಕರಿಸಿತ್ತು. ವರ್ಷ ಕಳೆದಂತೆ ಅಂತಹ ಆರೋಪ ಹೆಚ್ಚಾಗತೊಡಗಿತು. ಇದೇ ಜನವರಿಯಲ್ಲಿ ಲಡಾಖಿ ಕುರಿಗಾಹಿಗಳು ಚೀನೀ ಸೈನಿಕರೊಟ್ಟಿಗೆ ಮಾತಿನ ಚಕಮಕಿ ನಡೆಸುತ್ತಿರುವ ದೃಶ್ಯವಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಯಿತು. ನಮ್ಮದೇ ನೆಲದಲ್ಲಿ ಕುರಿಗಳನ್ನು ಮೇಯಿಸಲು ಚೀನಾ ಸೈನಿಕರು ತಡೆಒಡ್ಡುತ್ತಿದ್ದಾರೆ. ಚೀನಾ ಸೈನಿಕರು ನಮ್ಮ ನೆಲವನ್ನು ಅತಿಕ್ರಮಿಸಿದ್ದಾರೆ ಎಂದು ಲಡಾಖ್ ಜನರು ಆರೋಪಿಸಿದರು. ಯಥಾಪ್ರಕಾರ ಕೇಂದ್ರ ಸರ್ಕಾರ ಅದನ್ನು ನಿರಾಕರಿಸಿತು.

ಸರ್ಕಾರದ ನಿರ್ಧಾರವನ್ನು ಅಲ್ಲಗಳೆಯುವ ಮತ್ತು ಚೀನಾ ಸೈನಿಕರು ಭಾರತದ ನೆಲವನ್ನು ಅತಿಕ್ರಮಿಸಿದ್ದಾರೆ ಎಂಬುದನ್ನು ತೋರಿಸುವ ಸಲುವಾಗಿಯೇ ‘ಗಡಿಯತ್ತ ನಡಿಗೆ’ಯನ್ನು ಆಯೋಜಿಸಲಾಗಿತ್ತು. ಪೂರ್ವ ಲಡಾಖ್‌ನ ಹಲವು ಗಡಿಭಾಗಗಳಿಗೆ ಹೋಗಿ, ಅಲ್ಲಿನ ಸ್ಥಿತಿಯನ್ನು ತೋರಿಸಲು ಯೋಜಿಸಲಾಗಿತ್ತು. ‘ಇದರಿಂದ ಶಾಂತಿ ಕದಡುವ ಅಪಾಯವಿದೆ’ ಎಂದ ಆಡಳಿತವು, ಮೆರವಣಿಗೆಗೆ ತಡೆಯೊಡ್ಡಿತು. ‘ಕೇಂದ್ರ ಸರ್ಕಾರಕ್ಕೆ ದೇಶದ ಭದ್ರತೆ ಬಗ್ಗೆ ಕಾಳಜಿಯೇ ಇಲ್ಲ. ಚುನಾವಣೆ ಗೆಲ್ಲುವುದಷ್ಟೇ ಅದಕ್ಕೆ ಮುಖ್ಯ’ ಎಂದು ಮೆರವಣಿಗೆ ಆಯೋಜಕರು ಆರೋಪಿಸಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲೂ ಸರ್ಕಾರದ ಈ ಕ್ರಮದ ಬಗ್ಗೆ ಟೀಕೆ ವ್ಯಕ್ತವಾಗುತ್ತಿದೆ. ಬಹುತೇಕ ಜನರು, ಗಡಿಯಲ್ಲಿ ಸಮಸ್ಯೆ ಇದೆ ಎಂಬುದು ಸರ್ಕಾರಕ್ಕೂ ಗೊತ್ತಿದೆ. ಗಡಿ ಮೆರವಣಿಗೆ ನಡೆದರೆ ಆ ಸಮಸ್ಯೆಗಳು ಜಗಜ್ಜಾಹೀರಾಗುತ್ತವೆ. ಅದನ್ನು ತಪ್ಪಿಸುವ ಉದ್ದೇಶದಿಂದಲೇ ಕೇಂದ್ರ ಸರ್ಕಾರವು ನಿಷೇಧಾಜ್ಞೆ ಹೇರಿದೆ ಎಂದು ಟೀಕಿಸುತ್ತಿದ್ದಾರೆ. ಆದರೆ ಈ ಆರೋಪ ಮತ್ತು ಟೀಕೆಯ ಬಗ್ಗೆ ಕೇಂದ್ರ ಸರ್ಕಾರದ ಮುಂದಾಳುಗಳಾಗಲೀ ಪ್ರತಿನಿಧಿಗಳಾಗಲೀ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.



ಲಡಾಖ್‌ನ ಪ್ಯಾಂಗಾಂಗ್ ಸರೋವರದ ದಂಡೆಯಲ್ಲಿ ದನಗಾಹಿಗಳು ಮತ್ತು ಜಾನುವಾರುಗಳು... ಸರೋವರದ ಉತ್ತರದ ದಂಡೆಯ ಹಲವು ಪ್ರದೇಶವನ್ನು ಚೀನಾ ಸೈನಿಕರು ಅತಿಕ್ರಮಿಸಿದ್ದಾರೆ ಎಂಬುದು ಅಲ್ಲಿನ ಜನರ ಆರೋಪ. ಉಪಗ್ರಹ ಚಿತ್ರಗಳೂ ಆ ಆರೋಪವನ್ನು ದೃಢಪಡಿಸುತ್ತವೆ –ಎಎಫ್‌ಪಿ ಚಿತ್ರ

ಹಕ್ಕು ಮರಳಿ ಪಡೆಯಲು ಸತ್ಯಾಗ್ರಹ

2019ರಲ್ಲಿ ಲಡಾಖ್ ಅನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿಸಿದಾಗ ಲಡಾಖಿ ಜನರು ಹಲವು ಕನಸುಗಳನ್ನು ಕಂಡಿದ್ದರು. ಮುಂದೊಂದು ದಿನ ಲಡಾಖ್ ಅನ್ನು ಸಂವಿಧಾನದ ಆರನೇ ಪರಿಚ್ಛೇದಕ್ಕೆ ಸೇರಿಸಲಾಗುತ್ತದೆ, ಲಡಾಖ್‌ಗೆ ರಾಜ್ಯದ ಸ್ಥಾನ ದೊರೆಯುತ್ತದೆ ಎಂಬ ಬೇಡಿಕೆಗಳು ಕೈಗೂಡುತ್ತವೆ ಎಂದು ಎಣಿಸಿದ್ದರು. ಸೋನಮ್ ವಾಂಗ್ಚುಕ್ ಸೇರಿದಂತೆ ಹಲವು ಸಾಮಾಜಿಕ ಕಾರ್ಯಕರ್ತರು ಇಂಥದ್ದೇ ಮಾತುಗಳನ್ನು ಆಗ ಆಡಿದ್ದರು.

ಆದರೆ ಜಮ್ಮು–ಕಾಶ್ಮೀರದ ಜತೆಗೆ ಲಡಾಖ್‌ನ ವಿಶೇಷ ಸ್ಥಾನವೂ ರದ್ದಾಯಿತು. ಇದರಿಂದ ಹೊರರಾಜ್ಯದ ಮಂದಿ ಲಡಾಖ್‌ನಲ್ಲಿ ಜಮೀನು ಖರೀದಿಸಲು ಮತ್ತು ಸರ್ಕಾರಿ ನೇಮಕಾತಿಯಲ್ಲಿ ಭಾಗವಹಿಸಲು ಸಾಧ್ಯವಾಯಿತು. ಪ್ರಬಲ ಉದ್ಯಮಿಗಳು ಭೂಮಿ ಖರೀದಿಸಿ, ಗಣಿಗಾರಿಕೆ ಮತ್ತು ಕಾರ್ಖಾನೆ ಆರಂಭಿಸಲು ಕೇಂದ್ರ ಸರ್ಕಾರ ಅವಕಾಶ ಕೊಟ್ಟಿತು. ನಿರ್ಮಾಣ ಕಾಮಗಾರಿಗಳೂ ಆರಂಭವಾದವು. ಲಡಾಖಿ ಜನರು ತಮ್ಮ ನಾಡಿಗೆ ಎದುರಾಗಿರುವ ಅಪಾಯವನ್ನು ಗ್ರಹಿಸಿದ್ದು ಅಲ್ಲಿಂದಲೇ. ಲಡಾಖ್ ಭಾರತ ಮಾತ್ರವಲ್ಲ, ಜಗತ್ತಿನ ಕೆಲವೇ ಅತ್ಯಂತ ಸೂಕ್ಷ್ಮ ಪರಿಸರ ಪ್ರದೇಶಗಳಲ್ಲಿ ಒಂದು. ಗಣಿಗಾರಿಕೆ, ಸರ್ವಋತು ಹೆದ್ದಾರಿ ನಿರ್ಮಾಣದಂತಹ ಕಾಮಗಾರಿಗಳಿಂದ ಅಲ್ಲಿನ ಪರಿಸರಕ್ಕೆ ತೀವ್ರ ಹಾನಿಯಾಗುತ್ತಿದೆ ಎಂಬುದು ಲಡಾಖಿ ಜನರ ಹೋರಾಟಕ್ಕೆ ಮೆಟ್ಟಿಲಾಯಿತು.


ವಿಶೇಷ ಸ್ಥಾನ ರದ್ದಾಗುವುದರ ಜತೆಗೆ ಲೆಹ್ ಮತ್ತು ಕಾರ್ಗಿಲ್ ಜಿಲ್ಲಾ ಮಂಡಳಿಗಳಿಗೆ ಇದ್ದ ಅಧಿಕಾರಗಳನ್ನು ಕೇಂದ್ರ ಸರ್ಕಾರವು ಮೊಟಕುಗೊಳಿಸಿತು. ಈ ಮಂಡಳಿಗಳು ಭೂಮಿಯ ಹಕ್ಕು ನಿರ್ಧಾರ, ಉದ್ಯಮ–ಕೈಗಾರಿಕೆಗಳಿಗೆ ಭೂಮಿ ಹಂಚಿಕೆಯ ಅಧಿಕಾರವನ್ನು ಹೊಂದಿದ್ದವು. ಈಗ ಆ ಅಧಿಕಾರವನ್ನು ಕೇಂದ್ರಾಡಳಿತ ಪ್ರದೇಶದ ಅಧಿಕಾರಿಗಳಿಗೆ ನೀಡಲಾಗಿದೆ. ಇದು ಸಹ ಅಲ್ಲಿನ ಜನರಲ್ಲಿ ಅತಂತ್ರದ ಭಾವವನ್ನು ಮೂಡಿಸಿದೆ. ಈ ಅಧಿಕಾರಗಳನ್ನು ಮರಳಿ ಪಡೆಯಬೇಕು ಎಂಬುದೂ ಈ ಹೋರಾಟದ ಮತ್ತೊಂದು ಆಗ್ರಹ.

ಇದರ ಸಂಬಂಧವೇ 2023ರ ಜನವರಿ ಮತ್ತು ಫೆಬ್ರುವರಿಯಲ್ಲಿ ಸೋನಮ್ ವಾಂಗ್ಚುಕ್ ಉಪವಾಸ ಸತ್ಯಾಗ್ರಹ ನಡೆಸಿದ್ದರು. ಆಗಲೂ ಇಂಥದ್ದೇ ಬಹಿರಂಗ ರ್‍ಯಾಲಿ ನಡೆಸಲು ಸಿದ್ಧತೆ ನಡೆಸಿದ್ದರು. ಆಗ ಕೇಂದ್ರ ಸರ್ಕಾರವು ಅವರನ್ನು ಗೃಹಬಂಧನದಲ್ಲಿ ಇರಿಸಿ, ರ್‍ಯಾಲಿಯನ್ನು ತಡೆಹಿಡಿಯಿತು. ಲಡಾಖ್‌ನಲ್ಲಿ ಎಲ್ಲವೂ ಸರಿ ಇಲ್ಲ ಎಂಬ ಅಲ್ಲಿನ ಜನರ ಕೂಗು ಭಾರತದ ಬೇರೆ ಭಾಗಗಳ ಜನರಿಗೆ ಕೇಳಿದ್ದು ಆಗಲೇ. ಅಂದಿನಿಂದ ಈವರೆಗೆ ಅಲ್ಲಿನ ಜನರು ಇಂತಹ ಹಲವು ಸತ್ಯಾಗ್ರಹಗಳನ್ನು ನಡೆಸಿದ್ದಾರೆ. ಇದೇ ಜನವರಿಯಲ್ಲಿ, ಫೆಬ್ರುವರಿಯಲ್ಲಿ ಸಣ್ಣ ಮಟ್ಟದ ಉಪವಾಸ ಸತ್ಯಾಗ್ರಹಗಳು ನಡೆದಿದ್ದವು. ಮಾರ್ಚ್‌ನಲ್ಲಿ ಸೋನಮ್ ನೇತೃತ್ವದಲ್ಲಿ 21 ದಿನ ಉಪವಾಸ ಸತ್ಯಾಗ್ರಹ ನಡೆದಿತ್ತು.

ಪರಿಸರಕ್ಕೆ ಮಾರಕವಾಗುವಂತಹ ಅಭಿವೃದ್ಧಿ ಮಾದರಿಗಳನ್ನು ತಡೆಹಿಡಿಯುವುದು ಮತ್ತು ತಮ್ಮ ಹಕ್ಕುಗಳನ್ನು ಮರಳಿ ಪಡೆಯುವುದು ಈ ಸತ್ಯಾಗ್ರಹಗಳ ಉದ್ದೇಶವಾಗಿತ್ತು.

ಆಧಾರ: ಪಿಟಿಐ, ಬಿಬಿಸಿ, ಸೋನಮ್ ವಾಂಗ್ಚುಕ್ ಅವರ ಟ್ವೀಟ್‌ಗಳು ಮತ್ತು ಯುಟ್ಯೂಬ್ ವಿಡಿಯೊ, ಗೃಹ ವ್ಯವಹಾರಗಳ ಸಂಸದೀಯ ಸಮಿತಿ ವರದಿ–2022, ಕೇಂದ್ರ ಸರ್ಕಾರದ ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆ ಪತ್ರಿಕಾ ಪ್ರಕಟಣೆ, ಕೇಂದ್ರ ಸರ್ಕಾರದ ಎಂಎಸ್‌ಎಂಇ ಅಭಿವೃದ್ಧಿ ಸಂಸ್ಥೆಯ ‘ಲೆಹ್‌ನಲ್ಲಿ ಕೈಗಾರಿಕಾ ಸ್ಥಿತಿಗತಿ’ ವರದಿ

‘ನಾಡಪ್ರಭು ಕೆಂಪೇಗೌಡ’ರ ಕಥೆ



ನಾಡಪ್ರಭು ಕೆಂಪೇಗೌಡರ ಜೀವನವನ್ನು ಆಧರಿಸಿದ ‘ಧರ್ಮಬೀರು ನಾಡಪ್ರಭು ಕೆಂಪೇಗೌಡ’ ಚಿತ್ರ ಸೆಟ್ಟೇರಲು ಸಜ್ಜಾಗಿದೆ. ಅಮೃತವರ್ಷಿಣಿ, ಇನ್‌ಸ್ಪೆಕ್ಟರ್ ವಿಕ್ರಂದಂತಹ ಸೂಪರ್ ಹಿಟ್ ಚಿತ್ರಗಳನ್ನು ನಿರ್ದೇಶಿಸಿದ್ದ ದಿನೇಶ್ ಬಾಬು ‘ಕೆಂಪೇಗೌಡರಿಗೆ’ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

ವೃತ್ತಿಯಲ್ಲಿ ವೈದ್ಯರಾಗಿರುವ ಸಂಗೀತ ನಿರ್ದೇಶಕ ಕಿರಣ್ ತೋಟಂಬೈಲ್ ಈ ಚಿತ್ರ ನಿರ್ಮಾಣಕ್ಕೆ ಮುಂದಾಗಿದ್ದಾರೆ. ಧರ್ಮೇಂದ್ರ ಕುಮಾರ್ ಅರೇನಹಳ್ಳಿ ಕಥೆ ಬರೆದಿದ್ದು, ಸಂಕೇತ್ ಎಂವೈಎಸ್ ಛಾಯಾಚಿತ್ರಗ್ರಹಣವಿದೆ. ಉಜ್ವಲ್ ಕುಲಕರ್ಣಿ ಸಂಕಲನವಿದ್ದು, ನಿರ್ಮಾಪಕರದ್ದೇ ಸಂಗೀತವಿದೆ.

‘ನಾನು ಕೆಂಪೇಗೌಡ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿ. ಆಗಲೇ ಅವರ ಬಗ್ಗೆ ಸಿನಿಮಾ ಮಾಡಬೇಕೆಂಬ ಕನಸು ಕಂಡಿದ್ದೆ. ಜನಪ್ರಿಯ ನಟರೊಬ್ಬರು ಕೆಂಪೇಗೌಡರಾಗಿ ರಾರಾಜಿಸಲಿದ್ದಾರೆ. ಶೀಘ್ರದಲ್ಲಿಯೇ ಆ ಬಗ್ಗೆ ಮಾಹಿತಿ ನೀಡುತ್ತೇವೆ. ಮೇ ಅಥವಾ ಜೂನ್ ತಿಂಗಳಲ್ಲಿ ಚಿತ್ರ ಸೆಟ್ಟೇರಲಿದೆ’ ಎನ್ನುತ್ತಾರೆ ನಿರ್ಮಾಪಕ.

ವಿ.ನಾಗೇಂದ್ರ ಪ್ರಸಾದ್ ಹಾಗೂ ಸಂತೋಷ್ ನಾಯಕ್ ಸಾಹಿತ್ಯ, ಮಾಸ್ತಿ ಹಾಗೂ ರಘು ನಿಡುವಳ್ಳಿ ಸಂಭಾಷಣೆ ಚಿತ್ರಕ್ಕದೆ. ಕನ್ನಡ ಹಾಗೂ ಇಂಗ್ಲಿಷ್ ಭಾಷೆಯಲ್ಲಿ ಚಿತ್ರ ನಿರ್ಮಾಣವಾಗಲಿದೆ.

ಸೆಟ್ಟೇರಿದಳು ‘ಸುಮಾ’



ಮಹಿಳಾ ಪ್ರಧಾನ ಕಥಾಹಂದರ ಹೊಂದಿರುವ ‘ಸುಮಾ’ ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಈ ಹಿಂದೆ ‘ಸುಳಿ’ ಸೇರಿದಂತೆ ನಾಲ್ಕು ಚಿತ್ರಗಳನ್ನು ನಿರ್ದೇಶಿಸಿದ್ದ ರಶ್ಮಿ ಎಸ್. ಈ ಚಿತ್ರಕ್ಕೆ ಕಥೆ ಬರೆದು, ಆ್ಯಕ್ಷನ್-ಕಟ್ ಹೇಳುತ್ತಿದ್ದಾರೆ. ಓಂ ಸಾಯಿ ಸಿನೆಮಾಸ್ ಬ್ಯಾನರಿನಲ್ಲಿ ನಿರ್ಮಾಣವಾಗುತ್ತಿದೆ.

‘ಸುಮಾ’ ಅಂದ್ರೆ ಸಂಪೂರ್ಣ ಮೊಗ್ಗು ಅಲ್ಲದ, ಪೂರ್ಣ ಅರಳಿಯೂ ಇರದಂತಹ ಹೂವು. ಈ ಸಿನಿಮಾದ ನಾಯಕಿಯ ಪಾತ್ರ ಕೂಡ ಹಾಗೇ ಇದೆ. ನಮ್ಮ ನಡುವೆಯೇ ಇರುವಂಥ ಹುಡುಗಿಯೊಬ್ಬಳ ಅಂತರಂಗದ ಕಥೆ ಈ ಸಿನಿಮಾದಲ್ಲಿದೆ. ಮುಂದಿನ ದಿನಗಳಲ್ಲಿ ಚಿತ್ರದ ನಾಯಕಿ ಮತ್ತು ಸಿನಿಮಾದ ಬಗ್ಗೆ ಇನ್ನಷ್ಟು ಮಾಹಿತಿ ನೀಡಲಿದ್ದೇವೆ’ ಎಂದರು ನಿರ್ದೇಶಕಿ.

ಮೈಸೂರು ಮೂಲದ ಪ್ರದೀಪ್ ಗೌಡ ಚಿತ್ರದ ನಾಯಕ. ಉಳಿದಂತೆ ಬಲ ರಾಜವಾಡಿ, ರೇಣು ಶಿಕಾರಿ, ಮುರಳೀಧರ್ ಡಿ.ಆರ್ ಮುಂತಾದವರು ತಾರಾಗಣದಲ್ಲಿದ್ದಾರೆ. ಒಟ್ಟು 25 ದಿನಗಳ ಕಾಲ ಒಂದೇ ಹಂತದಲ್ಲಿ ಮಂಡ್ಯ, ಮದ್ದೂರು, ಆಲಭುಜನಹಳ್ಳಿ, ಕೆ. ಎಂ ದೊಡ್ಡಿ, ನಗರಕೆರೆ ಸುತ್ತಮುತ್ತ ಸಿನಿಮಾದ ಚಿತ್ರೀಕರಣ ನಡೆಯಲಿದೆ.


ಶಂಖು, ನಟರಾಜ್ ಛಾಯಾಚಿತ್ರಗ್ರಹಣ, ಮುತ್ತುರಾಜ್ ಟಿ. ಸಂಕಲನವಿದೆ. ಸಿನಿಮಾದ ಹಾಡುಗಳಿಗೆ ಎನ್. ರಾಜು ಸಂಗೀತವಿದೆ. ಆಗಸ್ಟ್ ವೇಳೆಗೆ ‘ಸುಮಾ’ ಸಿನಿಮಾದ ಕೆಲಸಗಳನ್ನು ಪೂರ್ಣಗೊಳಿಸಿ, ಪ್ರೇಕ್ಷಕರ ಮುಂದೆ ತರುವ ಯೋಚನೆಯಲ್ಲಿದೆ ಚಿತ್ರತಂಡ.

ಗುಂಡಣ್ಣ



ಗೊಬ್ಬರಕ್ಕೂ ಸಿಗಲಿ ಗೌರವ

ನುಡಿ ಬೆಳಗು



ಎಚ್.ಎಸ್.ನವೀನಕುಮಾರ್, ಹೊಸದುರ್ಗ

ರಸ ಋಷಿ ಕುವೆಂಪುರವರು ನಮ್ಮ ಸುತ್ತಲೂ ಇರುವ ಸುಂದರ ಪ್ರಕೃತಿಯ ಕುರಿತು ಅದ್ಭುತ ಕವಿತೆಗಳನ್ನು ರಚಿಸಿದ್ದಾರೆ. ಉದಯ ರವಿಯ ಚೆಲುವು, ಮುತ್ತಿನ ಮಣಿಗಳಂತೆ ಗೋಚರಿಸುವ ಇಬ್ಬನಿಯ ಬೆರಗು, ಎದೆಯಲಿ ನಲುಮೆಯ ಚಿಲುಮೆಯನ್ನು ಚಿಮ್ಮಿಸುವ ಹೂವು, ಇವುಗಳು ಕವಿಯ ಕವಿತಾ ವಸ್ತುಗಳಾಗಿರುವಂತೆಯೇ, ಈ ಜಗತ್ತಿನಲ್ಲಿ ಯಾರೂ ಮುಖ್ಯರಲ್ಲ ಯಾರು ಅಮುಖ್ಯರಲ್ಲ ಎಂದು ನಂಬಿರುವ ಕವಿಯಿಂದ ಗೊಬ್ಬರ ಕೂಡ ಕಾವ್ಯವಾಗಿ ಹೊರಹೊಮ್ಮಿರುವುದು ವಿಶೇಷ. ಕುವೆಂಪುರವರ ‘ಕೋಗಿಲೆ ಮತ್ತು ಸೋವಿಯತ್ ರಷ್ಯಾ’ ಕವನ ಸಂಕಲನದಲ್ಲಿರುವ ‘ಗೊಬ್ಬರ’ ಎನ್ನುವ ದೀರ್ಘ ಕವಿತೆ, ಸೃಜನಶೀಲನಾದ ಹಾಗೂ ಅಷ್ಟೇ ಸಂವೇದನಾಶೀಲನಾದ ವ್ಯಕ್ತಿ ಒಬ್ಬ ಹೇಗೆ ಚಿಂತಿಸಬಹುದು ಎನ್ನುವುದಕ್ಕೆ ಹಿಡಿದ ಕನ್ನಡಿ.

ನಮಗೆ ಮರದ ತುದಿಯಲ್ಲಿ ಅರಳಿ ನಿಂತು, ತಂಗಾಳಿಗೊಲೆವ ಸುಂದರ ಹೂವು ಕಾಣಿಸುತ್ತದೆ. ಅದರ ಚೆಲುವು, ಪರಿಮಳ ನಮ್ಮ ಕಣ್ಮನ ಸೆಳೆಯುತ್ತದೆ. ಆದರೆ ಈ ಮರವನ್ನು ಹಿಡಿದೆತ್ತಿ ನಿಲ್ಲಿಸಿದ ಮರದ ಒಳ ಆಳದ ಬೇರಿನ, ನಿಸ್ವಾರ್ಥ ಕಾಯಕ ನಮ್ಮ ಕಣ್ಣಿಗೆ ಗೋಚರಿಸುವುದಿಲ್ಲ. ಹೂವಿನ ಸೌಂದರ್ಯ ವಿಶೇಷ ಪದಗಳಿಂದ ವರ್ಣಿಸಲ್ಪಡುತ್ತದೆ, ಹಣ್ಣಿನ ಸವಿ ಪ್ರಶಂಸೆಗೆ ಪಾತ್ರವಾಗುತ್ತದೆ. ಆದರೆ ಈ ಸೌಂದರ್ಯಕ್ಕೆ, ಸವಿಗೆ ಜೀವವನ್ನಿತ್ತ ಗೊಬ್ಬರದ ನಿಸ್ಪೃಹ ಸೇವೆ ಕಣ್ಣಿಗೆ ಕಾಣಿಸುವುದೇ ಇಲ್ಲ. ಆದರೆ ಸೂಕ್ಷ್ಮಗ್ರಹಿಕೆಯ, ಜೀವನ ಪ್ರೀತಿಯುಳ್ಳ ಕವಿಗೆ, ಇಲ್ಲಿ ‘ಗೊಬ್ಬರ’ ಕೂಡಾ ಕವಿತಾ ವಸ್ತುವಾಗುತ್ತದೆ.

‘ಗೊಬ್ಬರವನಲ್ಲಗಳೆಯುವೆ ಏಕೆ ಮರದ ತುದಿ ನಲ್ಗಂಪುವೆತ್ತು ತಂಗಾಳಿಗೊಲೆವ ಹೂವೆ? ಬೇರುಗಳಿಗಿಲ್ಲದಿರೆ ಗೊಬ್ಬರಂ ಹೇಳೆನಗೆ ವೃಕ್ಷಕೆಲ್ಲಿಯದು ಹೂವಿನ ಹಬ್ಬ? ಗೊಬ್ಬರದ ಜೀವವನೆ ಹೀರಿ ಕೊಬ್ಬಿಹ ಹೂವೆ, ಕಬ್ಬಕ್ಕೆ ನೀ ಮಾತ್ರ ವಸ್ತುವೇಂ? ನಿನ್ನಂತೆ ಗೊಬ್ಬರಂ ಕಬ್ಬಕ್ಕೆ ಸಾಮಗ್ರಿಯಾಗ ಬಾರದೆ ಹೇಳು? ಗೊಬ್ಬರದ ಸತ್ವವನ್ನು ಹೀರಿ ತನ್ನ ಸೌಂದರ್ಯದಿಂದ ಕೊಬ್ಬುತ್ತಿರುವ ಹೂವನ್ನು ಕವಿ, ಬೇರುಗಳಿಗೆ ಗೊಬ್ಬರವಿಲ್ಲದಿದ್ದರೆ ವೃಕ್ಷಕ್ಕೆ ಎಲ್ಲಿಯ ಹೂವಿನ ಹಬ್ಬ?’ ಎಂಬುದಾಗಿ ಕುವೆಂಪು ಪ್ರಶ್ನಿಸುತ್ತಾರೆ. ಜೊತೆಗೆ ಇಂದು ನಗುತ್ತಿರುವ ಹೂವು ನಾಳೆ ಬಾಡಿ ನೆಲಕ್ಕೆ ಬಿದ್ದು ಗೊಬ್ಬರವಾಗಲೇಬೇಕು. ಇದು ಪ್ರಕೃತಿಯ ನಿಯಮ. ಹೂವಿನ ಭೋಗದ ಪರಿಮಳದ ಹಿಂದೆ, ಗೊಬ್ಬರದ ಮಣ್ಣಿನ ವಾಸನೆಯ ಪುಷ್ಟಿ ಇದೆ. ಅಂತೆಯೇ ನಾವು ಬಾಯಿ ಚಪ್ಪರಿಸುತ್ತಾ ಸವಿಯುವ ಫಲದ ಸಿಹಿಯಲ್ಲಿ, ವಾಸನೆ ಎಂದು ಮೂಗು ಮುರಿವ ಗೊಬ್ಬರದ ಪಾಲು ಬಹಳ ದೊಡ್ಡದು.

ಇದೇ ರೀತಿ ನಮ್ಮ ಬದುಕನ್ನು ಹಿರಿದಾಗಿಸಿ, ನಮಗೆ ಗೊಬ್ಬರದಂತೆ ಸತ್ವವನ್ನು, ಪುಷ್ಟಿಯನ್ನು ಕೊಟ್ಟು ಮರೆಯಾದವರೆಷ್ಟೋ?

ಆದರೆ ಈ ಜಗತ್ತಿನ ಕಣ್ಣಿಗೆ ಬೀಳುವುದು ಹೊರಗಿನ ಥಳಕು ಮಾತ್ರ. ಉತ್ತಮ ಫಲಕ್ಕೆ ಕಾರಣವಾಗುವ ಗೊಬ್ಬರಕ್ಕೆ ನಿಜವಾದ ಬೆಲೆ ಸಿಕ್ಕಲೇಬೇಕು. ಅದರೆಡೆಗೆ ತಿರಸ್ಕಾರದ ನೋಟ ಸಲ್ಲ. ಅಂತೆಯೇ ನಮ್ಮ ಬದುಕನ್ನು ಹಸನಾಗಿಸಲು ತೆರೆ ಮರೆಯಲ್ಲಿ ನಿಂತು ಶ್ರಮಿಸಿದವರ ನಿಸ್ವಾರ್ಥ ಸೇವೆಗೂ ಸೂಕ್ತ ಮನ್ನಣೆ ಸದಾ ದೊರಕಬೇಕು. ಆ ಕೃತಜ್ಞತಾ ಭಾವ ಸದಾ ನಮ್ಮಲ್ಲಿರಬೇಕಲ್ಲವೇ?

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಏಪ್ರಿಲ್ 8, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣ ಅಮಾವಾಸ್ಯೆ ಗಂ. 23-51 ನಕ್ಷತ್ರ: ಉತ್ತರಾಭಾದ್ರಾ ಗಂ. 10-13 ಯೋಗ: ಐಂದ್ರ ಗಂ. 18-14 ಕರಣ: ಚತುಷ್ಪಾದ ಗಂ. 13-36, ಮೀನ ಮಾಸದ 24 ನೇ ದಿನ, ಮಳೆನಕ್ಷತ್ರ: ರೇವತಿ 3. ರಾಹುಕಾಲ : ಬೆಳಿಗ್ಗೆ 07-30 - 09-00
ಸೂರ್ಯೋದಯ : 06-25 ಸೂರ್ಯಾಸ್ತ : 06-39
ಮುಸ್ಲಿಂ ದಿನಾಂಕ : 28 ರಂಜಾನ್
ಅದೃಷ್ಟ ಸಂಖ್ಯೆ : 10, 9

ಮೇಷ: ಹೊಸ ಮನೆ ಕೊಳ್ಳುವ ಪ್ರಯತ್ನಕ್ಕೆ ಎಲ್ಲಾ ರೀತಿಯಲ್ಲಿಯೂ ಚಾಲನೆ ಸಿಗುವುದು. ಪತ್ನಿಯ ಆರೋಗ್ಯದಲ್ಲಿ ರಕ್ತದೊತ್ತಡದಂತಹ ಸಮಸ್ಯೆಗಳು ಉಂಟಾಗುತ್ತದೆ. ಆಟಿಕೆ ವ್ಯಾಪಾರದಿಂದ ಅಧಿಕ ಲಾಭವನ್ನು ಪಡೆಯಬಹುದು.

ವೃಷಭ: ಕೌಟುಂಬಿಕವಾಗಿ ತೀರ್ಮಾನ ತೆಗೆದುಕೊಳ್ಳುವ ವಿಚಾರದಲ್ಲಿ ಏಕಮುಖ ನಿರ್ಧಾರ ಬೇಡ. ಸಿಹಿತಿಂಡಿ ವ್ಯಾಪಾರಿಗಳಿಗೆ ಲಾಭ–ನಷ್ಟದ ಮಿಶ್ರಫಲ ಅನುಭವಕ್ಕೆ ಬರಲಿದೆ.

ಮಿಥುನ: ಆಸೆ ಆಕಾಂಕ್ಷೆಯನ್ನು ಸಾಧ್ಯವಾದಷ್ಟು ನಿಯಂತ್ರಿಸಿಕೊಂಡಲ್ಲಿ, ಋಣ ಮುಕ್ತರಾಗುವ ಅವಕಾಶ ಒದಗಲಿದೆ. ಹಂತಹಂತವಾಗಿ ಸುಧಾರಿಸಲಿರುವ ಪರಿಸ್ಥಿತಿಯು ಹೆಚ್ಚಿನ ನಿರಾಶೆಯನ್ನು ತರದು.

ಕರ್ಕಾಟಕ: ಪರಿಶ್ರಮದ ಜತೆ ಬುದ್ಧಿವಂತಿಕೆ, ಅಧಿಕ ಸಮಯವನ್ನು ವೃತ್ತಿಯ ಕೆಲಸಕ್ಕೆ ಮೀಸಲಿಡಿ. ಆಲಸ್ಯತನವನ್ನು ದೂರಮಾಡಿ. ವ್ಯಾಪಾರ ವ್ಯವಹಾರ ಬಗೆಗೆ ಮಕ್ಕಳಿಗೆ ತಿಳಿಸಿಕೊಡುವಿರಿ. ದೂರ ಸಂಚಾರದ ಲಕ್ಷಣಗಳಿವೆ.

ಸಿಂಹ: ಜಾಣ್ಮೆಯಿಂದ ವ್ಯವಹರಿಸಿದರೆ ಪರಿಸ್ಥಿತಿಯ ಲಾಭವನ್ನು ಪಡೆಯುವಿರಿ. ಜನರ ಮೆಚ್ಚುಗೆಗೆ ಪಾತ್ರರಾಗುವಿರಿ. ವಿದ್ಯಾರ್ಥಿಗಳು ಓದಿನಲ್ಲಿ ಏಕಾಗ್ರತೆಯನ್ನು ಸಾಧಿಸುವುದರಿಂದ ಗುರಿಯನ್ನು ತಲುಪಬಹುದು.

ಕನ್ಯಾ: ಬರಬೇಕಾಗಿದ್ದ ಹಣಕ್ಕೆ ತುಸು ಅಡಚಣೆಗಳಿದ್ದು, ನಿವಾರಿಸಿಕೊಳ್ಳಬೇಕಾಗುವುದು. ಉದ್ಯೋಗದಲ್ಲಿ ಸಮಾಧಾನ ಸಿಗದಿದ್ದರೂ ಆರ್ಥಿಕವಾಗಿ ತೊಂದರೆಗಳಾಗುವುದಿಲ್ಲ. ನಿರುದ್ಯೋಗಿಗಳಿಗೆ ಉತ್ತಮ ಕೆಲಸ ದೊರೆಯಲಿದೆ.

ತುಲಾ: ಎಂಜಿನಿಯರ್ ರಂಗದವರ ತ್ವರಿತ ಬೆಳವಣಿಗೆಯಿಂದ ಉನ್ನತ ಅಧಿಕಾರಿಗಳ ಪ್ರಶಂಸೆಗೆ ಪಾತ್ರರಾಗುವ ಸಮಯ ಇದಾಗಲಿದೆ. ಆಕಸ್ಮಿಕ ರೀತಿಯಲ್ಲಿ ಉದ್ಯೋಗ ದೊರೆಯಲಿದೆ. ಶ್ರೀರಾಮನನ್ನು ಭಜಿಸಿ, ಶುಭವಾಗುತ್ತದೆ.

ವೃಶ್ಚಿಕ: ಮಕ್ಕಳ ವ್ಯಾಸಂಗದ ಬಗ್ಗೆ ಸಂಬಂಧಿಕರಲ್ಲಿ ಚರ್ಚೆ ನಡೆಸಿ, ಸಲಹೆ ದೊರಕುವುದು. ಕೃಷಿಗೆ ಸಹಾಯವಾಗುವ ಯಂತ್ರಗಳ ಖರೀದಿಯಿಂದ ಲಾಭ. ಬ್ಯಾಂಕ್ ಉದ್ಯೋಗಿಗಳಿಗೆ ಬಿಡುವಿಲ್ಲದ ಕೆಲಸ.

ಧನು: ತಂದೆ-ತಾಯಿಯ ಆರೋಗ್ಯದ ಬಗ್ಗೆ ಕಾಳಜಿವಹಿಸುವುದು ಅನಿವಾರ್ಯ. ಮಗನಿಗಾಗಿ ಹೊಸ ವ್ಯಾಪಾರ ಮಳಿಗೆ ಆರಂಭಿಸುವುದು ಒಳ್ಳೆಯದು. ತೀರ್ಥಯಾತ್ರೆ ಮತ್ತು ಪುಣ್ಯಕ್ಷೇತ್ರಗಳಿಗೆ ಹೋಗಿಬರುವ ಸಾಧ್ಯತೆಗಳಿವೆ.

ಮಕರ: ಬಂಧು ಮಿತ್ರರೊಂದಿಗೆ ಸಂತೋಷ ವಿಷಯಗಳನ್ನು ಹಂಚಿಕೊಳ್ಳುವುದು ಸರಿಯಲ್ಲ. ದಿನಗೂಲಿ ಕಾರ್ಮಿಕ ವರ್ಗದವರಿಗೆ ಪರಿಶ್ರಮದಿಂದ ಆದಾಯ ಉಂಟಾಗುವುದು. ಸರ್ಕಾರಿ ಕೆಲಸಗಳಲ್ಲಿ ತಡೆ ಎದುರಾಗಬಹುದು.

ಕುಂಭ: ಅಚ್ಚುಕಟ್ಟಾದ ಕೆಲಸಗಳಿಂದ ನಿಮ್ಮ ಮೇಲಿನ ಅಭಿಪ್ರಾಯಗಳು ಬದಲಾಗುವುದು. ಸೌಂದರ್ಯ ಆಸ್ವಾದಿಸುವ ಆಕಾಂಕ್ಷೆಯು ಪ್ರಬಲವಾಗುವುದು. ವ್ಯಾಪಾರ ವ್ಯವಹಾರಗಳು ಸರಾಗವಾಗಿ ನಡೆಯಲಿವೆ.

ಮೀನ: ಹಣಕಾಸಿನ ವಿಚಾರದಲ್ಲಿ ಭವಿಷ್ಯದ ಕುರಿತು ಯೋಚಿಸಿ ನಿರ್ಧಾರ ಕೈಗೊಳ್ಳುವುದರಿಂದ ಮುಂದಿನ ಜೀವನದ ದಿನಗಳು ನೆಮ್ಮದಿದಾಯಕವಾಗಲಿದೆ. ದೇಹದ ಶ್ರಮಕ್ಕೆ ತಕ್ಕ ಸಂಪಾದನೆ ಇಲ್ಲವಾದರೂ ನೆಮ್ಮದಿ ಇರಲಿದೆ.

ಪದಬಂಧ 5645


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಅನುಭವ ಉಳ್ಳವನೀತ (4)
3.ಎಲ್ಲಾ ಕಡೆಯಿಂದ ಉಂಟಾದ ನಿರ್ಬಂಧ (4)
5.ಮುಚ್ಚುಮರೆಯಿಲ್ಲದಿರುವುದು (3)
7.ರಭಸದಲ್ಲಿರುವ ದ್ರವ (2)
9.ಮಂಕರಿ ಹೊತ್ತಿರುವ ದಡ್ಡ! (2)
10.ಉಮೇದುವಾರನ ಹುರುಪು! (3)
11.ಅಂಧನ ಬಳಿಯಿರುವ ಹಣ (2)
12.ನೆನಪಲ್ಲೇ ಇರುವ ಕಾರಣ (2)
14.ವಾರದಲ್ಲೇ ದೊರೆತ ಒಡೆತನ (3)
16.ನರಕಾಧಿಪತಿ ಮಗ (4)
17.ರತ್ನಗಳ ಆಶ್ರಯಸ್ಥಾನ (4)

ಮೇಲಿಂದ ಕೆಳಕ್ಕೆ

1.ಸುರನ ಬಳಿಯೇ ರಾಕ್ಷಸನಿದ್ದಾನಲ್ಲಾ? (3)
2.ವೇದ ಮಂತ್ರಗಳನ್ನು ಪಠಿಸುವವನು (2)
3.ದಿಟ್ಟತನದಿಂದ ನುಡಿದ ಸತ್ಯ (2)
4.ಸೊಂಟದಿಂದ ಪ್ರಾರಂಭವಾದ ಕಂಪನ (3)
6.ಕರದಲ್ಲಿರುವ ಕಲಸನ್ನ (7)
8.ಒಂದೇ ಕಾಲದಲ್ಲಿದ್ದವನು (5)
9.ರಹಸ್ಯವಾಗಿ ಕೂಡಿ ಮಾತಾಡುವುದು (5)
11.ಧನಿಕನ ಮನೆಯಲ್ಲಿರುವ ಕೊತ್ತಂಬರಿ ಬೀಜ (3)
13.ಚಿನ್ನ ಬೆಳ್ಳಿ ಕೆಲಸಮಾಡುವವ (3)
14.ವಾಣಿಜ್ಯಮಾರುತದಲ್ಲಿರುವ ಗಾಳಿಯಿದು (2)
15.ಸುಭೇದಾರನಿಗೆ ಪ್ರತ್ಯಕ್ಷನಾಗಿರುವ ದೇವತೆ (2)



5644ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿವಾದ 3.ಗುಮಾನಿ 5.ಶರ 6.ರಿಪೇರಿ 7.ಯಮ 9.ಹರ 11.ಪರಾಗ 13.ವರ 14.ತಲ್ಲಣ 15.ನಡುಕ

ಮೇಲಿಂದ ಕೆಳಕ್ಕೆ:
1.ವಿಹಾರ 2.ದಳ್ಳುರಿ 3.ಗುಜರಿ 4.ನಿಶ್ಚಯ 5.ಶಯನಗೃಹ 8.ಮನೋವಿಕಾರ 10.ರಕುತ 11.ಪಯಣ 12.ಗಹನ 13.ವರ್ತಕ

ಸುಡೊಕು 6030

2			1				8	
						5		9
8		3			9		1	
3		9	5		1			
	6						4	
5		1	6		8			2
	7			3	5	2		4
4		5					6	
	8		4	6		3		1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6029 ಸುಡೊಕು

4	7	5	3	9	8	2	6	1
1	2	9	6	4	7	5	8	3
3	6	8	5	1	2	4	9	7
9	5	2	7	8	1	3	4	6
6	4	1	9	5	3	8	7	2
8	3	7	2	6	4	1	5	9
7	1	6	4	3	5	9	2	8
5	9	3	8	2	6	7	1	4
2	8	4	1	7	9	6	3	5




ಮತ ಪತ್ರ



ನಮ್ಮ ಅಸ್ತ್ರ, ನಮ್ಮ ಮತ

ಪ್ರಜಾಪ್ರಭುತ್ವದಲ್ಲಿ ನಮಗೆ ಇರುವ ಅಸ್ತ್ರ ನಮ್ಮ ಮತ. ಮತ ಚಲಾವಣೆ ನಮ್ಮ ಹಕ್ಕು, ಅಷ್ಟೇ ಅಲ್ಲದೆ ನಮ್ಮ ಆದ್ಯ ಕರ್ತವ್ಯ ಕೂಡ

ನಮ್ಮ ಈ ಕರ್ತವ್ಯವನ್ನು ಪಾಲಿಸದೇ, ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಾಗಲಿ, ಅಥವಾ, ಸರ್ಕಾರವನ್ನು ಪ್ರಶ್ನಿಸುವ ಸ್ವತಂತ್ರ ನಮಗೆ ಇರುವುದಿಲ್ಲ.

ನಮ್ಮ ವ್ಯವಸ್ಥೆ ಸುಧಾರಿಸಬೇಕೆಂದರೆ ನಾವು ಸರಿಯಾದ ಪ್ರತಿನಿಧಿಯನ್ನು ಆಯ್ಕೆ ಮಾಡಬೇಕು. ಅದಕ್ಕೆ ನಮ್ಮೆಲ್ಲರ ಸಹಕಾರ ಅತ್ಯಗತ್ಯ. ತಪ್ಪದೇ ನಿಮ್ಮ ಮತ ಚಲಾಯಿಸಿ.

ಇದು ನಮ್ಮ ದೇಶದ ಪ್ರಜಾಪ್ರಭುತ್ವದ ಹಬ್ಬ. ಸಂಭ್ರಮದಿಂದ ಆಚರಿಸಿ. ಜವಾಬ್ದಾರಿಯಿಂದ ನಿಮ್ಮ ಮತ ಚಲಾಯಿಸಿ.

ನಿಮ್ಮ ಸಹಕಾರದಿಂದ ಸರ್ಕಾರ
ಸರ್ಕಾರದಿಂದ ನಿಮಗೆ ಸಹಕಾರ.

– ಸಂಯುಕ್ತ ಹೊರನಾಡ್

ಮತ ಆಮಿಷ: ಆಯೋಗದ ವಶ

₹35.61 ಕೋಟಿ ನಗದು

ಉಚಿತ ಉಡುಗೊರೆ	₹79.20 ಕೋಟಿ
ಮದ್ಯ	₹138 ಕೋಟಿ (1.38 ಕೋಟಿ ಲೀ)
ಮಾದಕವಸ್ತು	₹9.51 ಕೋಟಿ (333ಕೆ.ಜಿ.)
ಚಿನ್ನ	₹9.48 ಕೋಟಿ (16 ಕೆ.ಜಿ.)
ಬೆಳ್ಳಿ	₹27.23 ಲಕ್ಷ (59 ಕೆ.ಜಿ.)

ಎಂಥಾ ಮಾತು!



ಏನೋ ಆಗಿದೆ ಎಂಬಂತೆ ಭಾವಿಸುತ್ತೀರೇಕೆ? ಹಾಸನದಲ್ಲಿ ಪ್ರೀತಂ ಸೋತಿದ್ದರೂ ಪವರ್‌ಫುಲ್ ಲೀಡರ್. ಅವರಿಗೆ ಹಾಸನ ಒಗ್ಗೂಡಿಸಲು ಒಂದು ದಿನ ಸಾಕು. ಈಗಾಗಲೇ ಆ ಕೆಲಸ ಮಾಡುತ್ತಿದ್ದಾರೆ. ಪ್ರೀತಂ ಅಲ್ಲಿ ಸೋತಿರಬಹುದು. ಆದರೆ, ಜೆಡಿಎಸ್ ಶಾಸಕನಿಗಿಂತಲೂ ಜನಪ್ರಿಯ. ಹಾಸನದಲ್ಲಿ ಮೈತ್ರಿಯಲ್ಲಿ ಯಾವುದೇ ಸಮಸ್ಯೆ ಇಲ್ಲ. ಜೆಡಿಎಸ್‌ನವರಿಗಿಂತಲೂ ಬಿಜೆಪಿ ಕಾರ್ಯಕರ್ತರು ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ. ಪ್ರೀತಂ ಅವರಿಗೆ ಮೈಸೂರು–ಚಾಮರಾಜನಗರ ಉಸ್ತುವಾರಿ ನೀಡಲಾಗಿದೆ. ನಿತ್ಯವೂ ಅವರು ಹಾಸನದಲ್ಲೇ ಇರಲು ಸಾಧ್ಯವಿಲ್ಲ

ರಾಧಾಮೋಹನ್ ದಾಸ್ ಅಗರವಾಲ್, ಬಿಜೆಪಿಯ ರಾಜ್ಯ ಚುನಾವಣಾ ಉಸ್ತುವಾರಿ

ನನ್ನದು ಗಜಕೇಸರಿ ಯೋಗ, ನಾನು ಹುಟ್ಟಿದಾಗ ತಂದೆ ಶಾಸಕರಾದರು. ಚಿಕ್ಕವಳಿದ್ದಾಗ ಏನಾಗುತ್ತಿಯಾ ಅಂದರೆ ಪ್ರಧಾನಿ ಆಗುತ್ತೇನೆ ಅಂತಿದ್ದೆ. ಈಗ ಸಂಸದಳಾಗುವ ಅವಕಾಶ ಬಂದಿದೆ. ಮುಂದೆ ನಾನು ಪ್ರಧಾನಿ ಆಗಬಹುದು

ಸಂಯುಕ್ತಾ ಪಾಟೀಲ, ಬಾಗಲಕೋಟೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ

ಕಣ ಸ್ವಾರಸ್ಯ

ಮಹಿಳಾ ಅಭ್ಯರ್ಥಿಗಳಿಗೆ ಪ್ರಭಾವಿ ಅಪ್ಪ, ಗಂಡ ಸಾಥ್

ಬೆಂಗಳೂರು: ಕರ್ನಾಟಕದ 28 ಲೋಕಸಭಾ ಕ್ಷೇತ್ರಗಳ ಪೈಕಿ ಕಾಂಗ್ರೆಸ್ ಆರು ಕ್ಷೇತ್ರಗಳಲ್ಲಿ, ಬಿಜೆಪಿ ಎರಡು ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಟಿಕೆಟ್ ನೀಡಿವೆ. ಅವರಲ್ಲಿ ಶೋಭಾ ಕರಂದ್ಲಾಜೆ ಹಾಲಿ ಕೇಂದ್ರ ಸಚಿವೆ. ಅವರು ಬೆಂಗಳೂರು ಉತ್ತರ ಕ್ಷೇತ್ರದಿಂದ ಕಣಕ್ಕೆ ಇಳಿದಿದ್ದಾರೆ. ಬೆಂಗಳೂರು ದಕ್ಷಿಣದ ಸೌಮ್ಯಾ ರೆಡ್ಡಿ, ಚಿಕ್ಕೋಡಿಯ ಪ್ರಿಯಾಂಕಾ, ಬಾಗಲಕೋಟೆಯ ಸಂಯುಕ್ತಾ ಅವರು ಹೆತ್ತವರ ಒತ್ತಾಸೆಯಿಂದ ಸ್ಪರ್ಧೆಗೆ ಇಳಿದಿದ್ದಾರೆ. ಈ ಮೂವರೂ ಸಚಿವರ ಮಕ್ಕಳು. ಉಳಿದ ನಾಲ್ವರ ಗೆಲುವಿಗಾಗಿ ಅವರ ಪತಿಯಂದಿರು ಸಾಥ್ ನೀಡುತ್ತಿದ್ದಾರೆ. ಎಂಟು ಕ್ಷೇತ್ರಗಳಲ್ಲಿ ದಾವಣಗೆರೆ ಕ್ಷೇತ್ರ ಮಾತ್ರ ಇಬ್ಬರು ಮಹಿಳೆಯರ ನಡುವಿನ ಸ್ಪರ್ಧೆಯ ಕಣವಾಗಿದೆ. ಉಳಿದ ಏಳು ಕ್ಷೇತ್ರಗಳಲ್ಲಿ ಪುರುಷ ಅಭ್ಯರ್ಥಿಗಳನ್ನು ಎದುರಿಸುತ್ತಿದ್ದಾರೆ.


ಗಾಯತ್ರಿ ಸಿದ್ದೇಶ್ವರ ಬಿಜೆಪಿ


ಪ್ರಭಾ ಮಲ್ಲಿಕಾರ್ಜುನ್ ಕಾಂಗ್ರೆಸ್


ಗೀತಾ ಶಿವರಾಜ್‌ಕುಮಾರ್ ಕಾಂಗ್ರೆಸ್


ಅಂಜಲಿ ನಿಂಬಾಳ್ಕರ್ ಕಾಂಗ್ರೆಸ್

'ಲೋಕ' ಪ್ರವೇಶಕ್ಕೆ ಪ್ರಭಾವಿಗಳ ಪತ್ನಿಯರು / ಮಕ್ಕಳು

ಅಭ್ಯರ್ಥಿ	ಕ್ಷೇತ್ರ	ಪತಿ	ಪ್ರಸ್ತುತ ಸ್ಥಾನ
ಗಾಯತ್ರಿ ಸಿದ್ದೇಶ್ವರ	ದಾವಣಗೆರೆ	ಜಿ.ಎಂ. ಸಿದ್ದೇಶ್ವರ	ಸಂಸದ
ಪ್ರಭಾ ಮಲ್ಲಿಕಾರ್ಜುನ್	ದಾವಣಗೆರೆ	ಎಸ್.ಎಸ್. ಮಲ್ಲಿಕಾರ್ಜುನ್	ಸಚಿವ
ಗೀತಾ ಶಿವರಾಜ್‌ಕುಮಾರ್	ಶಿವಮೊಗ್ಗ	ಶಿವರಾಜ್‌ಕುಮಾರ್	ಚಿತ್ರನಟ
ಅಂಜಲಿ ನಿಂಬಾಳ್ಕರ್	ಉತ್ತರ ಕನ್ನಡ	ಹೇಮಂತ್ ನಿಂಬಾಳ್ಕರ್	ಐಪಿಎಸ್ ಅಧಿಕಾರಿ
ಅಭ್ಯರ್ಥಿ	**ಕ್ಷೇತ್ರ**	**ಮಗಳು**	**ಪ್ರಸ್ತುತ ಸ್ಥಾನ**
ಸಂಯುಕ್ತಾ ಪಾಟೀಲ	ಬಾಗಲಕೋಟೆ	ಶಿವಾನಂದ ಪಾಟೀಲ	ಸಚಿವ
ಸೌಮ್ಯಾ ರೆಡ್ಡಿ	ಬೆಂಗಳೂರು ದಕ್ಷಿಣ	ರಾಮಲಿಂಗಾ ರೆಡ್ಡಿ	ಸಚಿವ
ಪ್ರಿಯಾಂಕಾ ಜಾರಕಿಹೊಳಿ	ಚಿಕ್ಕೋಡಿ	ಸತೀಶ ಜಾರಕಿಹೊಳಿ	ಸಚಿವ


ಸಂಯುಕ್ತಾ ಪಾಟೀಲ ಕಾಂಗ್ರೆಸ್


ಸೌಮ್ಯಾ ರೆಡ್ಡಿ ಕಾಂಗ್ರೆಸ್


ಪ್ರಿಯಾಂಕಾ ಜಾರಕಿಹೊಳಿ ಕಾಂಗ್ರೆಸ್

'ಮೋದಿ ಅಲೆ ಎಲ್ಲಿಯೂ ಇಲ್ಲ'

ಪ್ರಜಾವಾಣಿ ಸಂದರ್ಶನ

ಸಿದ್ದರಾಮಯ್ಯ, ಮುಖ್ಯಮಂತ್ರಿ

'ಕೇಂದ್ರ ಸರ್ಕಾರದ ವೈಫಲ್ಯ, 10 ತಿಂಗಳ ನಮ್ಮ ಸರ್ಕಾರದ ಸಾಧನೆ ಈ ಬಾರಿ ನಮ್ಮ 'ಕೈ' ಹಿಡಿಯುವುದು ಗ್ಯಾರಂಟಿ'– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ದೃಢ ವಿಶ್ವಾಸವಿದು. ಲೋಕಸಭೆ ಚುನಾವಣೆ ಸಂದರ್ಭದಲ್ಲಿ 'ಪ್ರಜಾವಾಣಿ'ಗೆ ನೀಡಿದ ವಿಶೇಷ ಸಂದರ್ಶನದಲ್ಲಿ ರಾಜ್ಯ ರಾಜಕೀಯ, ಮೋದಿ ವರ್ಚಸ್ಸು, ಬಿಜೆಪಿ– ಜೆಡಿಎಸ್ ಮೈತ್ರಿ, ತಮ್ಮ ಸರ್ಕಾರದ ಸಾಧನೆ ಕುರಿತು ಅವರು ಮಾತನಾಡಿದ್ದಾರೆ



• ರಾಜೇಶ್ ರೈ ಚಟ್ಲ

• ಮೋದಿ ಹೆಸರನ್ನೇ 'ಅಸ್ತ್ರ'ವಾಗಿ ಬಿಜೆಪಿಯವರು ರಾಜಕೀಯ ಮಾಡುತ್ತಿದ್ದಾರಲ್ಲ?

ಮೋದಿ ಅಲೆಯಲ್ಲಿಯೇ ಸರ್ಕಾರ ಮಾಡಲು ಅವರಿಗೆ ಆಗಲ್ಲ. ಬಿಜೆಪಿಗೇನು ಮೋದಿ ಹೊಸಬರಾ? ಗುಜರಾತ್ ಮುಖ್ಯಮಂತ್ರಿ ಆಗಿದ್ದರು ನಂತರ ಪ್ರಧಾನಿಯಾದರು. ಅದಕ್ಕಿಂತ ಮಿಗಿಲೇನು?

• ಹಾಗಿದ್ದರೆ, ಮೋದಿ ಪ್ರಭಾವ ಇಲ್ಲವೆಂದೇ?

ಕರ್ನಾಟಕದಲ್ಲಿ ಮೋದಿ ಅಲೆ ಇಲ್ಲ. ನನಗೆ ಇರುವ ಮಾಹಿತಿ ಪ್ರಕಾರ ದೇಶದ ಇತರ ಕಡೆಗಳಲ್ಲೂ ಇಲ್ಲ. ಇರುತ್ತಿದ್ದರೆ ಪಶ್ಚಿಮ ಬಂಗಾಳ, ಪಂಜಾಬ್, ದೆಹಲಿ ವಿಧಾನಸಭೆ ಚುನಾವಣೆಗಳಲ್ಲಿ ಬಿಜೆಪಿಯವರು ಗೆಲ್ಲಬೇಕಿತ್ತಲ್ಲ. ಮೋದಿ ಅಲೆಯಲ್ಲೇ ಗೆಲ್ಲುತ್ತೇವೆ ಎನ್ನುವುದು ಸುಳ್ಳು.

• ಅಯೋಧ್ಯೆಯ ರಾಮ ಚುನಾವಣಾ ವಿಷಯ ಅಲ್ಲವೇ?

ಅಯೋಧ್ಯೆಯ ರಾಮನೂ ಹೊಸ ವಿಷಯವಲ್ಲ. ಅಯೋಧ್ಯೆಯಲ್ಲಿ ರಾಮ ಮಂದಿರ ಕಟ್ಟಿದ್ದು ಸರ್ಕಾರ. ಮೋದಿ ಅದನ್ನು ಉಪಯೋಗಿಸಿಕೊಂಡರು. ಆ ವಿಷಯವೀಗ ಠುಸ್ ಆಗಿದೆ.

• ಬಿಜೆಪಿಗೆ ಬೂತ್‌ಮಟ್ಟದ ಸಂಘಟನೆ, ಆರ್‌ಎಸ್‌ಎಸ್ ಪ್ಲಸ್. ನಿಮಗೆ ಅಂತಹ ಬಲ ಇಲ್ಲದಿರುವುದು ಕೊರತೆಯೇ?

ಆರ್‌ಎಸ್‌ಎಸ್ 1925ರಿಂದಲೇ ಇದೆ. ಜನಸಂಘಕ್ಕೂ ಆರ್‌ಎಸ್‌ಎಸ್ ಬೆಂಬಲ ಇತ್ತು, ಆಗ ಅವರು ಎಷ್ಟು ಜನ ಗೆದ್ದಿದ್ದರು? 1980ರಲ್ಲಿಯೂ ಆರ್‌ಎಸ್‌ಎಸ್ ಇತ್ತಲ್ಲ. ಆಗ ಎರಡು ಸ್ಥಾನ ಗೆದ್ದರು. ಆರ್‌ಎಸ್‌ಎಸ್ ಹೊಸತಾಗಿ ಸಂಘಟನೆಯಾಗಿದ್ದು ಅಲ್ವಲ್ಲ. ಗಾಂಧೀಜಿಯವರನ್ನು ಕೊಂದು ಹಾಕಿದವರು ಯಾರು? ಯಾವ ಸಂಘಟನೆಯವರು? ಗೋಡ್ಸೆ ಯಾವ ಸಂಘಟನೆಯವರು? ಮನಮೋಹನ್ ಸಿಂಗ್ 10 ವರ್ಷ ಪ್ರಧಾನಿಯಾಗಿದ್ದರು. ಅದಕ್ಕಿಂತಲೂ ಹಿಂದೆ 50 ವರ್ಷ ಕಾಂಗ್ರೆಸ್ ಇತ್ತು. ಜನ ಬದಲಾವಣೆ ಬಯಸಿದ್ದರು. ಬಿಜೆಪಿಯವರು ಸುಳ್ಳಿನ ಗೋಪುರ ಕಟ್ಟಿ, ಭ್ರಮೆ ಹುಟ್ಟಿಸಿದರು.

• ಬಿಜೆಪಿ– ಜೆಡಿಎಸ್ ಮೈತ್ರಿ ಸವಾಲು ಅಲ್ಲವೇ?

ಜೆಡಿಎಸ್ – ಬಿಜೆಪಿ ಮೈತ್ರಿ ಮಾಡಿಕೊಂಡಿದ್ದರಿಂದ ನಮಗೇನೂ ತೊಂದರೆ ಆಗಲ್ಲ. ಇದು ಅಪವಿತ್ರ ಮೈತ್ರಿ ಎನ್ನುವುದು ಜನರಿಗೆ ಗೊತ್ತಾಗಿಬಿಟ್ಟಿದೆ. ಅವರು ಅಧಿಕಾರಕ್ಕಾಗಿ ಜೊತೆಯಾಗಿದ್ದಾರೆ. 'ಕಾಂಗ್ರೆಸ್ ಅನ್ನು ಸೋಲಿಸುವುದಕ್ಕೆಂದೇ ನಾವು ಒಂದಾಗಿದ್ದೇವೆ. ಅದೇ ನಮ್ಮ ಗುರಿ' ಎಂದು ಹಾಸನದಲ್ಲಿ ದೇವೇಗೌಡರು ಹೇಳಿದ್ದಾರೆ. ಮೈತ್ರಿ ಮಾಡಿಕೊಳ್ಳಲು ಇದು ವಿಷಯನಾ? ಇದನ್ನು ಜನ ನಂಬುತ್ತಾರಾ? ಅದರ ಮೇಲೆ ಜನ ಮತ ಹಾಕುತ್ತಾರಾ?

• ಟಿಕೆಟ್ ಹಂಚಿಕೆ ವಿಚಾರದಲ್ಲಿ ಕಾಂಗ್ರೆಸ್ ಕೂಡಾ 'ಕುಟುಂಬ ರಾಜಕೀಯ' ಅನುಸರಿಸಿದೆಯಲ್ಲವೇ?

ಸ್ಥಳೀಯರು ಯಾರನ್ನು ಶಿಫಾರಸು ಮಾಡಿದ್ದಾರೆಯೋ ಅವರಿಗೆ ಟಿಕೆಟ್ ಕೊಟ್ಟಿದ್ದೇವೆ. ಅವರು ಮಂತ್ರಿಗಳ ಮಕ್ಕಳು ಆಗಿರಬಹುದು, ಬೇರೆಯವರೂ ಆಗಿರಬಹುದು. ಧಾರವಾಡದಲ್ಲಿ ಪಕ್ಷದ ಕಾರ್ಯಕರ್ತ ವಿನೋದ್ ಅಸೂಟಿ, ಉತ್ತರ ಕನ್ನಡದಲ್ಲಿ ಅಂಜಲಿ, ದಕ್ಷಿಣ ಕನ್ನಡದಲ್ಲಿ ಪದ್ಮರಾಜ್, ಮೈಸೂರು– ಕೊಡಗಿನಲ್ಲಿ ಲಕ್ಷ್ಮಣ್ ಅಭ್ಯರ್ಥಿ. ಅವರೆಲ್ಲರೂ ಕಾರ್ಯಕರ್ತರಲ್ಲವೇ? ಚಾಮರಾಜನಗರದಲ್ಲಿ ಮಹದೇವಪ್ಪ ನಿಲ್ಲುವುದಾದರೆ ಅವರಿಗೇ ಕೊಡಿ, ಇಲ್ಲದಿದ್ದರೆ ಅವರ ಮಗನಿಗೆ ಟಿಕೆಟ್ ಕೊಡುವಂತೆ ಎಲ್ಲರೂ ಹೇಳಿದರು.

• ಕೋಲಾರದಲ್ಲಿ ರಾಜಿ ಸಂಧಾನ ಮಾಡಲು ರಾಜ್ಯ ನಾಯಕರಿಗೆ ಕೊನೆಗೂ ಸಾಧ್ಯವಾಗಲಿಲ್ಲವಲ್ಲ?

ಅಲ್ಲಿ ಎರಡು (ಸಚಿವ ಕೆ.ಎಚ್. ಮುನಿಯಪ್ಪ– ಮಾಜಿ ವಿಧಾನಸಭಾಧ್ಯಕ್ಷ ಕೆ.ಆರ್. ರಮೇಶ್ ಕುಮಾರ್) ಗುಂಪು ಇದೆ. ರಾಜಿ ಮಾಡಲು ಪ್ರಯತ್ನಿಸಿದ್ದೇವೆ. ಆಗದೇ ಇದ್ದಾಗ ಮೂರನೇ ಅಭ್ಯರ್ಥಿಗೆ ಹೈಕಮಾಂಡ್ ಟಿಕೆಟ್ ಕೊಟ್ಟಿದೆ. ಅಲ್ಲಿ ಯಾವ ಬಣ ರಾಜಕೀಯವೂ ಪ್ರಭಾವ ಬೀರಲ್ಲ. ಎರಡೂ ಗುಂಪಿನವರು ಪಕ್ಷದ ಅಭ್ಯರ್ಥಿ ಪರ ಕೆಲಸ ಮಾಡುತ್ತಿದ್ದಾರೆ.

• ಮೈಸೂರು– ಕೊಡಗಿನಲ್ಲಿ ಯದುವೀರ್ ಬಿಜೆಪಿ ಅಭ್ಯರ್ಥಿ. ನಿಮ್ಮ ಅಭಿಪ್ರಾಯವೇನು?

ಯದುವೀರ್ ಬಗ್ಗೆ ಮಾತನಾಡಲು ನಾನು ಹೋಗಲ್ಲ. ಪ್ರತಾಪ್ ಸಿಂಹನನ್ನು ಬದಲಿಸಿ ಬಿಜೆಪಿಯವರು ಯದುವೀರ್‌ಗೆ ಟಿಕೆಟ್ ಕೊಟ್ಟಿದ್ದಾರೆ. ಅಲ್ಲಿ ನಮ್ಮ ಅಭ್ಯರ್ಥಿ ಎಂ. ಲಕ್ಷ್ಮಣ್ ಸಾಮಾನ್ಯ ಕಾರ್ಯಕರ್ತ. ಕೆಳಹಂತದಿಂದ ಬಂದವರು. ಜನರ ಜೊತೆ ಸಂಪರ್ಕ ಇರುವವ. ರೈತನ ಮಗ, ವಿದ್ಯಾವಂತ. ಅಲ್ಲಿ ಈ ಬಾರಿ ನಮ್ಮ ಅಭ್ಯರ್ಥಿ ಶೇ 100ರಷ್ಟು ಗೆಲ್ಲುತ್ತಾರೆ.

• ಈ ಬಾರಿ ಎಷ್ಟು ಸ್ಥಾನ ನಿರೀಕ್ಷಿಸುತ್ತೀರಿ. ಆ ವಿಶ್ವಾಸಕ್ಕೆ ಆಧಾರವೇನು?

ನಾವು ಮಾಡಿರುವಂಥ ಕೆಲಸದ ಆಧಾರದ ಮೇಲೆ 15ರಿಂದ 20 ಸ್ಥಾನ ಗೆಲ್ಲುತ್ತೇವೆ. ಇವತ್ತಿನವರೆಗೆ ನಮ್ಮ ಯಾವುದೇ ವೈಫಲ್ಯ ಇಲ್ಲ. ಯಾವುದೇ ಹಗರಣವೂ ಇಲ್ಲ. ಹೀಗಾಗಿ, ಈ ಬಾರಿ ಜನ ನಮ್ಮ ಕೈ ಹಿಡಿಯುತ್ತಾರೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ನಮಗೆ ಶೇ 43ರಷ್ಟು ಮತ ಬಂದಿದೆ. ಬಿಜೆಪಿಯರಿಗೆ ಶೇ 37ರಷ್ಟು ಮತ ಬಂದಿದೆ. ಹೀಗಾಗಿ, 136 (ಕ್ಷೇತ್ರಗಳನ್ನು) ಗೆದ್ದಿದ್ದೇವೆ. ಕಳೆದ 10 ತಿಂಗಳಲ್ಲಿ ಜನರ ವಿಶ್ವಾಸ ಕಳೆದುಕೊಳ್ಳುವಂಥ ಯಾವುದೇ ಕೆಲಸವನ್ನು ನಾವು ಮಾಡಿಲ್ಲ. ಬಿಜೆಪಿಯವರು ಎಷ್ಟು ಸುಳ್ಳು ಭರವಸೆಗಳನ್ನು ನೀಡಿದರೂ, ಜನರು ನಮಗೆ ಆಶೀರ್ವಾದ ಮಾಡಿಯೇ ಮಾಡುತ್ತಾರೆಂಬ ವಿಶ್ವಾವಿದೆ.

• ಲೋಕಸಭೆ ಚುನಾವಣೆ ಬಳಿಕ ರಾಜ್ಯ ಸರ್ಕಾರ ಪತನ ಆಗುತ್ತದೆ ಎಂದು ಬಿಜೆಪಿಯವರು ಹೇಳುತ್ತಿದ್ದಾರೆ?

ಅದವರ ಭ್ರಮೆ. ನಾವು 136 ಸ್ಥಾನ ಗೆದ್ದಿರುವವರು. ಹೇಗೆ ಪತನವಾಗುತ್ತದೆ. ಅವರಿಗೆ ಬಹುಮತ ಇರಲಿಲ್ಲ. 'ಆಪರೇಷನ್ ಕಮಲ' ಮಾಡಿಯೇ 3 ವರ್ಷ 10 ತಿಂಗಳು ಅವರ ಸರ್ಕಾರ ಉಳಿದುಕೊಂಡಿತ್ತು. ನಮ್ಮ ಸರ್ಕಾರ ಹೇಗೆ ಪತನವಾಗುತ್ತದೆ?

• ಉತ್ತರ ಭಾರತದಲ್ಲಿ ರಾಜ್ಯ ಸರ್ಕಾರಗಳನ್ನು ಕೆಡವಿದ ನಿದರ್ಶನಗಳಿವೆಯಲ್ಲ?

ಕರ್ನಾಟಕದಲ್ಲಿ ಅದೆಲ್ಲ ನಡೆಯಲ್ಲ. ನಮ್ಮ ಯಾವೊಬ್ಬ ಶಾಸಕನೂ ಬಿಜೆಪಿ ಜೊತೆ ಹೋಗಲ್ಲ.

• ಚುನಾವಣೆ ನಂತರ 'ಗ್ಯಾರಂಟಿ' ಯೋಜನೆಗಳು ಸ್ಥಗಿತಗೊಳ್ಳಲಿವೆ ಎಂದು ಪ್ರಚಾರ ಮಾಡಲಾಗುತ್ತಿದೆಯಲ್ಲವೇ?

ಅದು ಚುನಾವಣಾ ಗಿಮಿಕ್. ಅವರು ಸುಳ್ಳು ಹೇಳುತ್ತಾರೆ. 'ಗ್ಯಾರಂಟಿ'ಗಳನ್ನು ಯಾಕೆ ನಿಲ್ಲಿಸುತ್ತೇವೆ? ಮುಂದಿನ ವರ್ಷಕ್ಕೆ 'ಗ್ಯಾರಂಟಿ'ಗಳಿಗೆಂದೇ ನಾನು 52 ಸಾವಿರ ಕೋಟಿ ಬಜೆಟ್‌ನಲ್ಲಿ ತೆಗೆದಿಟ್ಟಿದ್ದೇನೆ. ಈ 'ಗ್ಯಾರಂಟಿ' ಯೋಜನೆಗಳು ಮುಂದುವರಿಯುತ್ತವೆ. ಜೊತೆಗೆ, ಇನ್ನೊಮ್ಮೆ ನಮಗೆ ಆಶೀರ್ವಾದ ಮಾಡಿದರೆ ಮುಂದೆಯೂ ಮುಂದುವರಿಯುತ್ತದೆ.

• ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ನಿಮ್ಮ ಮಧ್ಯೆ ಸಮನ್ವಯ ಚೆನ್ನಾಗಿದೆ ಅನಿಸುತ್ತಿದೆ. ಇದು ಚುನಾವಣೆಗೆ ಸೀಮಿತವೇ?

ನಾವು ಮೊದಲಿನಿಂದಲೂ ಸಮನ್ವಯದಿಂದಲೇ ಇದ್ದೇವೆ. ವಿಧಾನಸಭೆ ಚುನಾವಣೆ ಸಂದರ್ಭದಲ್ಲಿಯೇ ಅವರು ಅಧ್ಯಕ್ಷರಾಗಿದ್ದರು. ಆಗ ಸಮನ್ವಯ ಇರಲಿಲ್ಲವೇ? ಸಮನ್ವಯ ಇಲ್ಲದೆಯೇ ನಾವು 136 ಕ್ಷೇತ್ರ ಗೆದ್ದಿದ್ದೇವೆಯೇ? ಆಗಲೂ ಸಮನ್ವಯ ಇತ್ತು. ಈಗಲೂ ಇದೆ. ಮುಂದೆಯೂ ಇರುತ್ತದೆ. ಅದರಲ್ಲಿ ಅನುಮಾನವೇ ಇಲ್ಲ.

• ಚುನಾವಣೆ ಬಳಿಕ ಸಚಿವ ಸಂಪುಟದಲ್ಲಿ ಬದಲಾವಣೆ ಆಗಬಹುದೇ?

ಚುನಾವಣೆಯ ಬಳಿಕವೆಂದು ಬದಲಾವಣೆ ಮಾಡುವುದಿಲ್ಲ. ಹೈಕಮಾಂಡ್ ಮುಂದೆ ಯಾವ ತೀರ್ಮಾನ ಮಾಡುತ್ತದೆಯೊ? ಆದರೆ, ತಕ್ಷಣಕ್ಕೆ ಯಾವುದೇ ಬದಲಾವಣೆ ಮಾಡುವುದಿಲ್ಲ.

• ಅಧಿಕಾರ ಹಂಚಿಕೆ ಸೂತ್ರ ಬಗ್ಗೆ ಅಲ್ಲಲ್ಲಿ ಮಾತುಗಳು ಕೇಳಿಬರುತ್ತಿದೆಯಲ್ಲ?

ಮಾತನಾಡುವವರು ಮಾತನಾಡುತ್ತಾರೆ. ಹೈಕಮಾಂಡ್‌ನವರು ಏನು ತೀರ್ಮಾನ ಮಾಡುತ್ತಾರೊ, ಆ ತೀರ್ಮಾನದಂತೆ ನಡೆದುಕೊಳ್ಳುತ್ತೇವೆ.

• ನೀವು ಕೈಗೊಂಡ 'ಉತ್ತರಿಸಿ ಮೋದಿ', 'ನನ್ನ ತೆರಿಗೆ, ನನ್ನ ಹಕ್ಕು' ಅಭಿಯಾನ ಮತ ಪರಿವರ್ತನೆ ಮಾಡಬಹುದೇ?

ತೆರಿಗೆ ಹಂಚಿಕೆಯಲ್ಲಿ ನಮಗೆ ಅನ್ಯಾಯ ಆಗಿರುವುದು ರಾಜ್ಯದ ಜನರಿಗೆ ಗೊತ್ತಾಗಿದೆ. ಅದರಿಂದ ನಮಗೆ ಅನುಕೂಲ ಆಗಿಯೇ ಆಗುತ್ತದೆ. ಅನ್ಯಾಯವನ್ನು ಅವರು ಸರಿಪಡಿಸಲ್ಲ, ಹೀಗಾಗಿ ನಾವು ಜನರ ಬಳಿಗೆ ಹೋಗುತ್ತೇವೆ. ಜನರು ಖಂಡಿತಾ ಇದನ್ನು ಅರ್ಥ ಮಾಡಿಕೊಳ್ಳುತ್ತಾರೆ. ಯಾರು ಅನ್ಯಾಯ ಮಾಡಿದ್ದಾರೆ ಅವರ ವಿರುದ್ಧ ಜನ ಮತ ಹಾಕುತ್ತಾರೆ.

ಉದ್ದೇಶಪೂರ್ವಕ ಅನ್ಯಾಯ

• ರಾಜ್ಯಕ್ಕೆ ಉದ್ದೇಶಪೂರ್ವಕವಾಗಿ ಕೇಂದ್ರ ಅನ್ಯಾಯ ಮಾಡುತ್ತಿದೆಯೆಂದು ಅನಿಸುತ್ತಿದೆಯೇ?

ಉದ್ದೇಶಪೂರ್ವಕವಾಗಿಯೇ ಕರ್ನಾಟಕಕ್ಕೆ ಕೇಂದ್ರ ಸರ್ಕಾರ ಅನ್ಯಾಯ ಮಾಡುತ್ತಿದೆ. ತೆರಿಗೆ ಹಂಚಿಕೆಯಲ್ಲಿ, ಬರಗಾಲ ಬಂದಾಗ ಅವರೇ ಘೋಷಣೆ ಮಾಡಿದ ಅನುದಾನ ಕೊಟ್ಟಿಲ್ಲ. ಇದುವರೆಗೆ 14ನೇ ಹಣಕಾಸು ಆಯೋಗದ ಶಿಫಾರಸು ಸೇರಿ ನಮಗೆ ₹1.87 ಲಕ್ಷ ಕೋಟಿ ಬರಬೇಕು. ಅಷ್ಟು ಬಂದಿದ್ದರೆ ರಾಜ್ಯದ ಅಭಿವೃದ್ಧಿ ಮಾಡಬಹುದಿತ್ತಲ್ಲ. ನೀರಾವರಿ, ಲೋಕೋಪಯೋಗಿ, ಶಿಕ್ಷಣ, ಆರೋಗ್ಯಕ್ಕೆ ಹೆಚ್ಚು ಹಣ ಕೊಡಲು ಸಾಧ್ಯ ಆಗುತ್ತಿರಲಿಲ್ಲವೇ?

'ಬಿಜೆಪಿ–ಜೆಡಿಎಸ್ ಮೈತ್ರಿ ಬ್ರೇಕ್'

• ಚುನಾವಣೆ ನಂತರ ಜೆಡಿಎಸ್ ಭವಿಷ್ಯ ಏನಾಗಬಹುದು?

ಅವರು (ಬಿಜೆಪಿ–ಜೆಡಿಎಸ್) ಹೆಚ್ಚು ಸ್ಥಾನಗಳಲ್ಲಿ ಸೋಲುತ್ತಾರೆ. ಸೋತ ಬಳಿಕ ಹೊಂದಾಣಿಕೆ ಇರಲ್ಲ. ಒಡಕು ಉಂಟಾಗುತ್ತದೆ. ಮೈತ್ರಿಯಲ್ಲಿ ಬ್ರೇಕ್ ಆಗುತ್ತದೆ.

'ಕೇಂದ್ರದಲ್ಲಿ ಎನ್‌ಡಿಎ ಅಧಿಕಾರಕ್ಕೆ ಬರಲ್ಲ'

• ಕಾಂಗ್ರೆಸ್ ಕೇಂದ್ರದಲ್ಲಿ ಅಧಿಕಾರಕ್ಕೆ ಬರಲ್ಲ. ನಮ್ಮ ಅಭ್ಯರ್ಥಿಯನ್ನು ಗೆಲ್ಲಿಸಿದರೆ ಸಚಿವರಾಗುತ್ತಾರೆ ಎಂದು ಬಿಜೆಪಿಯವರು ಪ್ರಚಾರ ಮಾಡುತ್ತಿದ್ದಾರಲ್ಲ?

ಈ ಬಾರಿ ಕೇಂದ್ರದಲ್ಲಿ ಕಾಂಗ್ರೆಸ್ ಮತ್ತು ಅದರ ಮೈತ್ರಿ ಪಕ್ಷಗಳು ನೂರಕ್ಕೆ ನೂರಷ್ಟು ಅಧಿಕಾರಕ್ಕೆ ಬರಲಿವೆ. ಎನ್‌ಡಿಎ ಅಧಿಕಾರಕ್ಕೆ ಬರಲ್ಲ, ನೋಡಿ.

• 'ಅಬ್ ಕಿ ಬಾರ್ 400 ಪಾರ್' ಎಂದು ಬಿಜೆಪಿಯವರು ಹೇಳಿದರೆ, ನೀವು 200 ದಾಟಲ್ಲ ಎನ್ನುತ್ತಿದ್ದೀರಿ?

ನನಗೆ ಬಂದಿರುವ ಮಾಹಿತಿ ಪ್ರಕಾರ, ಬಿಜೆಪಿಯವರೇ ಮಾಡಿಸಿದ ಸಮೀಕ್ಷೆಯಲ್ಲಿ ಅವರು ಸುಮಾರು 200 ಗೆಲ್ಲಬಹುದೆಂದು ಗೊತ್ತಾಗಿದೆ. ಅದಕ್ಕೆ ಅವರು 400, 400 ಎಂದು ಹೇಳುತ್ತಾರೆ. ಅದವರ ಚುನಾವಣಾ ತಂತ್ರಗಾರಿಕೆ.

ಬಿಜೆಪಿ ಅಧ್ಯಕ್ಷ ವಿಜಯೇಂದ್ರ ಮನವಿಗೆ ಈಶ್ವರಪ್ಪ ತಿರುಗೇಟು

'ಕಾಲ ಮಿಂಚಿಲ್ಲ ವಾಪಸ್ ಬನ್ನಿ'

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ರಾಜ್ಯದಲ್ಲಿ ಪಕ್ಷ ಸಂಘಟನೆಯಲ್ಲಿ ಯಡಿಯೂರಪ್ಪ, ಅನಂತಕುಮಾರ್ ಜೊತೆ ನಿಮ್ಮ ಪಾತ್ರವೂ ದೊಡ್ಡದಿದೆ. ಯಾವುದೋ ಪರಿಸ್ಥಿತಿ, ಸಂದರ್ಭ ತಮ್ಮನ್ನು ಈ ಸನ್ನಿವೇಶಕ್ಕೆ ದೂಡಿದೆ. ಈಗಲೂ ಕಾಲ ಮಿಂಚಿಲ್ಲ ವಾಪಸ್ ಬನ್ನಿ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಶಿವಮೊಗ್ಗ ಲೋಕಸಭೆ ಕ್ಷೇತ್ರದಿಂದ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿಯಲು ನಿರ್ಧರಿಸಿರುವ ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಅವರಿಗೆ ಮನವಿ ಮಾಡಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಕ್ಷದ ಹಿತದೃಷ್ಟಿಯಿಂದ ಹಾಗೂ 'ನರೇಂದ್ರ ಮೋದಿ ಮತ್ತೆ ಪ್ರಧಾನಿಯಾಗಲು ಈಶ್ವರಪ್ಪ ಅವರು ನಮ್ಮೊಂದಿಗೆ ಕೈಜೋಡಿಸಬೇಕು' ಎಂದು ಕೋರಿದರು.

'ಈಶ್ವರಪ್ಪ ಅವರಿಗೆ ಸಮಸ್ಯೆ ಇದ್ದರೆ ದೆಹಲಿ ನಾಯಕರ ಜೊತೆ ಮಾತನಾಡಲಿ. ನಾವು ಅವರ ಜೊತೆ ಇರುತ್ತೇವೆ. ಅವರೂ ನಮ್ಮ ಜೊತೆ ಇರಬೇಕು ಎಂಬುದು ಆಸೆ' ಎಂದರು.

ಶಿವಮೊಗ್ಗ ಲೋಕಸಭಾ ಕ್ಷೇತ್ರದಲ್ಲಿ ಸಹೋದರ ಬಿ.ವೈ. ರಾಘವೇಂದ್ರ ಮಾಡಿರುವ ಅಭಿವೃದ್ಧಿಯ ಬಗ್ಗೆ ಜನರು ಮಾತಾಡುತ್ತಿದ್ದು, ಈ ಬಾರಿ 2 ಲಕ್ಷ ಮತಗಳ ಅಂತರದಲ್ಲಿ ಗೆಲ್ಲುತ್ತಾರೆ ಎಂದರು.

'ಹಾಸನದಲ್ಲಿ ಪ್ರೀತಂಗೌಡ ಜೊತೆ ಮಾತಾಡಿದ್ದೇನೆ. ಅವರಿಗೆ ಮೈಸೂರು, ಚಾಮರಾಜನಗರ ಜವಾಬ್ದಾರಿ ಕೊಟ್ಟಿದ್ದೇವೆ. ಎಲ್ಲವೂ ಸರಿ ಹೋಗುತ್ತದೆ. ಪ್ರಜ್ವಲ್ ರೇವಣ್ಣ ಅಧಿಕ ಮತಗಳ ಅಂತರದಿಂದ ಗೆಲ್ಲುತ್ತಾರೆ' ಎಂದರು.

ರಾಜ್ಯದಲ್ಲಿ ನಿರೀಕ್ಷೆಗೆ ಮೀರಿ ಬಿಜೆಪಿ ಪರ ಒಲವು ಕಾಣುತ್ತಿದೆ. ಪ್ರಧಾನಿ ಮೋದಿ ಜನಪ್ರಿಯತೆ ದಿನೇದಿನೇ ಹೆಚ್ಚುತ್ತಿದೆ. ಇದು ಕಾಂಗ್ರೆಸ್ ಪಕ್ಷದವರ ನಿದ್ರೆಗೆಡಿಸಿದೆ. ಮೋದಿ ಪ್ರತಿ ಕುಟುಂಬಕ್ಕೆ ಐದು ಕೆ.ಜಿ ಅಕ್ಕಿ ಕೊಡುತ್ತಿದ್ದಾರೆ. ರೈತರಿಗೆ ಕಿಸಾನ್ ಸಮ್ಮಾನ್ ಅಡಿ ಆರ್ಥಿಕ ಸಹಾಯ ಮಾಡುತ್ತಿದ್ದಾರೆ ಎಂದರು.


ಬಿ.ವೈ.ವಿಜಯೇಂದ್ರ


ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹಸಚಿವ ಅಮಿತ್ ಶಾ ಇನ್ನೂ ನಾಲ್ಕೈದು ಬಾರಿ ರಾಜ್ಯಕ್ಕೆ ಪ್ರಚಾರಕ್ಕೆ ಬರುತ್ತಾರೆ. ಯೋಗಿ ಆದಿತ್ಯನಾಥ ಕೂಡ ಬರಲಿದ್ದಾರೆ ಎಂದು ಹೇಳಿದರು.

'ಲೋಕಸಭಾ ಚುನಾವಣೆ ಬಳಿಕ ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸಿದರೆ ನಾವು ಸುಮ್ಮನಿರುವುದಿಲ್ಲ. ಗ್ಯಾರಂಟಿ ಯೋಜನೆಗಳ ಭರವಸೆ ನೀಡಿ ಅಧಿಕಾರಕ್ಕೆ ಬಂದಿದ್ದೀರಿ. ಅವುಗಳನ್ನು ಮುಂದುವರಿಸಿ ಎಂದು ಒತ್ತಾಯಿಸಲಿದ್ದೇವೆ' ಎಂದು ವಿಜಯೇಂದ್ರ ಹೇಳಿದರು.

'ಅಣ್ಣನನ್ನು ಕಣದಿಂದ ಹಿಂದಕ್ಕೆ ಸರಿಸು ನೀನು ರಾಜೀನಾಮೆ ಕೊಡು'

ಶಿವಮೊಗ್ಗ: 'ನಿನ್ನ ಅಣ್ಣನನ್ನು ಶಿವಮೊಗ್ಗ ಲೋಕಸಭಾ ಕ್ಷೇತ್ರದ ಕಣದಿಂದ ಹಿಂದಕ್ಕೆ ಸರಿಸು, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನೀನೂ ರಾಜೀನಾಮೆ ಕೊಡು, ನಾಳೆಯೇ ಪಕ್ಷಕ್ಕೆ ವಾಪಸ್ ಬರುವೆ' ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ತಿರುಗೇಟು ನೀಡಿದರು.

'ಕಾಲ ಮಿಂಚಿಲ್ಲ. ಪಕ್ಷಕ್ಕೆ ವಾಪಸ್ ಬನ್ನಿ. ಸಮಸ್ಯೆ ಇದ್ದರೆ ಹೈಕಮಾಂಡ್ ಜೊತೆ ಚರ್ಚಿಸಿ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮಾಡಿರುವ ಮನವಿಗೆ ಭಾನುವಾರ ಇಲ್ಲಿ ಈಶ್ವರಪ್ಪ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದರು.


ಕೆ.ಎಸ್.ಈಶ್ವರಪ್ಪ

'ಸಮಸ್ಯೆ ಇದ್ದರೆ ಕೇಂದ್ರದ ನಾಯಕರ ಜೊತೆ ಚರ್ಚಿಸಿ ಎಂದು ಹೇಳಲು ನಿನಗೆ ಅಧಿಕಾರ ಕೊಟ್ಟವನು ಯಾರು?' ಎಂದು ಪ್ರಶ್ನಿಸಿದ ಕೆ.ಎಸ್.ಈಶ್ವರಪ್ಪ, 'ಈಶ್ವರಪ್ಪ ಗೆಲ್ಲಲಿ ಬಿಡು. ನೀನು ಸ್ಪರ್ಧೆ ಮಾಡಬೇಡ ಎಂದು ಅಣ್ಣ ರಾಘವೇಂದ್ರಗೆ ಹೇಳು. ಅಧಿಕಾರ ನಿಮ್ಮ ಕೈಯಲ್ಲೇ ಇರಬೇಕಾ?' ಎಂದು ವಿಜಯೇಂದ್ರ ವಿರುದ್ಧ ಏಕವಚನದಲ್ಲಿ ಹರಿಹಾಯ್ದರು.

'ವಿಜಯೇಂದ್ರ ಅವರ ಅಪ್ಪ (ಬಿ.ಎಸ್.ಯಡಿಯೂರಪ್ಪ) ಕೇಂದ್ರದ ಚುನಾವಣಾ ಸಮಿತಿ ಅಧ್ಯಕ್ಷ. ಅವರಣ್ಣ ರಾಘವೇಂದ್ರ ಸಂಸದ, ವಿಜಯೇಂದ್ರ ಶಾಸಕ, ಹಟ ಮಾಡಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನ ತೆಗೆದುಕೊಂಡಿದ್ದಾರೆ. ಲಿಂಗಾಯತರು ಬೇಕೆಂದರೆ ಬಸನಗೌಡ ಪಾಟೀಲ ಯತ್ನಾಳಗೆ, ಒಕ್ಕಲಿಗರು ಬೇಕೆಂದರೆ ಸಿ.ಟಿ.ರವಿಗೆ, ಹಿಂದುಳಿದ ವರ್ಗದವರು ಬೇಕೆಂದರೆ ನನಗೆ ರಾಜ್ಯ ಘಟಕದ ಅಧ್ಯಕ್ಷ ಸ್ಥಾನ ಬಿಟ್ಟು ಕೊಡಲಿ ನೋಡೋಣ' ಎಂದು ಸವಾಲು ಹಾಕಿದರು.

'ನಾನು ಈ ಬಾರಿ 3 ಲಕ್ಷ ಮತಗಳ ಅಂತರದಲ್ಲಿ ಗೆಲ್ಲುತ್ತೇನೆ. ಗೆದ್ದ ನಂತರ ಬಿಜೆಪಿಗೆ ಮತ್ತೆ ಬರುತ್ತೇನೆ. ಮುಂಬರುವ ಮಹಾನಗರ ಪಾಲಿಕೆ ಚುನಾವಣೆಗೆ ಶಿವಮೊಗ್ಗದಲ್ಲಿ ಬಿಜೆಪಿ ಅಭ್ಯರ್ಥಿಗಳಿಗೆ ನಾನೇ ಟಿಕೆಟ್ ಕೊಡೋದು' ಎಂದರು.

'ನಿಮ್ಮಣ್ಣ ಸೋಲುತ್ತಾನೆಂಬ ಭಯವೇ? ಏನು ನೀವೇ ಗೂಟ ಹೊಡ್ಕೊಂಡು ಇರಬೇಕಾ?' ಎಂದು ಖಾರವಾಗಿ ಪ್ರಶ್ನಿಸಿದ ಈಶ್ವರಪ್ಪ, 'ನಾನು ಈಗಲೂ ಬಿಜೆಪಿ ಕಾರ್ಯಕರ್ತ. ಆದರೆ ಪಕ್ಷೇತರವಾಗಿ ಸ್ಪರ್ಧೆ ಮಾಡಲು ನಿರ್ಧರಿಸಿದ್ದೇನೆ. ನಾನು ಸ್ಪರ್ಧೆ ಮಾಡಿದರೆ ಪಕ್ಷದಿಂದ ಉಚ್ಚಾಟನೆ ಮಾಡಬಹುದು. ಇನ್ನೇನು ಮಾಡಲು ಸಾಧ್ಯ. ನಾನೇನು ಪಕ್ಷ ಬಿಟ್ಟು ಹೋಗಿದ್ದೇನಾ? ಯಡಿಯೂರಪ್ಪ ಬಿಜೆಪಿ ಬಿಟ್ಟು ಕೆಜೆಪಿಗೆ ಹೋಗಿರಲಿಲ್ಲವಾ?' ಎಂದರು.

ದಾಖಲೆ ಇಲ್ಲದ ₹7.5 ಕೋಟಿ ಹಣ, ಚಿನ್ನ–ಬೆಳ್ಳಿ ಆಭರಣ ವಶ


ಬಳ್ಳಾರಿಯಲ್ಲಿ ಭಾನುವಾರ ದಾಳಿ ವೇಳೆ ಸಿಕ್ಕ ಹಣ, ಆಭರಣಗಳನ್ನು ಬ್ರೂಸ್ ಪೇಟೆ ಪೊಲೀಸ್ ಠಾಣೆಯಲ್ಲಿ ಪ್ರದರ್ಶಿಸಲಾಗಿತ್ತು. ಚಿತ್ರ– ಮುರಳಿಕಾಂತ ರಾವ್

ಬಳ್ಳಾರಿ: 'ಬಳ್ಳಾರಿಯ ಬ್ರೂಸ್‌ಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ದಾಖಲೆ ಇಲ್ಲದ ₹5.60 ಕೋಟಿ ಹಣ ಪತ್ತೆಯಾಗಿದೆ. ಜತೆಗೆ, ₹1.4 ಕೋಟಿ ಮೌಲ್ಯದ 3 ಕೆ.ಜಿ ಚಿನ್ನ, ₹42 ಲಕ್ಷ ಮೌಲ್ಯದ ಬೆಳ್ಳಿ ಆಭರಣ ಮತ್ತು ಗಟ್ಟಿಗಳು ಪತ್ತೆಯಾಗಿವೆ. ಇದೆಲ್ಲದರ ಒಟ್ಟು ಮೌಲ್ಯ ₹7.5 ಕೋಟಿ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು ತಿಳಿಸಿದ್ದಾರೆ.

'ಬಳ್ಳಾರಿ ಡಿವೈಎಸ್‌ಪಿ ಚಂದ್ರಕಾಂತ ನಂದ ರೆಡ್ಡಿ ಮತ್ತು ಬ್ರೂಸ್‌ಪೇಟೆಯ ಪೊಲೀಸ್ ಇನ್‌ಸ್ಪೆಕ್ಟರ್ ಎಂ.ಎನ್ ಸಿಂಧೂರ್ ಖಚಿತ ಮಾಹಿತಿ ಆಧರಿಸಿ ನಗರದ ಕಂಬಳಿ ಬಜಾರ್‌ನ ಹೇಮಾ ಜ್ಯುವೆಲರ್ಸ್ ಮಾಲೀಕರಾದ ನರೇಶ್ ಸೋನಿ ಎಂಬವರ ಮನೆಯ ಮೇಲೆ ಭಾನುವಾರ ಮಧ್ಯಾಹ್ನ ದಾಳಿ ನಡೆಸಿದ್ದರು. ಈ ವೇಳೆ ಅಪಾರ ಪ್ರಮಾಣದ ಹಣ, ಆಭರಣ ಸಿಕ್ಕವು' ಎಂದು ಎಸ್‌ಪಿ ಹೇಳಿದರು.

'ಈಗ ಸಿಕ್ಕಿರುವ ಹಣ ಮತ್ತು ಆಭರಣ ಚುನಾವಣೆಯಲ್ಲಿ ಹಂಚಲು ಸಂಗ್ರಹಿಸಿಟ್ಟಿದ್ದೋ, ಹವಾಲದಿಂದ ಬಂದದ್ದೋ ಅಥವಾ ನರೇಶ್ ಸೋನಿ ಅವರ ವ್ಯಾಪಾರ ವ್ಯವಹಾರಕ್ಕೆ ಸಂಬಂಧಿಸಿದ್ದೋ ಖಚಿತವಾಗಿಲ್ಲ. ಈ ಬಗ್ಗೆ ಪೊಲೀಸ್ ಇಲಾಖೆಯಿಂದ ಎಫ್‌ಐಆರ್ ದಾಖಲು ಮಾಡಲಾಗಿದ್ದು, ತನಿಖೆಯನ್ನು ನಡೆಸಲಾಗುತ್ತಿದೆ. ಈ ವಿಷಯವನ್ನು ನಾವು ಆದಾಯ ತೆರಿಗೆ ಇಲಾಖೆಯ ಗಮನಕ್ಕೂ ತರುತ್ತೇವೆ' ಎಂದರು.

'ಹಣದ ಮೂಲದ ಬಗ್ಗೆ ಆಭರಣದಂಗಡಿ ಮಾಲೀಕ ನರೇಶ್ ಸೋನಿ ವಿಚಾರಣೆ ನಡೆಸಲಾಗುತ್ತಿದೆ' ಎಂದು ಅವರು ತಿಳಿಸಿದರು.

'ಬಳ್ಳಾರಿ ನಗರ ಮತ್ತು ಗ್ರಾಮೀಣ ಕ್ಷೇತ್ರಗಳು ಕಳೆದ ವಿಧಾನಸಭಾ ಚುನಾವಣೆಯಲ್ಲಿ 'ಹೆಚ್ಚು ವೆಚ್ಚದ ಕ್ಷೇತ್ರಗಳು' ಎಂದು ಗುರುತಿಸಿಕೊಂಡಿದ್ದವು. ಹೀಗಾಗಿ ನಾವು ಚುನಾವಣಾ ಅಕ್ರಮಗಳ ಬಗ್ಗೆಯೂ ಹೆಚ್ಚಿನ ಜಾಗ್ರತೆ ವಹಿಸಿದ್ದೇವೆ' ಎಂದು ಇದೇ ವೇಳೆ ಅವರು ಹೇಳಿದರು.

ನರೇಶ್ ಸೋನಿಗೆ ಕೆಆರ್‌ಪಿಪಿ ನಂಟು: ಬಳ್ಳಾರಿ ನಗರದ ಪ್ರತಿಷ್ಠಿತ ಹೇಮಾ ಜ್ಯುವೆಲರೀಸ್‌ನ ಮಾಲೀಕನ ನರೇಶ್ ಸೋನಿ ಅವರ ಮನೆಯಲ್ಲಿ ಹಣ ಮತ್ತು ಆಭರಣ ಸಿಕ್ಕಿವೆ. ನರೇಶ್ ಸೋನಿ ಅವರು ಜನಾರ್ದನ ರೆಡ್ಡಿ ಮತ್ತು ಅವರ ಪಕ್ಷ ಕೆಆರ್‌ಪಿಪಿಯೊಂದಿಗೆ ಗುರುತಿಸಿಕೊಂಡಿದ್ದರು. ಸದ್ಯ ಕೆಆರ್‌ಪಿಪಿಯು ಬಿಜೆಪಿಯೊಂದಿಗೆ ವಿಲೀನಗೊಂಡಿದೆ.

ಹತ್ತೇ ತಿಂಗಳಿಗೆ ಶಕ್ತಿ ನಿಸ್ತೇಜವಾಯಿತೇ?– ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಧಿಕಾರ ಇರುವುದು ನಿಮ್ಮ ಕೈಯಲ್ಲಿ. ಜನ ಪೆನ್ನು-ಪೇಪರ್ ಕೊಟ್ಟಿರುವುದೂ ನಿಮಗೇ. ಕೆಲಸ ಮಾಡಿ ಎಂದರೆ ಹಳೆಯದನ್ನು ಏಕೆ ಕೆದಕುತ್ತಿದ್ದೀರಿ. ನಿಮ್ಮ ಶಕ್ತಿ ಕೇವಲ ಹತ್ತೇ ತಿಂಗಳಿಗೆ ನಿಸ್ತೇಜವಾಯಿತೇ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ವ್ಯಂಗ್ಯವಾಗಿ ಪ್ರಶ್ನಿಸಿದ್ದಾರೆ.

'ಎಕ್ಸ್' ಜಾಲತಾಣದಲ್ಲಿ ಈ ಕುರಿತು ಅಭಿಪ್ರಾಯ ಹಂಚಿಕೊಂಡಿರುವ ಅವರು, 'ಅಧಿಕಾರ ಇದ್ದಾಗಲೇ ಕುಮಾರಸ್ವಾಮಿ ಅವರು ಮೇಕೆದಾಟು ಮಾಡಲಿಲ್ಲ ಎಂದು ಹೇಳಿದ್ದೀರಿ. ಕುಮಾರಸ್ವಾಮಿ ಏನೂ ಮಾಡಿಯೇ ಇಲ್ಲವೆಂದು ಕಥೆ ಕಟ್ಟಿದ್ದೀರಿ. ಎಷ್ಟಾದರೂ ನೀವು ಸುಳ್ಳು ಫ್ಯಾಕ್ಟರಿಯ ಮೇಟಿ. ಮೇಕೆದಾಟುಗಾಗಿ ನಾನು ಏನೆಲ್ಲಾ ಮಾಡಿದೆ ಎನ್ನುವುದು ನಿಮಗೆ ಹೇಗೆ ಗೊತ್ತಾದೀತು' ಎಂದು ಕೆಣಕಿದ್ದಾರೆ.

'ಮೇಕೆದಾಟು ನಿರ್ಮಾಣಕ್ಕೆ 2018-19ರಲ್ಲೇ ಕೇಂದ್ರಕ್ಕೆ ಡಿಪಿಆರ್ ಸಲ್ಲಿಸಿದ್ದು ಅಂದಿನ ನನ್ನ ಸರ್ಕಾರ. ಆ ಸರ್ಕಾರದಲ್ಲಿ ನೀವೂ ಸಚಿವರಾಗಿದ್ದಿರಿ. 2006-2007ರಲ್ಲೇ ಮಹದಾಯಿ ಯೋಜನೆಗೆ ಸಂಪುಟದಲ್ಲಿಯೇ ಒಪ್ಪಿಗೆ ನೀಡಿ, ₹ 100 ಕೋಟಿ ಮಂಜೂರು ಮಾಡಿ ಆಗಲೇ ಶಂಕುಸ್ಥಾಪನೆಯನ್ನೂ ನೆರವೇರಿಸಲಾಗಿತ್ತು. ಆ ನಂತರ ಐದು ವರ್ಷ ನಿಮ್ಮದೇ ಕಾಂಗ್ರೆಸ್ ಸರ್ಕಾರ ಇತ್ತಲ್ಲವೇ. ಆಗ ಯಾಕೆ ತಾವು ನುಡಿದಂತೆ ನಡೆಯಲಿಲ್ಲ' ಎಂದೂ ಕೇಳಿದ್ದಾರೆ.

'ಮೇಕೆದಾಟು, ಮಹದಾಯಿ ಸೇರಿ ನೀರಾವರಿ ಯೋಜನೆಗಳಿಗಾಗಿ ನಾನು ಮುಖ್ಯಮಂತ್ರಿಯಾಗಿ ಆಯಾ ಇಲಾಖೆಯ ಕೇಂದ್ರ ಸಚಿವರನ್ನು ಎಷ್ಟು ಸಲ ಭೇಟಿಯಾಗಿದ್ದೆ ಎನ್ನುವ ಮಾಹಿತಿ ನಿಮಗಿಲ್ಲ. ನಿತಿನ್ ಗಡ್ಕರಿ ಅವರೊಬ್ಬರನ್ನೇ 10 ಬಾರಿ ಭೇಟಿಯಾಗಿದ್ದೆ. 90ರ ಇಳಿವಯಸ್ಸಿನಲ್ಲಿಯೂ ದೇವೇಗೌಡರು ಸಂಸತ್ತಿನ ಒಳಗೆ, ಹೊರಗೆ ರಾಜ್ಯಕ್ಕಾಗಿ ಹೋರಾಡುತ್ತಿದ್ದಾರೆ. ಮೇಕೆದಾಟು ಬಗ್ಗೆ ಸಂಸತ್ ಅಧಿವೇಶನದಲ್ಲಿ ಅವರು ದನಿ ಎತ್ತಿದರೆ, ನಿಮ್ಮ ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ಮೌನವಾಗಿದ್ದರು' ಎಂದು ಟೀಕಿಸಿದ್ದಾರೆ.

ಕುತೂಹಲ ಮೂಡಿಸಿದ ಮಾಧುಸ್ವಾಮಿ, ಮುದ್ದಹನುಮೇಗೌಡ ಭೇಟಿ

ತುಮಕೂರು: ಕಾಂಗ್ರೆಸ್ ಅಭ್ಯರ್ಥಿ ಎಸ್.ಪಿ. ಮುದ್ದಹನುಮೇಗೌಡ ಭಾನುವಾರ ಬಿಜೆಪಿ ಮುಖಂಡ ಜೆ.ಸಿ.ಮಾಧುಸ್ವಾಮಿ ಅವರನ್ನು ಭೇಟಿ ಮಾಡಿ, ಬೆಂಬಲ ಕೋರಿದರು.

ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಜೆ.ಸಿ. ಪುರದಲ್ಲಿರುವ ಮಾಧುಸ್ವಾಮಿ ಅವರ ಮನೆಗೆ ತೆರಳಿದ ಮುದ್ದಹನುಮೇಗೌಡ ಅವರು ಕೆಲಹೊತ್ತು ಮಾತುಕತೆ ನಡೆಸಿದರು.

ನಂತರ ಸುದ್ದಿಗಾರರ ಜತೆ ಮಾತನಾಡಿದ ಮಾಧುಸ್ವಾಮಿ, 'ಮುದ್ದಹನುಮೇಗೌಡ ನನ್ನ ಹಳೆಯ ಸ್ನೇಹಿತರು. ಇದೊಂದು ಸೌಜನ್ಯದ ಭೇಟಿ. ಅವರು ಒಬ್ಬ ಅಭ್ಯರ್ಥಿಯಾಗಿ ನಮ್ಮ ಮನೆಗೆ ಬಂದಿದ್ದಾರೆ. ಅಭ್ಯರ್ಥಿಯಾದವರು ಬೆಂಬಲ ಕೇಳುವುದು ಸಹಜ' ಎಂದರು.

'ಇಬ್ಬರು ಒಟ್ಟಿಗೆ ಶಾಸಕರಾಗಿ ಕೆಲಸ ಮಾಡಿದ್ದೇವೆ. ಸ್ನೇಹಿತರು ಅಂತ ಮನೆಗೆ ಬಂದಾಗ ವಿಶೇಷ ಅರ್ಥ ಕಲ್ಪಿಸುವುದು ಬೇಡ. ನಾವು ಬೇರೆ ಪಕ್ಷದಲ್ಲಿ ಇದ್ದೇವೆ ಬೆಂಬಲ ನೀಡಲು ಆಗುತ್ತಾ' ಎಂದು ಪ್ರಶ್ನಿಸಿದರು.

ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದ ಮಾಧುಸ್ವಾಮಿ ಅವರು ವಿ.ಸೋಮಣ್ಣಗೆ ಟಿಕೆಟ್ ಘೋಷಣೆಯಾದ ನಂತರ ಅಸಮಾಧಾನ ವ್ಯಕ್ತಪಡಿಸಿ, ಪಕ್ಷದಿಂದ ಅಂತರ ಕಾಯ್ದುಕೊಂಡಿದ್ದರು. ಸೋಮಣ್ಣ ನಾಮಪತ್ರ ಸಲ್ಲಿಸುವ ವೇಳೆಯೂ ಕಾಣಿಸಿಕೊಂಡಿರಲಿಲ್ಲ. ಪ್ರಚಾರದಿಂದಲೂ ದೂರ ಉಳಿದಿದ್ದಾರೆ.



ಲಿಂಗಭೇದದ ಹೀಯಾಳಿಕೆ, ಸ್ತ್ರೀದ್ವೇಷದ ಸುತ್ತ...



ನವದೆಹಲಿ (ಪಿಟಿಐ): ಚುನಾವಣೆಯ ಸಮಯ ಎಂದರೆ, ಅದು ಪಕ್ಷಾತೀತವಾಗಿ ದೇಶದಾದ್ಯಂತ ಮಹಿಳಾ ರಾಜಕಾರಣಿಗಳನ್ನು ಗುರಿಯಾಗಿಸಿಕೊಂಡು ಲಿಂಗಭೇದದ ಹೀಯಾಳಿಕೆಯ ಮಾತುಗಳು ಕೇಳಿಬರುವ ಕಾಲ. 2024ರ ಲೋಕಸಭಾ ಚುನಾವಣೆಯಲ್ಲೂ ಹೇಮಾ ಮಾಲಿನಿ, ಕಂಗನಾ ರನೌತ್ ಮತ್ತು ಮಮತಾ ಬ್ಯಾನರ್ಜಿಯವರ ವಿರುದ್ಧ ಅಂತಹದ್ದೇ ಹೇಳಿಕೆಗಳು ಹೊರಬಿದ್ದಿವೆ.

ಹೇಮಾ ಮಾಲಿನಿ ಕುರಿತು ಕಾಂಗ್ರೆಸ್ ಮುಖಂಡ ರಣದೀಪ್ ಸುರ್ಜೇವಾಲಾ ಕಳೆದ ತಿಂಗಳ ಕೊನೆಯಲ್ಲಿ ಹರಿಯಾಣದ ರ‍್ಯಾಲಿಯಲ್ಲಿ ಆಡಿದರೆನ್ನಲಾದ ಮಾತುಗಳು ಭಾರಿ ವಿವಾದಕ್ಕೆ ಕಾರಣವಾಗಿದ್ದವು. ಈ ಸಂಬಂಧ ಕ್ರಮ ಜರುಗಿಸುವಂತೆ ರಾಷ್ಟ್ರೀಯ ಮಹಿಳಾ ಆಯೋಗವು ಚುನಾವಣಾ ಆಯೋಗಕ್ಕೆ ಸೂಚಿಸಿದೆ.

ಮಥುರಾ ಸಂಸದೆ ಹೇಮಾ ಮಾಲಿನಿ ಒಬ್ಬ ತಾರೆಯಾಗಿ, ಪತ್ನಿಯಾಗಿ, ಸೊಸೆಯಾಗಿ ಹಲವು ಬಾರಿ ರಾಜಕೀಯ ವಲಯದಲ್ಲಿ ಚರ್ಚೆಗೆ ಗುರಿಯಾಗಿದ್ದಾರೆ.

ಕಾಂಗ್ರೆಸ್ಸಿನ ಸಾಮಾಜಿಕ ಜಾಲತಾಣ ವಿಭಾಗದ ಮುಖ್ಯಸ್ಥೆ ಸುಪ್ರಿಯಾ ಶ್ರೀನೇತ್ ಮತ್ತು ಎಚ್.ಎಸ್.ಅಹಿರ್, ಮಂಡಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕಂಗನಾ ರನೌತ್ ಅವರನ್ನು ಕ್ಷೇತ್ರದೊಂದಿಗೆ ಸಮೀಕರಿಸಿ ಸಾಮಾಜಿಕ ಜಾಲತಾಣದಲ್ಲಿ ಮಾಡಿರುವ ಪೋಸ್ಟ್‌ಗಳು ತೀವ್ರ ವಿವಾದಕ್ಕೆ ಗುರಿಯಾಗಿದ್ದವು. ಶ್ರೀನೇತ್, ಅದನ್ನು ತಾನು ಪೋಸ್ಟ್ ಮಾಡಿರಲಿಲ್ಲ ಎಂದು ವಿವಾದಾತ್ಮಕ ಪೋಸ್ಟ್ ಅಳಿಸಿಹಾಕಿದ್ದರು. ಮಮತಾ ಬ್ಯಾನರ್ಜಿ ಅವರ ಪೋಷಕರ ಬಗ್ಗೆ ಆಡಿದ್ದ ಮಾತಿಗೆ ಬಿಜೆಪಿ ಮುಖಂಡ ದಿಲೀಪ್ ಘೋಷ್ ಕ್ಷಮೆಯಾಚಿಸಿದ್ದರು. ಚುನಾವಣಾ ಆಯೋಗವು ಶ್ರೀನೇತ್ ಮತ್ತು ಘೋಷ್ ಅವರಿಗೆ ನೋಟಿಸ್ ಜಾರಿ ಮಾಡಿದೆ. ಘೋಷ್ ಅವರು ಮಮತಾ ಬಗ್ಗೆ ಹಿಂದೆಯೂ ಇಂಥ ಹೇಳಿಕೆ ನೀಡಿದ್ದರು.

ಭಾರತದ ರಾಜಕಾರಣದ ದೊಡ್ಡ ನಾಯಕಿಯರಾದ ಸೋನಿಯಾ ಗಾಂಧಿ, ಮಾಯಾವತಿ, ಮಮತಾ ಬ್ಯಾನರ್ಜಿ, ಸ್ಮೃತಿ ಇರಾನಿ, ಜಯಪ್ರದಾ, ಪ್ರಿಯಾಂಕಾ ಗಾಂಧಿ ವಾದ್ರಾ ಎಲ್ಲರೂ ಲಿಂಗಭೇದದ ಹೀಯಾಳಿಕೆಗೆ ಗುರಿಯಾದವರೇ.

ರಾಜಕಾರಣದಲ್ಲಿ ಸ್ತ್ರೀ ದ್ವೇಷ ಕುರಿತು ಮಾತನಾಡಿರುವ ರಂಜನಾ ಕುಮಾರಿ, 'ಮಹಿಳೆಯ ದೇಹದ ಬಗ್ಗೆ ಮಾತನಾಡುವ ಮೂಲಕ ಆಕೆಯನ್ನು ಕುಗ್ಗುವಂತೆ ಮಾಡುವುದು ಒಂದು ಸಾಮಾನ್ಯ ತಂತ್ರವಾಗಿದೆ' ಎಂದು ಹೇಳುತ್ತಾರೆ.

2019ರ ಸಾರ್ವತ್ರಿಕ ಚುನಾವಣೆಯ ಸಮಯದಲ್ಲಿಯೂ ಹಲವರು ತಮ್ಮ ಮಹಿಳಾ ವಿರೋಧಿಗಳನ್ನು ಗುರಿಯಾಗಿಸಿಕೊಂಡು ಇಂಥವೇ ಸ್ತ್ರೀದ್ವೇಷದ, ಹೀಯಾಳಿಕೆಯ ಮಾತುಗಳನ್ನು ಆಡಿದ್ದರು.

ಕೇಂದ್ರ ಸಚಿವರಾಗಿದ್ದ ಅಶ್ವಿನಿ ಚೌಬೆ ಬಿಹಾರದ ಮಾಜಿ ಮುಖ್ಯಮಂತ್ರಿ ರಾಬ್ರಿ ದೇವಿ ಅವರಿಗೆ 'ಮುಸುಕಿನಿಂದ (ಘೂಂಘಟ್) ಆಚೆ ಬಾರದಂತೆ' ಸಲಹೆ ನೀಡಿದ್ದರು. ಬಿಜೆಪಿ ಮುಖಂಡ ವಿನಯ್ ಕಟಿಯಾರ್, 'ರಾಹುಲ್ ಗಾಂಧಿ ತಂದೆ ರಾಜೀವ್ ಗಾಂಧಿ ಎಂಬುದಕ್ಕೆ ಪುರಾವೆ ನೀಡಲು ಸಾಧ್ಯವೇ' ಎಂದು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರನ್ನು ಕೇಳಿದ್ದರು. ಕಟಿಯಾರ್ ಇನ್ನೊಮ್ಮೆ ಪ್ರಿಯಾಂಕಾ ಗಾಂಧಿ ಬಗ್ಗೆ ಮಾತನಾಡುತ್ತಾ, 'ರಾಜಕಾರಣದಲ್ಲಿ ಇನ್ನೂ ಅನೇಕ ಸುಂದರ ತಾರಾ ಪ್ರಚಾರಕರಿದ್ದಾರೆ' ಎಂದು ಹೇಳಿಕೆ ನೀಡಿದ್ದರು. ಬಿಜೆಪಿಯ ಗೋಪಾಲ ಶೆಟ್ಟಿ ಅವರು ನಟಿ, ರಾಜಕಾರಣಿ ಊರ್ಮಿಳಾ ಮಾತೊಂಡ್ಕರ್ ಬಗ್ಗೆ ಮಾತನಾಡುತ್ತಾ, 'ಆಕೆಯ ಸೌಂದರ್ಯದಿಂದಾಗಿ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ಸಿಕ್ಕಿದೆ' ಎಂದಿದ್ದರು.

ಬಿಎಸ್‌ಪಿ ನಾಯಕಿ ಮಾಯಾವತಿ ಅವರನ್ನು 'ಲೈಂಗಿಕ ಕಾರ್ಯಕರ್ತೆಗಿಂತಲೂ ಕೀಳು' ಎಂದಿದ್ದ ಉತ್ತರ ಪ್ರದೇಶ ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ದಯಾಶಂಕರ್ ಸಿಂಗ್, ದಲಿತ ನಾಯಕಿ ಹಣಕ್ಕಾಗಿ ಪಕ್ಷದ ಟಿಕೆಟ್ ಮಾರಿಕೊಳ್ಳುತ್ತಾರೆ ಎಂದು ಆರೋಪಿಸಿದ್ದರು. ಅವರ ಹೇಳಿಕೆಗೆ ಪಕ್ಷದ ಕೇಶವ್ ಪ್ರಸಾದ್ ಮೌರ್ಯ ಮತ್ತು ಅರುಣ್ ಜೇಟ್ಲಿ ಅವರು ಸಂಸತ್‌ನಲ್ಲಿ ಕ್ಷಮೆ ಯಾಚಿಸಿದ್ದರು.

2022ರಲ್ಲಿ ಕೇಂದ್ರ ಸಚಿವೆ ಸ್ಮೃತಿ ಇರಾನಿ ವಿರುದ್ಧ ಲಿಂಗಭೇದ ಹೀಯಾಳಿಕೆಗಾಗಿ ಕಾಂಗ್ರೆಸ್‌ನ ಅಜಯ್ ರಾಯ್ ಅವರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದರು.

ಕೇವಲ ವಿರೋಧ ಪಕ್ಷಗಳ ಮಹಿಳೆಯರ ಬಗ್ಗೆ ಅಷ್ಟೇ ಅಲ್ಲ, ತಮ್ಮದೇ ಪಕ್ಷದವರ ಬಗೆಗೂ ಹೀಯಾಳಿಕೆಯ ಮಾತುಗಳನ್ನಾಡಿದವರು ಇದ್ದಾರೆ. 2013ರಲ್ಲಿ ಕಾಂಗ್ರೆಸ್ ಮುಖಂಡ ದಿಗ್ವಿಜಯ್ ಸಿಂಗ್, ಆಗ ಸಂಸದೆಯಾಗಿದ್ದ ಮೀನಾಕ್ಷಿ ನಟರಾಜನ್ ಅವರನ್ನು ಕುರಿತು, 'ಶೇ 100ರಷ್ಟು ಪರಿಶುದ್ಧವಾದ ವಸ್ತು' ಎಂದಿದ್ದು ಎಲ್ಲ ಪಕ್ಷಗಳಿಂದಲೂ ವ್ಯಾಪಕ ಟೀಕೆಗೆ ಗುರಿಯಾಗಿತ್ತು.

'ಆಧುನಿಕ ಸಮಾಜಕ್ಕೆ ಅಗತ್ಯವಾದ ಲಿಂಗ ಸಮಾನತೆ ಮತ್ತು ಬಹುತ್ವ ಭಾರತದಲ್ಲಿ ಇನ್ನೂ ಎಳವೆಯಲ್ಲಿವೆ ಮತ್ತು ಏರುಪೇರಿನಿಂದ ಕೂಡಿವೆ' ಎಂದು ದೆಹಲಿ ವಿಶ್ವವಿದ್ಯಾಲಯದ ಜೀಸಸ್ ಮತ್ತು ಮೇರಿ ಕಾಲೇಜಿನ ರಾಜಕೀಯ ಶಾಸ್ತ್ರ ಪ್ರಾಧ್ಯಾಪಕಿ ಸುಶೀಲಾ ರಾಮಸ್ವಾಮಿ ಹೇಳುತ್ತಾರೆ.

ಹೀಗೆ ಮಹಿಳಾ ರಾಜಕಾರಣಿಗಳು ತಮ್ಮದೇ ಪಕ್ಷದವರಿಂದ, ವಿರೋಧಿಗಳಿಂದ, ಮತದಾರರಿಂದ ನಿರಂತರವಾಗಿ ಲಿಂಗಭೇದದ ಹೀಯಾಳಿಕೆಗೆ ಗುರಿಯಾದ ನಿದರ್ಶನಗಳು ಹೇರಳವಾಗಿದ್ದು, ಅವರ ಸಾಧನೆಯನ್ನು ಅವರ ಲಿಂಗತ್ವಕ್ಕಷ್ಟೇ ಸೀಮಿತಗೊಳಿಸಲಾಗುತ್ತಿದೆ.

'ಪುರುಷ ಪ್ರಧಾನ ವ್ಯವಸ್ಥೆಯೇ ಮೂಲ ಕಾರಣ'

'ಮಹಿಳಾ ರಾಜಕಾರಣಿಗಳ ವಿರುದ್ಧ ಲಿಂಗಭೇದದ ಹೀಯಾಳಿಕೆಯ ಭಾಷೆಯನ್ನು ಬಳಸುವುದರ ಬೇರುಗಳು ಖಾಸಗಿ ಮತ್ತು ಸಾರ್ವಜನಿಕ ವಲಯಗಳಲ್ಲಿ ಮಹಿಳೆಯರಿಗೆ ಅಸಮಾನ ಅವಕಾಶ ಸೃಷ್ಟಿಗೆ ಕಾರಣವಾಗಿರುವ ಪುರುಷ ಪ್ರಧಾನ ವ್ಯವಸ್ಥೆಯಲ್ಲಿವೆ' ಎನ್ನುವುದು ದೆಹಲಿ ವಿಶ್ವವಿದ್ಯಾಲಯದ ರಾಜಕೀಯ ಶಾಸ್ತ್ರ ಪ್ರಾಧ್ಯಾಪಕಿ ಸುಶೀಲಾ ರಾಮಸ್ವಾಮಿ ಅವರ ಅಭಿಪ್ರಾಯ.

'ಸರಿಯಾದ ಶಿಕ್ಷಣ, ಪಾಲನೆ, ಅರಿವಿನ ಕೊರತೆಯು ಅವಾಸ್ತವಿಕವಾದ ಪುರುಷ ಶ್ರೇಷ್ಠತೆಯ ವಿಕೃತ ಗ್ರಹಿಕೆಗೆ ಕಾರಣವಾಗಿದೆ. ನಮ್ಮಲ್ಲಿ ಉದಾರವಾದಿ ರಾಜಕೀಯ ವ್ಯವಸ್ಥೆ ಇದೆ. ಆದರೆ, ಅದಕ್ಕೆ ಪೂರಕವಾಗಿ ಉದಾರವಾದಿ ಸಮಾಜ ರೂಪುಗೊಳ್ಳುವುದು ಒಂದು ನಿರಂತರ ಪ್ರಕ್ರಿಯೆಯಾಗಿದ್ದು, ಅದಕ್ಕೆ ಸಮಯ ಹಿಡಿಯುತ್ತದೆ' ಎಂದು ಅವರು ಹೇಳುತ್ತಾರೆ.

ವಿವಾದಿತ ಹೇಳಿಕೆಗಳು...

ಮಹಿಳೆ ಅಡುಗೆ ಮಾಡುವುದಕ್ಕೆ ಲಾಯಕ್ಕು
ಶಾಮನೂರು ಶಿವಶಂಕರಪ್ಪ
ಕಾಂಗ್ರೆಸ್ ಶಾಸಕ (ಬಿಜೆಪಿಯ ಗಾಯತ್ರಿ ಸಿದ್ದೇಶ್ವರ ಅವರ ಸ್ಪರ್ಧೆಯ ಬಗ್ಗೆ)

ಹೇಮಾ ಮಾಲಿನಿ ಅವರ ಕೆನ್ನೆಯಷ್ಟು ನುಣುಪಾದ ರಸ್ತೆಗಳನ್ನು ನಿರ್ಮಿಸುತ್ತೇನೆ
ಲಾಲು ಪ್ರಸಾದ್, ಆರ್‌ಜೆಡಿ ಮುಖ್ಯಸ್ಥ

ಮಮತಾ ಬ್ಯಾನರ್ಜಿ ತಮ್ಮ ಒಂದು ಕಾಲು ಕಾಣುವಂತೆ ಸೀರೆ ಉಟ್ಟಿದ್ದಾರೆ. ನಾನು ಎಂದೂ ಯಾರೂ ಆ ರೀತಿ ಸೀರೆ ಉಟ್ಟದ್ದನ್ನು ಕಂಡಿಲ್ಲ. ಅದರ ಬದಲು ಬರ್ಮುಡಾ ಧರಿಸಿದರೆ ಎಲ್ಲರೂ ಸ್ಪಷ್ಟವಾಗಿ ನೋಡಬಹುದಿತ್ತು
ದಿಲೀಪ್ ಘೋಷ್, ಬಿಜೆಪಿ ಮುಖಂಡ (2021ರ ವಿಧಾನಸಭಾ ಚುನಾವಣೆಯ ವೇಳೆ ಮಮತಾ ಬ್ಯಾನರ್ಜಿ ಕಾಲಿಗೆ ಪ್ಲಾಸ್ಟರ್ ಹಾಕಿದ್ದ ರೀತಿಗೆ ಪ್ರತಿಕ್ರಿಯೆ)

ನಾನು ಆಕೆಯನ್ನು ರಾಮ್‌ಪುರಕ್ಕೆ ಕರೆತಂದೆ. ಆಕೆಯನ್ನು ಮುಟ್ಟಲು ನಾನು ಯಾರಿಗೂ ಬಿಡಲಿಲ್ಲ ಎನ್ನುವುದನ್ನು ನೀವೇ ನೋಡಿದ್ದೀರಿ. ಆಕೆಯ ನಿಜವಾದ ಮುಖವನ್ನು ಕಾಣಲು ನಿಮಗೆ 17 ವರ್ಷ ಬೇಕಾಯಿತು. ಆದರೆ, 17 ದಿನದಲ್ಲಿ ನಾನು ಆಕೆ ಖಾಕಿ ಒಳಉಡುಪು ಧರಿಸುತ್ತಾಳೆ ಎನ್ನುವುದನ್ನು ಕಂಡುಕೊಂಡಿದ್ದೆ
ಆಜಂ ಖಾನ್, ಸಮಾಜವಾದಿ ಪಕ್ಷದ ಮುಖಂಡ (ಜಯಪ್ರದಾ ಬಗ್ಗೆ, 2019ರ ಚುನಾವಣಾ ರ‍್ಯಾಲಿಯಲ್ಲಿ)

ಚುನಾವಣಾ ಕಣದಲ್ಲಿ...

ರಾಜೀವ್ ವಿರುದ್ಧ ಎಲ್‌ಡಿಎಫ್ ದೂರು

ತಿರುವನಂತಪುರ: ತಿರುವನಂತಪುರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ರಾಜೀವ್ ಚಂದ್ರಶೇಖರ್ ಅವರು ನಾಮಪತ್ರ ಸಲ್ಲಿಸುವಾಗ ತಮ್ಮ ಆಸ್ತಿಯ ಬಗ್ಗೆ ಸುಳ್ಳು ಮಾಹಿತಿ ನೀಡಿದ್ದಾರೆ ಎಂದು ಸಿಪಿಎಂ ನೇತೃತ್ವದ ಎಲ್‌ಡಿಎಫ್ ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಿದೆ. ಈ ಸಂಬಂಧ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಕೂಡ ಈ ಹಿಂದೆಯೇ ಆಯೋಗಕ್ಕೆ ದೂರು ನೀಡಿದೆ.

ಜುಪಿಟರ್ ಕ್ಯಾಪಿಟಲ್ ಸೇರಿದಂತೆ ಅನೇಕ ಹೂಡಿಕೆಗಳ ಬಗ್ಗೆ ರಾಜೀವ್ ಚಂದ್ರಶೇಖರ್ ಅವರು ಪ್ರಮಾಣಪತ್ರದಲ್ಲಿ ನಮೂದಿಸಿಲ್ಲ ಎಂದು ಎಲ್‌ಡಿಎಫ್ ಆರೋಪಿಸಿದೆ.

ಈ ಆರೋಪವನ್ನು ನಿರಾಕರಿಸಿರುವ ಚಂದ್ರಶೇಖರ್ ಅವರು, 'ಕಾನೂನು ಪ್ರಕಾರ ನಾನು ವಿವರಗಳನ್ನು ನೀಡಿದ್ದೇನೆ. ಈ ಹಿಂದೆಯೂ ರಾಜ್ಯಸಭಾ ಚುನಾವಣೆಗೆ ನಾಮಪತ್ರ ಸಲ್ಲಿಸುವಾಗ ಕಾಂಗ್ರೆಸ್ ನನ್ನ ವಿರುದ್ಧ ಆಧಾರರಹಿತ ಆರೋಪಗಳನ್ನು ಮಾಡಿತ್ತು' ಎಂದು ಹೇಳಿದ್ದಾರೆ.

ಪ್ರಚಾರಕ್ಕೆ ಇಲ್ಲ: ಖುಷ್ಬೂ ಸುಂದರ್



ಚೆನ್ನೈ (ಪಿಟಿಐ): 'ಆರೋಗ್ಯ ಸಮಸ್ಯೆಯಿಂದಾಗಿ ಈ ಬಾರಿ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಳ್ಳುತ್ತಿಲ್ಲ ಎಂದು ಪಕ್ಷದ ಹೈಕಮಾಂಡ್‌ಗೆ ತಿಳಿಸಿದ್ದೇನೆ' ಎಂದು ಬಿಜೆಪಿ ನಾಯಕಿ ಖುಷ್ಬೂ ಸುಂದರ್ ಭಾನುವಾರ ಹೇಳಿದ್ದಾರೆ.

'2019ರಿಂದಲೂ ಬೆನ್ನು ನೋವಿನ ಸಮಸ್ಯೆಯಿಂದ ಬಳಲುತ್ತಿದ್ದೇನೆ. ಸುದೀರ್ಘ ಪ್ರಯಾಣ ಮಾಡಲು ಮತ್ತು ತುಂಬಾ ಹೊತ್ತು ಕುಳಿತುಕೊಳ್ಳಲು ಸಾಧ್ಯವಾಗುತ್ತಿಲ್ಲ. ಚುನಾವಣಾ ಪ್ರಚಾರದಲ್ಲಿ ಪಾಲ್ಗೊಳ್ಳಬೇಕಿದ್ದರೆ ಇವೆರಡೂ ಅಗತ್ಯ. ಆದ್ದರಿಂದ ಈ ಬಾರಿಯ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಳ್ಳುತ್ತಿಲ್ಲ' ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

'ಹಿಂದೆ ಸರಿಯುವಂತೆ ಬಿಜೆಪಿ ಒತ್ತಡ'

ಭೋಪಾಲ್ (ಪಿಟಿಐ): ಖಜುರಾಹೊ ಲೋಕಸಭಾ ಕ್ಷೇತ್ರದ ಕೆಲವು ಅಭ್ಯರ್ಥಿಗಳನ್ನು ಕಣದಿಂದ ಹಿಂದೆ ಸರಿಯುವಂತೆ ಬಿಜೆಪಿಯು ಒತ್ತಾಯಿಸುತ್ತಿದೆ ಎಂದು ಮಧ್ಯಪ್ರದೇಶ ಕಾಂಗ್ರೆಸ್ ಮುಖ್ಯಸ್ಥ ಜಿತು ಪಟ್ವಾರಿ ಭಾನುವಾರ ಆರೋಪಿಸಿದ್ದಾರೆ.

'ಕಣದಿಂದ ಹಿಂದೆ ಸರಿಯುವಂತೆ ಬಿಜೆಪಿಯು ಹಲವು ತಂತ್ರ ಪ್ರಯೋಗಿಸುತ್ತಿದೆ ಎಂದು ಆಲ್ ಇಂಡಿಯಾ ಫಾರ್ವರ್ಡ್ ಬ್ಲಾಕ್ ಅಭ್ಯರ್ಥಿ ಆರ್.ಬಿ.ಪ್ರಜಾಪತಿ ಅವರು ನನ್ನಲ್ಲಿ ತಿಳಿಸಿದ್ದಾರೆ' ಎಂದು ಪಟ್ವಾರಿ ಹೇಳಿದರು.

ಪ್ರಜಾಪತಿ ಅವರು ಈ ಸಂಬಂಧ ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಿರುವುದಾಗಿಯೂ ಅವರು ತಿಳಿಸಿದರು. ಸಾಮಾನ್ಯವಾಗಿ ಪಂಚಾಯಿತಿ ಚುನಾವಣೆಗಳಲ್ಲಿ ಬಳಸುವಂಥ ತಂತ್ರಗಳನ್ನು ಬಿಜೆಪಿಯು ಅತಿ ದೊಡ್ಡ ಚುನಾವಣೆಯಲ್ಲಿ ಬಳಸುತ್ತಿದೆ ಎಂದು ಅವರು ಆರೋಪಿಸಿದರು.

'ಚುನಾವಣಾಧಿಕಾರಿಯು ಬಿಜೆಪಿ ಕಾರ್ಯಕರ್ತನಂತೆ ವರ್ತಿಸುತ್ತಿದ್ದು, ಎಸ್‌ಪಿ ಅಭ್ಯರ್ಥಿಯ ನಾಮಪತ್ರವನ್ನು ತಿರಸ್ಕರಿಸಿದ್ದಾರೆ. ಅದನ್ನು ಕಾನೂನು ಹೋರಾಟದ ಮೂಲಕ ಎದುರಿಸುತ್ತೇವೆ. ಈಗ ಉಳಿದ ಅಭ್ಯರ್ಥಿಗಳ ಪೈಕಿ ಕೆಲವರನ್ನು ಅಪಹರಿಸಲಾಗಿದೆ. ಕೆಲವರು ಭೂಗತರಾಗಿದ್ದಾರೆ. ಸಾರ್ವಜನಿಕವಾಗಿ ಯಾರೂ ಕಾಣಿಸಿಕೊಳ್ಳುತ್ತಿಲ್ಲ. ಎಲ್ಲರ ಮೇಲೆ ಒತ್ತಡ ಹೇರಲಾಗುತ್ತಿದೆ' ಎಂದು ಪಟ್ವಾರಿ ದೂರಿದರು.

ಪ್ರಾಬಲ್ಯ ಉಳಿಸಿಕೊಳ್ಳುವುದೇ ಬಿಜೆಪಿ?

ಉತ್ತರ ಬಂಗಾಳ: ಕಳೆದ ಬಾರಿ ಎಂಟರಲ್ಲಿ ಏಳು ಸ್ಥಾನ ಗೆದ್ದಿದ್ದ ಕಮಲ ಪಾಳಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಪಶ್ಚಿಮ ಬಂಗಾಳದಲ್ಲಿ ಈಗಾಗಲೇ ಎರಡು ಚುನಾವಣಾ ರ‍್ಯಾಲಿಗಳನ್ನು ನಡೆಸಿದ್ದಾರೆ. ಅದರ ಬೆನ್ನಲ್ಲೇ, ಬಿಜೆಪಿಯು 2019ರಲ್ಲಿ ಉತ್ತರ ಬಂಗಾಳದಲ್ಲಿ ಗಳಿಸಿದ್ದ ದೊಡ್ಡ ಮಟ್ಟದ ಗೆಲುವನ್ನು ಈ ಬಾರಿಯೂ ಪುನರಾವರ್ತಿಸುವುದೇ ಎನ್ನುವ ಪ್ರಶ್ನೆ ಮೂಡಿದೆ. ಈ ಭಾಗದಲ್ಲಿ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಬಿಜೆಪಿಯ ಭದ್ರಕೋಟೆಯನ್ನು ಭೇದಿಸಬೇಕೆನ್ನುವ ಹಟದೊಂದಿಗೆ ಚುನಾವಣಾ ಕಣಕ್ಕಿಳಿದಿದೆ.

2019ರಲ್ಲಿ ಉತ್ತರ ಬಂಗಾಳದ ಎಂಟು ಲೋಕಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಏಳು ಗೆದ್ದರೆ, ಟಿಎಂಸಿ ಒಂದು ಕ್ಷೇತ್ರವನ್ನಷ್ಟೇ ಗೆದ್ದಿತ್ತು. ಆದರೆ, 2021ರ ವಿಧಾನಸಭಾ ಚುನಾವಣೆಯಲ್ಲಿ ಟಿಎಂಸಿ ತನ್ನ ಬಲವನ್ನು ವೃದ್ಧಿಸಿಕೊಂಡಿತ್ತು.

ಕಳೆದ ಎರಡು ವರ್ಷಗಳಿಂದ ಟಿಎಂಸಿ ತಳಮಟ್ಟದಲ್ಲಿ ಸಾಕಷ್ಟು ಕೆಲಸ ಮಾಡಿದ್ದು, ಬಡವರಿಗಾಗಿ ಅನೇಕ ಜನಪ್ರಿಯ ಯೋಜನೆಗಳನ್ನು ಜಾರಿಗೊಳಿಸಿದೆ. ಈ ಪ್ರಾಂತ್ಯದಲ್ಲಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹಲವು ದಿನಗಳಿಂದ ವಾಸ್ತವ್ಯ ಹೂಡಿದ್ದಾರೆ. ಜಲಪಾಯೀಗುಡಿಯಲ್ಲಿ ಬಿರುಗಾಳಿಯಿಂದ ಹಾನಿಗೊಳಗಾದ ಪ್ರದೇಶಗಳ ಪರಿಹಾರ ಕಾರ್ಯಗಳ ಉಸ್ತುವಾರಿ ವಹಿಸುವ ಜತೆಗೆ ಅವರು, ಚಹಾ ತೋಟದ ಕಾರ್ಮಿಕರು ಮತ್ತು ಹಳ್ಳಿಗರನ್ನು ಮಾತನಾಡಿಸುತ್ತ, ಜನರನ್ನು ತಲುಪುತ್ತಿದ್ದಾರೆ.

ಡಾರ್ಜಿಲಿಂಗ್ ಉತ್ತರದಲ್ಲಿ, ಕುರ್ಸ್ಯಾಂಗ್ ಬಿಜೆಪಿ ಶಾಸಕರಾಗಿದ್ದ ವಿಷ್ಣು ಪ್ರಸಾದ್ ಶರ್ಮಾ ಅವರಿಗೆ ಪಕ್ಷವು ಲೋಕಸಭಾ ಟಿಕೆಟ್ ನಿರಾಕರಿಸಿದ್ದರಿಂದ ಅವರು ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ. ಅಲೀಪುರ್ ದೌರ್‌ನಲ್ಲಿ ಕಳೆದ ಬಾರಿ 2.4 ಲಕ್ಷ ಮತಗಳ ಅಂತರದಿಂದ ಗೆದ್ದಿದ್ದ ಬಿಜೆಪಿ ಸಂಸದ ಮತ್ತು ಕೇಂದ್ರ ಸಚಿವ ಜಾನ್ ಬಾರ್ಲಾ ಅವರಿಗೆ ಕಳಪೆ ಸಾಧನೆಯ ನೆಪವೊಡ್ಡಿ ಟಿಕೆಟ್ ನಿರಾಕರಿಸಲಾಗಿದೆ. ಸ್ಥಳೀಯ ಬುಡಕಟ್ಟು ಜನರ ಬೆಂಬಲ ಹೊಂದಿರುವ ಬಾರ್ಲಾ ಚುನಾವಣಾ ಪ್ರಚಾರದಿಂದ ದೂರವುಳಿದಿದ್ದು, ತಮ್ಮ ವಿರುದ್ಧ ಪಿತೂರಿ ಮಾಡಲಾಗಿದೆ ಎಂದು ಅಸಮಾಧಾನಗೊಂಡಿದ್ದಾರೆ.

ಪಕ್ಷದ ಒಂದು ವಲಯದಿಂದ ಆಕ್ಷೇಪಣೆಗಳು ಬಂದ ಹಿನ್ನೆಲೆಯಲ್ಲಿ ಕೇಸರಿ ಪಾಳಯವು ರಾಯ್‌ಗಂಜ್ ಸಂಸದ, ಕೇಂದ್ರ ಸಚಿವ ದೇಬಶ್ರೀ ಚೌಧರಿ ಅವರನ್ನು ಕೋಲ್ಕತ್ತ (ದಕ್ಷಿಣ) ಕ್ಷೇತ್ರಕ್ಕೆ ಬದಲಾಯಿಸಿದೆ. ಕೆಲವು ತಿಂಗಳ ಹಿಂದೆ, ರಾಯ್‌ಗಂಜ್ ಬಿಜೆಪಿ ಶಾಸಕ ಕೃಷ್ಣ ಕಲ್ಯಾಣಿ ಅವರು ದೇಬಶ್ರೀ ತಮ್ಮ ವಿರುದ್ಧ ಪಿತೂರಿ ನಡೆಸಿದ್ದಾರೆ ಎಂದು ಆರೋಪಿಸಿ ಟಿಎಂಸಿ ಸೇರ್ಪಡೆ ಆಗಿದ್ದರು. ನಂತರ ಅವರಿಗೆ ಟಿಎಂಸಿ ಲೋಕಸಭಾ ಚುನಾವಣೆಯ ಟಿಕೆಟ್ ನೀಡಿದೆ.

ಕೂಚ್ ಬಿಹಾರ್‌ಗಾಗಿ ತೀವ್ರ ಸೆಣಸಾಟ

ಕೂಚ್ ಬಿಹಾರ್ ಹಿಂದೊಮ್ಮೆ ಫಾರ್ವರ್ಡ್ ಬ್ಲಾಕ್‌ನ ಭದ್ರಕೋಟೆಯಾಗಿತ್ತು. ಅದು 2014ರಲ್ಲಿ ಟಿಎಂಸಿ ಪಾಲಾದರೆ, 2019ರಲ್ಲಿ ಬಿಜೆಪಿ ಪಾಲಾಗಿತ್ತು. ಇಲ್ಲಿನ ಹಾಲಿ ಸಂಸದ ನಿಶಿತ್ ಪ್ರಮಾಣಿಕ್ ಮೋದಿ ಸರ್ಕಾರದಲ್ಲಿ ಸಚಿವರಾಗಿದ್ದಾರೆ. ಈ ಕ್ಷೇತ್ರವನ್ನು ಪುನಃ ಗೆದ್ದುಕೊಳ್ಳಲು ಟಿಎಂಸಿ ನಿರಂತರ ಕಾರ್ಯತಂತ್ರದಲ್ಲಿ ತೊಡಗಿದೆ. ಇತ್ತೀಚೆಗೆ ಪ್ರಮಾಣಿಕ್ ಮತ್ತು ಟಿಎಂಸಿ ಮುಖಂಡ ಹಾಗೂ ಸಚಿವ ಉದಯನ್ ಗುಹಾ ಅವರ ಬೆಂಬಲಿಗರ ಸಂಘರ್ಷದಿಂದ ಸುದ್ದಿಯಾಗಿದ್ದ ಕೂಚ್ ಬಿಹಾರ್ ಇದೀಗ ಪ್ರತಿಷ್ಠೆಯ ಕಣವಾಗಿ ಮಾರ್ಪಟ್ಟಿದ್ದು, ಇದನ್ನು ಗೆಲ್ಲಲು ಎರಡೂ ಪಕ್ಷಗಳು ಸರ್ವಪ್ರಯತ್ನ ಮಾಡುತ್ತಿವೆ.



ಅಪ್ಪುಗೆ

ಪಶ್ಚಿಮ ಬಂಗಾಳದ ಬಶೀರ್‌ಹಾಟ್ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ರೇಖಾ ಪಾತ್ರ ಅವರು ಹಸ್ನಾಬಾದ್‌ನಲ್ಲಿ ಭಾನುವಾರ ಮತಯಾಚಿಸುವಾಗ ಮಹಿಳೆಯೊಬ್ಬರು ಅವರನ್ನು ಅಪ್ಪಿಕೊಂಡರು –ಪಿಟಿಐ ಚಿತ್ರ

ಬಿಜೆಪಿಗೆ 4,000ಕ್ಕಿಂತ ಹೆಚ್ಚು ಸ್ಥಾನ: ಟ್ರೋಲ್ ಆದ ನಿತೀಶ್

ಪಟ್ನಾ (ಪಿಟಿಐ): ಎನ್‌ಡಿಎ ಮೈತ್ರಿಕೂಟವು ಲೋಕಸಭಾ ಚುನಾವಣೆಯಲ್ಲಿ 4,000ಕ್ಕಿಂತ ಹೆಚ್ಚು ಸ್ಥಾನ ಗೆಲ್ಲುತ್ತದೆ ಎಂದು ಹೇಳುವ ಮೂಲಕ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಭಾನುವಾರ ಸಾಮಾಜಿಕ ಜಾಲತಾಣಗಳಲ್ಲಿ ಟ್ರೋಲ್‌ಗೊಳಗಾಗಿದ್ದಾರೆ.

ಜೆಡಿಯು ಮುಖ್ಯಸ್ಥರಾದ ನಿತೀಶ್ ಮೂರು ತಿಂಗಳ ಹಿಂದೆಯಷ್ಟೇ ಎನ್‌ಡಿಎಗೆ ಮರಳಿದ್ದರು. ನವಾಡ ಜಿಲ್ಲೆಯ ರ‍್ಯಾಲಿಯಲ್ಲಿ ಭಾಗವಹಿಸಿದ್ದ ಅವರು ಮುಜುಗರಕ್ಕೀಡಾಗುವ ಹೇಳಿಕೆ ನೀಡಿದರು.

ನಿತೀಶ್ ತೊದಲುತ್ತಾ, 'ಚಾರ್ ಲಾಕ್' (ನಾಲ್ಕು ಲಕ್ಷ) ಎಂದು ಹೇಳಿ ನಂತರ ತಮ್ಮನ್ನು ತಾವೇ ಸರಿಪಡಿಸಿಕೊಂಡು, ಪ್ರಧಾನಿ ನರೇಂದ್ರ ಮೋದಿ ಅವರ ಕಡೆ ನೋಡುತ್ತಾ, 'ಚಾರ್ ಹಜಾರ್ ಸೆ ಭಿ ಜ್ಯಾದಾ' (ನಾಲ್ಕು ಸಾವಿರಕ್ಕೂ ಹೆಚ್ಚು) ಎಂದು ಹೇಳಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

'2.58 ಲಕ್ಷ ಮಂದಿಯ ಪಟ್ಟಿ ಬಿಡುಗಡೆಗೊಳಿಸಿ'

ಭೋಪಾಲ್ (ಪಿಟಿಐ): ಮಧ್ಯ ಪ್ರದೇಶದಲ್ಲಿ ತಮ್ಮ ಪಕ್ಷ ಸೇರಿದ್ದಾರೆ ಎಂದು ಬಿಜೆಪಿ ಹೇಳಿಕೊಳ್ಳುತ್ತಿರುವ 2.58 ಲಕ್ಷ ಮಂದಿಯ ಪಟ್ಟಿ ಬಿಡುಗಡೆಗೊಳಿಸುವಂತೆ ಕೇಸರಿ ಪಕ್ಷಕ್ಕೆ ಕಾಂಗ್ರೆಸ್ ಸವಾಲು ಹಾಕಿದೆ.

ಮಧ್ಯಪ್ರದೇಶ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ಜಿತು ಪಟ್ವಾರಿ ಮಾತನಾಡಿ, 'ಬಿಜೆಪಿಯು ಪಕ್ಷಕ್ಕೆ ಸೇರ್ಪಡೆಯಾಗಿರುವ 336 ಪ್ರಮುಖ ಮುಖಂಡರ ಪಟ್ಟಿಯನ್ನು ಮಾತ್ರ ಬಿಡುಗಡೆ ಮಾಡಿದೆ. ಅದೇ ರೀತಿ 2.58 ಲಕ್ಷ ಮಂದಿಯ ಪಟ್ಟಿಯನ್ನೂ ಬಿಡುಗಡೆ ಮಾಡಲಿ' ಎಂದರು.

ಚುನಾವಣಾ ಕಾರ್ಯತಂತ್ರ ನಿಪುಣ ಪ್ರಶಾಂತ್ ಕಿಶೋರ್ ಹೇಳಿಕೆ

ಬಿಜೆಪಿಗೆ 300ಕ್ಕೂ ಅಧಿಕ ಸ್ಥಾನ ಸಾಧ್ಯತೆ

ನವದೆಹಲಿ (ಪಿಟಿಐ): ಮುಂಬರುವ ಲೋಕಸಭಾ ಚುನಾವಣೆಯಲ್ಲಿ ದಕ್ಷಿಣ ಮತ್ತು ಪೂರ್ವದ ರಾಜ್ಯಗಳಲ್ಲಿ ಕಳೆದ ಬಾರಿಗಿಂತ ಹೆಚ್ಚು ಸೀಟುಗಳನ್ನು ಗೆಲ್ಲುವ ಮೂಲಕ ಬಿಜೆಪಿಯು 300 ಸ್ಥಾನಗಳ ಗಡಿ ದಾಟುವ ಸಾಧ್ಯತೆಯಿದೆ ಎಂದು ಚುನಾವಣಾ ಕಾರ್ಯತಂತ್ರ ನಿಪುಣ ಪ್ರಶಾಂತ್ ಕಿಶೋರ್ ಹೇಳಿದರು.

ಪಿಟಿಐ ಸಂಪಾದಕರ ಜೊತೆ ನಡೆದ ಸಂವಾದದಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿಯನ್ನು ಕಟ್ಟಿಹಾಕಲು ತಮಗೆ ಲಭಿಸಿದ ಕೆಲವೊಂದು ಅತ್ಯುತ್ತಮ ಅವಕಾಶಗಳನ್ನು ವಿರೋಧ ಪಕ್ಷಗಳು 'ಸೋಮಾರಿತನ' ಮತ್ತು ತಪ್ಪು ತಂತ್ರಗಾರಿಕೆಯಿಂದ ಹಾಳುಮಾಡಿಕೊಂಡಿವೆ ಎಂದು ಅಭಿಪ್ರಾಯಪಟ್ಟರು.

'ಬಿಜೆಪಿಯು ತೆಲಂಗಾಣದಲ್ಲಿ ಅತಿದೊಡ್ಡ ಅಥವಾ ಎರಡನೇ ಅತಿದೊಡ್ಡ ಪಕ್ಷ ಆಗಬಹುದು. ಒಡಿಶಾದಲ್ಲಿ ಅವರು ಅತ್ಯಧಿಕ ಸ್ಥಾನಗಳನ್ನು ಗೆಲ್ಲುವುದರಲ್ಲಿ ಯಾವುದೇ ಅನುಮಾನವಿಲ್ಲ. ಬಿಜೆಪಿಯು ಪಶ್ಚಿಮ ಬಂಗಾಳದಲ್ಲೂ ನಂ.1 ಪಕ್ಷ ಎನಿಸಿಕೊಳ್ಳಲಿದೆ. ತಮಿಳುನಾಡಿನಲ್ಲಿ ಅವರ ಮತಗಳಿಕೆ ಪ್ರಮಾಣ ಎರಡಂಕಿ ದಾಟಲಿದೆ' ಎಂದು ಭವಿಷ್ಯ ನುಡಿದರು. ಆದರೆ ಬಿಜೆಪಿಯವರು ಹೇಳುತ್ತಿರುವಂತೆ 370 ಸ್ಥಾನಗಳನ್ನು ಗೆಲ್ಲುವ ಸಾಧ್ಯತೆ ಕಡಿಮೆ ಎಂದರು.

'ಬಿಜೆಪಿಯು ತನ್ನ ಭದ್ರಕೋಟೆ ಎನಿಸಿರುವ ಉತ್ತರ ಭಾರತ ಮತ್ತು ಪಶ್ಚಿಮ ಭಾರತದಲ್ಲಿ ಕಳೆದ ಬಾರಿ ಗೆದ್ದ ಸೀಟುಗಳಲ್ಲಿ ಕನಿಷ್ಠ 100 ಸೀಟುಗಳನ್ನು ಕಾಂಗ್ರೆಸ್ ತನ್ನತ್ತ ಸೆಳೆಯಲು ಯಶಸ್ವಿಯಾದರಷ್ಟೇ ಎನ್‌ಡಿಎಗೆ ಒತ್ತಡ ಎದುರಾಗಲಿದೆ. ಆದರೆ ಅಂತಹ ಸಾಧ್ಯತೆ ತೀರಾ ಕಡಿಮೆ' ಎಂದು ಹೇಳಿದರು.


ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರು ಮೇಲಿಂದ ಮೇಲೆ ದಕ್ಷಿಣ ಭಾರತ ಪ್ರವಾಸ ಮಾಡಿ, ಜನರ ಮನಗೆಲ್ಲುವ ಪ್ರಯತ್ನ ಮಾಡಿದ್ದಾರೆ ಎಂದು ತಿಳಿಸಿದರು.

'ಪ್ರಧಾನಿ ಅವರು ಕಳೆದ ಐದು ವರ್ಷಗಳಲ್ಲಿ ತಮಿಳುನಾಡಿಗೆ ಎಷ್ಟು ಸಲ ಭೇಟಿ ಕೊಟ್ಟಿದ್ದಾರೆ ಮತ್ತು ರಾಹುಲ್ ಗಾಂಧಿ ಅಥವಾ ಸೋನಿಯಾ ಗಾಂಧಿ ಅವರು ಎಷ್ಟು ಸಲ ಭೇಟಿ ಕೊಟ್ಟಿದ್ದಾರೆ ಎಂಬುದನ್ನು ಲೆಕ್ಕಹಾಕಿ ನೋಡಿ' ಎಂದರು.

'ಉತ್ತರ ಪ್ರದೇಶ, ಬಿಹಾರ ಮತ್ತು ಮಧ್ಯಪ್ರದೇಶದಲ್ಲಿ ಹೆಚ್ಚು ಸ್ಥಾನಗಳನ್ನು ಗೆಲ್ಲಲು ಹೋರಾಡುತ್ತಿರುವ ನೀವು (ಕಾಂಗ್ರೆಸ್‌ನವರು) ಮಣಿಪುರ, ಮೇಘಾಲಯದಲ್ಲಿ ಪ್ರವಾಸ ಮಾಡಿದರೆ ಏನು ಲಾಭ' ಎಂದು ಹೆಸರು ಉಲ್ಲೇಖಿಸಿದೆಯೇ ರಾಹುಲ್ ಗಾಂಧಿ ಅವರ ನಿಲುವನ್ನು ಪ್ರಶ್ನಿಸಿದರು.

'ಅವಕಾಶ ಕೈಚೆಲ್ಲಿದ ವಿರೋಧ ಪಕ್ಷಗಳು'

'2020ರಲ್ಲಿ ಕೋವಿಡ್ ಬಳಿಕದ ಅವಧಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಜನಪ್ರಿಯತೆ ಕುಸಿದಿತ್ತು. 2021ರಲ್ಲಿ ಪಶ್ಚಿಮ ಬಂಗಾಳ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಬಿಜೆಪಿ ಹೀನಾಯ ಸೋಲು ಅನುಭವಿಸಿತ್ತು. ಈ ವೇಳೆ ಮೋದಿ ಅವರನ್ನು ಇನ್ನಷ್ಟು ಒತ್ತಡಕ್ಕೆ ತಳ್ಳುವ ಬದಲು ವಿರೋಧ ಪಕ್ಷದವರು ತಮ್ಮ ತಮ್ಮ ಮನೆಗಳಲ್ಲೇ ಕುಳಿತುಕೊಂಡರು. ಇದರಿಂದ ಪ್ರಧಾನಿಗೆ ರಾಜಕೀಯ ಪುನರಾಗಮನ ಮಾಡಲು ಸಾಧ್ಯವಾಗಿದೆ. ಚೆನ್ನಾಗಿ ಆಡುವ ಬ್ಯಾಟರ್‌ನ ಕ್ಯಾಚ್‌ಗಳನ್ನು ಕೈಚೆಲ್ಲುತ್ತಾ ಇದ್ದರೆ, ಆತ ಶತಕ ಹೊಡೆಯುತ್ತಾನೆ' ಎಂದು ಪ್ರಶಾಂತ್ ಕಿಶೋರ್ ಹೇಳಿದರು.



ಚುಟುಕು

ಗುಲಾಂ ನಬಿ ವಿರುದ್ಧ ಮೆಹಬೂಬಾ ಕಣಕ್ಕೆ



ಶ್ರೀನಗರ (ಪಿಟಿಐ): ಪೀಪಲ್ಸ್ ಡೆಮಾಕ್ರಟಿಕ್ ಪಕ್ಷವು (ಪಿಡಿಪಿ) ಕಾಶ್ಮೀರದ ಎಲ್ಲ ಮೂರೂ ಲೋಕಸಭಾ ಕ್ಷೇತ್ರಗಳಿಗೆ ಭಾನುವಾರ ಅಭ್ಯರ್ಥಿಗಳನ್ನು ಪ್ರಕಟಿಸಿದ್ದು, ಪಕ್ಷದ ಅಧ್ಯಕ್ಷೆ ಮೆಹಬೂಬಾ ಮುಫ್ತಿ ಅವರು ಅನಂತನಾಗ್ ಕ್ಷೇತ್ರದಿಂದ ಕಣಕ್ಕಿಳಿಯಲಿದ್ದಾರೆ. ಇಲ್ಲಿ ಅವರು ಡಿಪಿಎಪಿ ಪಕ್ಷದ ಗುಲಾಂ ನಬಿ ಆಜಾದ್ ವಿರುದ್ಧ ಪೈಪೋಟಿ ನಡೆಸಲಿದ್ದಾರೆ.

ಪಕ್ಷದ ಯುವ ಘಟಕದ ಅಧ್ಯಕ್ಷ ವಹೀದ್ ಪರಾ ಅವರು ಶ್ರೀನಗರ ಕ್ಷೇತ್ರದಿಂದ ಹಾಗೂ ರಾಜ್ಯಸಭೆಯ ಮಾಜಿ ಸದಸ್ಯ ಮೀರ್ ಫಯಾಜ್ ಅವರು ಬಾರಾಮುಲ್ಲಾ ಕ್ಷೇತ್ರದಿಂದ ಸ್ಪರ್ಧಿಸುವರು ಎಂದು ಪಿಡಿಪಿ ಸಂಸದೀಯ ಮಂಡಳಿ ಮುಖ್ಯಸ್ಥ ಸರ್ತಾಜ್ ಮದನಿ ಅವರು ತಿಳಿಸಿದರು.

ಜಮ್ಮು ವಲಯದ ಎರಡು ಕ್ಷೇತ್ರಗಳಲ್ಲಿ (ಜಮ್ಮು ಮತ್ತು ಉಧಂಪುರ) ಪಿಡಿಪಿಯು ಕಾಂಗ್ರೆಸ್‌ಗೆ ಬೆಂಬಲ ನೀಡಲಿದೆ ಎಂದು ಅವರು ಹೇಳಿದರು.

ಜಗಿ–ನೆಗೆದಾಟ

ಬಿಆರ್‌ಎಸ್ ಶಾಸಕ ಕಾಂಗ್ರೆಸ್‌ಗೆ

ಹೈದರಾಬಾದ್ (ಪಿಟಿಐ): ತೆಲಂಗಾಣದ ಬಿಆರ್‌ಎಸ್ ಶಾಸಕ ತೆಲ್ಲಂ ವೆಂಕಟರಾವ್ ಅವರು ಪಕ್ಷ ತೊರೆದು ಭಾನುವಾರ ಕಾಂಗ್ರೆಸ್‌ಗೆ ಸೇರ್ಪಡೆಗೊಂಡರು.

ಮುಖ್ಯಮಂತ್ರಿ ಎ. ರೇವಂತ್ ರೆಡ್ಡಿ ಮತ್ತು ಸಚಿವ ಪಿ. ಶ್ರೀನಿವಾಸ ರೆಡ್ಡಿ ಅವರ ಸಮ್ಮುಖದಲ್ಲಿ ವೆಂಕಟರಾವ್ ಅವರು ಭದ್ರಾಚಲಂ ಕ್ಷೇತ್ರದ ಹಲವು ಮಂದಿ ಬಿಆರ್‌ಎಸ್ ಮುಖಂಡರ ಜೊತೆಗೆ ಪಕ್ಷಕ್ಕೆ ಸೇರ್ಪಡೆಗೊಂಡರು.

ವೆಂಕಟರಾವ್ ಅವರು ಭದ್ರಾಚಲಂ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. ಈಚೆಗೆ ಬಿಆರ್‌ಎಸ್ ತೊರೆದು ಕಾಂಗ್ರೆಸ್‌ಗೆ ಸೇರಿರುವ ಮೂರನೇ ಶಾಸಕರು ಇವರಾಗಿದ್ದಾರೆ.

'ರಾಹುಲ್ ಗಾಂಧಿ ಅವರ ಪಕ್ಷವು ಬಿಆರ್‌ಎಸ್ ಶಾಸಕರನ್ನು ಖರೀದಿಸುತ್ತಿದೆ' ಎಂದು ಬಿಆರ್‌ಎಸ್ ಕಾರ್ಯಾಧ್ಯಕ್ಷ ಕೆ.ಟಿ. ರಾಮರಾವ್ ಆರೋಪಿಸಿದರು.

ಎಂಥಾ ಮಾತು!



ಬಿಜೆಪಿಯು ಜನರನ್ನು ಸರ್ವೋಚ್ಚ ಎಂದು ಪರಿಗಣಿಸಿದರೆ, ಕಾಂಗ್ರೆಸ್ ಒಂದು ಕುಟುಂಬವನ್ನು ಸರ್ವೋಚ್ಚ ಎಂದು ಪರಿಗಣಿಸುತ್ತದೆ. ಬಿಜೆಪಿಯು ಜನರಿಗೆ ನೀಡಿರುವ ಭರವಸೆಗಳನ್ನು ಈಡೇರಿಸಲು ಬದ್ಧವಾಗಿದೆ. ಕಾಂಗ್ರೆಸ್ ಪಕ್ಷವು ದೇಶದ ಭದ್ರತಾ ಪಡೆಗಳ ಅಧಿಕಾರ, ಶೌರ್ಯವನ್ನು ಪ್ರಶ್ನಿಸುವಾಗ ನೋವಾಗುತ್ತದೆ. ಸೇನೆಯು 2016ರಲ್ಲಿ ನಡೆಸಿರುವ ನಿರ್ದಿಷ್ಟ ದಾಳಿಗೆ ಕಾಂಗ್ರೆಸ್ ಪುರಾವೆಗಳನ್ನು ಕೇಳಿದೆ. ಇಡೀ ವಿಶ್ವಕ್ಕೇ ಇದರ ಪುರಾವೆ ಲಭಿಸಿದೆ. ಆದರೆ ಆ ಪಕ್ಷಕ್ಕೆ ಲಭಿಸಿಲ್ಲ. 'ಒಂದು ದೇಶ, ಒಂದು ಚುನಾವಣೆ' ಪರಿಕಲ್ಪನೆಯಿಂದ ದೇಶದ ಹಣ ಹಾಗೂ ಸಂಪನ್ಮೂಲ ಉಳಿತಾಯವಾಗಲಿದೆ

ರಾಜನಾಥ್ ಸಿಂಗ್, ಕೇಂದ್ರ ಸಚಿವ



ಬಿಜೆಪಿಯು ಹಣ, ಅಧಿಕಾರ ಮತ್ತು ತನಿಖಾ ಸಂಸ್ಥೆಗಳನ್ನು ಬಳಸಿಕೊಂಡು ಪ್ರಜಾಪ್ರಭುತ್ವವನ್ನು ನಾಶಮಾಡುತ್ತಿದೆ. ಕಾಂಗ್ರೆಸ್ ಜನರಿಗಾಗಿ ದಣಿವರಿಯದೆ ದುಡಿಯುತ್ತಿದೆ. ನಾನು ಹಿಮಾಚಲ ಪ್ರದೇಶದ ಕಾಂಗ್ರೆಸ್‌ನ ಎಲ್ಲಾ ಮುಖಂಡರನ್ನು ಭೇಟಿಯಾಗಿದ್ದೇನೆ. ಒಗ್ಗಟ್ಟು, ಧೈರ್ಯ, ಕಠಿಣ ಶ್ರಮದ ಮೂಲಕ ಅವರು ಚುನಾವಣೆಗೆ ಸ್ಪರ್ಧಿಸುತ್ತಿರುವುದು ಹೆಮ್ಮೆ ತಂದಿದೆ. ಬಿಜೆಪಿಯು ಸುಳ್ಳು ಹರಡುತ್ತಿದೆ. ಆದರೆ ಜನರು ಸತ್ಯದ ಜೊತೆಗೆ ನಿಲ್ಲುತ್ತಾರೆಂಬ ವಿಶ್ವಾಸವಿದೆ

ಪ್ರಿಯಾಂಕಾ ಗಾಂಧಿ ವಾದ್ರಾ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಕ್ಷೇತ್ರ ಮಹಾತ್ಮೆ



ಕಾಂಗ್ರೆಸ್, ಬಿಜೆಪಿ ಮತ್ತು ಡಿಎಂಕೆ ಅಭ್ಯರ್ಥಿಗಳಿಗೆ ಈ ಹಿಂದೆ ಗೆಲುವು ತಂದುಕೊಟ್ಟಿದ್ದ ತಮಿಳುನಾಡಿನ ಕನ್ಯಾಕುಮಾರಿ ಲೋಕಸಭಾ ಕ್ಷೇತ್ರವು ಈ ಬಾರಿಯೂ ಘಟಾನುಘಟಿ ನಾಯಕರ ಹಣಾಹಣಿಗೆ ಸಾಕ್ಷಿಯಾಗಲಿದೆ. ಕಾಂಗ್ರೆಸ್ ಪಕ್ಷವು ವಿಜಯ್ ವಸಂತ್ ಅವರನ್ನು ಕಣಕ್ಕಿಳಿಸಿದರೆ, ಬಿಜೆಪಿಯು ಪಕ್ಷದ ಹಿರಿಯ ಮುಖಂಡ ಪೊನ್ ರಾಧಾಕೃಷ್ಣನ್ ಅವರನ್ನು ಪ್ರತಿಸ್ಪರ್ಧಿಯಾಗಿಸಿದೆ. ಎಐಎಡಿಎಂಕೆ ಬೆಸಿಲಿಯನ್ ನಜರೆತ್ ಅವರನ್ನು ಅಖಾಡಕ್ಕಿಳಿಸಿದರೆ, 'ನಾಮ್ ತಮಿಳರ್ ಕಚ್ಚಿ' (ಎನ್‌ಟಿಕೆ) ಮರಿಯಾ ಜೆನ್ನಿಫರ್ ಅವರನ್ನು ಅಭ್ಯರ್ಥಿಯನ್ನಾಗಿಸಿದೆ. 2019ರಲ್ಲಿ ಉದ್ಯಮಿ ಹಾಗೂ ರಾಜಕಾರಣಿ ಎಚ್. ವಸಂತ ಕುಮಾರ್ ಅವರು ಈ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಗೆದ್ದಿದ್ದರು. 2020ರಲ್ಲಿ ಇವರು ನಿಧನರಾದರು. 2021ರಲ್ಲಿ ನಡೆದ ಉಪ ಚುನಾವಣೆಯಲ್ಲಿ ವಸಂತ ಕುಮಾರ್ ಅವರ ಪುತ್ರ ವಿಜಯ್ ವಸಂತ್ ಸ್ಪರ್ಧಿಸಿ ಗೆದ್ದರು. ವಿಜಯ್ ವಸಂತ್ ಅವರು 1,37,950 ಮತಗಳ ಅಂತರದಿಂದ ಬಿಜೆಪಿ ಅಭ್ಯರ್ಥಿ ಪೊನ್ ರಾಧಾಕೃಷ್ಣನ್ ಅವರನ್ನು ಪರಾಭವಗೊಳಿಸಿದ್ದರು. 2014ರಲ್ಲಿ ರಾಧಾಕೃಷ್ಣನ್ ಅವರು ಇಲ್ಲಿಂದ ಗೆದ್ದು ಸಂಸತ್ ಪ್ರವೇಶಿಸಿದ್ದರು. ಮೀನುಗಾರರು ಹೆಚ್ಚಿನ ಸಂಖ್ಯೆಯಲ್ಲಿರುವ ಈ ಕ್ಷೇತ್ರದಲ್ಲಿ ಎನ್‌ಟಿಕೆ ಮತ್ತು ಎಐಎಡಿಎಂಕೆ ಅಭ್ಯರ್ಥಿಗಳನ್ನು ಕಣಕ್ಕಿಳಿಸಿರುವುದರಿಂದ ಕಾಂಗ್ರೆಸ್‌ನ ಮತಗಳು ಹಂಚಿ ಹೋಗಲಿವೆ ಮತ್ತು ಇದರಿಂದ ಬಿಜೆಪಿ ಅಭ್ಯರ್ಥಿಗೆ ಅನುಕೂಲವಾಗಲಿದೆ ಎಂದು ಚುನಾವಣಾ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ಆಡಳಿತಾರೂಢ ಡಿಎಂಕೆಯು 'ಇಂಡಿಯಾ' ಮೈತ್ರಿಕೂಟದಲ್ಲಿರುವುದರಿಂದ ಈ ಪಕ್ಷದ ಮತಗಳು ಕಾಂಗ್ರೆಸ್ ಅಭ್ಯರ್ಥಿಯ ಗೆಲುವಿಗೆ ಸಹಾಯಕವಾಗಲಿವೆ ಎಂಬುದು ಆ ಪಕ್ಷದ ನಾಯಕರ ವಿಶ್ವಾಸವಾಗಿದೆ.

ಮುಖಾಮುಖಿ

ಕಲ್ಯಾಣ್ (ಮಹಾರಾಷ್ಟ್ರ)



ಶ್ರೀಕಾಂತ್ ಶಿಂದೆ
ಶಿವಸೇನಾ ಏಕನಾಥ ಶಿಂದೆ ಬಣ



ವೈಶಾಲಿ ದರೇಕರ್ ರಾಣೆ
ಶಿವಸೇನಾ (ಯುಬಿಟಿ)

v/s

ಮಹಾರಾಷ್ಟ್ರದ ಪ್ರತಿಷ್ಠಿತ ಲೋಕಸಭಾ ಕ್ಷೇತ್ರಗಳಲ್ಲೊಂದಾದ ಕಲ್ಯಾಣ್ ಕ್ಷೇತ್ರದಿಂದ 'ಮಹಾಯುತಿ' ಮೈತ್ರಿಕೂಟದ ಅಭ್ಯರ್ಥಿಯಾಗಿ ಶಿವಸೇನಾ ಏಕನಾಥ ಶಿಂದೆ ಬಣವು ಮುಖ್ಯಮಂತ್ರಿ ಏಕನಾಥ ಶಿಂದೆ ಅವರ ಮಗ ಶ್ರೀಕಾಂತ್ ಶಿಂದೆ ಅವರನ್ನು ಕಣಕ್ಕಿಳಿಸಿದೆ. ಶ್ರೀಕಾಂತ್ ಅವರು ಕಳೆದ ಚುನಾವಣೆಯಲ್ಲಿ 2,50,749 ಮತಗಳ ಅಂತರದಿಂದ ಎನ್‌ಸಿಪಿಯ ಬಾಬಾಜಿ ಬಲರಾಮ್ ಪಾಟೀಲ್ ಅವರನ್ನು ಇಲ್ಲಿ ಸೋಲಿಸಿದ್ದರು. ಕಲ್ಯಾಣ್ ಕ್ಷೇತ್ರವನ್ನು ತನಗೆ ಬಿಟ್ಟುಕೊಡಬೇಕು ಎಂದು ಬಿಜೆಪಿ ಪಟ್ಟುಹಿಡಿದಿತ್ತು. ಇದು ಮೈತ್ರಿಯಲ್ಲಿ ಬಿಕ್ಕಟ್ಟಿಗೂ ಕಾರಣವಾಗಿತ್ತು. ಆದರೆ, ಈ ಕ್ಷೇತ್ರವನ್ನು ತನ್ನಲ್ಲೇ ಉಳಿಸಿಕೊಳ್ಳುವಲ್ಲಿ ಶಿವಸೇನಾ ಕೊನೆಗೂ ಯಶಸ್ವಿಯಾಗಿದೆ. ವೃತ್ತಿಯಲ್ಲಿ ವೈದ್ಯರಾಗಿರುವ ಶ್ರೀಕಾಂತ್ ಅವರು ಈ ಕ್ಷೇತ್ರದಲ್ಲಿ ಹೆಚ್ಚು ಪ್ರಭಾವ ಹೊಂದಿದ್ದಾರೆ. ಈ ಬಾರಿ ಶಿವಸೇನಾದ ಎರಡು ಬಣಗಳ ಅಭ್ಯರ್ಥಿಗಳು ಪರಸ್ಪರ ಸೆಣಸಲಿರುವುದರಿಂದ ಕಣವು ಹೆಚ್ಚು ರಂಗೇರಿದೆ.

ಕಲ್ಯಾಣ್ ಕ್ಷೇತ್ರದಲ್ಲಿ ಶ್ರೀಕಾಂತ್ ಶಿಂದೆ ವಿರುದ್ಧ ಸೆಣಸಲು ಶಿವಸೇನಾ ಉದ್ಧವ್ ಠಾಕ್ರೆ ಬಣವು (ಯುಬಿಟಿ), ವೈಶಾಲಿ ದರೇಕರ್ ರಾಣೆ ಅವರನ್ನು ಅಖಾಡಕ್ಕಿಳಿಸಿದೆ. ಎರಡು ಬಾರಿ ಕಲ್ಯಾಣ್ ಡೊಂಬಿವಲಿ ಮಹಾನಗರ ಪಾಲಿಕೆ ಸದಸ್ಯೆಯಾಗಿ ಆಯ್ಕೆಯಾಗಿದ್ದ ಇವರು, 2009ರಲ್ಲಿ ಇದೇ ಕ್ಷೇತ್ರದಿಂದ ಮಹಾರಾಷ್ಟ್ರ ನವನಿರ್ಮಾಣ ಸೇನಾದಿಂದ (ಎಂ.ಎನ್.ಎಸ್) ಸ್ಪರ್ಧಿಸಿ ಸೋತಿದ್ದರು. ಆದರೆ 1,02,063 ಮತಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದರು. ಈ ಸಲ ಶಿವಸೇನಾವು (ಯುಬಿಟಿ) ಇಂಡಿಯಾ ಒಕ್ಕೂಟದಲ್ಲಿರುವುದು ವೈಶಾಲಿ ಅವರ ಗೆಲುವಿನ ವಿಶ್ವಾಸ ಹೆಚ್ಚಿಸಿದೆ. ರಾಜ್ ಠಾಕ್ರೆ ಅವರು ಶಿವಸೇನಾ ತೊರೆದು ಎಂ.ಎನ್.ಎಸ್ ಸ್ಥಾಪಿಸಿದಾಗ ವೈಶಾಲಿ ಕೂಡ ಶಿವಸೇನಾ ತೊರೆದಿದ್ದರು. 2016ರಲ್ಲಿ ಶಿವಸೇನಾಗೆ ಮರಳಿದ್ದರು. ವೈಶಾಲಿ ಅವರು ಸ್ಥಳೀಯವಾಗಿ ಪ್ರಭಾವವಿರುವ ನಾಯಕಿಯಾಗಿರುವುದರಿಂದ ಜನರು ಈ ಬಾರಿ ಅವರ ಕೈಹಿಡಿಯಬಹುದು ಎಂಬ ವಿಶ್ವಾಸದಲ್ಲಿದ್ದಾರೆ ಶಿವಸೇನಾ (ಯುಬಿಟಿ) ಮುಖಂಡರು.

ಅರೇಬಿಕಾ ಕಾಫಿ ಬೆಲೆಯಲ್ಲೂ ಹೆಚ್ಚಳ

ರೊಬಸ್ಟಾ ಧಾರಣೆ ಏರಿಕೆ

• ರವಿ ಕೆಳಂಗಡಿ



ರೊಬಸ್ಟಾ ಕಾಫಿ ತೋಟ

ಕಳಸ (ಚಿಕ್ಕಮಗಳೂರು ಜಿಲ್ಲೆ): ವಾರದ ಹಿಂದೆ ಲಂಡನ್ ಮಾರುಕಟ್ಟೆಯಲ್ಲಿ ರೊಬಸ್ಟಾ ಕಾಫಿ ಧಾರಣೆಯು ಪ್ರತಿ ಟನ್‌ಗೆ 3,744 ಡಾಲರ್‌ಗೆ ಏರಿಕೆಯಾಗಿದ್ದು, ಸ್ಥಳೀಯ ಮಾರುಕಟ್ಟೆಯಲ್ಲೂ ಬೆಲೆಯು ಏರುಗತಿಯಲ್ಲಿದೆ.

ನಾಲ್ಕು ದಿನಗಳ ಹಿಂದೆ ಒಂದು ಕೆ.ಜಿಗೆ ₹360 ದರ ಹೆಚ್ಚಳವಾಗಿ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ತಲುಪಿತ್ತು. ಸದ್ಯ ಒಂದು ಕೆ.ಜಿಗೆ ₹356 ಬೆಲೆ ಇದೆ. ಉತ್ತಮ ಬೆಲೆ ಸಿಗುತ್ತಿರುವುದರಿಂದ ಬೆಳೆಗಾರರು ಖುಷಿಯಲ್ಲಿದ್ದಾರೆ.

ವಿಯೆಟ್ನಾಂನಲ್ಲಿ ಬರಗಾಲ ತಲೆದೋರಿದ್ದು ರೊಬಸ್ಟಾ ಕಾಫಿ ಉತ್ಪಾದನೆಯು ಶೇ 20ರಷ್ಟು ಕುಸಿದಿದೆ. ಎಲ್‌ನಿನೊದಿಂದಾಗಿ ಹವಾಮಾನದಲ್ಲಿ ಆದ ಬದಲಾವಣೆಯು ಅಲ್ಲಿನ ಕಾಫಿ ಉತ್ಪಾದನೆಯ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರಿದೆ.

ಹೀಗಾಗಿ, ಜಾಗತಿಕ ಮಟ್ಟದಲ್ಲಿ ರೊಬಸ್ಟಾ ಉತ್ಪಾದನೆಯಲ್ಲಿ 27 ಲಕ್ಷ ಚೀಲಗಳಷ್ಟು ಕೊರತೆ ಕಂಡುಬಂದಿದೆ. ಆದ್ದರಿಂದ ಬೆಲೆ ಇನ್ನಷ್ಟು ಏರುವ ಸಾಧ್ಯತೆ ಇದೆ ಎನ್ನುತ್ತಾರೆ ಕಾಫಿ ಮಾರಾಟಗಾರರು.

ಕಳೆದ ವಾರ ಬ್ರೆಜಿಲ್‌ನಲ್ಲಿ ಧಾರಾಕಾರ ಮಳೆ ಸುರಿದಿರುವುದರಿಂದ ಅಲ್ಲಿ ಬೆಳೆಯಲಾಗಿದ್ದ ಅರೇಬಿಕಾ ಕಾಫಿ ಫಸಲಿಗೆ ಹಾನಿಯಾಗಿದೆ. ಹಾಗಾಗಿ, ಅರೇಬಿಕಾ ಕಾಫಿ ಧಾರಣೆಯೂ ಏರುತ್ತಿದೆ.

ಸದ್ಯ 50 ಕೆ.ಜಿ ಅರೇಬಿಕಾ ಪಾರ್ಚ್‌ಮೆಂಟ್‌ಗೆ ₹15,000 ದರ ಇದೆ. ಅರೇಬಿಕಾ ಬೇಳೆ ಬೆಲೆ ಕೆ.ಜಿಗೆ ₹300 ಇದೆ. ರೊಬಸ್ಟಾದ 50 ಕೆ.ಜಿ ಪಾರ್ಚ್‌ಮೆಂಟ್‌ಗೆ ₹15,400 ಇದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು

100ಕ್ಕೆ	₹440
12 ಕ್ಕೆ	₹60

ಮೈಸೂರು

100ಕ್ಕೆ	₹440

ಟಾಟಾ ಸ್ಟೀಲ್ ಮಾರಾಟ ಶೇ 6ರಷ್ಟು ಏರಿಕೆ

ನವದೆಹಲಿ: 2023–24ನೇ ಆರ್ಥಿಕ ವರ್ಷದಲ್ಲಿ ಟಾಟಾ ಸ್ಟೀಲ್ ಇಂಡಿಯಾದ ಉಕ್ಕು ಮಾರಾಟದಲ್ಲಿ ಶೇ 6ರಷ್ಟು ಏರಿಕೆಯಾಗಿದೆ.


ಒಟ್ಟು 1.99 ಕೋಟಿ ಟನ್‌ನಷ್ಟು ಉಕ್ಕು ಮಾರಾಟವಾಗಿದೆ. ರಿಟೇಲ್, ಆಟೊಮೋಟಿವ್ ಹಾಗೂ ರೈಲ್ವೆ ವಲಯದಲ್ಲಿ ಉಕ್ಕಿಗೆ ಬೇಡಿಕೆ ಹೆಚ್ಚಿದ್ದರಿಂದ ಮಾರಾಟದಲ್ಲಿ ಏರಿಕೆ ಕಂಡುಬಂದಿದೆ ಎಂದು ಕಂಪನಿ ತಿಳಿಸಿದೆ.

ಆಟೊಮೋಟಿವ್ ಮತ್ತು ವಿಶೇಷ ಸರಕು ವಿಭಾಗದಲ್ಲಿನ ಮಾರಾಟವು ಶೇ 8ರಷ್ಟು ಹೆಚ್ಚಳವಾಗಿದೆ. ಒಟ್ಟು 26 ಲಕ್ಷ ಟನ್ ಮಾರಾಟವಾಗಿದೆ.

ಬ್ರ್ಯಾಂಡೆಡ್ ಮತ್ತು ರಿಟೇಲ್ ವಿಭಾಗದಲ್ಲಿ 65 ಲಕ್ಷ ಟನ್ ಮಾರಾಟವಾಗಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಮಾರಾಟದಲ್ಲಿ ಶೇ 11ರಷ್ಟು ಏರಿಕೆಯಾಗಿದೆ. ಕೈಗಾರಿಕೆ ಮತ್ತು ಪ್ರಾಜೆಕ್ಟ್ಸ್ ವಿಭಾಗದಲ್ಲಿ 77 ಲಕ್ಷ ಟನ್ ಮಾರಾಟವಾಗಿದೆ. ಈ ವಿಭಾಗದಲ್ಲಿ ಮಾರಾಟದಲ್ಲಿ ಒಟ್ಟಾರೆ ಶೇ 7.7ರಷ್ಟು ಏರಿಕೆಯಾಗಿದೆ.

ವೈಯಕ್ತಿಕ ಮನೆ ನಿರ್ಮಾಣ ಮಾಡುವವರಿಗೆ ಇ–ಕಾಮರ್ಸ್ ವೇದಿಕೆ ಆಗಿರುವ ಟಾಟಾ ಸ್ಟೀಲ್ ಆಶಿಯಾನಾ ಒಟ್ಟು ₹2,240 ಕೋಟಿ ವರಮಾನ ಗಳಿಸಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ 30ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದೆ.

ಉತ್ಪಾದನೆ ಎಷ್ಟು?: 2023–24ನೇ ಆರ್ಥಿಕ ವರ್ಷದಲ್ಲಿ ಕಂಪನಿಯು ದೇಶದಲ್ಲಿ 2.08 ಕೋಟಿ ಟನ್‌ನಷ್ಟು ಕಚ್ಚಾ ಉಕ್ಕು ಉತ್ಪಾದಿಸಿದೆ. ಕಳೆದ ವರ್ಷ 1.98 ಕೋಟಿ ಟನ್‌ನಷ್ಟು ಉತ್ಪಾದಿಸಿತ್ತು. ಇದಕ್ಕೆ ಹೋಲಿಸಿದರೆ ಉತ್ಪಾದನೆಯಲ್ಲಿ ಶೇ 4ರಷ್ಟು ಏರಿಕೆಯಾಗಿದೆ. ನೆದರ್ಲೆಂಡ್ಸ್‌ನಲ್ಲಿರುವ ಸ್ಥಾವರವು 48 ಲಕ್ಷ ಟನ್ ಹಾಗೂ ಬ್ರಿಟನ್‌ನ ಸ್ಥಾವರವು 30.2 ಲಕ್ಷ ಟನ್‌ನಷ್ಟು ಉಕ್ಕು ಉತ್ಪಾದಿಸಿದೆ.





4 ಕೋಟಿ ಟನ್ ಕಲ್ಲಿದ್ದಲು ಉತ್ಪಾದನೆ ಗುರಿ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ರಾಷ್ಟ್ರೀಯ ಉಷ್ಣ ವಿದ್ಯುತ್ ನಿಗಮವು (ಎನ್‌ಟಿಪಿಸಿ) 2024–25ನೇ ಹಣಕಾಸು ವರ್ಷದಲ್ಲಿ ತನ್ನ ಒಡೆತನಕ್ಕೆ ಸೇರಿದ ಗಣಿಗಳಿಂದ 4 ಕೋಟಿ ಟನ್‌ನಷ್ಟು ಕಲ್ಲಿದ್ದಲು ಉತ್ಪಾದಿಸುವ ಗುರಿ ಹೊಂದಿದೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಶೇ 17ರಷ್ಟು ಉತ್ಪಾದನೆ ಹೆಚ್ಚಿಸುವ ಗುರಿ ಹೊಂದಲಾಗಿದೆ. ಮಾರ್ಚ್ ಅಂತ್ಯಕ್ಕೆ ಗಣಿ ಪ್ರದೇಶದಿಂದ 3.41 ಕೋಟಿ ಟನ್‌ನಷ್ಟು ಕಲ್ಲಿದ್ದಲು ಸಾಗಣೆ ಮಾಡಿದ್ದು, 3.43 ಕೋಟಿ ಟನ್‌ನಷ್ಟು ಉತ್ಪಾದಿಸಲಾಗಿದೆ ಎಂದು ತಿಳಿಸಿದೆ.

ಕಲ್ಲಿದ್ದಲು ಉತ್ಪಾದನೆಯಲ್ಲಿ ಸುಸ್ಥಿರತೆ ಸಾಧಿಸಲು ಹಲವು ಕಾರ್ಯವಿಧಾನ ಹಾಗೂ ತಾಂತ್ರಿಕ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದೆ.

ಗಣಿ ಸುರಕ್ಷತಾ ಕ್ರಮಗಳಿಗೆ ಒತ್ತು ನೀಡಿದೆ. ಗಣಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಹಲವು ಸುಧಾರಣಾ ಕ್ರಮಕೈಗೊಂಡಿದೆ. ಸ್ವಯಂಚಾಲಿತ ಉಪಕರಣಗಳ ಬಳಕೆಯ ಜೊತೆಗೆ ಕಾರ್ಮಿಕರಿಗೆ ಅಗತ್ಯ ತರಬೇತಿ ಕೂಡ ನೀಡುತ್ತಿದೆ. ಗಣಿಗಾರಿಕೆಯ ಮೇಲ್ವಿಚಾರಣೆ ಮತ್ತು ವಿಶ್ಲೇಷಣಾ ವಿಧಾನವನ್ನು ಅನುಸರಿಸುತ್ತಿದೆ ಎಂದು ತಿಳಿಸಿದೆ.

ಕಂಪನಿಯು ತನ್ನ ಸಾಮರ್ಥ್ಯ ಹೆಚ್ಚಳಕ್ಕೆ ಅನುಗುಣವಾಗಿ ನವೀನ ತಂತ್ರಜ್ಞಾನ ಮತ್ತು ಸುಸ್ಥಿರ ಕಾರ್ಯ ಚಟುವಟಿಕೆಗೆ ಆದ್ಯತೆ ನೀಡಿದೆ. ಆ ಮೂಲಕ ರಾಷ್ಟ್ರದ ಇಂಧನ ಉತ್ಪಾದನಾ ಗುರಿಗೆ ಪೂರಕವಾಗಿ ಕೆಲಸ ನಿರ್ವಹಿಸುತ್ತಿದೆ ಎಂದು ಹೇಳಿದೆ.

ಜೀವ ವಿಮೆ: ಮೂರು ತಪ್ಪು ಮಾಡಬೇಡಿ!



ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಭಾರತದಲ್ಲಿ ಒಟ್ಟು ಜನಸಂಖ್ಯೆಯ ಶೇ4ರಷ್ಟು ಮಂದಿ ಮಾತ್ರ ಜೀವ ವಿಮೆ (ಲೈಫ್ ಇನ್ಶೂರೆನ್ಸ್) ಹೊಂದಿದ್ದಾರೆ. ಹೀಗೆ ಜೀವ ವಿಮೆ ಪಡೆದವರು ಕೂಡ ಗೊತ್ತಿದ್ದೋ, ಗೊತ್ತಿಲ್ಲದೆಯೋ ಅನೇಕ ತಪ್ಪುಗಳನ್ನು ಮಾಡಿಕೊಂಡಿರುತ್ತಾರೆ.

ನನಗೆ ಎಷ್ಟು ಜೀವ ವಿಮಾ ಪಾಲಿಸಿಗಳು ಬೇಕು? ಟರ್ಮ್ ಇನ್ಶೂರೆನ್ಸ್ ಉತ್ತಮವೋ? ಇಲ್ಲ ಎಂಡೋಮೆಂಟ್ ಪಾಲಿಸಿ ಸೂಕ್ತವೋ? ಹೀಗೆ ವಿಮೆ ಮಾಡಿಸುವಾಗ ಏಳುವ ಹತ್ತಾರು ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಮುನ್ನವೇ ಅವರು 'ಇನ್ಶೂರೆನ್ಸ್' ಖರೀದಿಯನ್ನು ಮುಗಿಸಿರುತ್ತಾರೆ. 'ಇನ್ಶೂರೆನ್ಸ್' ಪಡೆಯುವಾಗ ಯಾವ ತಪ್ಪುಗಳನ್ನು ತಪ್ಪಿಸಬೇಕು ಎನ್ನುವ ಕುರಿತ ವಿವರ ಇಲ್ಲಿದೆ.

ಹತ್ತಾರು ಲೈಫ್ ಇನ್ಶೂರೆನ್ಸ್ ಬೇಡ, ಸೂಕ್ತ ವಿಮೆ ಮತ್ತು ಕವರೇಜ್ ಬಹಳ ಮುಖ್ಯ: ರಮೇಶ ಅಂತ ನನ್ನ ಸ್ನೇಹಿತರಿದ್ದಾರೆ. ಅವರು ಮಡದಿ, ಮಗಳು, ಮಗ ಮತ್ತು ತಮ್ಮ ಹೆಸರಿನಲ್ಲಿ ಸುಮಾರು 10ಕ್ಕೂ ಹೆಚ್ಚು ಇನ್ಶೂರೆನ್ಸ್ ಪಾಲಿಸಿಗಳನ್ನು ಮಾಡಿಸಿದ್ದಾರೆ. ಕೆಲವು ಇನ್ಶೂರೆನ್ಸ್‌ಗಳನ್ನು ಸ್ನೇಹಿತರು ಹೇಳಿದರು ಅಂತ ಮಾಡಿದ್ರೆ, ಮತ್ತೆ ಕೆಲವನ್ನು ಏಜೆಂಟ್‌ಗಳು, ಸಂಬಂಧಿಕರು ಹೇಳಿದ್ರು ಅಂತ ಪಡೆದಿದ್ದಾರೆ. ಆದರೆ, ಆ ಎಲ್ಲಾ ಲೈಫ್ ಇನ್ಶೂರೆನ್ಸ್‌ಗಳನ್ನು ಒಟ್ಟುಗೂಡಿಸಿದರೂ ಇರುವ ಕವರೇಜ್ ಮೊತ್ತ ಮಾತ್ರ ₹25 ಲಕ್ಷ. ಇವತ್ತಿನ ಬೆಲೆ ಏರಿಕೆ ಕಾಲದಲ್ಲಿ ₹25 ಲಕ್ಷ ಕವರೇಜ್ ಯಾವುದಕ್ಕೂ ಸಾಲುವುದಿಲ್ಲ.

ಕವರೇಜ್ ಅಂತ ಬಂದಾಗ ಟರ್ಮ್ ಲೈಫ್ ಇನ್ಶೂರೆನ್ಸ್ (ಅವಧಿ ವಿಮೆ) ಆಯ್ಕೆ ಮಾಡಿಕೊಳ್ಳುವುದು ಸೂಕ್ತ. ಕಡಿಮೆ ಮೊತ್ತಕ್ಕೆ ದೊಡ್ಡ ಮೊತ್ತದ ವಿಮಾ ಕವರೇಜ್ ಅನ್ನು ಟರ್ಮ್ ಲೈಫ್ ಇನ್ಶೂರೆನ್ಸ್ ಒದಗಿಸುತ್ತದೆ. 32 ವರ್ಷದ ವ್ಯಕ್ತಿಗೆ ವಾರ್ಷಿಕ ₹13,000ದಿಂದ ₹14,000 ಕೊಟ್ಟರೆ ₹75 ಲಕ್ಷದಿಂದ ₹1 ಕೋಟಿ ವರೆಗೆ ಕವರೇಜ್ ಕೊಡುವ ಟರ್ಮ್ ಲೈಫ್ ಇನ್ಶೂರೆನ್ಸ್ ಸಿಗುತ್ತದೆ.

ಟರ್ಮ್ ಇನ್ಶೂರೆನ್ಸ್ ನಿಮ್ಮ ಕುಟುಂಬಕ್ಕೆ ಹಣಕಾಸಿನ ಸುರಕ್ಷತೆಯನ್ನು ಒದಗಿಸುತ್ತದೆ. ಟರ್ಮ್ ಇನ್ಶೂರೆನ್ಸ್ ಕವರೇಜ್ ಪಡೆದಿರುವ ವ್ಯಕ್ತಿ ಮೃತಪಟ್ಟರೆ ಆತ ಎಷ್ಟು ಮೊತ್ತದ ಕವರೇಜ್ ಪಡೆದಿದ್ದನೋ ಅಷ್ಟು ಮೊತ್ತದ ಹಣ ಆತನ ಕುಟುಂಬಕ್ಕೆ ಸಿಗುತ್ತದೆ. ಹಣಕಾಸಿನ ಸ್ಥಿತಿಗತಿಗಳ ಕಾರಣಕ್ಕೆ ಕೆಲವರಿಗೆ ಟರ್ಮ್ ಇನ್ಶೂರೆನ್ಸ್ ಪಡೆಯಲು ಸಾಧ್ಯವಾಗುವುದಿಲ್ಲ. ಅಂಥವರು ಎಂಡೋಮೆಂಟ್ ಪಾಲಿಸಿ, ಮನಿ ಬ್ಯಾಕ್ ಪಾಲಿಸಿ, ಯುಲಿಪ್‌ನಂತಹ ಇನ್ಶೂರೆನ್ಸ್ ಪಾಲಿಸಿಗಳನ್ನು ಪರಿಗಣಿಸಬಹುದು.

ಆದರೆ, ನೆನಪಿರಲಿ ಇಂತಹ ಹಳೆ ಮಾದರಿಯ ವಿಮಾ ಪಾಲಿಸಿಗಳಲ್ಲಿ ಹೂಡಿಕೆ ಮೊತ್ತಕ್ಕೆ ಸಣ್ಣ ಪ್ರಮಾಣದ ಇನ್ಶೂರೆನ್ಸ್ ಕವರೇಜ್ ಜೊತೆಗೆ ಸಣ್ಣ ಪ್ರಮಾಣದ ಲಾಭ ಮಾತ್ರ ಸಿಗುತ್ತದೆ. ಹಳೆ ಮಾದರಿಯ ವಿಮಾ ಪಾಲಿಸಿಗಳು ಮೆಚ್ಯೂರಿಟಿಗೆ ಬಂದಾಗ ಒಟ್ಟಾರೆ ಶೇ 4ರಿಂದ 5ರಷ್ಟು ಲಾಭಾಂಶ ಸಿಕ್ಕರೆ ಅದೇ ಹೆಚ್ಚು.

ಹಾಗಾಗಿ, ಹಳೆಯ ಮಾದರಿಯ ಪಾಲಿಸಿಗಳನ್ನು ಹೂಡಿಕೆಗಳು ಎಂದುಕೊಂಡು ಹೆಚ್ಚೆಚ್ಚು ಹಣವನ್ನು ಅವುಗಳಲ್ಲಿ ತೊಡಗಿಸುವುದು ಸರಿಯಲ್ಲ. ಹೂಡಿಕೆ ಮತ್ತು ಇನ್ಶೂರೆನ್ಸ್ ಅನ್ನು ಪ್ರತ್ಯೇಕಿಸಿ ನೋಡುವುದು ಬಹಳ ಮುಖ್ಯ. ಇನ್ಶೂರೆನ್ಸ್ ಅಂತ ಬಂದಾಗ ಟರ್ಮ್ ಲೈಫ್ ಇನ್ಶೂರೆನ್ಸ್‌ಗೆ ಆದ್ಯತೆ ಕೊಟ್ಟರೆ ಒಳ್ಳೆಯದು. ಅದು ನಿಮಗೆ ಸಿಗುವುದಿಲ್ಲ ಎಂದಾಗ ಮಾತ್ರ ಹಳೆ ಮಾದರಿಯ ಇನ್ಶೂರೆನ್ಸ್ ಪಾಲಿಸಿಗಳತ್ತ ಚಿತ್ತ ಹರಿಸಿ. ಹೆಚ್ಚು ಕವರೇಜ್ ಮೊತ್ತವಿರುವ ಒಂದು ಅಥವಾ ಹೆಚ್ಚೆಂದರೆ ಎರಡು ಲೈಫ್ ಇನ್ಶೂರೆನ್ಸ್ ಪಾಲಿಸಿ ಸಾಕಾಗುತ್ತದೆ.

ಟರ್ಮ್ ಲೈಫ್ ಇನ್ಶೂರೆನ್ಸ್ ಖರೀದಿ ವಿಳಂಬ ಮಾಡಬೇಡಿ: ನನಗೇನಾಗುತ್ತೆ, ನಂಗೆ ಇನ್ನು 25 ವರ್ಷ. ಸದೃಢ ಆರೋಗ್ಯದಿಂದ ಇದ್ದೀನಿ ಅಂತ ಹೇಳಿಕೊಂಡು ಕೆಲವರು ಟರ್ಮ್ ಲೈಫ್ ಇನ್ಶೂರೆನ್ಸ್ ಖರೀದಿಸಲು ವಿಳಂಬ ಮಾಡುತ್ತಾರೆ. ಆದರೆ, ಟರ್ಮ್ ಇನ್ಶೂರೆನ್ಸ್ ಖರೀದಿ ವಿಳಂಬ ಮಾಡಿದಷ್ಟೂ ಪ್ರೀಮಿಯಂ ಮೊತ್ತ ಜಾಸ್ತಿಯಾಗುತ್ತದೆ. ಉದಾಹರಣೆಗೆ 25 ವರ್ಷದ ವ್ಯಕ್ತಿ ₹1 ಕೋಟಿ ಇನ್ಶೂರೆನ್ಸ್ ಕವರೇಜ್‌ಗೆ ವರ್ಷಕ್ಕೆ ₹9 ಸಾವಿರ ಕಟ್ಟಿದರೆ ಸಾಕು.

ಆದರೆ, ಅದೇ ವ್ಯಕ್ತಿ 35ನೇ ವಯಸ್ಸಿನಲ್ಲಿ ಟರ್ಮ್ ಇನ್ಶೂರೆನ್ಸ್ ಪಡೆದರೆ ವರ್ಷಕ್ಕೆ ₹16 ಸಾವಿರ ಪ್ರೀಮಿಯಂ ಪಾವತಿಸಬೇಕಾಗುತ್ತದೆ. ಹಾಗಾಗಿ, ಕೆಲಸಕ್ಕೆ ಸೇರಿದ ತಕ್ಷಣ ಟರ್ಮ್ ಲೈಫ್ ಇನ್ಶೂರೆನ್ಸ್ ಖರೀದಿಸುವುದು ಒಳಿತು. ಹೀಗೆ ಮಾಡಿದಾಗ ಕುಟುಂಬಕ್ಕೆ ಆರ್ಥಿಕ ಭದ್ರತೆ ಸಿಗುವ ಜೊತೆಗೆ ಪ್ರೀಮಿಯಂ ಮೊತ್ತವೂ ಉಳಿತಾಯವಾಗುತ್ತದೆ.

ಇನ್ಶೂರೆನ್ಸ್ ಪಡೆಯುವಾಗ ಸುಳ್ಳು ಮಾಹಿತಿ ನೀಡಬೇಡಿ: ಟರ್ಮ್ ಲೈಫ್ ಇನ್ಶೂರೆನ್ಸ್ ಪಡೆಯುವಾಗ ನಿಮ್ಮ ಆರೋಗ್ಯದ ಸ್ಥಿತಿಗತಿಯ ಮಾಹಿತಿಯನ್ನು ನಿಖರವಾಗಿ ನೀಡುವುದು ಬಹಳ ಮುಖ್ಯ. ನಿಮಗೆ ಈಗಾಗಲೇ ಯಾವುದೋ ಕಾಯಿಲೆ ಇದ್ದರೆ ಅದನ್ನು ಟರ್ಮ್ ಇನ್ಶೂರೆನ್ಸ್‌ನ ಅರ್ಜಿಯಲ್ಲಿ ನಮೂದಿಸಬೇಕು.

ಮದ್ಯಪಾನ , ಧೂಮಪಾನ ಮಾಡುತ್ತಿದ್ದರೆ ಆ ಬಗ್ಗೆಯೂ ತಿಳಿಸಬೇಕು. ಮದ್ಯಪಾನ, ಧೂಮಪಾನ ಮಾಡುವವರಿಗೆ ಇನ್ಶೂರೆನ್ಸ್ ಕಂಪನಿಗಳು ಹೆಚ್ಚಿನ ಇನ್ಶೂರೆನ್ಸ್ ಪ್ರೀಮಿಯಂ ನಿಗದಿ ಮಾಡುತ್ತವೆ. ಇನ್ಶೂರೆನ್ಸ್ ಪ್ರೀಮಿಯಂ ಕಡಿಮೆಯಾಗಲಿ ಎನ್ನುವ ಕಾರಣಕ್ಕೆ ಮದ್ಯಪಾನ, ಧೂಮಪಾನ ಮಾಡುವುದನ್ನು ಮರೆಮಾಚಿದರೆ ಅನಿರೀಕ್ಷಿತ ಸಂದರ್ಭದಲ್ಲಿ ಕವರೇಜ್ ಕ್ಲೇಮ್ ಮಾಡುವಾಗ ಸಮಸ್ಯೆ ಎದುರಾಗುತ್ತದೆ. ಹಾಗಾಗಿ, ಇನ್ಶೂರೆನ್ಸ್ ಪಡೆಯುವಾಗ ಯಾವುದೇ ಕಾರಣಕ್ಕೂ ಸುಳ್ಳು ಮಾಹಿತಿ ನೀಡಬೇಡಿ.

(ಲೇಖಕಿ: ಚಾರ್ಟರ್ಡ್ ಅಕೌಂಟೆಂಟ್)

ಷೇರುಪೇಟೆಯಲ್ಲಿ ನಿಲ್ಲದ ಗೂಳಿ ಓಟ



2024-25ನೇ ಹಣಕಾಸು ವರ್ಷದ ಮೊದಲ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಭಾರೀ ಜಿಗಿತ ಕಂಡಿವೆ. ಅನಿಶ್ಚಿತತೆಯ ವಾತಾವರಣದ ನಡುವೆಯೂ ಸೆನ್ಸೆಕ್ಸ್ ಮತ್ತು ನಿಫ್ಟಿ ಪುಟಿದೆದ್ದಿವೆ.

ಏಪ್ರಿಲ್ 5ಕ್ಕೆ ಕೊನೆಗೊಂಡ ವಾರದಲ್ಲಿ 74,248 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ಶೇ 0.81ರಷ್ಟು ಗಳಿಸಿಕೊಂಡಿದೆ. 22,513 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ 0.83ರಷ್ಟು ಹೆಚ್ಚಳ ಕಂಡಿದೆ. ಬಿಎಸ್‌ಇ ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 7ರಷ್ಟು ಗಳಿಸಿಕೊಂಡಿದ್ದರೆ, ಮಿಡ್ ಕ್ಯಾಪ್ ಮತ್ತು ಲಾರ್ಜ್ ಕ್ಯಾಪ್ ಸೂಚ್ಯಂಕಗಳು ಕ್ರಮವಾಗಿ ಶೇ 4 ಮತ್ತು ಶೇ 1ರಷ್ಟು ಹೆಚ್ಚಳ ದಾಖಲಿಸಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಮಾಧ್ಯಮ ಸೂಚ್ಯಂಕ ಶೇ 6.7ರಷ್ಟು ಗಳಿಸಿಕೊಂಡಿದೆ. ನಿಫ್ಟಿ ಲೋಹ ಶೇ 5.3, ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕ ಶೇ 4.2 ಮತ್ತು ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 4ರಷ್ಟು ಜಿಗಿದಿವೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಅದಾನಿ ಪವರ್, ವೇದಾಂತ, ಹಿಂದುಸ್ಥಾನ್ ಜಿಂಕ್, ಭಾರತ್ ಎಲೆಕ್ಟ್ರಾನಿಕ್ಸ್, ಪಂಜಾಬ್ ನ್ಯಾಷನಲ್ ಬ್ಯಾಂಕ್, ಅದಾನಿ ವಿಲ್ಮಾರ್, ಬಂಧನ್ ಬ್ಯಾಂಕ್ ಮತ್ತು ಡಿವೀಸ್ ಲ್ಯಾಬೊರೇಟರೀಸ್ ಉತ್ತಮ ಗಳಿಕೆ ಕಂಡಿವೆ.

ಮಾರುಕಟ್ಟೆ ಮೌಲ್ಯದ ಆಧಾರದಲ್ಲಿ ಕಳೆದ ವಾರ ಎಚ್‌ಡಿಎಫ್‌ಸಿ ಬ್ಯಾಂಕ್ ಹೆಚ್ಚು ವೃದ್ಧಿ ಕಂಡಿದೆ. ನಂತರದಲ್ಲಿ ಟಿಸಿಎಸ್, ಎನ್‌ಟಿಪಿಸಿ ಮತ್ತು ಮಹೀಂದ್ರ ಆ್ಯಂಡ್ ಮಹೀಂದ್ರ ಇವೆ. ಮತ್ತೊಂದೆಡೆ ರಿಲಯನ್ಸ್ ಇಂಡಸ್ಟ್ರೀಸ್, ಏರ್‌ಟೆಲ್, ಐಸಿಐಸಿಐ ಬ್ಯಾಂಕ್ ಹೆಚ್ಚಿನ ಪ್ರಮಾಣದಲ್ಲಿ ಮೌರುಕಟ್ಟೆ ಮೌಲ್ಯ ಕಳೆದುಕೊಂಡಿವೆ.

ಇನ್ನು ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹3,835.75 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಮುನ್ನೋಟ: ಈ ವಾರದಲ್ಲಿ ಕಂಪನಿಗಳು ತ್ರೈಮಾಸಿಕ ಫಲಿತಾಂಶದ ಪರ್ವ ಆರಂಭಗೊಳ್ಳಲಿದೆ. ಆನಂದ್ ರಾಟಿ ವೆಲ್ತ್ ಲಿಮಿಟೆಡ್, ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್, ಜಸ್ಟ್ ರೈಡ್ ಎಂಟರ್‌ಪ್ರೈಸಸ್ ಲಿಮಿಟೆಡ್, ಕ್ಯೂಪಿಡ್ ಲಿಮಿಟೆಡ್, ಪಾಪ್ಯೂಲರ್ ವೆಹಿಕಲ್ಸ್ ಆ್ಯಂಡ್ ಸರ್ವಿಸಸ್, ಕ್ರಿಸ್ಟಲ್ ಇಂಟಿಗ್ರೇಟೆಡ್ ಸರ್ವಿಸಸ್ ಹಾಗೂ ಕೆಲವು ಕಂಪನಿಗಳು ತ್ರೈಮಾಸಿಕ ಸಾಧನೆಯ ವರದಿ ಪ್ರಕಟಿಸಲಿವೆ.

ಉಳಿದಂತೆ ಜಾಗತಿಕ ವಿದ್ಯಮಾನಗಳು, ದೇಶೀಯ ಬೆಳವಣಿಗೆಗಳು, ಲೋಕಸಭಾ ಚುನಾವಣೆ ಸೇರಿ ಹಲವು ಅಂಶಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

ಪರಿಷ್ಕೃತ ವೇತನ ಒಪ್ಪಂದಕ್ಕೆ ಅಸಮಾಧಾನ

ಕೆಲಸದ ಪಾಳಿ ಪರಿಷ್ಕರಣೆಗೆ ಪೈಲಟ್‌ಗಳ ಜತೆ ಚರ್ಚೆ: ವಿಸ್ತಾರಾ

ನವದೆಹಲಿ (ಪಿಟಿಐ): ಕೆಲಸದ ಪಾಳಿ ನಿಗದಿ ಹಾಗೂ ರಜೆಗೆ ಸಂಬಂಧಿಸಿದಂತೆ ಹಾಲಿ ಇರುವ ರೋಸ್ಟರಿಂಗ್ ವ್ಯವಸ್ಥೆಯ ಪರಿಷ್ಕರಣೆ ಬಗ್ಗೆ ಪೈಲಟ್‌ಗಳ ಜೊತೆಗೆ ಚರ್ಚಿಸಲಾಗುವುದು ಎಂದು ವಿಸ್ತಾರಾ ಸಿಇಒ ವಿನೋದ್ ಕಣ್ಣನ್ ತಿಳಿಸಿದ್ದಾರೆ.

ರೋಸ್ಟರಿಂಗ್ ವ್ಯವಸ್ಥೆಯ ಪರಿಷ್ಕರಣೆಗೆ ಕಂಪನಿಯು ಪರಿಶೀಲನೆ ನಡೆಸುತ್ತಿದೆ. ಆದರೆ, ಇದರಿಂದ ಮತ್ತೆ ಸಂಘರ್ಷ ತಲೆದೋರುವುದನ್ನು ಬಯಸುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಟಾಟಾ ಸಮೂಹದ ಜೊತೆಗೆ ವಿಸ್ತಾರಾ ಏರ್‌ಲೈನ್ಸ್ ವಿಲೀನಗೊಂಡ ಬಳಿಕ ಪರಿಷ್ಕೃತ ವೇತನದ ಪಟ್ಟಿ ಪ್ರಕಟಿಸಲಾಗಿತ್ತು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದ ಹಲವು ಪೈಲಟ್‌ಗಳು ಅನಾರೋಗ್ಯದ ರಜೆಯ ಮೇಲೆ ತೆರಳಿದ್ದರಿಂದ ವಿಮಾನಗಳ ಸೇವೆಯಲ್ಲಿ ವ್ಯತ್ಯಯವಾಗಿತ್ತು.

ಪೈಲಟ್‌ಗಳ ಸೇವೆಯನ್ನು ಹೆಚ್ಚು ಬಳಸಿಕೊಳ್ಳಲು ಮುಂದಾಗಿದ್ದ ಕಂಪನಿಯು ಕೆಲಸದ ಪಾಳಿ ಅವಧಿಯನ್ನು ವಿಸ್ತರಿಸಿತ್ತು. ಇದು ಪೈಲಟ್‌ಗಳ ಅಸಮಾಧಾನಕ್ಕೆ ಕಾರಣವಾಗಿತ್ತು. ಅಲ್ಲದೆ, ವೇತನ ಕುರಿತ ಹೊಸ ಒಪ್ಪಂದದ ಬಗ್ಗೆ ಕೆಲವರು ಆಕ್ಷೇಪ ವ್ಯಕ್ತಪಡಿಸಿದ್ದರಿಂದ ವಿಸ್ತಾರಾ ಏರ್‌ಲೈನ್ಸ್ ಇಕ್ಕಟ್ಟಿಗೆ ಸಿಲುಕಿತ್ತು.

ಇತ್ತೀಚೆಗೆ ಪೈಲಟ್‌ಗಳ ಜೊತೆಗೆ ಸಿಇಒ ಕಣ್ಣನ್ ನಡೆಸಿದ ಸಭೆಯಲ್ಲೂ ರೋಸ್ಟರಿಂಗ್ ವ್ಯವಸ್ಥೆಯ ಬಗ್ಗೆ ಕೆಲವರು ಪ್ರಶ್ನೆ ಎತ್ತಿದ್ದು, ಪರಿಷ್ಕರಿಸುವಂತೆ ಸಲಹೆ ನೀಡಿದ್ದಾರೆ ಎಂದು ಹೇಳಲಾಗಿದೆ.

ಕಂಪನಿಯಲ್ಲಿ ಒಟ್ಟು 6,500ಕ್ಕೂ ಹೆಚ್ಚು ಮಂದಿ ಕೆಲಸ ನಿರ್ವಹಿಸುತ್ತಿದ್ದು, ಈ ಪೈಕಿ ಒಂದು ಸಾವಿರದಷ್ಟು ಪೈಲಟ್‌ಗಳಿದ್ದಾರೆ.

ಶೇ 10ರಷ್ಟು ವಿಮಾನ ಸಂಚಾರ ರದ್ದು



ನವದೆಹಲಿ (ಪಿಟಿಐ): ಪೈಲಟ್‌ಗಳ ಸೇವೆಯಲ್ಲಿ ತಲೆದೋರಿರುವ ಬಿಕ್ಕಟ್ಟಿನ ಬೆನ್ನಲ್ಲೇ ತನ್ನ ದೇಶೀಯ ಸೇವೆಯಲ್ಲಿ 25ರಿಂದ 30 ವಿಮಾನಗಳ ಕಾರ್ಯಾಚರಣೆಯನ್ನು ರದ್ದುಗೊಳಿಸಲು ವಿಸ್ತಾರಾ ಏರ್‌ಲೈನ್ಸ್ ತೀರ್ಮಾನಿಸಿದೆ.

ಮಾರ್ಚ್ 31ರಿಂದ ಬೇಸಿಗೆ ಋತುವಿನಲ್ಲಿ ಪ್ರತಿದಿನ ಕಂಪನಿಯ 300ಕ್ಕೂ ವಿಮಾನಗಳು ಕಾರ್ಯಾಚರಣೆ ನಡೆಸುತ್ತಿದ್ದವು. ಈ ಪೈಕಿ ಶೇ 10ರಷ್ಟು ವಿಮಾನಗಳ ಹಾರಾಟವು ಸ್ಥಗಿತಗೊಳ್ಳಲಿದೆ ಎಂದು ಕಂಪನಿ ತಿಳಿಸಿದೆ. 'ವಿಮಾನಗಳ ರದ್ದತಿಯು ದೇಶೀಯ ಸಂಚಾರದ ಮೇಲೆ ಪರಿಣಾಮ ಬೀರಲಿದೆ. ಇದರಿಂದ ಪ್ರಯಾಣಿಕರಿಗೆ ಸ್ವಲ್ಪಮಟ್ಟಿಗೆ ತೊಂದರೆಯಾಗಲಿದೆ. ಟಿಕೆಟ್ ಬುಕಿಂಗ್ ಮಾಡಿದ್ದ ಪ್ರಯಾಣಿಕರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಲಾಗಿದೆ' ಎಂದು ವಿಸ್ತಾರಾ ಏರ್‌ಲೈನ್ಸ್‌ನ ವಕ್ತಾರರು ತಿಳಿಸಿದ್ದಾರೆ.

ಇಂಧನ ಕ್ಷೇತ್ರ: ₹2.3 ಲಕ್ಷ ಕೋಟಿ ಹೂಡಿಕೆಗೆ ನಿರ್ಧಾರ



ಅಹಮದಾಬಾದ್ (ಗುಜರಾತ್) (ಪಿಟಿಐ): ದೇಶದಲ್ಲಿ ನವೀಕರಿಸಬಹುದಾದ ಇಂಧನ ಕ್ಷೇತ್ರದ ವಿಸ್ತರಣೆ ಹಾಗೂ ತನ್ನ ಒಡೆತನದ ಸೌರ, ಪವನ ವಿದ್ಯುತ್ ಘಟಕಗಳ ಸಾಮರ್ಥ್ಯ ಹೆಚ್ಚಿಸಲು ಅದಾನಿ ಸಮೂಹ ನಿರ್ಧರಿಸಿದೆ.

ಈ ಉದ್ದೇಶಕ್ಕಾಗಿ ಮುಂದಿನ ಏಳು ವರ್ಷಗಳವರೆಗೆ ಒಟ್ಟು ₹2.3 ಲಕ್ಷ ಕೋಟಿ ಬಂಡವಾಳ ಹೂಡಲು ತೀರ್ಮಾನಿಸಿದೆ. ತನ್ನ ವ್ಯಾಪಾರದ ನೆಲೆಯ ವೃದ್ಧಿಗೆ ಒತ್ತು ನೀಡುವುದೇ ಇದರ ಹಿಂದಿರುವ ಮೂಲ ಉದ್ದೇಶವಾಗಿದೆ ಎಂದು ಹೇಳಲಾಗಿದೆ.

ಅದಾನಿ ಗ್ರೀನ್ ಎನರ್ಜಿ ಲಿಮಿಟೆಡ್, ದೇಶದ ಅತಿದೊಡ್ಡ ನವೀಕರಿಸಬಹುದಾದ ಇಂಧನ ಕಂಪನಿಯಾಗಿದೆ. ಗುಜರಾತ್‌ನ ಕಛ್ ಪ್ರದೇಶದಲ್ಲಿರುವ ಖಾವ್ಡಾದಲ್ಲಿ ಸೌರ ಮತ್ತು ಪವನ ವಿದ್ಯುತ್ ಘಟಕಗಳನ್ನು ಹೊಂದಿದೆ. ಸದ್ಯ ಇಲ್ಲಿ 2 ಗಿಗಾವಾಟ್ ವಿದ್ಯುತ್ ಉತ್ಪಾದಿಸುತ್ತಿದ್ದು, ಇದನ್ನು 30 ಗಿಗಾವಾಟ್ ಸಾಮರ್ಥ್ಯಕ್ಕೆ ಹೆಚ್ಚಿಸಲು ತೀರ್ಮಾನಿಸಿದೆ. ಇದಕ್ಕಾಗಿ ₹1.5 ಲಕ್ಷ ಕೋಟಿ ಹೂಡಿಕೆಗೆ ನಿರ್ಧರಿಸಿದೆ ಎಂದು ಕಂಪನಿಯ ಮೂಲಗಳು ತಿಳಿಸಿವೆ.

ಅಲ್ಲದೆ, ದೇಶದ ಬೇರೆ ಸ್ಥಳದಲ್ಲಿ ₹50 ಸಾವಿರ ಕೋಟಿ ಬಂಡವಾಳ ಹೂಡಿಕೆಯೊಂದಿಗೆ 6ರಿಂದ 7 ಗಿಗಾವಾಟ್ ಸಾಮರ್ಥ್ಯದ ಘಟಕ ಸ್ಥಾಪಿಸಲು ಮುಂದಾಗಿದೆ ಎಂದು ಹೇಳಿವೆ.

ಅದಾನಿ ನ್ಯೂ ಇಂಡಸ್ಟ್ರೀಸ್ ಲಿಮಿಟೆಡ್ (ಎಎನ್‌ಐಎಲ್), ಅದಾನಿ ಎಂಟರ್‌ಪ್ರೈಸಸ್‌ಗೆ (ಎಜಿಇಎಲ್) ಸೇರಿದ ಘಟಕವಾಗಿದೆ. ಇದು ಗುಜರಾತ್‌ನ ಮುಂದ್ರಾದಲ್ಲಿ ಸೌರ ಫಲಕಗಳು ಹಾಗೂ ವಿಂಡ್ ಟರ್ಬೈನ್‌ಗಳನ್ನು ತಯಾರಿಸುತ್ತಿದೆ. ಇದರ ಸಾಮರ್ಥ್ಯ ವಿಸ್ತರಿಸಲು ₹30 ಸಾವಿರ ಕೋಟಿ ಹೂಡಿಕೆ ಮಾಡಲಿದೆ ಎಂದು ಮೂಲಗಳು ತಿಳಿಸಿವೆ.

'ಸದ್ಯ ಖಾವ್ಡಾದಲ್ಲಿರುವ ನವೀಕರಿಸಬಹುದಾದ ಇಂಧನ ಉತ್ಪಾದನಾ ಘಟಕದಲ್ಲಿ ಮೊದಲ ಹಂತದಲ್ಲಿ 2 ಸಾವಿರ ಮೆಗಾವಾಟ್ ಇಂಧನ ಉತ್ಪಾದನೆ ಆರಂಭಿಸಲಾಗಿದೆ. ಮುಂದಿನ ವರ್ಷದ ಮಾರ್ಚ್ ಅಂತ್ಯದೊಳಗೆ ಉತ್ಪಾದನಾ ಸಾಮರ್ಥ್ಯವನ್ನು ದ್ವಿಗುಣಗೊಳಿಸಲಾಗುವುದು' ಎಂದು ಎಜಿಇಎಲ್‌ನ ವ್ಯವಸ್ಥಾಪಕ ನಿರ್ದೇಶಕ ವಿನೀತ್ ಎಸ್. ಜೈನ್ ತಿಳಿಸಿದ್ದಾರೆ.

'ಜನಪ್ರಿಯ ಯೋಜನೆಗಳಿಗೆ ಸಾಲದ ಹಣ ಬಳಕೆ ಸರಿಯಲ್ಲ'

ನವದೆಹಲಿ (ಪಿಟಿಐ): 'ಸಾಲದ ಹಣವನ್ನು ಉಚಿತ ವಿದ್ಯುತ್ ಪೂರೈಕೆಯಂತಹ ಜನಪ್ರಿಯ ಯೋಜನೆಗಳಿಗೆ ವಿನಿಯೋಗಿಸಬಾರದು. ಇಂತಹ ಸಾಹಸಕ್ಕೆ ಮುಂದಾದರೆ ಪಂಜಾಬ್ ರಾಜ್ಯದಂತೆ ಸಾಲದ ಸುಳಿಗೆ ಸಿಲುಕಬೇಕಾಗುತ್ತದೆ' ಎಂದು ಕೇಂದ್ರ ಇಂಧನ ಸಚಿವ ಆರ್.ಕೆ. ಸಿಂಗ್ ಎಚ್ಚರಿಸಿದ್ದಾರೆ.

ಇತರೆ ಸರಕುಗಳಂತೆ ವಿದ್ಯುತ್ ಉತ್ಪಾದನೆಗೂ ಹಣ ವ್ಯಯಿಸಬೇಕಿದೆ. ಯಾವುದೇ ರಾಜ್ಯವು ಜನರಿಗೆ ಉಚಿತವಾಗಿ ವಿದ್ಯುತ್ ಪೂರೈಸಲು ಮುಂದಾದರೆ ಅದರ ಉತ್ಪಾದನೆಗೆ ಅಗತ್ಯವಿರುವಷ್ಟು ಹಣವನ್ನು ಆ ರಾಜ್ಯಗಳೇ ಭರಿಸಬೇಕಿದೆ ಎಂದು ಪಿಟಿಐ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

2022ರಲ್ಲಿ ಪಂಜಾಬ್‌ನಲ್ಲಿ ಆಮ್ ಆದ್ಮಿ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದಿತು. ಪ್ರತಿ ಮನೆಗೆ 300 ಯೂನಿಟ್ ಉಚಿತ ವಿದ್ಯುತ್ ಪೂರೈಕೆ ಸೇರಿ ಹಲವು ಜನಪ್ರಿಯ ಯೋಜನೆಗಳನ್ನು ಜಾರಿಗೆ ತಂದಿತು. ಪಂಜಾಬ್ ಈಗಾಗಲೇ ಸಾಲದಿಂದ ಬಳಲುತ್ತಿದೆ. ಅಧಿಕಾರಕ್ಕೆ ಎರಡು ವರ್ಷಗಳಲ್ಲಿ ಸರ್ಕಾರವು ₹47 ಸಾವಿರ ಕೋಟಿ ಸಾಲ ಮಾಡಿದೆ. ಹಲವು ರಾಜ್ಯಗಳು ಇದೇ ಮಾದರಿಯಲ್ಲಿ ಸಾಲದ ಸುಳಿಗೆ ಸಿಲುಕಿವೆ ಎಂದು ಹೇಳಿದ್ದಾರೆ.

ರಷ್ಯಾ: ಪ್ರವಾಹದ ಭೀತಿ- 4,000 ಜನರ ಸ್ಥಳಾಂತರ

ಮಾಸ್ಕೊ (ಎ.ಪಿ): ರಷ್ಯಾದ ಪ್ರವಾಹಪೀಡಿತ ಓರಿಯನ್‌ಬರ್ಗ್ ವಲಯದಲ್ಲಿ ಸರ್ಕಾರ ತುರ್ತುಪರಿಸ್ಥಿತಿ ಘೋಷಿಸಿದೆ.

ಉರಲ್ ನದಿಯಲ್ಲಿ ನೀರಿನ ಹರಿವಿನ ಮಟ್ಟ ಹೆಚ್ಚುತ್ತಿದೆ. ಪ್ರವಾಹದಿಂದಾಗಿ 885 ಮಕ್ಕಳು ಸೇರಿದಂತೆ ಸುಮಾರು 4,000 ಜನರು ಅತಂತ್ರರಾಗಿದ್ದು, ಸುರಕ್ಷಿತ ತಾಣಗಳಿಗೆ ಸ್ಥಳಾಂತರಿಸಲಾಗಿದೆ ಎಂದು ಸ್ಥಳೀಯ ಸರ್ಕಾರ ತಿಳಿಸಿದೆ.

ಸ್ಥಳೀಯ ಮಾಧ್ಯಮ ಸಂಸ್ಥೆ 'ಟಾಸ್' ಪ್ರಕಾರ, ಈ ವಲಯದಲ್ಲಿ ಪ್ರವಾಹದಿಂದಾಗಿ ಸುಮಾರು 6,300 ಮನೆಗಳು ಜಲಾವೃತವಾಗಿವೆ. ಸಚಿವ ಅಲೆಕ್ಸಾಂಡರ್ ಕುರೆನ್‌ಕೊವ್ ಅವರು ಪರಿಹಾರದ ಉಸ್ತುವಾರಿ ವಹಿಸಿದ್ದಾರೆ.

ಕಜಕಿಸ್ತಾನದಿಂದ 20 ಕಿ.ಮೀ. ದೂರದಲ್ಲಿರುವ ಗಡಿ ಭಾಗದಲ್ಲಿ ಪ್ರವಾಹದ ಪರಿಣಾಮ ತೀವ್ರವಾಗಿದೆ. ಅಣೆಕಟ್ಟೆಯಲ್ಲಿ ಬಿರುಕು ಕಾಣಿಸಿದೆ. ಬಾಧಿತ ಸ್ಥಳಗಳ ಜನರನ್ನು ಸುರಕ್ಷಿತ ಸ್ಥಳಗಳಿಗೆ ಕರೆದೊಯ್ಯಲು ಒತ್ತು ನೀಡಲಾಗಿದೆ. ಅಣೆಕಟ್ಟೆಯಲ್ಲಿ ಬಿರುಕು ಕಾಣಿಸಲು ನಿರ್ಮಾಣದಲ್ಲಿನ ಲೋಪ ಕಾರಣವೇ ಎಂದು ತಿಳಿಯಲು ತನಿಖೆಗೆ ಆದೇಶಿಸಲಾಗಿದೆ.

ಓಸ್ಕ್ ನಗರದ ಅಧಿಕಾರಿಗಳು, ಭಾನುವಾರ ನಾಲ್ವರು ಮೃತಪಟ್ಟಿದ್ದಾರೆ. ಆದರೆ, ಸಾವಿಗೂ ಪ್ರವಾಹಕ್ಕೂ ಸಂಬಂಧವಿಲ್ಲ. ನಗರದಲ್ಲಿ ಪರಿಸ್ಥಿತಿ ಬಿಗಡಾಯಿಸುತ್ತಿದೆ. 1,300ಕ್ಕೂ ಅಧಿಕ ಮನೆಗಳು ಜಲಾವೃತವಾಗಿವೆ ಎಂದು ತಿಳಿಸಿದ್ದಾರೆ.



ರಷ್ಯಾದಲ್ಲಿನ ಪ್ರವಾಹಪೀಡಿತ ಓಸ್ಕ್ ನಗರದಲ್ಲಿ ಜಲಾವೃತ ಮನೆಯೊಂದರ ನಿವಾಸಿಯನ್ನು ರಕ್ಷಣಾ ಸಿಬ್ಬಂದಿ ಸುರಕ್ಷಿತ ಸ್ಥಳಕ್ಕೆ ಕರೆದೊಯ್ದರು –ಎಎಫ್‌ಪಿ ಚಿತ್ರ

'ಇಸ್ರೇಲ್ ರಾಯಭಾರ ಕಚೇರಿಗಳು ಇನ್ನು ಮುಂದೆ ಸುರಕ್ಷಿತವಲ್ಲ'

ಟೆಹ್ರಾನ್ (ಎಎಫ್‌ಪಿ): 'ಇಸ್ರೇಲ್‌ನ ರಾಯಭಾರ ಕಚೇರಿಗಳು ಇನ್ನು ಮುಂದೆ ಸುರಕ್ಷಿತವಾಗಿರುವುದಿಲ್ಲ' ಎಂದು ಇರಾನ್‌ನ ಪರಮೋಚ್ಚನಾಯಕಅಯತುಲ್ಲಾಅಲಿಖಮೇನಿಅವರಹಿರಿಯ ಸಲಹೆಗಾರ ಯಾಹ್ಯಾ ರಹೀಂ ಸಫಾವಿ ಭಾನುವಾರ ಎಚ್ಚರಿಕೆ ನೀಡಿದ್ದಾರೆ.

'ಡಮಾಸ್ಕಸ್‌ನ ನಮ್ಮ ರಾಯಭಾರ ಕಚೇರಿ ಮೇಲೆ ಇಸ್ರೇಲ್ ದಾಳಿ ನಡೆಸಿ, ಕಾನ್ಸುಲರ್ ಅನೆಕ್ಸ್‌ಅನ್ನು ನೆಲಸಮಗೊಳಿಸಿದೆ ಎಂದು ಇರಾನ್ ಆರೋಪಿಸಿ, ಈ ಎಚ್ಚರಿಕೆ ನೀಡಿದೆ' ಎಂದು ಐಎಸ್‌ಎನ್‌ಎ ಸುದ್ದಿಸಂಸ್ಥೆ ವರದಿ ಮಾಡಿದೆ.

'ದಾಳಿಯಿಂದಾಗಿ ಇಸ್ಲಾಮಿಕ್ ರೆವುಲ್ಯುಷನರಿ ಗಾರ್ಡ್ ಕೋರ್ (ಐಆರ್‌ಜಿಸಿ) ಏಳು ಮಂದಿ ಸಿಬ್ಬಂದಿ ಮತ್ತು ಇಬ್ಬರು ಸಾರ್ವಜನಿಕರು ಮೃತಪಟ್ಟಿದ್ದರು. ಇದಕ್ಕೆ ಸೇಡು ತೀರಿಸಿಕೊಳ್ಳುವುದಾಗಿ ಟೆಹ್ರಾನ್ ಶಪಥ ಮಾಡಿದೆ' ಎಂದೂ ಅದು ಹೇಳಿದೆ.

'ದಾಳಿ ನಡೆಸುವುದಕ್ಕೆ ನಮ್ಮ ಪಡೆಗಳು ಸಿದ್ಧವಾಗಿವೆ. ಅವು ಹೇಗಿರುತ್ತವೆ ಎಂಬುದನ್ನು ನೀವು ಕಾದು ನೋಡಬೇಕು. ಕ್ರೂರ ಇಸ್ರೇಲ್ ದೇಶವನ್ನು ಎದುರಿಸುವುದು ಶಾಸನಬದ್ಧ ಮತ್ತು ನ್ಯಾಯಸಮ್ಮತ ಹಕ್ಕಾಗಿದೆ. ನಮ್ಮ ಸುತ್ತಮುತ್ತಲ ಪ್ರಾಂತ್ಯಗಳ ಇಸ್ರೇಲ್ ರಾಯಭಾರ ಕಚೇರಿಗಳನ್ನು ಪ್ರಸ್ತುತ ಮುಚ್ಚಲಾಗಿದೆ' ಎಂದು ಯಾಹ್ಯಾ ತಿಳಿಸಿದ್ದಾರೆ.

ಇರಾನ್‌ನ ಎಚ್ಚರಿಕೆಗೆ ಇಸ್ರೇಲ್ ಯಾವುದೇ ರೀತಿಯ ತಕ್ಷಣದ ಪ್ರತಿಕ್ರಿಯೆ ನೀಡಿಲ್ಲ.

4 ಕಂಪನಿ ಎಂ–ಕ್ಯಾಪ್ ₹1.71 ಲಕ್ಷ ಕೋಟಿ ಗಳಿಕೆ

ನವದೆಹಲಿ (ಪಿಟಿಐ): ಪ್ರಮುಖ 10 ಕಂಪನಿಗಳ ಪೈಕಿ ನಾಲ್ಕು ಕಂಪನಿಗಳ ಮಾರುಕಟ್ಟೆ ಮೌಲ್ಯವು (ಎಂ–ಕ್ಯಾಪ್) ₹1.71 ಲಕ್ಷ ಕೋಟಿ ಏರಿಕೆ ಆಗಿದೆ.

ಎಚ್‌ಡಿಎಫ್‌ಸಿ ಬ್ಯಾಂಕ್ ₹76,880 ಕೋಟಿ, ಎಲ್‌ಐಸಿ ₹49,208 ಕೋಟಿ, ಟಿಸಿಎಸ್ ₹34,733 ಕೋಟಿ ಮತ್ತು ಎಸ್‌ಬಿಐ ಎಂ–ಕ್ಯಾಪ್ ₹10,486 ಕೋಟಿ ಏರಿಕೆ ಆಗಿದೆ. ರಿಲಯನ್ಸ್ ಇಂಡಸ್ಟ್ರೀಸ್ ₹38,462 ಕೋಟಿ, ಭಾರ್ತಿ ಏರ್‌ಟೆಲ್ ₹21,206 ಕೋಟಿ, ಐಸಿಐಸಿಐ ಬ್ಯಾಂಕ್ ₹9,458 ಕೋಟಿ, ಇನ್ಫೊಸಿಸ್ ₹7,996 ಕೋಟಿ, ಐಟಿಸಿ ₹873 ಕೋಟಿ ಮತ್ತು ಹಿಂದೂಸ್ತಾನ್ ಯೂನಿಲಿವರ್‌ನ ಮಾರುಕಟ್ಟೆ ಮೌಲ್ಯವು ₹129 ಕೋಟಿ ಇಳಿದಿದೆ.

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹100-432
ದ್ವಿತಳಿ (ಬಿ.ವಿ)	₹233-550



ಮುಂಬೈ ತಂಡಕ್ಕೆ ಮೊದಲ ಜಯ

ರೊಮಾರಿಯೊ ಶೆಫರ್ಡ್ ಅಬ್ಬರದ ಆಟ; ಟ್ರಿಸ್ಟನ್ ಸ್ಟಬ್ಸ್ ಭರ್ಜರಿ ಬ್ಯಾಟಿಂಗ್

ಮುಂಬೈ (ಪಿಟಿಐ): ಅಂತೂ ಇಂತೂ ಮುಂಬೈ ಇಂಡಿಯನ್ಸ್ ತಂಡವು ಸೋಲಿನ ಸರಪಳಿ ಕಳಚಿಕೊಂಡಿತು.

ಭಾನುವಾರ ವಾಂಕೆಡೆ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ಹಾರ್ದಿಕ್ ಪಾಂಡ್ಯ ನಾಯಕತ್ವದ ಮುಂಬೈ ತಂಡವು 29 ರನ್‌ಗಳಿಂದ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಜಯಿಸಿತು. ಮುಂಬೈ ತಂಡವು ತನ್ನ ಮೊದಲ ಮೂರು ಪಂದ್ಯಗಳಲ್ಲಿ ಸೋತಿತ್ತು. ಈ ಟೂರ್ನಿಯಲ್ಲಿ ತಂಡಕ್ಕೆ ಇದು ಮೊದಲ ಜಯವಾಗಿದೆ.

ಟಾಸ್ ಗೆದ್ದ ಡೆಲ್ಲಿ ಕ್ಯಾಪಿಟಲ್ಸ್ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. 10 ಎಸೆತಗಳಲ್ಲಿ 39 ರನ್ ಗಳಿಸಿದ ರೊಮಾರಿಯೊ ಶೆಫರ್ಡ್ ಮತ್ತು ಟಿಮ್ ಡೇವಿಡ್ (21 ಎಸೆತಗಳಲ್ಲಿ ಅಜೇಯ 45) ಅಬ್ಬರದ ಬ್ಯಾಟಿಂಗ್‌ನಿಂದಾಗಿ ಮುಂಬೈ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 234 ರನ್‌ಗಳ ದೊಡ್ಡ ಮೊತ್ತ ಗಳಿಸಿತು.

ಇದಕ್ಕುತ್ತರವಾಗಿ ಡೆಲ್ಲಿ ತಂಡದ ಪೃಥ್ವಿ ಶಾ (66; 40ಎ) ಮತ್ತು ಟ್ರಿಸ್ಟನ್ ಸ್ಟಬ್ಸ್ (ಔಟಾಗದೆ 71; 25ಎ) ಅವರು ಬಿರುಸಿನ ಬ್ಯಾಟಿಂಗ್ ಮಾಡಿದರು. ಆದರೂ ತಂಡವು ಗೆಲುವಿನ ದಡ ಸೇರಲಿಲ್ಲ. ಜೆರಾಲ್ಡ್ ಕೋಯೆ (34ಕ್ಕೆ4) ಅವರು ಡೆಲ್ಲಿ ತಂಡದ ಜಯದ ಆಸೆಗೆ ಅಡ್ಡಿಯಾದರು.

16ನೇ ಓವರ್‌ನಲ್ಲಿ ರಿಷಭ್ ಪಂತ್ ಅವರು ಕೇವಲ ಒಂದು ರನ್ ಗಳಿಸಿ ಔಟಾದಾಗ ತಂಡದ ಮೊತ್ತವು 153 ರನ್‌ಗಳಾಗಿದ್ದವು. ಆಗ ಕ್ರೀಸ್‌ನಲ್ಲಿದ್ದ ಸ್ಟಬ್ಸ್ ಅವರು ಅಕ್ಷರ್ ಪಟೇಲ್ ಜೊತೆಗೂಡಿ ರನ್ ಗಳಿಕೆಗೆ ವೇಗ ನೀಡಿದರು. ಅದರಲ್ಲೂ ಸ್ಟಬ್ಸ್ ದೊಡ್ಡ ಹೊಡೆತಗಳು ಮುಂಬೈನಿಂದ ಗೆಲುವು ಕಸಿಯುವ ನಿರೀಕ್ಷೆ ಮೂಡಿಸಿದ್ದವು.

ಅದರಲ್ಲಿಯೂ ಅವರು ಶೆಫರ್ಡ್ ಹಾಕಿದ 19ನೇ ಓವರ್‌ನಲ್ಲಿ ಮೂರು ಸಿಕ್ಸರ್ ಸಿಡಿಸಿದರು. ಅದಕ್ಕೂ ಮುನ್ನ ಜೆರಾಲ್ಡ್ ಓವರ್‌ನಲ್ಲಿಯೂ ಸಿಕ್ಸರ್ ಸಿಡಿಸಿದ್ದರು. 13ನೇ ಓವರ್‌ನಲ್ಲಿ ಸ್ಪಿನ್ನರ್ ಪಿಯೂಷ್ ಚಾವ್ಲಾ ಎಸೆತವನ್ನೂ ಪ್ರೇಕ್ಷಕರ ಗ್ಯಾಲರಿಗೆ ಕಳಿಸಿದ್ದರು.

ಆದರೆ 19ನೇ ಓವರ್‌ನಲ್ಲಿ ಅಕ್ಷರ್ (8 ರನ್) ಅವರು ಔಟ್ ಆದ ನಂತರ ಉಳಿದ ಬ್ಯಾಟರ್‌ಗಳಿಂದ ಉತ್ತಮ ಬೆಂಬಲ ದೊರೆಯಲಿಲ್ಲ. ಇದರಿಂದಾಗಿ ರನ್ ವೇಗ ಕಡಿತವಾಯಿತು. ಕೊನೆಯ ಓವರ್‌ನಲ್ಲಿ ಕುಮಾರ ಕುಶಾಗ್ರ, ಲಲಿತ್ ಯಾದವ್ ಮತ್ತು ಜೇ ರಿಚರ್ಡ್ಸನ್ ಅವರ ವಿಕೆಟ್‌ಗಳನ್ನು ಜೆರಾಲ್ಡ್ ತಮ್ಮ ಬುಟ್ಟಿಗೆ ಹಾಕಿಕೊಂಡರು.

ಸ್ಟಬ್ಸ್ ಇನ್ನೊಂದು ಬದಿಯಲ್ಲಿದ್ದರು. ಒಟ್ಟು 7 ಸಿಕ್ಸರ್ ಮತ್ತು 3 ಬೌಂಡರಿ ಹೊಡೆದ ಸ್ಟಬ್ಸ್ 284ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು.

ರೋಹಿತ್–ಇಶಾನ್ ಜೊತೆಯಾಟ: ಮುಂಬೈ ತಂಡಕ್ಕೆ ರೋಹಿತ್ (49 ರನ್) ಮತ್ತು ಇಶಾನ್ ಕಿಶನ್ (42 ರನ್) ಅವರು ಉತ್ತಮ ಆರಂಭ ನೀಡಿದರು. ಪವರ್‌ಪ್ಲೇನಲ್ಲಿ ವಿಕೆಟ್ ಬೀಳದಂತೆ ತಡೆದರು.

ಮೊದಲ ವಿಕೆಟ್ ಜೊತೆಯಾಟದಲ್ಲಿ 80 ರನ್ ಸೇರಿಸಿದರು.

ದೀರ್ಘ ಸಮಯದ ನಂತರ ಕ್ರಿಕೆಟ್ ಅಂಗಳಕ್ಕೆ ಮರಳಿದ ಸೂರ್ಯಕುಮಾರ್ ಯಾದವ್ ಖಾತೆಯನ್ನೇ ತೆರೆಯಲಿಲ್ಲ. ಆದರೆ ನಾಯಕ ಹಾರ್ದಿಕ್ (39 ರನ್), ಟಿಮ್ ಡೇವಿಡ್ (ಔಟಾಗದೆ 45) ಮತ್ತು ಶೆಫರ್ಡ್ ಅಬ್ಬರದ ಆಟವಾಡಿ ದೊಡ್ಡ ಮೊತ್ತ ಗಳಿಸಲು ನೆರವಾದರು.

ವೆಸ್ಟ್ ಇಂಡೀಸ್ ಆಲ್‌ರೌಂಡರ್ ಶೆಫರ್ಡ್ 390ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಸೂರೆ ಮಾಡಿದರು. 4 ಸಿಕ್ಸರ್ ಮತ್ತು ಮೂರು ಬೌಂಡರಿ ಬಾರಿಸಿದರು.



ರೊಮಾರಿಯೊ ಶೆಫರ್ಡ್ ಬ್ಯಾಟಿಂಗ್ ವೈಖರಿ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಮುಂಬೈ ಇಂಡಿಯನ್ಸ್ 5ಕ್ಕೆ 234 (20 ಓವರ್)
ರೋಹಿತ್ ಬಿ ಅಕ್ಷರ್ 49 (27ಎ, 4X6, 6X3)
ಇಶಾನ್ ಸಿ ಅಂಡ್ ಬಿ ಅಕ್ಷರ್ 42 (23ಎ, 4X4, 6X2)
ಸೂರ್ಯಕುಮಾರ್ ಸಿ ಸಬ್ (ಜೇಕ್ ಫ್ರೇಸರ್–ಮೆಕ್ಗುರ್ಕ್) ಬಿ ನಾಕಿಯಾ 0 (2ಎ)
ಹಾರ್ದಿಕ್ ಸಿ ಸಬ್ (ಜೇಕ್ ಫ್ರೇಸರ್–ಮೆಕ್ಗುರ್ಕ್) ಬಿ ನಾಕಿಯಾ 39 (33ಎ, 4X3, 6X1)
ತಿಲಕ್ ಸಿ ಅಕ್ಷರ್ ಬಿ ಖಲೀಲ್ ಅಹಮದ್ 6 (5ಎ, 4X1)
ಟಿಮ್ ಡೇವಿಡ್ ಔಟಾಗದೇ 45 (21ಎ, 4X2, 6X4)
ರೊಮಾರಿಯೊ ಔಟಾಗದೇ 39 (10ಎ, 4X3, 6X4)
ಇತರೆ: 14(ವೈಡ್13, ನೋಬಾಲ್ 1)
ವಿಕೆಟ್ ಪತನ: 1–80 (ರೋಹಿತ್, 6.6), 2–81 (ಸೂರ್ಯಕುಮಾರ್, 7.3), 3–111 (ಇಶಾನ್, 10.2), 4–121 (ತಿಲಕ್ ವರ್ಮಾ, 12.4), 5–181 (ಹಾರ್ದಿಕ್ ಪಾಂಡ್ಯ, 17.5)
ಬೌಲಿಂಗ್: ಖಲೀಲ್ ಅಹಮ್ಮದ್ 4–0–39–1; ಇಶಾಂತ್ 3–0–40–0; ಜೇ ರಿಚರ್ಡ್ಸನ್ 4–0–40–0; ಅಕ್ಷರ್ 4–0–35–2; ಲಲಿತ್ ಯಾದವ್ 1–0–15–0; ನಾಕಿಯಾ 4–0–65–2

ಡೆಲ್ಲಿ ಕ್ಯಾಪಿಟಲ್ಸ್ 8ಕ್ಕೆ205 (20 ಓವರ್)
ಪೃಥ್ವಿ ಶಾ ಬಿ ಬುಮ್ರಾ 66 (40ಎ, 4X8, 6X3)
ವಾರ್ನರ್ ಸಿ ಹಾರ್ದಿಕ್ ಬಿ ಶೆಫರ್ಡ್ 10 (8ಎ, 4X1, 6X1)
ಅಭಿಷೇಕ್ ಸಿ ಟಿಮ್ ಡೇವಿಡ್ ಬಿ ಬುಮ್ರಾ 41 (31ಎ, 4X5)
ಟ್ರಿಸ್ಟನ್ ಸ್ಟಬ್ಸ್ ಔಟಾಗದೇ 71 (25ಎ, 4X3, 6X7)
ರಿಷಬ್ ಪಂತ್ ಸಿ ಹಾರ್ದಿಕ್ ಬಿ ಕೋಯೆ 1 (3ಎ)
ಅಕ್ಷರ್ ಪಟೇಲ್ ರನ್ ಔಟ್ (ನಬಿ/ ಇಶಾನ್) 8 (7ಎ, 4X1)
ಲಲಿತ್ ಸಿ ಇಶಾನ್ ಬಿ ಕೋಯೆ 3 (4ಎ)
ಕುಮಾರ್ ಸಿ ತಿಲಕ್ ಬಿ ಕೋಯೆ 0 (1ಎ)
ಜೇ ರಿಚರ್ಡ್ಸನ್ ಸಿ ರೋಹಿತ್ ಬಿ ಕೋಯೆ 2 (2ಎ)
ಇತರೆ: 3 (ಲೆಗ್ ಬೈ1, ವೈಡ್ 1, ನೋಬಾಲ್1
ವಿಕೆಟ್ ಪತನ: 1–22 (ಡೇವಿಡ್ ವಾರ್ನರ್, 3.4), 2–110 (ಪೃಥ್ವಿ ಶಾ, 11.5), 3–144 (ಅಭಿಷೇಕ್ , 14.6), 4–153 (ರಿಷಭ್ , 15.6), 5–194 (ಅಕ್ಷರ್, 18.4), 6–203 (ಲಲಿತ್, 19.3), 7–203 (ಕುಮಾರ್ , 19.4), 8–205 (ಜೇ ರಿಚರ್ಡ್ಸನ್, 19.6)
ಬೌಲಿಂಗ್: ಜೆರಾಲ್ಡ್ ಕೋಯೆ 4–0–34–4; ಜಸ್‌ಪ್ರೀತ್ ಬುಮ್ರಾ 4–0–22–2, ಆಕಾಶ್ ಮಧ್ವಾಲ್ 4–0–45–0; ರೊಮಾರಿಯೊ ಶೆಫರ್ಡ್ 4–0–54–1; ಮೊಹಮ್ಮದ್ ನಬಿ 2–0–17–0, ಪಿಯೂಷ್ ಚಾವ್ಲಾ 2–0–32–0
ಪಂದ್ಯದ ಆಟಗಾರ: ರೊಮಾರಿಯೊ ಶೆಫರ್ಡ್

ರಾಹುಲ್ ಬಳಗಕ್ಕೆ ಹ್ಯಾಟ್ರಿಕ್ ಜಯ • ಯಶ್ ಠಾಕೂರ್‌ಗೆ 5 ವಿಕೆಟ್

ಲಖನೌ ದಾಳಿಗೆ ಗುಜರಾತ್ ಟೈಟನ್ಸ್ ಕುಸಿತ

ಲಖನೌ (ಪಿಟಿಐ): ವೇಗದ ಬೌಲರ್ ಯಶ್ ಠಾಕೂರ್ (3.5–1–30–5) ಮತ್ತು ಎಡಗೈ ಸ್ಪಿನ್ನರ್ ಕೃಣಾಲ್ ಪಾಂಡ್ಯ(11ಕ್ಕೆ3) ಅವರ ಪರಿಣಾಮಕಾರಿ ಬೌಲಿಂಗ್ ನೆರವಿನಿಂದ ಲಖನೌ ಸೂಪರ್ ಜೈಂಟ್ಸ್ ತಂಡ ಭಾನುವಾರ ನಡೆದ ಐಪಿಎಲ್ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ತಂಡವನ್ನು 33 ರನ್‌ಗಳಿಂದ ಸೋಲಿಸಿತು. ಇದು ಲಖನೌಗೆ ಸತತ ಮೂರನೇ ಜಯ.

25 ವರ್ಷದ ಯಶ್, ಐಪಿಎಲ್‌ನ ಈ ಆವೃತ್ತಿಯಲ್ಲಿ ಐದು ವಿಕೆಟ್ ಗೊಂಚಲು ಪಡೆದ ಮೊದಲ ಬೌಲರ್ ಎನಿಸಿದರು. ನಾಯಕ ಶುಭಮನ್ ಗಿಲ್ ಅವರ ವಿಕೆಟ್ ಕೂಡ ಇದರಲ್ಲಿ ಒಳಗೊಂಡಿತ್ತು.

ಏಕನಾ ಕ್ರೀಡಾಂಗಣದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಕೆ.ಎಲ್.ರಾಹುಲ್ ಬಳಗ, ಮಾರ್ಕಸ್ ಸ್ಟೊಯಿನಿಸ್ (58, 43 ಎಸೆತ) ಅವರ ಅರ್ಧ ಶತಕ ಮತ್ತು ಪೂರನ್ ಅವರ ಬಿರುಸಿನ 32 (22ಎಸೆತ) ರನ್‌ಗಳ ನೆರವಿನಿಂದ 5 ವಿಕೆಟ್‌ಗೆ 163 ರನ್ ಹೊಡೆಯಿತು. ಆದರೆ ಎಲ್‌ಎಸ್‌ಜಿ ಬೌಲರ್‌ಗಳು ಮತ್ತೊಮ್ಮೆ ಈ ಸಾಧಾರಣ ಮೊತ್ತವನ್ನು ರಕ್ಷಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಪವರ್‌ಪ್ಲೇ ಅವಧಿಯಲ್ಲಿ ವಿಕೆಟ್ ನಷ್ಟವಿಲ್ಲದೇ 56 ರನ್ ಗಳಿಸಿ ಉತ್ತಮ ಆರಂಭ ಮಾಡಿದ್ದ ಗಿಲ್ ಬಳಗ ನಂತರ ನಿಯಮಿತವಾಗಿ ವಿಕೆಟ್‌ಗಳನ್ನು ಕಳೆದುಕೊಳ್ಳುತ್ತ ಹೋಯಿತು. ಏಳು ಎಸೆತಗಳಿರುವಂತೆ 130 ರನ್‌ಗಳಿಗೆ ಆಲೌಟ್ ಆಯಿತು. ಇದು ಲಖನೌ ತಂಡಕ್ಕೆ ಗುಜರಾತ್ ಟೈಟನ್ಸ್ ವಿರುದ್ಧ ಇದುವರೆಗೆ ಆಡಿದ ಐದು ಪಂದ್ಯಗಳಲ್ಲಿ ಮೊದಲ ಜಯ ಕೂಡ.

ವೃದ್ಧಿಮಾನ್ ಸಹಾ ಅನುಪಸ್ಥಿತಿಯಲ್ಲಿ ಇನಿಂಗ್ಸ್ ಆರಂಭಿಸಿದ ಸಾಯಿ ಸುದರ್ಶನ್ (31) ಬಿಟ್ಟರೆ, ಕೊನೆಯಲ್ಲಿ ರಾಹುಲ್ ತೆವಾಟಿಯಾ (30) ಮಾತ್ರ ಕೆಲಮಟ್ಟಿಗೆ ಪ್ರತಿರೋಧ ತೋರಿದರು. ರವಿ ಬಿಷ್ಣೋಯಿ ಎಂಟು ರನ್ನಿಗೆ ಒಂದು ವಿಕೆಟ್ ಪಡೆದರು. ಕೇನ್ ವಿಲಿಯಮ್ಸನ್ ಅವರ ಕ್ಯಾಚ್ ಅನ್ನು ಅಮೋಘವಾಗಿ ಒಂದೇ ಕೈಯಲ್ಲಿ ಪಡೆದರು.

ಶರವೇಗದ ಬೌಲಿಂಗ್ ಮಾಡುವ ಮಯಂಕ್ ಯಾದವ್ ಅವರು ಒಂದು ಓವರ್ ಮಾತ್ರ ಬೌಲಿಂಗ್ ಮಾಡಿ ಗಾಯಾಳಾಗಿ ನಿರ್ಗಮಿಸಿದರು. ಆದರೆ ಉಳಿದ ಬೌಲರ್‌ಗಳ ಉತ್ತಮ ಪ್ರದರ್ಶನದಿಂದ ಅವರ ಗೈರು ಕಾಣಲಿಲ್ಲ. ಇದಕ್ಕೆ ಮೊದಲು, ಆತಿಥೇಯ ಲಖನೌ ಹೋರಾಟದ ಮೊತ್ತ ಗಳಿಸಿತು. ತಂಡದ ವೇಗಿ ಉಮೇಶ್ ಯಾದವ್ ಆರಂಭದಲ್ಲೇ ಕ್ವಿಂಟನ್ ಡಿ ಕಾಕ್ ವಿಕೆಟ್ ಪಡೆದರು. ಇನ್ನೊಂದು ಓವರ್‌ನಲ್ಲಿ ಅವರು ದೇವದತ್ತ ಪಡಿಕ್ಕಲ್ ವಿಕೆಟ್ ಕೂಡ ಗಳಿಸಿದರು. ಆತಿಥೇಯ ತಂಡವು 18 ರನ್‌ಗಳಿಗೆ ಎರಡು ವಿಕೆಟ್ ಕಳೆದುಕೊಂಡಿತು.

ಕೆ.ಎಲ್.ರಾಹುಲ್ (33; 31ಎ) ಅವರೊಂದಿಗೆ ಸೇರಿಕೊಂಡ ಸ್ಟೊಯಿನಿಸ್ ಇನಿಂಗ್ಸ್‌ಗೆ ಬಲ ತುಂಬಿ ಮೂರನೇ ವಿಕೆಟ್‌ಗೆ 73 ರನ್ ಸೇರಿಸಿದರು. ಕೊನೆಯ ಹಂತದ ಓವರ್‌ಗಳಲ್ಲಿ ನಿಕೊಲಸ್ ಪೂರನ್ ಅಬ್ಬರಿಸಿದರು.

ಕರ್ನಾಟಕದ ವಿಕೆಟ್ ಕೀಪರ್ ಬಿ.ಆರ್.ಶರತ್, ಗುಜರಾತ್ ಟೈಟನ್ಸ್ ತಂಡದಲ್ಲಿ ಪದಾರ್ಪಣೆ ಮಾಡಿದರು.

ಸಂಕ್ಷಿಪ್ತ ಸ್ಕೋರು: ಲಖನೌ ಸೂಪರ್ ಜೈಂಟ್ಸ್: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 163 (ಕೆ.ಎಲ್. ರಾಹುಲ್ 33, ಮಾರ್ಕಸ್ ಸ್ಟೊಯಿನಿಸ್ 58, ನಿಕೊಲಸ್ ಪೂರನ್ ಔಟಾಗದೆ 32, ಆಯುಷ್ ಬಡೋನಿ 20, ಉಮೇಶ್ ಯಾದವ್ 22ಕ್ಕೆ2, ದರ್ಶನ್ ನಾಲ್ಕಂಡೆ 21ಕ್ಕೆ2); ಗುಜರಾತ್ ಟೈಟನ್ಸ್: 18.5 ಓವರುಗಳಲ್ಲಿ 130 (ಸಾಯಿ ಸುದರ್ಶನ್ 31, ರಾಹುಲ್ ತೆವಾಟಿಯಾ 30; ಯಶ್ ಠಾಕೂರ್ 30ಕ್ಕೆ5, ಕೃಣಾಲ್ ಪಾಂಡ್ಯ 11ಕ್ಕೆ3). ಪಂದ್ಯದ ಆಟಗಾರ: ಯಶ್ ಠಾಕೂರ್.



ಶುಭಮನ್ ಗಿಲ್ ವಿಕೆಟ್ ಪಡೆದ ಸಂಭ್ರಮದಲ್ಲಿ ಲಖನೌ ಸೂಪರ್ ಜೈಂಟ್ಸ್ ತಂಡದ ಬೌಲರ್ ಯಶ್ ಠಾಕೂರ್. ಪಿಟಿಐ ಚಿತ್ರ

ಜಯದ ಲಯಕ್ಕೆ ಮರಳುವತ್ತ ಚೆನ್ನೈ ಚಿತ್ತ

ಋತುರಾಜ್ ಗಾಯಕವಾಡ ಬಳಗಕ್ಕೆ ಕೋಲ್ಕತ್ತ ನೈಟ್ ರೈಡರ್ಸ್ ಸವಾಲು ಇಂದು

ಚೆನ್ನೈ (ಪಿಟಿಐ): ಹಾಲಿ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಗೆಲುವಿನ ಹಾದಿಗೆ ಮರಳಲು ತವಕಿಸುತ್ತಿದೆ. ತನ್ನ ತವರಿನಂಗಳದಲ್ಲಿ ಸೋಮವಾರ ನಡೆಯಲಿರುವ ಕೋಲ್ಕತ್ತ ನೈಟ್ ರೈಡರ್ಸ್ ಎದುರಿನ ಪಂದ್ಯದಲ್ಲಿ ಜಯಿಸುವ ಛಲದಲ್ಲಿದೆ.

ಋತುರಾಜ್ ಗಾಯಕವಾಡ ನೇತೃತ್ವದ ಚೆನ್ನೈ ತಂಡವು ಕಳೆದ ಎರಡು ಪಂದ್ಯಗಳಲ್ಲಿ ಸತತ ಸೋಲು ಅನುಭವಿಸಿದೆ. ಋತುರಾಜ್ ಮತ್ತು ಪ್ರತಿಭಾನ್ವಿತ ಆಟಗಾರ ರಚಿನ್ ರವೀಂದ್ರ ಅವರು ಉತ್ತಮ ಆರಂಭ ನೀಡಬೇಕಿದೆ. ಪವರ್‌ಪ್ಲೇನಲ್ಲಿ ಹೆಚ್ಚು ರನ್ ಗಳಿಸಿದರೆ ಮುಂದಿನ ಹಾದಿ ಸುಲಭವಾಗುತ್ತದೆ. ಆದರೆ ಈ ವಿಷಯದಲ್ಲಿ ಕಳೆದ ಎರಡೂ ಪಂದ್ಯಗಳಲ್ಲಿ ಈ ಜೋಡಿಯು ಸಫಲವಾಗಿಲ್ಲ.

ಮಧ್ಯಮ ಕ್ರಮಾಂಕದಲ್ಲಿ ಶಿವಂ ದುಬೆ ಅವರು ಸತತವಾಗಿ ಉತ್ತಮ ಬ್ಯಾಟಿಂಗ್ ಮಾಡುತ್ತಿದ್ದಾರೆ. ಈ ಟೂರ್ನಿಯಲ್ಲಿ ಒಟ್ಟು 148 ರನ್ ಪೇರಿಸಿದ್ದಾರೆ. 118.91ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದ್ದಾರೆ.

ಯುವ ಆಟಗಾರ ಸಮೀರ್ ರಿಜ್ವಿ ಅವರೂ ಹೆಚ್ಚು ರನ್ ಗಳಿಸುತ್ತಿಲ್ಲ. ಬೌಲಿಂಗ್‌ನಲ್ಲಿ ದೀಪಕ್ ಚಾಹರ್, ತುಷಾರ್ ದೇಶಪಾಂಡೆ ಮತ್ತು ಮುಕೇಶ್ ಚೌಧರಿ ಅವರೊಂದಿಗೆ ಸ್ಪಿನ್ನರ್ ಮೋಯಿನ್ ಅಲಿ, ರವೀಂದ್ರ ಜಡೇಜ ಹಾಗೂ ಮಹೀಷ ತೀಕ್ಷಣ ಇದ್ದಾರೆ. ಆದರೆ ಈ ಬೌಲಿಂಗ್ ಪಡೆಗೆ ಕೋಲ್ಕತ್ತದ ಬ್ಯಾಟಿಂಗ್ ಪಡೆಯುವ ಕಠಿಣ ಸವಾಲೊಡ್ಡುವ ಸಾಧ್ಯತೆ ಇದೆ.

ಆಲ್‌ರೌಂಡರ್ ಸುನಿಲ್ ನಾರಾಯಣ, ಆ್ಯಂಡ್ರೆ ರಸೆಲ್, ವೆಂಕಟೇಶ್ ಅಯ್ಯರ್ ಮತ್ತು ಯುವಪ್ರತಿಭೆ ಅಂಗಕ್ರಿಷ್ ರಘುವಂಶಿ ಕಳೆದ ಪಂದ್ಯಗಳಲ್ಲಿ ರನ್‌ಗಳ ಹೊಳೆಯನ್ನೇ ಹರಿಸಿದ್ದಾರೆ. ಚೆನ್ನೈ ತಂಡದಲ್ಲಿ ವೇಗಿ ಮುಸ್ತಫಿಜುರ್ ರೆಹಮಾನ್ ಅವರಿಲ್ಲದಿರುವುದರಿಂದ ಬ್ಯಾಟರ್‌ಗಳನ್ನು ಕಟ್ಟಿಹಾಕಲು ವಿಭಿನ್ನ ತಂತ್ರ ಹೆಣೆಯಬೇಕಿದೆ. ತಂಡದ ನಿಕಟಪೂರ್ವ ನಾಯಕ ಮಹೇಂದ್ರಸಿಂಗ್ ಧೋನಿ ಅವರು ಋತುರಾಜ್‌ಗೆ ನೀಡುವ ಸಲಹೆಗಳು ಇಲ್ಲಿ ಮುಖ್ಯವಾಗಲಿವೆ.

ಪಂದ್ಯ ಆರಂಭ: ರಾತ್ರಿ 7.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಸಿನಿಮಾ ಆ್ಯಪ್



ಚೆನ್ನೈ ಸೂಪರ್ ಕಿಂಗ್ಸ್‌ನ ಮಹೇಂದ್ರಸಿಂಗ್ ಧೋನಿ ಮತ್ತು ಋತುರಾಜ್ ಗಾಯಕವಾಡ –ಪಿಟಿಐ ಚಿತ್ರ

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ರಾಜಸ್ಥಾನ ರಾಯಲ್ಸ್	4	4	0	8	1.120
ಕೋಲ್ಕತ್ತ ನೈಟ್ ರೈಡರ್ಸ್	3	3	0	6	2.518
ಲಖನೌ ಸೂಪರ್ ಜೈಂಟ್ಸ್	4	3	1	6	0.775
ಚೆನ್ನೈ ಸೂಪರ್ ಕಿಂಗ್ಸ್	4	2	2	4	0.517
ಸನ್‌ರೈಸರ್ಸ್ ಹೈದರಾಬಾದ್	4	2	2	4	0.409
ಪಂಜಾಬ್ ಕಿಂಗ್ಸ್	4	2	2	4	-0.220
ಗುಜರಾತ್ ಟೈಟನ್ಸ್	5	2	3	4	-0.797
ಮುಂಬೈ ಇಂಡಿಯನ್ಸ್	4	1	3	2	-0.704
ರಾಯಲ್ ಚಾಲೆಂಜರ್ಸ್ ಬೆಂಗಳೂರು	5	1	4	2	-0.843
ಡೆಲ್ಲಿ ಕ್ಯಾಪಿಟಲ್ಸ್	5	1	4	2	-1.370

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (316 ರನ್)
ಪರ್ಪಲ್ ಕ್ಯಾಪ್: ಯಜುವೇಂದ್ರ ಚಾಹಲ್, ರಾಜಸ್ಥಾನ ರಾಯಲ್ಸ್ (8 ವಿಕೆಟ್)

ಹಾಕಿ: ಭಾರತಕ್ಕೆ ಎರಡನೇ ಸೋಲು

ಪರ್ತ್ (ಪಿಟಿಐ): ಭಾರತದ ಪುರುಷರ ಹಾಕಿ ತಂಡ ಮೊದಲ ಪಂದ್ಯಕ್ಕಿಂತ ಸ್ವಲ್ಪ ಸುಧಾರಿತ ಪ್ರದರ್ಶನ ನೀಡಿದರೂ, ಆಸ್ಟ್ರೇಲಿಯಾ ವಿರುದ್ಧ ಭಾನುವಾರ ನಡೆದ ಎರಡನೇ ಹಾಕಿ ಟೆಸ್ಟ್ ಪಂದ್ಯದಲ್ಲಿ 2–4 ಗೋಲುಗಳಿಂದ ಸೋಲುಭವಿಸಿತು.

ಶನಿವಾರ ನಡೆದ ಮೊದಲ ಪಂದ್ಯದಲ್ಲಿ ಭಾರತ 1–5 ಗೋಲುಗಳ ಮುಖಭಂಗ ಅನುಭವಿಸಿತ್ತು. ಆದರೆ ಈ ಪಂದ್ಯದಲ್ಲಿ ಬಲಾಢ್ಯ ಎದುರಾಳಿಗಳ ವಿರುದ್ಧ ಮೊದಲ ಮತ್ತು ಎರಡನೇ ಕ್ವಾರ್ಟರ್‌ನಲ್ಲಿ ಆಟಗಾರರು ಸಮಸಮನಾಗಿಯೇ ಆಡಿದರು. ವಿರಾಮದ ವೇಳೆಗೆ ಭಾರತ ತಂಡವೇ 2–1 ಗೋಲುಗಳಿಂದ ಮುನ್ನಡೆ ಸಾಧಿಸಿತ್ತು. ಆದರೆ ವಿರಾಮದ ನಂತರ ರಕ್ಷಣಾ ವಿಭಾಗದಲ್ಲಿ ಹುಳುಕುಗಳು ಕಂಡುಬಂದು, ಆತಿಥೇಯರು ಮೂರು ಗೋಲುಗಳನ್ನು ಗಳಿಸಿ ಮೇಲುಗೈ ಸಾಧಿಸಿದರು.

ಜೆರೆಮಿ ಹೇವಾರ್ಡ್ (6 ಮತ್ತು 34ನೇ ನಿಮಿಷ) ಅವರು ಎರಡು ಪೆನಾಲ್ಟಿ ಕಾರ್ನರ್‌ಗಳನ್ನು ಗೋಲಾಗಿ ಪರಿವರ್ತಿಸಿದರು. ಜಾಕೋಬ್ ಆ್ಯಂಡರ್ಸನ್ (42ನೇ ನಿಮಿಷ) ಮತ್ತು ನೇಥನ್ ಇಫ್ರೇಮ್ಸ್ (45ನೇ) ಅವರು ಗೋಲು ಗಳಿಸಿ ಆಸ್ಟ್ರೇಲಿಯಾ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದರು.

ಭಾರತದ ಪರ ಜುಗರಾಜ್ ಸಿಂಗ್ (9ನೇ ನಿಮಿಷ) ಮತ್ತು ನಾಯಕ ಹರ್ಮನ್‌ಪ್ರೀತ್ ಸಿಂಗ್ (30ನೇ ನಿಮಿಷ) ಅವರು ಗೋಲು ಗಳಿಸಿದರು. ಎರಡೂ ಗೋಲುಗಳು ಪೆನಾಲ್ಟಿ ಕಾರ್ನರ್‌ಗಳ ಮೂಲಕ ಬಂದವು.

ಐದು ಪಂದ್ಯಗಳ ಸರಣಿಯ ಮೂರನೇ ಪಂದ್ಯ ಏಪ್ರಿಲ್ 10ರಂದು ನಡೆಯಲಿದೆ. ಈ ಸರಣಿಗೆ ‘ಪರ್ತ್ ಇಂಟರ್‌ನ್ಯಾಷನಲ್ ಫೆಸ್ಟಿವಲ್ ಆಫ್ ಹಾಕಿ’ ಎಂದು ಹೆಸರಿಸಲಾಗಿದೆ. ಸರಣಿಯು ಉಭಯ ತಂಡಗಳಿಗೆ ಪ್ಯಾರಿಸ್ ಒಲಿಂಪಿಕ್ಸ್‌ಗೆ ಸಿದ್ಧತೆಯ ಭಾಗವಾಗಿ ನಡೆಯುತ್ತಿದೆ.




ಹರ್ಮನ್‌ಪ್ರೀತ್ ಸಿಂಗ್ ಪಿಟಿಐ ಚಿತ್ರ (ಸಂಗ್ರಹ)

ಕರ್ನಾಟಕಕ್ಕೆ ಚೊಚ್ಚಲ ರಣಜಿ ಟ್ರೋಫಿ: ಬಿಐಸಿ ಸಂವಾದ ನಾಳೆ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ತಂಡವು ಮೊದಲ ಬಾರಿ ರಣಜಿ ಟ್ರೋಫಿ ಜಯಿಸಿದ ಸಾಧನೆಗೆ ಈಗ 50 ವರ್ಷಗಳು ತುಂಬಿವೆ. ಈ ಸಂದರ್ಭದಲ್ಲಿ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿ.ಐ.ಸಿ)ದಲ್ಲಿ ಮಂಗಳವಾರ ಸಂವಾದ ಕಾರ್ಯಕ್ರಮ ಆಯೋಜಿಸಲಾಗಿದೆ.

1974ರಲ್ಲಿ ರಣಜಿ ಟ್ರೋಫಿ ಜಯಿಸಿದ ಕರ್ನಾಟಕ ತಂಡದ ನಾಯಕರಾಗಿದ್ದ ಇ.ಎ.ಎಸ್. ಪ್ರಸನ್ನ, ಬ್ಯಾಟರ್ ಸಂಜಯ್ ದೇಸಾಯಿ, ಕ್ರಿಕೆಟ್ ಲೇಖಕ ಸುರೇಶ್ ಮೆನನ್ ಹಾಗೂ ಕ್ರೀಡಾ ಪತ್ರಕರ್ತೆ ಶಾರದಾ ಉಗ್ರಾ ಅವರು ಈ ಕಾರ್ಯಕ್ರಮದಲ್ಲಿ ಮಾತನಾಡಲಿದ್ದಾರೆ.

ಲೇಖಕ ಹಾಗೂ ಇತಿಹಾಸಕಾರ ರಾಮಚಂದ್ರ ಗುಹಾ ಅವರು ಕಾರ್ಯಕ್ರಮವನ್ನು ನಿರ್ವಹಿಸಲಿದ್ದಾರೆ. ಮಂಗಳವಾರ (ಏ. 9) ಸಂಜೆ 6.30 ರಿಂದ 8 ಗಂಟೆಯವರೆಗೆ ಕಾರ್ಯಕ್ರಮ ನಡೆಯಲಿದೆ. ಉಚಿತ ಪ್ರವೇಶವಿದ್ದು, ಮೊದಲು ಬಂದವರಿಗೆ ಆದ್ಯತೆ ನೀಡಲಾಗುವುದು. ಮಾಹಿತಿಗಾಗಿ bic@bangaloreinternationalcentre.org ವೆಬ್‌ಸೈಟ್‌ಗೆ ಭೇಟಿ ನೀಡಬಹುದು.



ಇ.ಎ.ಎಸ್. ಪ್ರಸನ್ನ

ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯ ಮೂರನೇ ಸುತ್ತು: ಡ್ರಾ ಪಂದ್ಯದಲ್ಲಿ ಗುಕೇಶ್

ವಿದಿತ್ ಗುಜರಾತಿ ವಿರುದ್ಧ ಗೆದ್ದ ಪ್ರಜ್ಞಾನಂದ

ಟೊರಾಂಟೊ (ಪಿಟಿಐ) ಕೌಶಲದ ಆಟವಾಡಿದ ಆರ್.ಪ್ರಜ್ಞಾನಂದ ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯ ಮೂರನೇ ಸುತ್ತಿನಲ್ಲಿ ಸ್ವದೇಶದ ವಿದಿತ್ ಗುಜರಾತಿ ಅವರ ಯಶಸ್ಸಿನ ಓಟಕ್ಕೆ ಶನಿವಾರ ತಡೆಯೊಡ್ಡಿದರು. ಅವರಂತೆಯೇ ಅವರ ಅಕ್ಕ ವೈಶಾಲಿ ಮಹಿಳೆಯರ ವಿಭಾಗದಲ್ಲಿ ಮೊದಲ ಗೆಲುವು ಸಾಧಿಸಿದರು.

ಮಹಿಳೆಯರ ವಿಭಾಗದಲ್ಲಿ ನಿರ್ಣಾಯಕವಾದ ಏಕೈಕ ಪಂದ್ಯದಲ್ಲಿ ವೈಶಾಲಿ, ಬಲ್ಗೇರಿಯಾದ ನುರ್ಗ್ಯೂಲ್ ಸಲಿಮೋವಾ ಅವರನ್ನು 33 ನಡೆಗಳಲ್ಲಿ ಸೋಲಿಸಿದರು.

ಈ ವಿಭಾಗದ ಉಳಿದ ಮೂರು ಪಂದ್ಯಗಳು ‘ಡ್ರಾ’ದಲ್ಲಿ ಕೊನೆಗೊಂಡವು.

ಓಪನ್ ವಿಭಾಗದಲ್ಲಿ ಭಾರತದ ಇನ್ನೊಬ್ಬ ಆಟಗಾರ ಡಿ.ಗುಕೇಶ್, ಎದುರಾಳಿ ಇಯಾನ್ ನೆಪೊಮ್‌ನಿಯಾಚಿ (2 ಪಾಯಿಂಟ್) ಅವರ ರಕ್ಷಣೆಯನ್ನು ಭೇದಿಸಲು ನಾನಾ ಪ್ರಯತ್ನ ಮಾಡಿದರೂ ಯಶಸ್ಸು ಸಾಧಿಸಲಿಲ್ಲ. ರಷ್ಯಾ ಮೇಲೆ ನಿರ್ಬಂಧ ಹೇರಿರುವ ಕಾರಣ ಫಿಡೆ ಧ್ವಜದಡಿ ಆಡುತ್ತಿರುವ ನೆಪೊಮ್‌ನಿಯಾಚಿ, ‘ಡ್ರಾ’ ಮಾಡಿಕೊಳ್ಳುವಲ್ಲಿ ಯಶಸ್ವಿಯಾದರು.

ಪ್ರಜ್ಞಾನಂದ ಅವರ ಓಪನಿಂಗ್ ಶೈಲಿ, ವಿದಿತ್ ಅವರನ್ನು ಅಚ್ಚರಿಯಲ್ಲಿ ಕೆಡವಿತು. ಪಂದ್ಯ ಮಧ್ಯಮ ಹಂತ ತಲುಪುತ್ತಿದ್ದಂತೆ ಪ್ರಗ್ಗು ಕೈಮೇಲಾಯಿತು. ರೂಕ್ ನೆರವಿನಿಂದ ಎದುರಾಳಿ ಮೇಲೆ ಒತ್ತಡ ಹೇರಿದ ತಮಿಳುನಾಡು ಆಟಗಾರ 45 ನಡೆಗಳಲ್ಲಿ ಗೆಲುವನ್ನು ಪೂರೈಸಿದರು.

ಇನ್ನೊಂದು ಪಂದ್ಯದಲ್ಲಿ ಫ್ರಾನ್ಸ್‌ನ ಅಲಿರೇಝಾ ಫಿರೋಜ್ ಬಳಿ ಒಂದು ಕಾಲಾಳು ಹೆಚ್ಚು ಇದ್ದರೂ ಪ್ರಯೋಜನಕ್ಕೆ ಬರದೇ ಅಗ್ರ ಶ್ರೇಯಾಂಕದ ಆಟಗಾರ ಫ್ಯಾಬಿಯಾನೊ ಕರುವಾನಾ (ಅಮೆರಿಕ, 2 ಪಾಯಿಂಟ್) ಜತೆಗೆ ‘ಡ್ರಾ’ಕ್ಕೆ ತೃಪ್ತಿಪಡಬೇಕಾಯಿತು.

ಹಿಕಾರು ನಕಾಮುರಾ (ಅಮೆರಿಕ, 1) ಅವರಿಗೆ ಅಜರ್‌ಬೈಜಾನ್‌ನ ನಿಜತ್ ಅಬಸೋವ್ (1) ಜೊತೆ ಡ್ರಾ ಮಾಡಿಕೊಳ್ಳಲು ಕಷ್ಟವಾಗಲಿಲ್ಲ. ಪಂದ್ಯ 29 ನಡೆಗಳನ್ನು ಕಂಡಿತು. ಈ ಟೂರ್ನಿಗೆ ಕೆಲದಿನ ಮೊದಲು ರಿಲ್ಯಾಕ್ಸ್ ಆಗಲು ಫುಟ್‌ಬಾಲ್ ಆಡುತ್ತಿದ್ದಾಗ ಕಾಲಿಗೆ ಪೆಟ್ಟುಮಾಡಿಕೊಂಡಿದ್ದ ಅಬಸೋವ್, ಆ ನೋವಿನ ನಡುವೆ ಅಬಸೋವ್ ಇಲ್ಲಿ ಆಡುತ್ತಿದ್ದಾರೆ.

ಡಬಲ್ ರೌಂಡ್‌ರಾಬಿನ್ ಮಾದರಿಯ ಈ ಟೂರ್ನಿಯಲ್ಲಿ ಇನ್ನೂ 11 ಸುತ್ತುಗಳು ಆಡಲು ಇದ್ದು, ಕರುವಾನಾ, ಗುಕೇಶ್ ಮತ್ತು ನೆಪೊಮ್‌ನಿಯಾಚಿ ಅವರು ತಲಾ ಎರಡು ಪಾಯಿಂಟ್‌ಗಳೊಂದಿಗೆ ಲೀಡ್ ಹಂಚಿಕೊಂಡಿದ್ದಾರೆ.

ಪ್ರಜ್ಞಾನಂದ ಮತ್ತು ವಿದಿತ್ ಸಂತೋಷ್ ಗುಜರಾತಿ ತಲಾ 1.5 ಪಾಯಿಂಟ್ಸ್ ಸಂಗ್ರಹಿಸಿದ್ದು ಎರಡನೇ ಸ್ಥಾನದಲ್ಲಿದ್ದಾರೆ.

ನಕಾಮುರಾ, ಅಲಿರೇಝಾ ಮತ್ತು ಅಬಸೋವ್ ತಲಾ ಒಂದು ಪಾಯಿಂಟ್ಸ್ ಹೊಂದಿದ್ದಾರೆ.

ಭಾರತದ ಗ್ರ್ಯಾಂಡ್‌ಮಾಸ್ಟರ್ ಕೋನೇರು ಹಂಪಿ ಮಹಿಳಾ ವಿಭಾಗದ ಇನ್ನೊಂದು ಪಂದ್ಯದಲ್ಲಿ ಚೀನಾದ ಝೊಂಗ್‌ಯಿ ತಾನ್ ಅವರ ಜೊತೆ ‘ಕದನ ವಿರಾಮ’ಕ್ಕೆ ಸಹಿ ಹಾಕಿದರು.

ಮಹಿಳಾ ವಿಭಾಗದಲ್ಲಿ ಝೊಂಗ್‌ಯಿ ಅವರು ಮೂರು ಸುತ್ತುಗಳಿಂದ ಎರಡೂವರೆ ಪಾಯಿಂಟ್ಸ್ ಪಡೆದು ಉಳಿದವರಿಗಿಂತ ಅರ್ಧ ಪಾಯಿಂಟ್‌ಗಳ ಸ್ಪಷ್ಟ ಮುನ್ನಡೆ ಪಡೆದಿದ್ದಾರೆ.

ಮಹಿಳೆಯರ ವಿಭಾಗದ ಫಲಿತಾಂಶಗಳು: ಆರ್.ವೈಶಾಲಿಗೆ (1.5), ಬಲ್ಗೇರಿಯಾದ ನುರ್ಗ್ಯೂಲ್ ಸಲಿಮೋವಾ (1) ವಿರುದ್ಧ ಜಯ; ಕೋನೇರು ಹಂಪಿ (1.5) ಮತ್ತು ಚೀನಾದ ಜೊಂಗ್‌ಯಿ ತಾನ್ (2.5) ನಡುವಣ ಪಂದ್ಯ ‘ಡ್ರಾ’; ಟಿಂಗ್ಜಿ ಲೀ (ಚೀನಾ, 1) ಮತ್ತು ಫಿಡೆಯ ಅಲೆಕ್ಸಾಂಡ್ರಾ ಗೊರ್ಯಾಚ್ಕಿನಾ (2) ನಡುವಣ ಪಂದ್ಯ ‘ಡ್ರಾ’; ಅನ್ನಾ ಮುಝಿಚುಕ್ (ಉಕ್ರೇನ್, 1) ಮತ್ತು ಕ್ಯಾತರಿನಾ ಲಾಗ್ನೊ (ಫಿಡೆ, 1) ನಡುವಣ ಪಂದ್ಯ ‘ಡ್ರಾ’.



ಪ್ರಜ್ಞಾನಂದ ಪಿಟಿಐ ಚಿತ್ರ



ವೈಶಾಲಿ

ಕ್ರೀಡೆಯಲ್ಲಿ ಭ್ರಷ್ಟಾಚಾರ ತಡೆಗೆ ಕಾನೂನು ಇಲ್ಲ: ಬೇಸರ

ನವದೆಹಲಿ (ಪಿಟಿಐ): ಭಾರತದ ಕ್ರೀಡೆಗಳಲ್ಲಿ ನಡೆಯುವ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಆಡಳಿತಗಾರರು ಮೊದಲಿನಿಂದಲೂ ಆಸಕ್ತಿ ತೋರಿಲ್ಲ. ಇದರಿಂದಾಗಿ ಸ್ಪಾಟ್ ಫಿಕ್ಸಿಂಗ್ ಪ್ರಕರಣದಲ್ಲಿ ಸಿಲುಕಿದ್ದ ಆರೋಪಿ ಎಸ್. ಶ್ರೀಶಾಂತ್ ಕೂಡ ಪಾರಾದರು ಎಂದು ದೆಹಲಿಯ ಮಾಜಿ ಪೊಲೀಸ್ ಆಯುಕ್ತ ನೀರಜ್ ಕುಮಾರ್ ಅವರು ಹೇಳಿದ್ದಾರೆ.

2013ರ ಐಪಿಎಲ್‌ನಲ್ಲಿ ಸ್ಪಾಟ್ ಫಿಕ್ಸಿಂಗ್ ಹಗರಣ ನಡೆದಿತ್ತು. ಆ ಸಂದರ್ಭದಲ್ಲಿ ಐಪಿಎಸ್ ಅಧಿಕಾರಿ ನೀರಜ್ ಕುಮಾರ್ ಅವರು ವಿಶೇಷ ಘಟಕದ ಮುಖ್ಯಸ್ಥರಾಗಿದ್ದರು. ಅವರ ಮಾರ್ಗದರ್ಶದನಲ್ಲಿ ಪೊಲೀಸ್ ತಂಡವು ರಾಜಸ್ಥಾನ ರಾಯಲ್ಸ್ ತಂಡದ ಎಸ್. ಶ್ರೀಶಾಂತ್, ಅಜಿತ್ ಚಾಂಡಿಲಾ ಮತ್ತು ಅಂಕಿತ್ ಚವ್ಹಾಣ್ ಅವರನ್ನು ಬಂಧಿಸಿತ್ತು.

2019ರಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಆರೋಪಿಗಳು ಖುಲಾಸೆಯಾಗಿದ್ದರು. ಅವರ ವಿರುದ್ಧ ಸೂಕ್ತ ಸಾಕ್ಷ್ಯಾಧಾರಗಳು ಇರಲಿಲ್ಲ.

'ಭಾರತದಲ್ಲಿ ಕ್ರಿಕೆಟ್ ಅಥವಾ ಕ್ರೀಡೆಗಳಲ್ಲಿ ಭ್ರಷ್ಟಾಚಾರ ತಡೆಯಲು ಯಾವುದೇ ಕಾನೂನು ಇಲ್ಲ. ಆದ್ದರಿಂದ ಈ ಪ್ರಕರಣವು ತಾರ್ಕಿಕ ಅಂತ್ಯ ಕಾಣಲಿಲ್ಲ. ಇದು ದುರದೃಷ್ಟಕರ' ಎಂದು ನೀರಜ್ ಕುಮಾರ್ ಪಿಟಿಐ ಸುದ್ದಿಗಾರರಿಗೆ ಹೇಳಿದರು.

'ಜಿಂಬಾಬ್ವೆಯಂತಹ ರಾಷ್ಟ್ರದಲ್ಲಿಯೂ ಕ್ರೀಡೆಯಲ್ಲಿ ಭ್ರಷ್ಟಾಚಾರ ತಡೆಗೆ ಕಾನೂನು ಇದೆ. ಆಸ್ಟ್ರೇಲಿಯಾ, ನ್ಯೂಜಿಲೆಂಡ್ ದೇಶಗಳಲ್ಲಿಯೂ ಕಾನೂನು ಇವೆ. ಅಲ್ಲಿ ಬರೀ ಕ್ರಿಕೆಟ್ ಅಷ್ಟೇ ಅಲ್ಲ. ಫುಟ್‌ಬಾಲ್, ಟೆನಿಸ್, ಗಾಲ್ಫ್ ಕ್ರೀಡೆಗಳಲ್ಲಿಯೂ ಇಂತಹ ಪ್ರಕರಣಗಳು ನಡೆಯುತ್ತವೆ. ಅವುಗಳ ತಡೆಗಾಗಿ ಕಾನೂನು ರೂಪಿಸಿದ್ದಾರೆ' ಎಂದು 70 ವರ್ಷದ ನೀರಜ್ ಕುಮಾರ್ ಹೇಳಿದರು.

2000ನೇ ಇಸವಿಯಲ್ಲಿ ದಕ್ಷಿಣ ಆಫ್ರಿಕಾ ತಂಡದ ನಾಯಕ ಹ್ಯಾನ್ಸಿ ಕ್ರೊನಿಯೆ ಅವರು ಮ್ಯಾಚ್ ಫಿಕ್ಸಿಂಗ್‌ನಲ್ಲಿ ಭಾಗಿಯಾಗಿದ್ದ ಪ್ರಕರಣದ ತನಿಖೆ ನಡೆಸಿದ್ದ ಸಿಬಿಐ ತಂಡದಲ್ಲಿಯೂ ನೀರಜ್ ಅವರಿದ್ದರು.

ಉತ್ತಪ್ಪ ಹ್ಯಾಟ್ರಿಕ್: ಸಣ್ಣುವಂಡ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ನಾಪೋಕ್ಲು (ಕೊಡಗು ಜಿಲ್ಲೆ):ಎಸ್. ಕೆ. ಉತ್ತಪ್ಪ ಅವರ ಹ್ಯಾಟ್ರಿಕ್ ಗೋಲಿನ ನೆರವಿನಿಂದ ಸಣ್ಣುವಂಡ ತಂಡವು ಕೊಡವ ಕೌಟುಂಬಿಕ ಹಾಕಿ ಟೂರ್ನಿ ಕುಂಡ್ಯೋಳಂಡ ಕಪ್‌ನಲ್ಲಿ ಭಾನುವಾರ ಮೂಕಚಂಡ ತಂಡದ ವಿರುದ್ಧ 7–1ರಿಂದ ಜಯ ಸಾಧಿಸಿತು.

ಚೆರಿಯಪರಂಬುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣ ದಲ್ಲಿ ನಡೆಯುತ್ತಿರುವ ಟೂರ್ನಿಯ ಮತ್ತೊಂದು ಪಂದ್ಯದಲ್ಲಿ ಚಂದನ್ ಕಾರ್ಯಪ್ಪ ಅವರ 4 ಗೋಲುಗಳ ನೆರವಿನಿಂದ ಮಂಡೇಪಂಡ ತಂಡವು ನಾಳಿಯಂಡ ವಿರುದ್ಧ 6–1 ಅಂತರದಿಂದ ಜಯ ಗಳಿಸಿತು.

ಇನ್ನೊಂದು ಪಂದ್ಯದಲ್ಲಿ ಅಜ್ಜಮಾಡ ಹಾಗೂ ಕೊಂಡೀರ ತಂಡಗಳು ಸಮಬಲ ಸಾಧಿಸಿದ್ದವು.

ಪೆನಾಲ್ಟಿ ಶೂಟ್‌ಔಟ್‌ನಲ್ಲಿ ದೊರೆತ ಅವಕಾಶದಿಂದ ಅಜ್ಜಮಾಡ ತಂಡವು 6–5 ಅಂತರದಿಂದ ಗೆಲುವಿನ ನಗೆ ಬೀರಿತು.

ಇತರೆ ಪಂದ್ಯಗಳ ಫಲಿತಾಂಶ:ಕೋಡಿಮಣಿಯಂಡ ತಂಡವು ತೀತರಮಾಡ ವಿರುದ್ಧ 1–0 ಅಂತರದಿಂದ; ಬಾದುಮಂಡ ತಂಡವು ಕಬ್ಬಚ್ಚಿರ ವಿರುದ್ಧ 1–0 ಅಂತರದಿಂದ; ಮುಕ್ಕಾಟಿರ (ಹರಿಹರ) ತಂಡವು ಕೋಳಿರ ವಿರುದ್ಧ 3–0 ಅಂತರದಿಂದ; ಮಂಡೇಟಿರ ತಂಡವು ಕುಟ್ಟೇಟಿರ ವಿರುದ್ಧ 4–0 ಅಂತರದಿಂದ; ಬೊವ್ವೇರಿಯಂಡ ತಂಡವು ಕಾವಡಿಚಂಡ ವಿರುದ್ಧ 2–0 ಅಂತರದಿಂದ; ಮೇವಡ ತಂಡವು ಅಜ್ಜಿಕುಟ್ಟೀರ ವಿರುದ್ಧ 3–0 ಅಂತರದಿಂದ ಜಯ ಗಳಿಸಿದವು.

ಅಪ್ಪಡೇರಂಡ ತಂಡವು ಪುಗ್ಗೇರ ವಿರುದ್ಧ 4–1 ಅಂತರದಿಂದ; ಚಂದುರ ತಂಡವು ಕೋಡಂಡ ವಿರುದ್ಧ 1–0 ಅಂತರದಿಂದ; ಗಂದಂಗಡ ತಂಡವು ಆಲೆಮಾಡ ವಿರುದ್ಧ 1–0 ಅಂತರದಿಂದ; ಕಾಳಿಮಾಡ ತಂಡವು ಉದ್ದಪಂಡ ವಿರುದ್ಧ 1–0 ಅಂತರದಿಂದ; ಮುಂಡ ಚಾಡಿರ ತಂಡವು ಬೇರೆರ ವಿರುದ್ಧ 1–0 ಅಂತರದಿಂದ ಜಯ ಸಾಧಿಸಿತು.